ಮರುಳಸಿದ್ಧ ವಿರಚಿತ

ಗುರುಲಿಂಗ ಜಂಗಮ ಚಾರಿತ್ರ

ಸಂಪಾದಕ

ಜಿ. ಜಿ. ಮಂಜುನಾಥನ್

ಕನ್ನಡ ಅಧ್ಯಯನ ಸಂಸ್ಥೆ : : ಮೈಸೂರು ವಿಶ್ವವಿದ್ಯಾನಿಲಯ





ಕನ್ನಡ ಅಧ್ಯಯನ ಸಂಸ್ಥೆ ಪ್ರಕಟಣೆ–೪೫೩

ಪ್ರಾಚ್ಯಕಾವ್ಯ ಮಾಲೆ–೯೬

ಪ್ರಧಾನ ಸಂಪಾದಕ

ಎಚ್. ತಿಪ್ಪೇರುದ್ರಸ್ವಾಮಿ

ವಿಭಾಗ ಸಂಪಾದಕ

ಎನ್. ಬಸವಾರಾಧ್ಯ

ಮರುಳಸಿದ್ಧ ವಿರಚಿತ

ಗುರು ಲಿಂಗ ಜಂಗಮ ಚಾರಿತ್ರ

ಮರುಳಸಿದ್ಧ ವಿರಚಿತ

ಗುರು ಲಿಂಗ ಜಂಗಮ ಚಾರಿತ್ರ

ಸಂಪಾದಕ

ಜಿ. ಜಿ. ಮಂಜುನಾಥನ್

ಕನ್ನಡ ಅಧ್ಯಯನ ಸಂಸ್ಥೆ

ಮೈಸೂರು ವಿಶ್ವವಿದ್ಯಾನಿಲಯ

1985

GURU LINGA JANGAMA CHARITRA – Edited by G. G. Manjunathan ; Published by the Institute of Kannada Studies. University of Mysore, Manasa Gangothri, Mysore-6. First Edition 1985. pp. xii+೪೨+83

ಬೆಲೆ : ರೂ. 12–00

ಮಾರಾಟಗಾರರು : ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು–570006

ಮುದ್ರಣ: ಒಡನಾಡಿ ಮುದ್ರಣಾಲಯ, ಅಂಗಡಿ ಬೀದಿ, ನಂಜನಗೂಡು–571 301

ಮುನ್ನುಡಿ

1966ರ ಕೊನೆಯಲ್ಲಿ ಕನ್ನಡ ಅಧ್ಯಯನ ಸಂಸ್ಥೆಯು ಸ್ಥಾಪನೆಯಾದಾಗ ಪ್ರಾಚ್ಯಸಂಶೋಧನಾಲಯದಲ್ಲಿದ್ದ ಕನ್ನಡ ಹಸ್ತಪ್ರತಿಗಳ ಮತ್ತು ಗ್ರಂಥಗಳ ವಿಭಾಗವನ್ನು ಅಧ್ಯಯನ ಸಂಸ್ಥೆಯ ಒಂದು ವಿಭಾಗವನ್ನಾಗಿಸಿ ಸಂಪಾದನ ವಿಭಾಗವೆಂಬ ಹೆಸರನ್ನು ಕೊಡಲಾಯಿತು. ಈ ವಿಭಾಗದಲ್ಲಿ ಅತ್ಯಂತ ಪ್ರಾಚೀನ ಹಸ್ತಪ್ರತಿಯಿಂದ ಹಿಡಿದು ಇತ್ತೀಚಿನ ಹಸ್ತಪ್ರತಿಗಳವರೆಗೆ ಸುಮಾರು 10,000 ಹಸ್ತಪ್ರತಿಗಳಿದ್ದು ಇದು ನಮ್ಮ ನಾಡಿನ ಸುಸಜ್ಜಿತ ಹಸ್ತಪ್ರತಿಭಂಡಾರಗಳಲ್ಲಿ ಒಂದೆನಿಸಿಕೊಂಡಿದೆ. ಹೊಸ ಹಸ್ತಪ್ರತಿಗಳ ಶೋಧನೆ ಮತ್ತು ಸೇರ್ಪಡೆಗಳ ವಿಷಯದಲ್ಲಿ ಮಾತ್ರವಲ್ಲದೆ ಹಸ್ತಪ್ರತಿಗಳ ಸಂರಕ್ಷಣೆಗೆ ಅಗತ್ಯವಾದ ಏರ್ಪಾಟುಗಳನ್ನು ಮಾಡುವ ವಿಷಯದಲ್ಲಿಯೂ ಸಂಸ್ಥೆ ಎಚ್ಚರವಹಿಸಿದೆ. ಶುದ್ಧೀಕರಣ ಮತ್ತು ತೈಲಲೇಪನ ಹಾಗೂ ಪ್ರಧೂಮನ ಉಪಚಾರಗಳನ್ನು ಕೈಗೊಂಡಿರುವುದು ಮಾತ್ರವಲ್ಲದೆ, ಮೈಕ್ರೋಫಿಲಂಗಳ ರೂಪದಲ್ಲಿ ಅವುಗಳನ್ನು ಕಾಯ್ದಿರಿಸಲೂ ಕ್ರಮಕೈಗೊಳ್ಳಲಾಗಿದೆ. ಸಂಸ್ಥೆಯಲ್ಲಿ ಇರುವ ಹಸ್ತಪ್ರತಿಗಳ ವರ್ಣನಾತ್ಮಕಸೂಚಿಯನ್ನು (9 ಸಂಪುಟಗಳು) ಹೊರತಂದಿರುವುದಲ್ಲದೆ ಮೈಕ್ರೋಫಿಲಂಗಳ ಸೂಚಿಯನ್ನೂ ಸಿದ್ಧಪಡಿಸಲಾಗಿದೆ.

ಸಂಸ್ಥೆಯ ಸಂಪಾದನ ವಿಭಾಗದ ಸಂಶೋಧನ ಸಹಾಯಕರು ಹಾಗೂ ಅಧಿಕಾರ ವರ್ಗದವರು ವ್ಯವಸ್ಥಿತ ಯೋಜನೆಯ ಅಂಗವಾಗಿ ಶಾಸ್ತ್ರೀಯವಾಗಿ ಸಂಪಾದಿಸಿ ಈ ಹಸ್ತಪ್ರತಿಗಳನ್ನು ಪ್ರಕಟಿಸುತ್ತ ಬಂದಿದ್ದಾರೆ. ಇಲ್ಲಿಯ ಹಸ್ತಪ್ರತಿಗಳನ್ನು ಬಳಸಿಕೊಂಡು ಇತರ ವಿದ್ವಾಂಸರು ಸಂಪಾದಿಸಿದ ಗ್ರಂಥಗಳನ್ನೂ ಸಂಸ್ಥೆ ಪ್ರಕಟಿಸಿದೆ. ಹೀಗೆ ಅಧ್ಯಯನ ಸಂಸ್ಥೆ ಹೊರತರುತ್ತಿರುವ ಗ್ರಂಥಗಳ ಸಂಖ್ಯೆ ಸದ್ಯದಲ್ಲಿಯೇ ನೂರರ ಗಡಿಯನ್ನು ದಾಟಲಿದೆ ಎಂಬುದು ಸಂತೋಷದ ಸಂಗತಿ. ಸಂಖ್ಯೆಯ ದೃಷ್ಟಿಯಿಂದ ಮಾತ್ರವಲ್ಲದೆ, ಸಾಹಿತ್ಯಚರಿತ್ರೆಯ ದೃಷ್ಟಿಯಿಂದಲೂ ಮಹತ್ವದ ಕೆಲಸ ಇದು. ಈಗ ಪ್ರಮುಖವಾಗಿ ಅಪ್ರಕಟಿತ ಕೃತಿಗಳನ್ನೇ ಅವುಗಳ ಕಾಲಾನುಕ್ರಮಕ್ಕೆ ಅನುಗುಣವಾಗಿ ಪ್ರಕಟಿಸುವ ಕ್ರಮವನ್ನು ಕೈಗೊಂಡಿದೆ. ಕೃತಿಗಳ ಗುಣಾವಗುಣಗಳು ಏನೇ ಇರಲಿ, ಅವು ಅಜ್ಞಾತವಾಸದಿಂದ ಹೊರಬರಬೇಕಾಗಿರುವುದು ಮೊದಲು ಆಗಬೇಕಾಗಿರುವ ಕಾರ್ಯ. ಮುಂದೆ ಹೆಚ್ಚಿನ ಪ್ರತಿಗಳು ಲಭಿಸಿದಾಗ ಹಾಗೂ ಹೊಸ ಶೋಧನೆ-ಸಂಶೋಧನೆಗಳ ಬೆಳಕಿನಲ್ಲಿ ಅಗತ್ಯವಾದ ಪರಿಷ್ಕರಣಕಾರ್ಯವನ್ನೂ ಕೈಗೊಳ್ಳಬಹುದಾಗಿದೆ. ಒಟ್ಟಿನಲ್ಲಿ ವಿದ್ವಾಂಸರಿಗೆ ಸಾಹಿತ್ಯಾಸಕ್ತರಿಗೆ ಸಂಶೋಧಕರಿಗೆ ಆಕರಸಾಮಗ್ರಿಯನ್ನು ಒದಗಿಸುವ ಮೂಲಭೂತ ಕಾರ್ಯವನ್ನು ನೆರವೇರಿಸಿದಂತಾಗುತ್ತದೆ ಎಂಬುದು ಸಮಾಧಾನದ ಸಂಗತಿ.

ಈ ವಿಭಾಗದ ಅನೇಕ ಪ್ರ ಳು ಈ ವಿಷಯಕ್ಕೆ ವಿಧಿಸಲಾಗಿರುವ ರಾಜ್ಯ ಸಾಹಿತ್ಯ ಅಕಾಡೆಮಿಯ ಬಹುಮಾನಗಳನ್ನು ಗಳಿಸಿವೆ ಎಂಬುದು ಈ ವಿಭಾಗದ ಅಚ್ಚುಕಟ್ಟಾದ ಹಾಗೂ ಶಾಸ್ತ್ರೀಯವಾದ ಕಾರ್ಯನಿರ್ವಹಣೆಗೆ ಸಾಕ್ಷಿಯಾಗಿದೆ. ಶ್ರದ್ಧೆ ಉತ್ಸಾಹಗಳಿಂದ ಈ ಸಾಧನೆಯನ್ನು ತಮ್ಮದಾಗಿಸಿಕೊಂಡಿರುವ ಸಂಪಾದನ ವಿಭಾಗದ ಕಾರ್ಯಕರ್ತರಿಗೆ ನಮ್ಮ ವಿಶೇಷ ಅಭಿನಂದನೆಗಳು.

ಈಗ ಪ್ರಕಟವಾಗುತ್ತಿರುವ ಗುರು ಲಿಂಗ ಜಂಗಮ ಚಾರಿತ್ರ ಸಂಪಾದನ ವಿಭಾಗದ 96ನೆಯ ಕೃತಿ. ವಿಭಾಗ ಮುಖ್ಯರಾಗಿರುವ ಶ್ರೀ ಎಸ್. ಬಸವಾರಾಧ್ಯ ಅವರ ದಕ್ಷ ನೇತೃತ್ವದಲ್ಲಿ ಇದನ್ನು ಶಾಸ್ತ್ರೀಯವಾಗಿ ಸಂಪಾದಿಸಿಕೊಟ್ಟಿರುವವರು ಈ ವಿಭಾಗದಲ್ಲಿ ಸಂಶೋಧನ ಸಹಾಯಕರಾಗಿರುವ ಶ್ರೀ ಜಿ. ಜಿ. ಮಂಜುನಾಥನ್. ಈ ಎಲ್ಲ ಮಿತ್ರರಿಗೂ ಮುದ್ರಣ ಕಾರ್ಯದಲ್ಲಿ ಸಹಕರಿಸಿರುವ ಶ್ರೀ ಒಡನಾಡಿ ಮುದ್ರಣಾಲಯದವರಿಗೂ ವಂದನೆಗಳು.

ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

ಎಚ್. ತಿಪ್ಪೇರುದ್ರಸ್ವಾಮಿ
ಪ್ರಧಾನ ಸಂಪಾದಕ

ವಿಭಾಗ ಸಂಪಾದಕರ ಮಾತು

ವೀರಶೈವ ಧರ್ಮದಲ್ಲಿ ಗುರು ಲಿಂಗ ಜಂಗಮಕ್ಕೆ ಅತ್ಯಂತ ಮಹತ್ವದ ಸ್ಥಾನವಿದೆ. ಭಕ್ತ ತನು ಮನ ಧನಗಳನ್ನು ಗುರು ಲಿಂಗ ಜಂಗಮಕ್ಕೆ ಸಮರ್ಪಿಸಬೇಕೆಂದು ವಚನಕಾರರು ಸಾರಿದ್ದಾರೆ. ಭಕ್ತನಿಗೆ ದೀಕ್ಷೆಯನ್ನು ಕೊಟ್ಟು ಜ್ಞಾನೋಪದೇಶ ಮಾಡುವವನೇ ಗುರು. ಭಕ್ತ ಸನ್ಮಾರ್ಗದಲ್ಲಿ ನಡೆಯುವಂತೆ ಮಾಡುವ ರಕ್ಷಾಗುರುವೂ ಶಿಕ್ಷಾಗುರುವೂ ಈತನೇ. ತನುವ ಕೊಟ್ಟು ಗುರುವನೊಲಿಸಬೇಕು.

ಲಿಂಗ ಪರಶಿವನ ಸ್ವರೂಪ. ಭಕ್ತನಾದವನು ತನ್ನ ಇಷ್ಟಲಿಂಗವನ್ನು ಸದಾ ಧರಿಸಿಕೊಂಡಿರಬೇಕು. ಲಿಂಗಪೂಜೆಯಲ್ಲಿ ಮನಸ್ಸನ್ನು ಲೀನಗೊಳಿಸಬೇಕು. ಆದ್ದರಿಂದ ಮನವ ಕೊಟ್ಟು ಲಿಂಗವನೊಲಿಸಬೇಕು.

ಜಂಗಮ ಭಕ್ತನನ್ನು ಭವಸಾಗರದಿಂದ ದಾಟಿಸಿ ಮುಕ್ತಿ ಮಾರ್ಗವನ್ನು ತೋರುತ್ತಾನೆ. ಶಿವಸ್ವರೂಪಿಯಾದ ಜಂಗಮನಿಗೆ ಭಕ್ತ ಧನವ ಕೊಟ್ಟು ಒಲಿಸಬೇಕು. ಈ ಗುರು ಲಿಂಗ ಜಂಗಮರು ಭಕ್ತನ ಸಂಪೂರ್ಣ ಆವಿಷ್ಕಾರಕ್ಕೆ ಕಾರಣಕರ್ತರು.

ವಚನಕಾರರು ಗುರುಲಿಂಗಜಂಗಮರನ್ನು ಕುರಿತು ವಿಶೇಷವಾಗಿ ವ್ಯಾಖ್ಯಾನಿಸಿದ್ದಾರೆ. ಬಹುಮಟ್ಟಿನ ವೀರಶೈವ ಕಾವ್ಯಗಳಲ್ಲಿ ಗುರು ಲಿಂಗ ಜಂಗಮದ ಪ್ರಸ್ತಾಪ ಬಂದಿರುವುದನ್ನು ಕಾಣಬಹುದಾಗಿದೆ.

ಪ್ರಸ್ತುತ ಗುರುಲಿಂಗಜಂಗಮಚಾರಿತ್ರ ಧರ್ಮಪ್ರಧಾನವಾದ ಒಂದು ಸಾಂಗತ್ಯ ಕೃತಿ. ಇದಕ್ಕೆ ಮಹತ್ತಿನ ಕಾವ್ಯ ಎಂಬ ಹೆಸರೂ ಉಂಟು. ಈ ಕೃತಿಯ ಕರ್ತೃ ಮರುಳ ಸಿದ್ಧ. ಈತನ ಕಾಲ ಹದಿನೇಳನೆಯ ಶತಮಾನದ ಅಂತ್ಯಭಾಗವಿರಬಹುದು. ಈತ–

ಗುರು ಲಿಂಗ ಜಂಗಮದುರುಚಾರಿತ್ರವೆ । ವರ ಮಹತ್ತೆಂದೆನಿಸಿ
ಚಿರಮೂರ್ತಿಯಾಗಿಯೆ ಚರಿಸುತಿಹನು ಶಿವ । ಧರೆಯೊಳು ಭಕ್ತರಿಗೊಲಿದು ೨–೫೯

ಗುರು ಲಿಂಗ ಜಂಗಮವಾರಿಧಿ ಪರಶಿವ । ಧರೆಯೊಳು ಚರಿಸಿ ಮೆರೆದುದ
ವಿರಚಿಸುವೆ ನಾನು ಬಲ್ಲಂದದಿ ಕೇಳಿ । ಹರಶರಣರು ಎಲ್ಲ ಬಿಡದೆ ೩–೧

ಲಿಂಗವೆ ನಾದ ಬಿಂದುವೆ ಜಂಗಮು ಕೇಳು । ಮಂಗಳ ಕಳೆ ಗುರುಮೂರ್ತಿ
ಲಿಂಗ ಜಂಗಮು ಗುರುವಾಗಿ ಮಹತ್ವದಿ । ಗಂಗಾಧರ ಭಕ್ತಗೊಲಿದು 	೩–೫

ಲಿಂಗವೆ ಸ್ಥಾವರ ಜಂಗಮು ಚರಮೂರ್ತಿ । ಕಂಗೊಳಿಸುವ ಕಳೆ ತಾನೆ
ಲಿಂಗ ಜಂಗಮಕೆಲ್ಲ ಗುರುವಾಗಿ ತೋರಿದ । ಮಂಗಳಮಯಂ ಪರಶಿವನು 	೩–೬

ಎಂದು ತನ್ನ ಕಾವ್ಯದ ಬಗೆಗೆ ಹೇಳಿಕೊಂಡಿದ್ದಾನೆ. ಈತನ ಗುರು ಶರಣುಪುರಾಧೀಶ್ವರ ಗುರುಮೂರ್ತಿ. ಈತನ ಊರು ಎರಗಂಬಳ್ಳಿ ಅಥವಾ ಶರಣುಪುರ. ನಮಸ್ಕಾರಪುರ ವೆಂದೂ ಇದಕ್ಕೆ ಪರ್ಯಾಯನಾಮವಿದೆ.

ಗುರು ಲಿಂಗ ಜಂಗಮಚಾರಿತ್ರ ಹಲವಾರು ದೃಷ್ಟಿಗಳಿಂದ ಪ್ರಮುಖವಾದುದು. ಈ ಕಾವ್ಯದಲ್ಲಿ ಕವಿ ಅನೇಕ ಧಾರ್ಮಿಕ ಐತಿಹಾಸಿಕ ಪೌರಾಣಿಕ ಸಂಗತಿಗಳನ್ನು ನಿರೂಪಿಸಿದ್ದಾನೆ. ಪಂಚಾಚಾರ್ಯರ ಸಂಗತಿ, ನಂಜನಜಾತ್ರೆ, ಪರಶುರಾಮನ ದುರಿತಾಪವಾದವನ್ನು ನಂಜುಂಡ ಪರಿಹರಿಸಿದ್ದು, ತಿರುಮಕೂಡಲ ಮಹಿಮೆ, ಅಗಸ್ತ್ಯ ವಿಶ್ವಕರ್ಮನಿಗೆ ಶಾಪಕೊಟ್ಟದ್ದು, ಶಿವನು ಅಗಸ್ತ್ಯನಿಗೆ ಗಂಗೆಯನ್ನು ಕೊಟ್ಟದ್ದು, ಪಂಚಲಿಂಗಗಳ ಮಾಹಿತಿ, ಕಕುದ್ಗಿರಿ ಮಹಿಮೆ, ಬಿಜ್ಜಳನ ಮರಣವಾರ್ತೆ, ಶರಣರು ಉಳವಿಯನ್ನು ಸೇರಿದ್ದು, ಗೋಕರ್ಣ ಮಹಿಮೆ, ಉಮ್ಮತ್ತೂರಿನ ನಂಜರಾಜ ಪಂಚಮಠಗಳನ್ನು ಸ್ಥಾಪಿಸಿದ್ದು –ಇವೇ ಮೊದಲಾದ ಹಲವು ಹತ್ತಾರು ವಿಷಯಗಳನ್ನು ಕಾವ್ಯದಲ್ಲಿ ಚಿತ್ರಿಸಿದ್ದಾನೆ.

ನಂಜರಾಜನು ಸ್ಥಾಪಿಸಿದ ಪಂಚಮಠಗಳಿಗೆ ಸಂಬಂಧಿಸಿದಂತೆ ಮರುಳಸಿದ್ಧ–

ಸುತ್ತೂರ ಶಿವರಾತ್ರೆಯಾರ್ಯಗೆ ಪಟ್ಟವ । ನರ್ತಿಯಿಂದ ಕಟ್ಟಿ ನೃಪನು
ಉತ್ತಮವಾದ ನಾಣ್ಯವ ಪೊದ್ದಿಸಿ ತಾನು । ತೊತ್ತು ಬಂಟರನಿತ್ತು ಕಳುಹೆ 	೪–೧೯೯

ಪಾವನಮೂರ್ತಿಯು ಶಿವಪೂಜೆಯಾರ್ಯಗೆ । ಸಾವಿರ ಕಲ್ಲ ಮಂಟಪದಿ
ಭಾವಿಸಿ ಪಟ್ಟವ ಕಟ್ಟಿ ಪುರವ ಕೊಟ್ಟು । ಠೀವಿಯಿಂದ ಕಳುಹಿದನು 	೪–೨೦೦

ಚರಮೂರ್ತಿ ಶಿವಪೂಜೆಯಾರ್ಯಗುದಿಸಿದ । ಕರಸೊಳು ಗಂಗಾಧರ
[ಗರಳ]ಪುರದಿ ನಿಂದು ಪೂಜೆಯ ಕೈಕೊಂಡು । ಹರುಷದಿ ಮಹತ್ತುಗೂಡಿ 	೪–೨೦೧

ಕಾವೇರಿಗೆ ದಕ್ಷಿಣದೊಳೊಪ್ಪುವ । ತೀವಿದ ಹೇಮಾದ್ರಿಯೊಳಗೆ
ಅಲ್ಲಿ ಕುಂತೂರ ಸಾಲೂರ ಶಾಂತೇಶ್ವರ । ಗಲ್ಲಿ ಪಟ್ಟವನು ಕಟ್ಟಿದರು 	೪–೨೦೨

ಶಿವನಸಮುದ್ರದಿ ಜಡೆಯ ಕೂಡುವ ಸ್ವಾಮಿ । ಶಿವಯೋಗಿ ಮರುಳಸಿದ್ಧೇಶ
ಶಿವಪೂಜೆಯ ಮಾಡುತಿರಲು ಮಹತ್ತೆಲ್ಲ । ವವನಿಪ ನಂಜರಾಜೇಂದ್ರ 	೪–೨೦೩

ಶ್ವೇತಗಿರಿಗೆ ಪಶ್ಚಿಮದೊಳೊಪ್ಪುವ । ಭೂತಳದೊಳು ಪುಣ್ಯದೀಡು
ಪ್ರೀತಿಯಿಂ ಜಡೆಯಕೂಡುವ ಮರುಳಾರ್ಯಗೆ । ಚಾತುರ್ಯದಿಂ ಗ್ರಾಮವಿತ್ತ ೪–೨೦೪

ಎರಗಿ ನಮಸ್ಕಾರವನು ಮಾಡಲಾಗಿಯೆ । ಎರಗುಬಳ್ಳಿ ತಾನೆಂದು
ಉರುವಿಯೊಳಗೆ ಪೆಸರಾಗಿ ಚರಿಸಿ ತಾನು । ಮೆರೆದಿದು ಸಿಂಹಾಸನವು ೪–೨೦೫

ಆಗ ಉಮ್ಮತೂರ ಉಪ್ಪರಿಗೆಯ ಮಠಕನು । ರಾಗದಿಂ ಪಟ್ಟವ ಕಟ್ಟಿ
ತೂಗಾದಿಯ ಸಿದ್ಧಬಸವೇಶ್ವರನೆಂಬ । ಶ್ರೀಗುರುವಿಗೆ ನಮಿಸಿದನು ೪–೨೦೬

ಸುತ್ತೂರು ನಂಜನಗೂಡು ಹೊಂಡರಬಾ । ಉತ್ತಮ ನಮಸ್ಕಾರಪುರವ
ಇತ್ತ ಕುಂತೂರ ಸಿಂಹಾಸನಗಳನೆಲ್ಲ । ವರ್ತಿಯಿಂದಲಿ ಮಾಡಿಸಿದ ೪–೨೦೮

ಎಂದು ಹೇಳಿದ್ದಾನೆ. ಸುತ್ತೂರುಮಠದ ಇತಿಹಾಸಕ್ಕೆ ಸಂಬಂಧಿಸಿದ ಶಾಸನಗಳು ಹನ್ನೊಂದನೆಯ ಶತಮಾನದಲ್ಲೇ ಕಂಡುಬರುತ್ತವೆ. ಇದೇ ರೀತಿ ಉಳಿದ ನಾಲ್ಕುಮಠಗಳಿಗೆ ಸಂಬಂಧಿಸಿದ ಸಂಗತಿಗಳೂ ಉಪಲಬ್ಧವಾಗಿವೆ. ಒಟ್ಟಿನಲ್ಲಿ ಮರುಳಸಿದ್ಧ ತನ್ನ ಗುರು ಲಿಂಗಜಂಗಮಚಾರಿತ್ರದಲ್ಲಿ ಅನೇಕ ಮಹತ್ವದ ವಿಷಯಗಳನ್ನು ಪ್ರಸ್ತಾಪಿಸಿದ್ದಾನೆ.

ಇದು ಒಂದು ವಸ್ತುಕಕಾವ್ಯವಾದುದರಿಂದ ವರ್ಣನೆಗೆ ಅವಕಾಶವಿಲ್ಲವಾಗಿದೆ. ಆದರೂ ಕವಿ ಸಂದರ್ಭೋಚಿತವಾಗಿ ಕೆಲವು ವರ್ಣನೆಗಳನ್ನು ಹೃದಯಂಗಮವಾಗಿ ಮಾಡಿದ್ದಾನೆ—

ಗಿರಿಗಳೊಳಾ ಮಹಾರಜತಪರ್ವತ ನಿ । ರ್ಜರರೊಳು ಭುವನೋದರರು
ಶರಧಿಗಳೊಳು ಪಯೋನಿಧಿ ಮೇಲು ಪಂಪಾ । ಪುರ ಕ್ಷೇತ್ರಗಳೊಳು ಮೇಲೂ ೩–೧೨೫

ನಾದದೊಳಗೆ ವೀಣಾನಾದವಾ ಮಹಾ । ವೇದದೊಳಗೆ ಋಗ್ವೇದ
ಮೇದಿನಿಯೊಳು ಹೇಮಕೂಟವೆ ಮಿಗಿಲೆಂದು । ಮಾದೇವ ತಪವಿದ್ದನಲ್ಲಿ ೩–೧೨೬

ದಾನಗಳೊಳಂ ಅನ್ನದಾನವೆ ಮೇಲು । ಧೇನುಗಳೊಳಗೆ ಸುರಧೇನು
ನಾನಾ ತೀರ್ಥದೊಳ್ ತುಂಗಭದ್ರೆಯೆ ಮೇಲು । ಏನೆಂಬೆ ಹೇಮಕೂಟವನಂ ೩–೧೨೭

ಈ ಮೇಲಿನ ಪದ್ಯಗಳು ಕವಿಯ ಪ್ರತಿಭೆ ಪಾಂಡಿತ್ಯ ಲೋಕಾನುಭವಗಳಿಗೆ ನಿದರ್ಶನವಾಗಿವೆ.

ಮರುಳಸಿದ್ಧ ತಾನು ಕಂಡು ಕೇಳಿದ ಸಂಗತಿಗಳನ್ನು ದಾಖಲಿಸಿದ್ದಾನೆ. ಶಿವಭಕ್ತನಾದ ಈತ ಈ ಧರ್ಮಕ್ಕೆ ಸಂಬಂಧಿಸಿದ ಅನೇಕ ಸಂಗತಿಗಳನ್ನು ಪ್ರಸ್ತಾಪಿಸಿದ್ದಾನೆ.

ಸುಮಾರು ಒಂಬೈನೂರು ಸಾಂಗತ್ಯ ಪದ್ಯಗಳಲ್ಲಿ ಪಲವಾರು ಮಹತ್ವದ ಸಂಗತಿಗಳನ್ನು ನಿರೂಪಿಸಿದ್ದಾನೆ. ಚಾರಿತ್ರಿಕವಾಗಿ ಧಾರ್ಮಿಕವಾಗಿ ಐತಿಹಾಸಿಕವಾಗಿ ಈ ಕೃತಿ ವಿದ್ವಾಂಸರಿಗೂ ಸಂಶೋಧಕರಿಗೂ ತುಂಬ ಉಪಯುಕ್ತವಾಗಿದೆ. ಈ ಅಪ್ರಕಟಿತ ಕೃತಿಯು ಪ್ರಕಟಣೆಯಿಂದ ಕನ್ನಡ ಜನತೆಗೆ ಪ್ರಯೋಜನವಾಗಬಹುದೆಂದು ಭಾವಿಸಲಾಗಿದೆ.

ಕನ್ನಡ ಅಧ್ಯಯನ ಸಂಸ್ಥೆ
ಮೈಸೂರು-6

ಎನ್. ಬಸವಾರಾಧ್ಯ
ವಿಭಾಗ ಸಂಪಾದಕ

ವಿಷಯಸೂಚಿ

ಪೀಠಿಕೆ

ಮರುಳುಸಿದ್ಧೇಶನು ಗುರು ಲಿಂಗ ಜಂಗಮ ಚಾರಿತ್ರ ಅಥವಾ ಮಹತ್ವಿನ ಕಾವ್ಯದ ಕರ್ತೃ. ತನ್ನ ಬಗ್ಗೆ 'ಶರಣು ಪುರಾಧೀಶ್ವರ ಗುರುಮೂರ್ತಿಯ ಕರಜಾತ' ಎಂದು ಹೇಳಿಕೊಂಡಿದ್ದಾನೆ. ಶರಣುಪುರ ಎನ್ನುವುದು ಯಳಂದೂರು ತಾಲ್ಲೂಕು ಎರಗಂಬಳ್ಳಿ ಇದನ್ನು ನಮಸ್ಕಾರಪುರ ಎಂದೂ ಕರೆಯುತ್ತಾರೆ. ಈ ಮಾತಿಗೆ ಪೋಷಕವಾಗಿ—

ಎರಗಿ ನಮಸ್ಕಾರವನು ಮಾಡಲಾಗಿಯೆ । ಎರಗಂಬಳ್ಳಿ ತಾನೆಂದೂ
ಉರುವಿಯೊಳಗೆ ಪೆಸರಾಗಿ ಚರಿಸಿ ತಾನು । ಮೆರೆದುದು ಸಿಂಹಾಸನವು 4–225

ಎನ್ನುವ ಪದ್ಯ ನಿಲ್ಲುತ್ತದೆ. ಆದುದರಿಂದ ಕವಿ ಎರಗಂಬಳ್ಳಿ ಮಠದ ಶಿಷ್ಯನಾಗುತ್ತಾನೆ.

ಕವಿಚರಿತೆಕಾರರು 'ಇವನ ಕಾಲವು ಸುಮಾರು 1650 ಆಗಿರಬಹುದು' ಎಂದು ಹೇಳಿದ್ದಾರೆ. ಈ ಕೃತಿಯಲ್ಲಿ ಗುರುರಾಜ ಚಾರಿತ್ರದ ಅನೇಕ ಸಂಗತಿಗಳು ಉಲ್ಲೇಖ ಗೊಂಡಿವೆ. ಸಿದ್ಧನಂಜೇಶನ ಕಾಲ ಕ್ರಿ. ಶ. 1530ರಿಂದ 1679ರ ನಡುವಿಗೆ ನಿಲ್ಲುತ್ತದೆ. ಆದುದರಿಂದ ಮರುಳುಸಿದ್ಧನ ಕಾಲವನ್ನು ಕ್ರಿ. ಶ. ಸುಮಾರು 1650ರಿಂದ ಈಚೆಗೆ ಎಂದರೆ ಸುಮಾರು 1700 ರಿಂದ 1750ರ ನಡುವಿಗೆ ನಿರ್ಧರಿಸುವುದು ಸೂಕ್ತವಾಗುತ್ತದೆ.

ಗ್ರಂಥಸಾರ

ಶಿವನ ಒಡ್ಡೋಲಗವನ್ನು ನೋಡಲು ಪಾರ್ವತಿ ಅಪೇಕ್ಷಿಸಿದಳು. ಶಿವನು ನಂದಿಯ ಮುಖವನ್ನು ನೋಡಿದನು. ಶಿವನ ಇಚ್ಛೆಯನ್ನರಿತ ನಂದೀಶನ ಸನ್ನೆಯಂತೆ ದೇವತೆಗಳು ಬಂದರು ನವರತ್ನಮಯ ಸಿಂಹಾಸನದಲ್ಲಿ ಗಿರಿಜೆಯ ಜೊತೆ ಶಿವನಿರಲು ವೀರಭದ್ರ ಗಣಪತಿ ಷಣ್ಮುಖ ಪ್ರಮಥಗಣಗಳನ್ನು ಕೂಡಿಕೊಂಡು ಈಶಾನ್ಯಮೂರ್ತಿ ಬಂದನು. ವಿಷ್ಣು ಬ್ರಹ್ಮ ಇಂದ್ರರು ಬಂದರು. ವರುಣ ಕುಬೇರ ಮೊದಲಾದ ಅಷ್ಟದಿಕ್ಪಾಲಕರು ಬಂದರು. ಹಗಲು ರಾತ್ರಿ ದಿನ ಮಾಸ ಸಂವತ್ಸರಗಳು ನವಗ್ರಹಗಳು ಧ್ರುವ ಮೊದಲಾದ ನಕ್ಷತ್ರಗಳು ಬಂದುವು. ಭೃಗು ಗೌತಮ ದಧೀಚಿ ವಶಿಷ್ಟ ದೂರ್ವಾಸ ಅಗಸ್ತ್ಯ ಮೊದಲಾದ ಮನು ಮುನಿಗಳು ಬಂದರು. ಪಾತಳಲೋಕದ ನಾಗರು ಭೂಲೋಕದ ಶರಣರು ಸ್ವರ್ಗದ ದೇವತೆಗಳು ಬಂದರು. ಹರಿಯಜರು ಕಟ್ಟಿಗೆಕಾರರಾಗಿದ್ದರು.

ಕಂಬಲಾಶ್ವತರು ಗಾನವನ್ನು ಮಾಡಿದರು. ತುಂಬುರು ನಾರದರು ವೀಣೆಯನ್ನು ಕೇಳಿಸಿದರು.ಅಲ್ಲಿ ಭರತಕಟ್ಟಳೆಯ ಶಾಸ್ತ್ರಗಳಾದವು.ಭೃಂಗಿನಾಟ್ಯವಾಡಿದನು.ಅಂಗವೆ ಲಿಂಗ ಲಿಂಗವೆ ಅಂಗವಾದ ಭೃಂಗಿಯನ್ನು ನೋಡು ಎಂದು ಈಶ್ವರನು ಪಾರ್ವತಿಗೆ ಭೃಂಗಿಯನ್ನು ತೋರಿಸಿದನು. ತಂಡ ತಂಡದಲ್ಲಿ ವಂದಿಸುವ ಹರಿ ಅಜರ ಓಲಗವನ್ನು ಕಂಡು ಪಾರ್ವತಿ ಚಿಂತೆಗೀಡಾದಳು. ಶಿವನು ವಿಚಾರಿಸಿದಾಗ ಸೃಷ್ಟಿಯ ವಿವರವನ್ನು ನೋಡಿ ಚಿಂತಿಸಿದೆ. ಎಂದಳು. ಆಗ ಶಿವನು ಸೃಷ್ಟಿಯ ವಿವರವನ್ನು ಹೇಳ ತೊಡಗಿದನು. ಶಿವನು ಗಿರಿಜೆಗೆ ಹೇಳಿದುದನ್ನು ಬಲ್ಲ ಗುರು ತನ್ನ ಶಿಷ್ಯನಿಗೆ ಹೇಳಿದನು.ಅದನ್ನು ನಾನು ನಿಮಗೆತಿಳಿಸುತ್ತೇನೆ

ನಾಲಿಗೆಯಿಲ್ಲದ ಗಂಟೆ ನುಡಿಯುತ್ತದೆಯೆ? ಕಾಲಿಲ್ಲದವನು ಓಡುತ್ತಾನೆಯೆ? ಮೂಲಮಂತ್ರವನ್ನು ತಿಳಿಯದ ಪಶು ಮೇಲಾದ ಶಿವತತ್ವವನ್ನು ಬಲ್ಲನೆ. ಆಕಾಶದಲ್ಲಿ ತೋರುವ ಮಿಂಚಿನಂತೆ ಸಾಕಾರ ರೂಪವಾಗಿ ಶಿವನು ಲೋಕಸೃಷ್ಟಿಗೆ ಬೀಜವೋ ತಾನು ಎನ್ನುವಂತೆ ಆಕಾರವಾಗಿ ತೋರಿದನು. ಷಡೃತುಗಳು ತಮ್ಮ ಕಾಲವನ್ನು ತೋರುವ ಹಾಗೆ ಚಂದ್ರನಲ್ಲಿ ಷೋಡಶ ಕಳೆಗಳು ರಾಜಿಸುವ ಹಾಗೆ ಬೀಜವೃಕ್ಷ ನ್ಯಾಯದ ರೀತಿಯಲ್ಲಿ ಪರಶಿವ ಮೂರುಲೋಕದಲ್ಲಿಯೂ ತೋರಿದನು. ತಿಲದಲ್ಲಿ ತೈಲ ತಾಪದಲ್ಲಿ ಅಗ್ನಿ ಶಿಲೆಯಲ್ಲಿ ಜಲ ತೋರುವ ಹಾಗೆ ಶಿವನ ಕಳೆಗಳು ತೋರಿದುವು. ಬ್ರಹ್ಮ ವಿಷ್ಣು ರುದ್ರರಿಗೆ ಸೃಷ್ಟಿ ಸ್ಥಿತಿ ಲಯಗಳನ್ನು ಶಿವನು ನೇಮಿಸಿದನು. ಲಕ್ಷ್ಮಿ ಸರಸ್ವತಿ ಮತ್ತು ಕಾಳಿಯರನ್ನು ಸೃಷ್ಟಿಸಿದನು. ನವಬ್ರಹ್ಮರು ಜನಿಸಿದರು. ಅತಳ ವಿತಳಾದಿ ಏಳು ಲೋಕ ಗಳು ಹುಟ್ಟಿದುವು. ಬ್ರಹ್ಮನು ಸುರಪುರ ಮೊದಲಾದ ಪಟ್ಟಣಗಳನ್ನು ಸೃಷ್ಟಿಸಿದನು. ಕಾಮಧೇನು ಕಲ್ಪವೃಕ್ಷ ಸುರನದಿಗಳು ಆದುವು. ಭುವರ್ಲೋಕ ಮೊದಲಾದ ಲೋಕ ಗಳಾದುವು. ಪಂಚಶತಕೋಟಿ ಭೂತಳವನ್ನು ಹಸುಗೆ ಮಾಡಿ ದಾತರಾದವರಿಗೆ ಬ್ರಹ್ಮನು ಕೊಟ್ಟನು. ನೀತಿವಿದನು ನ್ಯಾಯವನ್ನು ತಿದ್ದುವಂತೆ ಈಶ್ವರನು ಎಲ್ಲರನ್ನು ರಕ್ಷಿಸು ತ್ತಾನೆ. ಹರನು ಗುರು ಲಿಂಗ ಜಂಗಮ ರೂಪವಾಗಿಯೆ ಎಲ್ಲರಿಂದಲೂ ಪೂಜಿಸಿಕೊಳ್ಳು ತ್ತಾನೆ. ಹರಿ ಅಜ ಸುರರು ಮನು ಮುನಿ ದಿಕ್ಪಾಲರು ನರರೆಲ್ಲರು ಪೂಜಿಸಿ ವರವನ್ನು ಪಡೆದುದಕ್ಕೆ ಸಾಕ್ಷಿ ಶ್ರೀಗಿರಿ ಮತ್ತು ಕಾಶಿಕ್ಷೇತ್ರಗಳು.

ಹರಿಯು ಮತ್ಸ್ಯ ಕೂರ್ಮಾವತಾರವಾದಲ್ಲಿಯೆ ಹರನನ್ನು ಪೂಜಿಸಿದನು. ಲಂಕಾ ಪಟ್ಟಣದಲ್ಲಿರುವ ಮತ್ಸ್ಯಕೇಶ್ವರನೇ ಅವನು. ವಿಭೀಷಣನು ಲಿಂಗಪ್ರತಿಷ್ಠಾಪನೆ ಮಾಡಿದನು. ರಾವಣನನ್ನು ಕೊಂದ ರಾಮನು ಸೇತುಮಧ್ಯದಲ್ಲಿ ರಾಮೇಶ್ವರನೆಂದು ಪೂಜಿಸಿದನು. ಕಾಶಿಯ ಗಂಗೆಯನ್ನು ರಾಮೇಶಲಿಂಗಕ್ಕೆ ಎರೆಯಬೇಕೆಂದು ಗೋವಿಂದನು ತಿಳಿಸಿದನು. ಕಾಶಿಯಲ್ಲಿ ವಿಶ್ವನಾಥನನ್ನು ಪೂಜಿಸಿದವರ ಪಾಪ ರಾಮೇಶ್ವರಕ್ಕೆ ಬಂದಲ್ಲದೆ ನಾಶವಾಗದು. ಆದುದರಿಂದ ಜನರು ಕಾಶಿ ರಾಮೇಶ್ವರಗಳಿಗೆ ಎಡೆಯಾಡು ತ್ತಿದ್ದಾರೆ. ನವಚೋಳರು ಲಿಂಗಪ್ರತಿಷ್ಠೆಮಾಡಲು ಶಿವನು ಅವರಿಗೆ ಕೈವಲ್ಯವನ್ನಿತ್ತನು. ಮಧುರೆಯಲ್ಲಿ ಪಾಂಡ್ಯನು ಚೊಕ್ಕನಾಥನನ್ನು ಪೂಜಿಸಿ ಕೈವಲ್ಯಕ್ಕೈದಿದ. ವಲ್ಮೀಕನಾಥ

ತಿರುವಾರೂರಿನಲ್ಲಿದ್ದಾನೆ. ತ್ಯಾಗರಾಯನನ್ನು ನಂಬಿಯಣ್ಣ ಪೂಜಿಸಿ ಕುಂಭಿನಿಯಲ್ಲಿ ನಡೆದಾಡಿದನು. ನಂಬಿಯಣ್ಣನು ಪಡಿಹೊನ್ನನ್ನು ಶಿವನಿಂದ ಬೇಡಿ ಪಡೆದನು. ಕಾಳಹಸ್ತಿಯಲ್ಲಿ ಪೂಜಿಸಿದ ಮದಗಜಕ್ಕೆ ಭಾಳಲೋಚನ ಕೃಪೆಯಿತ್ತನು. ಸಿರಿಯಾಳನು ಕಂಚಿಯ ಏಕಾಮ್ರನಾಥನನ್ನು ಪೂಜಿಸಿದನು. ಅರುಣಾದ್ರಿಯಲ್ಲಿ ಅಣ್ಣಾಮಲ್ಲೇಶನಿದ್ದಾನೆ. ನಂದಿ ಭೃಂಗಿ ಗುಹ ಗಣೇಶ ವೀರ ಮಹಾರುದ್ರ ಮೊದಲಾದ ಶರಣರೆಲ್ಲರು ನೆರೆದು ಸಂಕ್ರಾಂತಿಯಂದು ಶಿವನಿಗೆ ಮದುವೆ ಮಾಡಿದರು. ಕಂಚಿಯಲ್ಲಿ ಚೇರಮನು ತಿರುವಂಜಕರನಾಥ ಲಿಂಗವನ್ನು ಪೂಜಿಸಿದನು. ಚಿದಂಬರೇಶ್ವರನು ನಾಟ್ಯವನ್ನಾಡಿ ಭಕ್ತರಿಂದ ಪೂಜಿಸಿಕೊಂಡನು. ಸೇವಂತಿಗಪ್ಪನು. ಮಣ್ಣಮಳೆಯನ್ನು ಕರೆಯಲುವೈಷ್ಣವ ಚೋಳ ಮಾಡಿದನು ಕರಿಕಾಲ ಚೋಳನು ಕಾವೇರಿಗೆ ಅಡ್ಡಗಟ್ಟೆಕಟ್ಟಲು ಕುಂಭಕೋಣದಲ್ಲಿ ಗಂಗೆಯುದಯಿಸಿತೆಂಬ ವಾರ್ತೆ ಹಬ್ಬಿತು. ವ್ಯಾಸನ ತೋಳನ್ನೆತ್ತಿ ಕುಂಭಕ್ಕೆ ಪರುಸೆ ಬಂದಿತು. ಅಲ್ಲಿಗೆ ಎತ್ತಿದ ಸತ್ತಿಗೆ ಬಾವುಟ ಕಾಲಾಳು ಅಶ್ವ ಗಜ ರಥಗಳು ನೆರೆಯಲು ನೃಪರು ಪ್ರೀತಿಯಿಂದ ಬಂದರು. ರೇವಣಸಿದ್ಧೇಶ್ವರನ ಶಿಷ್ಯರು ರುದ್ರಮುನಿಪರ ಶಿಷ್ಯರು ಶಾಂತಮಲ್ಲೇಶ ದೇವರು ಮಹತ್ತುಗೂಡಿ ಅಲ್ಲಿಗೆ ಬಂದರು. ಪೊಡವಿಯಲ್ಲಿ ದೇಶಾಂತರ ಮಾಡುತ್ತ ಬಂದುದರಿಂದ ಎಲ್ಲರು ಪೊಡವಿಡಸ್ವಾಮಿಯೆಂದು ಕರೆಯುವರು. ಅವರು ಕುಂಭಕೋಣಕ್ಕೆ ಬಂದು ಕುಂಭೇಶ್ವರನ ದರ್ಶನವನ್ನು ಮಾಡಿ ಅಲ್ಲಿದ್ದರು. ಆ ಸಮಯದಲ್ಲಿ ಗಿರಿಜಾ ಕಲ್ಯಾಣ ನಡೆದು ಕುಂಭೇಶ್ವರನ ರಥೋತ್ಸವ ನಡೆಯಿತು.

ಶೈವರು ಪಡುವೀಡಸ್ವಾಮಿಯಿದ್ದಲ್ಲಿಗೆ ಬಂದು ಅಡ್ಡಬಿದ್ದರು. ಚಿನ್ನದ ಕಂತೆ ಬೆಳ್ಳಿಯ ಕಂತೆ ಕಬ್ಬುನದ ಕಂತೆ ರನ್ನದ ಕಂತೆ ತಾಮ್ರಕಂತೆ ಮುತ್ತಿನ ಕಂತೆ ಪಟ್ಟುಗಂತೆಯ ಸ್ವಾಮಿಗಳು ಬಂದು ಅಡ್ಡಬಿದ್ದರು ಕಾವಿಯ ಕಂತೆ ಕಾಗಿನ ಕಂತೆ. ಕುಪ್ಪಸ ಕಂತೆ ಕಂಬಳಿ ಕಂತೆ ಪಚ್ಚೆಕಂತೆಯ ಸ್ವಾಮಿಗಳು ಅಲ್ಲಿಗೆ ಬಂದರು. ಎಲ್ಲರೂ ಬಂದು ಕೊಳದ ಸುತ್ತ ನಿಂತರು. ಬಂದವರು ತೀರ್ಥದರ್ಶನ ಮಾಡಿ ಮಿಂದು ಕಾಣಿಕೆಗಳನ್ನು ತಂದು ಅರ್ಪಿಸಿದರು.

ಆ ಹೊತ್ತಿಗೆ ನೃಪರು ಹಿರಿಯರು ಒಂದೆಡೆ ಸೇರಿದ್ದಾಗ ಜೋಗಿಗಳು ಬಂದು ಕುಂಭಕ್ಷೇತ್ರ ತಮ್ಮದೆಂದರು. ಮಹತ್ತು ಮೊರೆದು ಮೇಲೆ ಬಿದ್ದಿತು. ದೊರೆಗಳು ಜಗಳವನ್ನು ನಿಲ್ಲಿಸಿದರು. ಹಿರಿಯರನ್ನೆಲ್ಲ ಕರೆದರು. ಪಡುವೀಡಸ್ವಾಮಿಗೆ ನಮಸ್ಕರಿಸಿದರು. ಅಲ್ಲಿ ನೆರೆದಿದ್ದ ಜೋಗಿಗಳನ್ನು ಕುರಿತು ಕುಂಭಕ್ಷೇತ್ರ ನಿಮಗೆ ಯಾವ ಕಾರಣದಿಂದ ಬಂದಿತು ಎಂದರು. ಶಿವನು ಭೈರವರೂಪನ್ನು ತಳೆದುದು ನಮಗಾಯಿತು, ಇವರಿಗೆ ಏನು ಸಂಬಂಧ ಎಂದರು. ದೊರೆಗಳು ಜೋಗಿಗಳನ್ನು ಕರೆದು ನಿಮ್ಮ ಶಂಖುವನ್ನು ತಂದು ಈ ಕೊಳದಲ್ಲಿ ಬಿಟ್ಟು ಕರೆದುಕೊಂಡರೆ ಈ ಕೊಳ ನಿಮ್ಮದೆಂದು ನೇಮಿಸಿದರು. ಅದಕ್ಕೆ ಒಪ್ಪಿದ ಜೋಗಿಗಳು ತಮ್ಮ ಶಂಖುವನ್ನು ಕೊಳದಲ್ಲಿ ಬಿಟ್ಟರು. ಮಹತ್ತೆಲ್ಲವು ನೋಡುತ್ತಿರಲು ಶಂಖುವು ಮುಳುಗಿ ಹೋಯಿತು. ಹರಸಮಯರು ಗೆಲ್ಲಬೇಕೆಂದು

ಆ ಗಂಗೆ ಸರಸಿಯಿಂದ ಶಂಖವನ್ನು ಕಳಿಸಲು ಅದು ಭೂತೇಶ ಶರಣರಿದ್ದೆಡೆಗೆ ಬಂದಿತು. ಆ ಶಂಖವನ್ನು ಮಹತ್ತು ಪೂಜಿಸಿ ಪಡೆದರು. ದೊರೆಗಳು ಅಂದು ಕುಂಭಕೋಣವನ್ನು ಮಹತ್ತಿಗೆ ನೇಮಿಸಿಕೊಟ್ಟರು.

ರೇವಣಸಿದ್ಧೇಶ್ವರನ ಪಾದವನ್ನು ನೆನೆಯುತ್ತ ಪಡುವೀಡಸ್ವಾಮಿಗಳು ಅಲ್ಲಲ್ಲಿ ಮಠಮನೆ ಸಿಂಹಾಸನ ಕೆರೆ ಕೊಳ ಅರವಟ್ಟಿಗೆ ವನವನ್ನು ಮಾಡಿದರು. ಕಡಲೆ ಕಬ್ಬು ಹಣ್ಣು ಕಾಯಿಗಳನ್ನು ತಂದು ಶಿವನಿಗೆ ನೈವೇದ್ಯವನ್ನು ಮಾಡಿ ಪ್ರೀತಿಯಿಂದ ಬಿಜಯಂಗೆಯ್ದರು. ಸೂರ್ಯನು ಮುಳುಗಿ ಸಂಜೆಯಾಯಿತು. ಪಂಜುಗಳು ಮೆರೆದುವು. ಚಂದ್ರೋದಯವಾಯಿತು. ಕುಂಚ ಕಾಳಂಜಿಗಳನ್ನು ಹಿಡಿದು ಈಶ್ವರನ ಮೆರವಣಿಗೆಯ ಮುಂದೆ ಸ್ತ್ರೀಯರು ನಡೆದರು. ಈಶ್ವರನ ಸಮ್ಮುಖದಲ್ಲಿ ಚಾಮರ ಸೀಗುರಿಗಳನ್ನು ಬೀಸಿದರು. ಆಡುವಪಾತ್ರದ ಸಂಭ್ರಮದಿಂದ ಭೇರಿ ಮೃದಂಗ ಕಹಳೆ ಶಂಖ ನಿಸ್ಸಾಳ ವೀರಣಗಳ ಶಬ್ದಗಳ ನಡುವೆ ಬಂದ ಶಿವನನ್ನು ಶೈವರು ಪೂಜಿಸಿದರು. ನೈವೇದ್ಯವನ್ನು ಹಂಚಿದರು. ಶಿವನು ಒಡೆಯರು ಮತ್ತು ಭಕ್ತರುಗಳನ್ನು ಆನಂದದಿಂದ ಸಲಹುತ್ತಿದ್ದನು.

ಲಿಂಗವೆ ನಾದ ಬಿಂದುವೆ ಜಂಗಮ ಮಂಗಳಕಳೆ ಗುರುಮೂರ್ತಿ. ಲಿಂಗ ಜಂಗಮ ಗುರುವಾಗಿ ಭಕ್ತರಿಗೆ ಗಂಗಾಧರ ಒಲಿದಿದ್ದಾನೆ. ಲಿಂಗವೆ ಸ್ಥಾವರ ಜಂಗಮ ಚರಮೂರ್ತಿ ಕಂಗೊಳಿಸುವ ಕಳೆ ತಾನೆ ಆಗಿ ಮಂಗಳಮಯ ಪರಶಿವನು ಲಿಂಗ ಜಂಗಮಕೆಲ್ಲ ಗುರುವಾಗಿ ತೋರಿದನು. ಈಶ್ವರ ಮಹೇಶ್ವರ ರುದ್ರರು ಪರಶಿವನಿಂದ ದೀಕ್ಷೆ ಪಡೆದು ಕೃತಯುಗದಲ್ಲಿ ಪಾರ್ವತಿ ಹರಿ ಅಜರಿಗೆ ಗುರುವಾಗಿ ಚರಿಸುತ್ತಿದ್ದಾರೆ. ತ್ರೇತಾಯುಗದಲ್ಲಿ ರುದ್ರಮೂರ್ತಿಗಳು ಷಡಾಕ್ಷರ ಪಂಚಾಕ್ಷರ ತ್ರ್ಯಕ್ಷರ ಏಕಾಕ್ಷರರಾಗಿ ಚರಿಸುವರು. ದಾರುಕ ರೇಣುಕ ಕರ್ಣ ಶಂಕುಕರ್ಣರು ದ್ವಾಪರದಲ್ಲಿ ಗುರುವಾಗಿ ಭೂಮಿಯಲ್ಲಿ ಚರಿಸುವರು, ಈ ಕಲಿಯುಗದಲ್ಲಿ ರೇವಣಸಿದ್ಧ ಮರುಳಸಿದ್ಧ ಏಕೋರಾಮಯ್ಯ ಪಂಡಿತಾರಾಧ್ಯರು. ಗುರುರೇವಣೇಶನು ಸೋಮೇಶನಿಂದ ಹೊಮ್ಮಿದನು. ಜ್ಯೋತಿಸಿದ್ಧವಟದಲ್ಲಿ ಮರುಳಸಿದ್ಧೇಶ ಉದಯವಾದನು. ಏಕೋರಾಮಯ್ಯ ಬಾಲಬ್ರಹ್ಮೇಶ್ವರನಿಂದ ಹುಟ್ಟಿದನು. ಪಂಡಿತಾರಾಧ್ಯರು ತ್ರಿಪುರಾಂತಕೇಶ್ವರನಿಂದ ಜನಿಸಿದರು. ಅವರವರ ಆಚರಣೆಯ ಮಾರ್ಗಗಳು ಅವರವರಿಗೆ ಬೇರೆ.

ಮೇರುವಿಗೆ ಈಶಾನ್ಯದ ನಕ್ಷತ್ರಗಿರಿಯಲ್ಲಿ ಲೋಹದಕಳಶದಲ್ಲಿ ಶಾಂತಮಲ್ಲಿಕಾರ್ಜುನನನ್ನು ರೇವಣಸಿದ್ಧರು ಭಜಿಸಿದರು. ರುರುವರ್ಣ ಋಗ್ವೇದ ಗಾಯತ್ರಿ ಛಂದಸ್ಸು ಪರಜ್ಞಾನ ಶಕ್ತಿ ಆತ್ರಿಗೋತ್ರ ಗುರು ಸದಾಶಿವ ತತ್ವ ಸಿಂಹವಾಹನದಿಂದ ರೇವಣಾರ್ಯರು ಪ್ರಸಿದ್ಧನಾದನು. ದೇವವೃಕ್ಷದ ಕೆಳಗಿನ ಗಾದಿ ಕಬ್ಬಿನ ದಂಡ ಅಷ್ಟಶಿಖಿ. ಸಿದ್ಧ ದಯಾಧರ್ಮನಾದ ಕಂಬಳಿದ್ದುಗೆ ಕುಪ್ಪಸಕಂತೆ ಪದ್ಮಾಸನ ಬಲಮುರಿಲೋಹವನ್ನು ಧರಿಸಿ ರೇವಣಸಿದ್ಧ ಶಿವಯೋಗಿ ಚರಿಸಾಡುತ್ತಿದ್ದಾನೆ.

ಮೇರುಪರ್ವತಕ್ಕೆ ಅಗ್ನಿದಿಕ್ಕಿನಲ್ಲಿರುವ ಸುಕುಮಾರಗಿರಿಗೆ ಪೊಂಗಳಸ ಚಾರುಕಪಿಲ ಸಿದ್ಧ ಮಲ್ಲಿಕಾರ್ಜುನನನ್ನು ಮರುಳಸಿದ್ಧ ಪೂಜಿಸುತ್ತಾನೆ. ಅರುಣವರ್ಣ ಇಚ್ಛಾಶಕ್ತಿ ಯಜುರ್ವೇದ ಶೃತೀಶ್ವರ ಭರದ್ವಾಜಗೋತ್ರ ವೃಷಭವಾಹನ ಜಗತೀಛಂದಸ್ಸಿನಿಂದ ಮರುಳಸಿದ್ಧೇಶ್ವರನೆಸೆದನು. ಮಂದಾರ ತರುವಿನ ಕೆಳಗೆ ತಾವು. ಕುಠಾರ ದಂಡ ವಿಚಾರಕಪ್ಪರ ಗದ್ದುಗೆ ಪುಲಿಚರ್ಮ ಬಹುಶಿಖಿ ಸಿದ್ಧಾಸನ ಜಜ್ಜುಗೆಯುಶಬ್ದವಜಾತ ಭಿಕ್ಷಾಯೆಂಬ ಧ್ವನಿಯಿಂದ ಲೋಕವನ್ನು ಉದ್ಧರಿಸುತ್ತಾನೆ.

ಮೇರುವಿಗೆ ನೈಋುತ್ಯದಿಕ್ಕಿನ ಕನಕಪರ್ವತದಲ್ಲಿ ರಜತಕಳಶ ಮಧ್ಯದಲ್ಲಿ ಭೋಗೇಶ, ಏಕಾಂತರಾಮಯ್ಯ ಈ ಭೋಗಮಲ್ಲೇಶಲಿಂಗವನ್ನು ಚೂತವೃಕ್ಷದಡಿಯಲ್ಲಿ ಪೂಜಿಸುತ್ತಾನೆ, ಸಾಮವೇದ ಶ್ವೇತವರ್ಣ ಕಾಶ್ಯಪಗೋತ್ರ ಮಹೇಶ್ವರ ಕ್ರಿಯಾಶಕ್ತಿ ಅನುಷ್ಟುಪು ಛಂದದಿಂದ ಏಕೋರಾಮನು ಒಪ್ಪಿದನು. ಆನೆಯನ್ನೇರಿ ಬೆಳ್ಳಿಯ ಮುದ್ರೆ ಶ್ವೇತಾಂಬರ ಬೆತ್ತದದಂಡ ರತ್ನಗಂಬಳಿಯು ಹೊದ್ದಿಗೆ ಚಕ್ರಮುಕುಟ ಚಂದ್ರಾಸನ ಸಿದ್ಧದಯಾಧರ್ಮ ನಾದ ಆನಂದ ವಿಚಾರಕಪ್ಪಡಗಳಿಂದ ಏಕೋರಾಮನು ಸಂಚರಿಸುತ್ತಿದ್ದಾನೆ.

ಮೇರುವಿಗೆ ವಾಯುವ್ಯದ ತ್ರಿಕೂಟಪರ್ವತದಲ್ಲಿ ತಾಮ್ರಕಳಶ ಮಧ್ಯೆ ಇರುವ ಚೆನ್ನಮಲ್ಲೇಶನನ್ನು ಪಂಡಿತೇಶ್ವರ ಪೂಜಿಸುತ್ತಾನೆ. ಭಸಿತ ರುದ್ರಾಕ್ಷಿ ಪಂಚಾಕ್ಷರಿಮಂತ್ರ ಮುಂತ್ರಕುಂಡಲ ಶಶಿಧರಧ್ಯಾನದಿಂದ ಪಂಡಿತಾರಾಧ್ಯರು ಪಶುಪತಿ ಶಿವನನ್ನು ಪೂಜಿಸುವರು. ಜಗತೀಛಂದಸ್ಸು ಗೌತಮಗೋತ್ರ ಅಥರ್ವಣನಿಗಮ ರುದ್ರಸಿತವರ್ಣ ಹಂಸ ವಾಹನ ಮಂತ್ರಶಕ್ತಿಗಳಿಂದ ಪಂಡಿತೇಶನು ಸೊಗಯಿಸಿದನು, ಅವರಿಗೆ ಪಂಚಶಿಖಿ ಕಾವಿಯಂಕಂತೆ ಗದ್ದುಗೆ ಕೃಷ್ಣಾಜಿನ ಪಾಸ್ಪಷಿ ಮುಕುಟ ಕರದಲ್ಲಿ ಚಿಪ್ಪುಗೊಡಲಿ ತಾಮ್ರದ ಮುರಿ, ಒಪ್ಪುವ ಆಚಾರ ಕಪ್ಪರ ಸಿದ್ಧಸದಾಚಾರಭಿಕ್ಷದಿಂದ ಅಪ್ರತಿಮನು ಚರಿಸುವನು.

ರೇವಣಸಿದ್ಧ ಮರುಳಸಿದ್ಧ ಏಕೋರಾಮಯ್ಯ ಪಂಡಿತೇಶ್ವರರು ಭೂವಳಯದಲ್ಲಿ ಸಂಚರಿಸುತ್ತಿದ್ದಾರೆ, ಗುರು ಲಿಂಗ ಜಂಗಮವಾಗಿ ಹರನ ಮಹತ್ವವ ರೂಪಾಗಿ ಲೋಕದಲ್ಲಿ ಸಂಚರಿಸುತ್ತಿದ್ದಾರೆ. ಸುರರು ಮುನಿಗಳು ಭೂಸುರರು ಯಜ್ಞಾದಿಕರ್ಮವನ್ನು ಮಾಡುತ್ತಿರುವರು. ಅವರ ಭಕ್ತಿಗೊಲಿದು ತ್ರಿವಿಧ ಸ್ವರೂಪನಾಗಿ ಶಿವನು ಚರಿಸುತ್ತಿದ್ದಾನೆ ಎಂದು ಗುರು ಹೇಳಿದನು. ಇದನ್ನೆಲ್ಲ ಕೇಳಿದ ಶಿಷ್ಯ ಚಿಂತೆ ದೂರವಾಯಿತೆಂದು ಗುರುವಿಗೆ ನಮಿಸಿದನು. ಅಷ್ಟರಲ್ಲಿ ಬೆಳಗಾಯಿತು. ಪಡುವೀಡ ದೇವರೆದ್ದು ಮಹತ್ತಿಗೆ ನಮಸ್ಕರಿಸಿ ಮೃಡನ ಪೂಜೆ ಮಾಡುತ್ತಿರಲು ಒಬ್ಬ ಪುರಾಣಿಕನು ಕ್ಷೇತ್ರ ಮಾಹಾತ್ಮ್ಯವನ್ನು ಹೇಳಿದನು.

ಕಪಿನಿ ಕುಂಡಲಿ ಸಂಗಮಕ್ಷೇತ್ರದಲ್ಲಿ ಕಪ್ಪುಗೊರಲ ನಂಜುಂಡನು ನಾಲ್ಕು ಯುಗಗಳಿಂದಲೂ ಪೂಜೆಗೊಂಡು ನೆಲೆಸಿದ್ದಾನೆ. ಕ್ಷತ್ರಿಯ ಕಾರ್ತವೀರ್ಯನನ್ನು ಪರಶುರಾಮನು ಕೊಂದುದರಿಂದ ಬಂದ ಪಾಪವನ್ನು ನಂಜುಂಡನು ಪರಿಹರಿಸಿದನು. ಫಾಲ್ಗುಣ ಶುದ್ಧ

ಪೌರ್ಣಮೆಯಲ್ಲಿ ನಡೆಯುವ ನಂಜುಂಡನ ಜಾತ್ರೆಗೆ ದೇಶದೇಶದ ಅರಸರು ಬರುವರು. ತಿರುಮಕೂಡಲಿನಲ್ಲಿ ತನ್ನ ಹೆಸರಿನ ಆಗಸ್ತ್ಯನಿಗೆ ಈಶ್ವರನು ಪ್ರಸಿದ್ಧ. ಲೋಕದ ಪುಣ್ಯ ಕ್ಷೇತ್ರಗಳಲ್ಲಿ ತ್ರೈಕೂಟಮಿಗಿಲೆಂದು ಗುಂಜಿಯ ನರಸಿಂಹನು ತೂಕವನ್ನು ಅರಿತನು. ಬ್ರಹ್ಮನನ್ನು ಕೊಂದ ಈಶ್ವರ ಸ್ಫಟಿಕಸರೋವರದಲ್ಲಿ ಸ್ನಾನಮಾಡಿ ಆ ಪಾಪವನ್ನು ಕಳೆದನು. ಅದನ್ನು ನಂದಿಯಕಾವಲ ರುದ್ರಪಾದ ಎನ್ನುತ್ತಾರೆ. ಶಂಕರನು ತನ್ನ ಹನ್ನೆರಡನೆಯ ಲೀಲೆಯಲ್ಲಿ ಗಿರಿಜೆಯ ಕೈಹಿಡಿಯಲಾಗಿ ಹರಿ ಅಜ ಸುರ ಮನು ಮುನಿ ದಿಕ್ಪಾಲರು ಶರಣಪ್ರಮಥರು ರುದ್ರರು ಉತ್ತರದಲ್ಲಿ ಸೇರಿದರು. ಆಗ ಭೂಮಿಯ ದಕ್ಷಿಣ ಭಾಗ ಲಘುವಾಗಿ ಮೇಲೆದ್ದಿತು. ವಿಶ್ವಕರ್ಮನ ಸೂಚನೆಯಂತೆ ಈಶ್ವರನು ಅಗಸ್ತ್ಯನನ್ನು ದಕ್ಷಿಣದಿಕ್ಕಿಗೆ ಕಳಿಸಿದನು. ಅದರಿಂದ ಕೋಪಗೊಂಡ ಅಗಸ್ತ್ಯನು ವಿಶ್ವ ಕರ್ಮನಿಗೆ ಶಾಪವಿತ್ತನು. ಈಶ್ವರನಿಗೆ ಅಗಸ್ತ್ಯನು ನಮಸ್ಕರಿಸಿ ನಿಶ್ಶಾಪವನ್ನು ಕೋರಿದನು. ಆಗ ಸ್ವಾಮಿಯು ಮುನಿಯ ಕಮಂಡಲೋದಕದ ನೀರು ನಿನ್ನ ಮೈಮೇಲೆ ಬಿದ್ದಾಗ ನಿಶ್ಶಾಪವೆಂದನು, ಶಿವನು ಕೊಟ್ಟ ಗಂಗೆಯನ್ನು ತೆಗೆದುಕೊಂಡು ಅಗಸ್ತ್ಯನು ವಿಂಧ್ಯಾಚಲವನ್ನು ಏರಿಬರುವಾಗ ವಾತಾಪಿ ಇಲ್ವಲರು ಮೋಸದಿಂದ ಉಪಚರಿಸಿದರು. ಅಗಸ್ತ್ಯನು ಅವರನ್ನು ಕೊಂದನು. ಲೋಪಾಮುದ್ರೆ ಕವೇರರ ಮಗಳಾಗಿ ಬಂದ ಬ್ರಹ್ಮ ಮಾನಸ ಪುತ್ರಿ ಕಾವೇರಿಯನ್ನು ಕೈಹಿಡಿದನು. ಗಗನಮಾರ್ಗದಲ್ಲಿ ಅಗಸ್ತ್ಯನು ಬರುತ್ತ ಕಾವೇರಿಯನ್ನು ಕಮಂಡಲದಲ್ಲಿಟ್ಟು ಮಲವಿಸರ್ಜನೆಗೆ ಹೋದನು. ಅಷ್ಟರಲ್ಲಿ ಖಗ ವೊಂದು ಬಂದು ಆ ಕಮಂಡಲವನ್ನು ಉರುಳಿಸಿತು. ಅಲ್ಲಿದ್ದ ಕಾವೇರಿ ನದಿಯಾಗಿ ಹರಿಯತೊಡಗಿದಳು. ಅಗಸ್ತ್ಯ ತಡೆದರೂ ನಿಲ್ಲದೆ ಕಾವೇರಿ ಎರಡು ಹೋಳಾಗಿ ಹರಿದು ಮುಂದೆ ಕಪಿನಿಯನ್ನು ಕೂಡಿದಳು.

ಕಾವೇರಿ ಕಪಿನಿ ಮತ್ತು ಸ್ಫಟಿಕಸರೋವರದ ತ್ರಿವೇಣಿಸಂಗಮದಲ್ಲಿ ಅಗಸ್ತ್ಯ ತಪ ವಿದ್ದನು. ಒಂದು ಒಳ್ಳೆಯ ದಿವಸವನ್ನು ನೋಡಿ ಹನುಮಂತನನ್ನು ಕರೆದು ಕಾಶಿಯಿಂದ ಲಿಂಗವನ್ನು ತರಲು ಕಳಿಸಿದನು. ಹನುಮಂತ ಬರುವುದು ತಡವಾಗಿ ಮುಹೂರ್ತ ಮೀರುತ್ತಿರಲು ಅಗಸ್ತ್ಯನು ಒಂದು ಲಿಂಗಪ್ರತಿಷ್ಠಾಪನೆ ಮಾಡಿದನು. ಹಿಂದಿರುಗಿ ಬಂದ ಹನುಮಂತ ಅಗಸ್ತ್ಯ ಪ್ರತಿಷ್ಠಾಪಿತ ಲಿಂಗವನ್ನು ತನ್ನ ಬಾಲದಿಂದ ಕೀಳಲು ಪ್ರಯತ್ನಿ ಸಿದನು. ಆಗಲಿಲ್ಲ. ಆಗ ಅಗಸ್ತ್ಯನು ಹನುಮಂತನನ್ನು ಸಮಾಧಾನ ಪಡಿಸಿ ಅವನು ತಂದಿದ್ದ ಲಿಂಗವನ್ನು ಪ್ರತಿಷ್ಠಾಪಿಸಿ ಹನುಮಂತೇಶ್ವರಲಿಂಗವೆಂದು ಕರೆದನು.

ಕೃಷ್ಣನು ರಾಕ್ಷಸರನ್ನು ಕೊಂದುದರಿಂದ ಬಂದ ಪಾಪವನ್ನು ಕಳೆಯಲು ತ್ರಿಕೂಟ ದಲ್ಲಿ ಬಂದು ತಪಸ್ಸನ್ನು ಮಾಡಿ ನೆಲಸಿದನು. ಅದನ್ನು ಕೇಳಿ ಸೋಮ ಮಾರ್ಕಂಡೇಯ ಗಾರ್ಗ್ಯ ರೇವಣಸಿದ್ಧರು ಬಂದು ತ್ರಿಕೂಟದಲ್ಲಿ ತಪಸ್ಸಿದ್ದರು. ಆಗ ಶಿವನು ಅವರಿಗೆ ಒಲಿದನು. ಈಶ್ವರ ಮಾರ್ಕಂಡೇಶ ಸೋಮೇಶ ಹನುಮಂತೇಶ ಮಲ್ಲೇಶ ಗರ್ಗೇಶ್ವರರು ಅಲ್ಲಿ ಒಪ್ಪಿದರು. ಪಿಚ್ಚೆಗುಡಿಯಸಿದ್ಧೇಶ ಬಳ್ಳೇಶ ವೀರಭದ್ರ

ವಿಘ್ನೇಶ್ವರ ಚೌಡಿಯರು ಅಲ್ಲಿ ನೆಲಸಿದರು. ಎಲ್ಲ ಋಷಿಗಳು ಗಿರಿಜೆಯನ್ನು ಭಜಿಸಿದರು. ನರಸಿಂಹನು ಕಾಶಿಗಿಂತ ಈ ಕ್ಷೇತ್ರ ಮಿಗಿಲೆಂದು ಅಲ್ಲಿ ನೆಲಸಿದ್ದಾನೆ.

ಕಾಶಿಯಲ್ಲಿ ವಿಸರ್ಜಿಸಲು ಒಬ್ಬ ಬ್ರಾಹ್ಮಣನು ತಾಯಿಯ ಅಸ್ಥಿಯನ್ನು ತೆಗೆದುಕೊಂಡು ಹೊರಟನು. ಹಾಗೆ ಬರುವಾಗ ತ್ರಿಕೂಟವನ್ನು ಕಂಡು ಸಂತೋಷಪಟ್ಟನು. ಅಲ್ಲಿಯೇ ತಾಯಿಯ ಅಸ್ಥಿಯನ್ನು ಬಿಟ್ಟು ನೋಡುತ್ತಿರುವಂತೆ ಅದು ಸೇವಂತಿಗೆ ಹೂವಾಯಿತು. ಅದು ಅಲ್ಲಿ ನಿಲ್ಲದೆ ಕಾಶಿಗೆ ಹೋಯಿತು. ಬ್ರಾಹ್ಮಣನು ಕಾಶಿಗೆ ಹೋಗಿ ನೋಡಲು ಹೂವೆಲ್ಲ ಅಸ್ಥಿಯಾಯಿತು. ಅದನ್ನು ನೋಡುತ್ತ ಧ್ಯಾನಿಸುತ್ತಿರುವಾಗ ಆ ರಾತ್ರಿ ಈಶ್ವರನು ಬಂದು ಭೂಮಿಯಲ್ಲೆಲ್ಲ ತ್ರಿಕೂಟಕ್ಷೇತ್ರ ಮಿಗಿಲು ಅಲ್ಲಿಗೆ ಹೋಗು ಎಂದನು. ಅಲ್ಲಿಂದ ಬ್ರಾಹ್ಮಣನು ತ್ರಿಕೂಟಕ್ಕೆ ಬಂದು ನೋಡಲು ಹೂವು ಅಸ್ಥಿಯಾಗಿದ್ದಿತು. ಅದನ್ನು ಕಂಡು ತಾಯಿ ತಂದೆಗಳ ಹೆಸರಿನಲ್ಲಿ ಧರ್ಮವನ್ನು ನಡೆಸಿದನು. ಮುನಿಗಳೊಡನೆ ವ್ಯಾಸರು ಬಂದು ಅಗಸ್ತ್ಯೇಶ್ವರ ಲಿಂಗಕ್ಕೆ ರಥವನ್ನು ನಡೆಸಿದರು. ರಂಗಮಂಟಪ ಹೊಂಗಳಸ ಕೆರೆ ಕೊಳ ತೋಪು ಮಠ ದಾಸೋಹ ಪ್ರಭಾಳೆ ಛತ್ರ ಚಾಮರಗಳನ್ನು ಲಿಂಗರಾಜೇಂದ್ರ ಮಾಡಿಸಿದನು. ಅಲ್ಲಿಂದ ಕಾವೇರಿ ಪೂರ್ವದಿಕ್ಕಿಗೆ ಹರಿಯುತ್ತಾಳೆ.

ತೆಂಕಣದೇಶದ ಪರುಷೆ ಶ್ರೀಗಿರಿ (ಶ್ರೀಶೈಲ)ಗೆ ಹೋಗಲು ಶ್ರೇಷ್ಠವೆನ್ನಿಸಿದ ಜಾತ್ರೆಯಲ್ಲಿ ಮಸ್ತಾದ್ರಿಮಲ್ಲೇಶ (ಮುಡುಕುತೊರೆ) ಪೂಜಿತನಾಗಿದ್ದಾನೆ. ಮೌಲಿಗಿರಿ ಮಲ್ಲಿಕಾರ್ಜುನ ದೇವರಿಗೆ ದಕ್ಷಿಣದಲ್ಲಿರುವ ಗಜಾರಣ್ಯದಲ್ಲಿ ಭವರೋಗವೈದ್ಯೇಶ್ವರನಿದ್ದಾನೆ. ಈಶ್ವರನು ತಾನು ಭವರೋಗವೈದ್ಯ ಎನ್ನುವ ಹೆಸರನ್ನು ತೋರುವ ಸಲುವಾಗಿ ಅಲ್ಲಿ ಶಿವಲಿಂಗವಾಗಿ ಮೂಡಿದನು. ಆಗ ಕಾರ್ತವೀರ್ಯನಿಂದ ಹತನಾದ ಜಮದಗ್ನಿ ಮುನಿಯ ಕಾಮಧೇನು ಕಾವೇರಿತೀರದಲ್ಲಿ ಹಸುವಾಗಿ ಹುಟ್ಟಿತು. ಅಲ್ಲಿ ಹುಲ್ಲು ನೀರುಗಳನ್ನು ಸೇವಿಸಿ ಮರಳೇಶ್ವರ ಮಲ್ಲಿಕಾರ್ಜುನ ಅರ್ಕೇಶ್ವರ ಪಾತಾಳೇಶ್ವರ ವೈದ್ಯೇಶ ಎನ್ನುವ ಐದುಲಿಂಗಗಳಿಗೆ ಹಾಲನ್ನು ಕರೆಯುತ್ತಿತ್ತು. ಆ ಹಾಲು ಹರಿದು ಬಂದು ಒಂದು ಕಡೆ ನಿಲ್ಲಲು ಅದು ಗೋರ್ಕಣವೆಂದು ಹೆಸರಾಯಿತು. ಆ ಕೊಳದಲ್ಲಿ ತಾವರೆಯೊಂದು ಬೆಳೆಯಿತು. ಇಂದ್ರನ ಐಶ್ವರ್ಯ ಅಳಿದುದರಿಂದ ನೊಂದ ಐರಾವತ ಬಂದು ಆ ಕಮಲದಿಂದ ವೈದ್ಯೇಶ್ವರನನ್ನು ಪೂಜಿಸಿತು. ಆ ಹಸು ಮತ್ತು ಆನೆಗೆ ಈಶ್ವರನು ಕೈವಲ್ಯ ಪದವನ್ನು ಕೊಟ್ಟನು. ದಂಡಕಮುನಿ, ಲಕ್ಕಣ್ಣರಿಂದ ಪೂಜಿತನಾದ ವಿಶ್ವನಾಥನು ಕಾವೇರಿಯ ಒತ್ತಿನಲ್ಲಿ ನೆಲಸಿದನು.

ಉತ್ತರದಲ್ಲಿ ಕಕುದ್ಗಿರಿ ಮೆರೆಯುತ್ತಿದೆ. ಮಿಸುನಿವೆಟ್ಟು ಬಂದು ಭೂಮಿಯಲ್ಲಿ ನಿಂತು ಶಿವಗಂಗೆ ಎಂದು ಹೆಸರಾಯಿತು. ಗಂಗೆ ಮತ್ತು ಶೃಂಗಮುನಿ ಬಂದು ಅಲ್ಲಿ ತಪವಿರಲು ಶಿವನು ಕೃಪೆದೋರಿದನು. ಮೇರುಗಿರಿ ಇಲ್ಲಿಗೆ ಬರಲು ಕಾರಣವೇನು ಎಂದು

ಪ್ರಶ್ನಿಸಲು ಧ್ಯಾನಿಸಿ ನೋಡಿ ಗುರು ಹೀಗೆ ಹೇಳಿದನು. ವೃಷಭವು ಶಿಂಶುಮಾರನನ್ನು ಕೊಂದ ಮೇಲೆ ಗರ್ಜಿಸುತ್ತ ಪಕ್ಕದಲ್ಲಿದ್ದ ಮೇರುಗಿರಿಯನ್ನು ಚಿಮ್ಮಿಸಿತು. ಆಗ ಮೇರುಗಿರಿಯಲ್ಲಿದ್ದ ದೇವತೆಗಳು ಬಂದು ಶಿವನಿಗೆ ಮೊರೆಯಿಟ್ಟರು. ಶಿವನು ಹತ್ತಿರ ವಿದ್ದ ವೃಷಭನನ್ನು ಕರೆದು ನೀನು ಮರ್ತ್ಯದಲ್ಲಿ ಹುಟ್ಟು ಎಂದನು. ನೀನು ಕಕುದ್ಗಿರಿಯಲ್ಲಿ ಶೃಂಗಮುನಿಯಾಗಿರುವಾಗ ಗಂಗೆ ಅಲ್ಲಿಗೆ ಬರುತ್ತಾಳೆ. ಅವಳ ದರ್ಶನ ಮಾಡಿದರೆ ನಿನಗೆ ಮೋಕ್ಷ ಎಂದನು. ಒಂದು ದಿವಸ ಈಶ್ವರನು ಗಿರಿಜೆಯನ್ನು ವಂಚಿಸಿ ಗಂಗೆಯನ್ನು ಕರೆದು ಮಾತಾಡಿ ನೀನು ಕಕುದ್ಗಿರಿಗೆ ಹೋಗಿರು ನಾವು ಅಲ್ಲಿಗೆ ಬರುತ್ತೇವೆಯೆಂದು ರನ್ನದಾ ಭರಣವನ್ನು ತೊಡಿಸಿ ಕಳಿಸಿದನು. ಆಕೆ ಹೊನ್ನಮ್ಮನೆಂದು ಪ್ರಸಿದ್ಧಳಾದಳು. ಈಶ್ವರನು ಅಲ್ಲಿಗೆ ಬಂದು ಸಂಕ್ರಾಂತಿಯಂದು ಹೊನ್ನಮ್ಮನನ್ನು ವಿವಾಹವಾದನು. ಅಲ್ಲಿ ಕಂಭದಲ್ಲಿ ನೀರು ಬಂದಸುದ್ದಿ ಲೋಕದಲ್ಲೆಲ್ಲ ಹರಡಿತು. ಆ ನೀರನ್ನು ತಂದು ಶಂಭುವಿಗೆ ಅಭಿಷೇಕ ವನ್ನು ಮಾಡಿದರು. ರಥೋತ್ಸವ ನಡೆಯಿತು. ಕೆಂಚಸೋಮನು ಗಂಗಾಧರನಿಗೆ ಮಂಟಪ ಗುಡಿ ಗೋಪುರ ಪುರ ಕೆರೆ ಭಾವಿ ವನಗಳನ್ನು ಮಾಡಿಸಿದನು. ಗಂಗಾಧರನು ಕೆಂಚ ಸೋಮನಿಗೆ ಕರುಣಿಸಿದನು.

ಗಿರಿಗಳಲ್ಲಿ ರಜತ ಪರ್ವತ ನಿರ್ಜರರಲ್ಲಿ ಭುವನೋದರರು ಶರಧಿಗಳಲ್ಲಿ ಪಯೋನಿಧಿ ಕ್ಷೇತ್ರಗಳಲ್ಲಿ ಪಂಪಾಪುರ ಮೇಲು. ಅಲ್ಲಿನ ಹೇಮಕೂಟದಲ್ಲಿ ಶಿವನು ತಪಸ್ಸಿದ್ದನು. ಹೇಮ ಕೂಟದಲ್ಲಿ ಈಶ್ವರನು ಅಂಬಿಕೆಯ ಕೈ ಹಿಡಿದನು. ವಿರೂಪಾಕ್ಷ ಕಿನ್ನರೇಶ್ವರ ಜಂಬುಕೇಶ್ವರ ಸೋಮೇಶ್ವರ ಮಣಿಭದ್ರೇಶ್ವರರು ಅಲ್ಲಿ ನೆಲಸಿದ್ದಾರೆ. ಹೇಮಕೂಟ ಪರ್ವತ ಮತ್ತು ತುಂಗಭದ್ರಾ ತಿರದಲ್ಲಿ ಮುನಿಗಣ ಒಪ್ಪಿದೆ. ಕಪಿಲ ಅರ್ಕ ವಾಮನ ವಾಸಿಷ್ಠ ಉಪಮನ್ಯು ಮೊದಲಾದವರು ಅಲ್ಲಿ ತಪವಿದ್ದರು. ವಾಲಿ ಸುಗ್ರೀವರು ಅಲ್ಲಿ ತಪಸ್ಸುಮಾಡಿದರು.

ಉಳುವೆಯಲ್ಲಿ ಸಂಗಮನಾಥನೊಪ್ಪಿದನು. ಹರಳಯ್ಯ ಮಧುವಯ್ಯಗಳ ಕಾರಣ ದಿಂದ ಮೊಲ್ಲೆಯ ಬೊಮ್ಮಣ್ಣ ಕಲ್ಯಾಣದ ಅರಸು ಬಿಜ್ಜಳನನ್ನು ಕೊಂದನು. ಉಳುವೆಗೆ ಚೆನ್ನಬಸವರಾಜನು ಬರುವಾಗ ಅಳಿಯಬಿಜ್ಜಳನು ಬಂದು ಶರಣರೊಡನೆ ಕಾದಿದನು. ಅವನನ್ನು ಶರಣರು ಸೋಲಿಸಿ ಉಳುವೆಗೆ ಬಂದು ಪರ್ವವನ್ನು ಮಾಡಿ ಕೈಲಾಸಕ್ಕೆ ಹೋದರು. ಉಳಿದ ಶರಣರು ಉಳುವೆಯ ಮನೆಯಲ್ಲಿ ನೆಲಮಾಳಿಗೆಯಲ್ಲಿ ಗುಹೆಯಲ್ಲಿ ತಳಿರು ತಂಪುಗಳಲ್ಲಿ ನಾನಾವಿಧದಿಂದ ಈಶ್ವರನನ್ನು ಪೂಜಿಸುತ್ತಿದ್ದಾರೆ. ಮಾಘ ಬಹುಳ ಚತುರ್ದಶಿ ದಿನದಲ್ಲಿ ಶರಣರೆಲ್ಲರು ನೆರೆದು ಶಿವನನ್ನು ಪೂಜಿಸುವ ಸಂಭ್ರಮವನ್ನು ಏನೆಂದು ಹೇಳಲಿ.

ರಾವಣನಿಂದ ಪೂಜೆಗೊಂಡ ಮಹಾಬಲೇಶ್ವರನು ಗೋಕರ್ಣದಲ್ಲಿ ನಿಂತನು. ಆ ವಿವರಗಳು— ಇಂದ್ರ ಅಗ್ನಿ ಯಮ ನೈಋತ್ಯ ಮುಂತಾದವರನ್ನು ಕೊಂದು ಕೂಗಿ ರಾವಣನು ಅಳಕಾಪುರವನ್ನು ಆಕ್ರಮಿಸಿದನು. ಒಂದು ಸಲ ಹರಿ ಅಜ ಸುರರು ಶಿವನ

ಓಲಗಕ್ಕೆ ಹೋಗುತ್ತಿದ್ದರು. ಆಗ ರಾವಣನು ಅವರನ್ನು ಕರೆದು ವಿಚಾರಿಸಿದನು. ಅವರ ಗುಂಪಿನಲ್ಲಿದ್ದ ನಾರದನು ಈಶ್ವರನಲ್ಲಿಗೆ ಹೋಗುತ್ತಿದ್ದೇವೆ ಎಂದನು. ಆಗ ರಾವಣನು ಶಿವನು ಎಲ್ಲಿದ್ದಾನೆ ಎಂದನು. ಅವನ ಉದ್ರೇಕವನ್ನು ಅರಿತ ನಾರದನು ಪಾರ್ವತಿ ಯೊಡನೆ ರಜತಾದ್ರಿಯಲ್ಲಿರುವ ಶಿವನು ನಾನಾದೈತ್ಯರು ದೇವರುಗಳಿಗೆಲ್ಲ ತಾನೇ ಒಡೆಯ ನೆನ್ನುತ್ತಿದ್ದಾನೆ ಎಂದನು. ಅಷ್ಟದಿಕ್ಪಾಲಕರು ಹರಿ ಅಜ ಸುರರೆಲ್ಲ ಅವನನ್ನು ಪಟ್ಟದರಸು ಎಂದು ಓಲೈಸುವರು ಎಂದನು. ನಾರದನ ಈ ಮಾತಿನಿಂದ ರಾವಣ ಉದ್ರಿಕ್ತನಾದನು. ಕೃಷ್ಣನು ಗೋವರ್ಧನಗಿರಿಯನ್ನು ಎತ್ತಿದ ಹಾಗೆ ನಾನು ಕೈಲಾಸವನ್ನು ಕಿತ್ತರೆ ನನ್ನನ್ನು ಎದುರಿಸುವವರು ಯಾರೆಂದು ಭಾವಿಸಿದನು. ಭೇರಿಯ ಸನ್ನೆ ಮಾಡಲು ತಿಳಿಸಿದನು. ರಾವಣನು ತನ್ನ ಬಲವನ್ನು ಕೂಡಿಕೊಂಡು ರಜತಾದ್ರಿಯನ್ನು ಎತ್ತಿದನು. ಆಗ ಈಶ್ವರನು ಅಂಧಕಾಸುರನನ್ನು ಮೆಟ್ಟಿ ನಿಂತಂತೆ ರಜತಗಿರಿಯನ್ನು ಮೆಟ್ಟಿ ನಿಂತನು. ರಾವಣನ ಕೈಗಳು ಬೆಟ್ಟದಡಿಯಲ್ಲಿ ಸಿಕ್ಕಿದವು. ಆಗ ರಾವಣನು ಈಶ್ವರನನ್ನು ಪ್ರಾರ್ಥಿಸಿದನು. ಶಿರವನ್ನು ಕಡಿದು ಬುರುಡೆ ಮಾಡಿದನು. ಹಸ್ತವ ಸರಿನೋಡಿ ಹೊಳಹನ್ನು ಮಾಡಿದನು. ನರವನ್ನು ತೆಗೆದು ತಂತಿಮಾಡಿ ಬೆರಳಿನಿಂದ ರಾಗವನ್ನು ನುಡಿಸಿದನು. ಮೆಚ್ಚಿದ ಈಶ್ವರನು ವರವನ್ನು ಕೇಳುವಂತೆ ರಾವಣನಿಗೆ ತಿಳಿಸಿದನು. ಆಗ ರಾವಣನು ನಿಮ್ಮ ಇಷ್ಟಲಿಂಗ ಕೋಟಿ ಯಾಯುಷ್ಯ ನಿಮ್ಮ ಚಂದ್ರಾಯುಧ ನಿಮ್ಮ ವಾಹನವನ್ನು ಕೊಡಿ ಎಂದನು. ಕೊಡ ಬಾರದು ಕೊಡದೆ ಇರುವಂತಿಲ್ಲ. ಹೀಗಾಗಿ ರಾವಣನಿಗೆ ಈಶ್ವರನು ಎಲ್ಲವನ್ನು ಕೊಟ್ಟನು. ನಾರಾಯಣ ಇದನ್ನು ಅರಿತು ರಾವಣ ಬರುವದಾರಿಯಲ್ಲಿ ಕಲ್ಲರೆಯ ಮೇಲೆ ಬಾಳೆಯನ್ನು ಬಿತ್ತಿ ನೀರೆರೆಯುತ್ತಿದ್ದನು. ಅದನ್ನು ಕಂಡು ರಾವಣ ಇದು ಹುಚ್ಚುತನ ಎಂದನು. ಆಗ ನಾರಾಯಣ ಅನೇಕ ವರ್ಷಗಳು ಶಿವನನ್ನು ಕುರಿತು ನೀನು ತಪಸ್ಸು ಮಾಡಿ ಬೇಡದ ವರವನ್ನು ಪಡೆದೆ ಎಂದನು. ಅದನ್ನು ಕೃತಕವೆಂದು ಭಾವಿಸದೆ ರಾವಣ ಹಿಂದಿರುಗಿ ಬಂದು ಶಿವನಿಂದ ಬೇರೆಯ ವರವನ್ನು ಪಡೆದನು. ಅವನನ್ನು ಮಾರ್ಗಮಧ್ಯದಲ್ಲಿ ತಡೆಯುವಂತೆ ನಾರಾಯಣನು ಗಣಪತಿಯನ್ನು ನೇಮಿಸಿದನು. ಬ್ರಾಹ್ಮಣರೂಪಿನಿಂದ ಗೋಕರ್ಣದಲ್ಲಿ ಗಣಪತಿ ಕಾಣಿಸಿಕೊಂಡನು. ನಾರಾಯಣನು ರಾವಣನಿಗೆ ವಾಯುಶೂಲೆಯನ್ನು ಹುಟ್ಟಿಸಿದನು. ಎದುರಿಗೆ ಬಂದ ಬ್ರಾಹ್ಮಣನ ಕೈಗೆ ಲಿಂಗವನ್ನು ಕೊಟ್ಟು ರಾವಣನು ಶೌಚಕ್ಕೆ ಹೋದನು. ನಾರಾಯಣನ ಹೇಳಿಕೆಯಂತೆ ರಾವಣನನ್ನು ಗಣಪತಿ ಮೂರು ಸಲ ಕರೆದು ಲಿಂಗವನ್ನು ನೆಲದ ಮೇಲೆ ಇಟ್ಟು ಬಯಲಾದನು. ರಾವಣ ಹಿಂದಿರುಗಿ ಬಂದು ಲಿಂಗವನ್ನು ಮೇಲೆತ್ತಲು ಅದು ಬರಲಿಲ್ಲ. ಬಲವಂತವಾಗಿ ಎಳೆಯಲು ಅದು ಗೋಕರ್ಣಾ ಕೃತಿಯನ್ನು ಹೊಂದಿತು. ಹದಿನಾಲ್ಕುಲೋಕವನ್ನು ಕಾಪಾಡುವ ದೇವರ ದೇವನಾದ ಶಿವನು ನನಗೆ ದೊರೆಯಲಿಲ್ಲ ಎಂದು ಭಾವಿಸಿದ ರಾವಣನು ಆ ಲಿಂಗಕ್ಕೆ ಮಹಾಬಲ ಎಂದು ಹೆಸರಿಟ್ಟು ಪೂಜಿಸಿ ಲಂಕೆಗೆ ಹೋದನು. ಅಜ ಹರಿ ಸುರ ನರ ಮುನಿಗಳೆಲ್ಲರೂ ಗೋಕರ್ಣಕ್ಕೆ ಹೋಗಿ ಪೂಜಿಸುತ್ತಾರೆ. ಗುರುದ್ರೋಹಿ ಮತ್ತು ಜಾರೆಯೂ ಆದ ಕುರುರಿಯು ಬಂದು ಸೇವೆ ಮಾಡಲು ಗೋಕರ್ಣನಾಥನು ಕಣ್ಣೆತ್ತನು.

ಪುಣ್ಯಕ್ಷೇತ್ರಗಳಲ್ಲಿ ಕಾಶಿ ಮಿಗಿಲಾದುದು ಎಂದು ವ್ಯಾಸನು ತೋಳೆತ್ತಿ ಘೋಷಿಸಿದನು; ಕಾಶಿಯಲ್ಲಿ ವ್ಯಾಸನ ತೋಳು ಏಕೆ ಹೋಯಿತು ಎಂದು ಶಿಷ್ಯ ಕೇಳಲು ಕೇಶವನೇ ದೈವವೆಂದು ವ್ಯಾಸನು ತೋಳನ್ನೆತ್ತಿ ಹೊಗಳಲು ನಂದೀಶ ಆ ತೋಳನ್ನು ಕತ್ತರಿಸಿದ ಎಂದು ಗುರು ತಿಳಿಸಿದನು. ವ್ಯಾಸನು ಶಿವನನ್ನು ನಿಂದಿಸಿದುದರ ವಿವರಗಳು—

ಈಶ್ವರನನ್ನು ಕುರಿತು ಕೃಷ್ಣನು ನಿಮ್ಮನ್ನು ನಿಂದಿಸುವವನು ಭವಿ ನಿಮ್ಮನ್ನು ಪೂಜಿಸುವವನೆ ಭಕ್ತ ಎಂದನು. ಈ ಮಾತನ್ನು ಕೇಳಿದ ಶಿವನು ಒಳ್ಳೆಯದು ಮುನಿಗಳ ಮಧ್ಯೆ ನಿಂತು ನೀನು ನನ್ನನ್ನು ನಿಂದಿಸು ಎಂದನು. ಆಗ ಕೃಷ್ಣನು ನಿನ್ನನ್ನು ನಿಂದಿಸಲು ನಾನು ಅಂಜುತ್ತೇನೆಯೆಂದನು. ಶಿವನು ಕೃಷ್ಣನಿಗೆ ಅಭಯವಿತ್ತನು.

ಕೃಷ್ಣನು ಋಷಿವೇಷದಲ್ಲಿ ಮುನಿಗಳಿದ್ದಲ್ಲಿಗೆ ಬಂದನು. ವ್ಯಾಸರು ಅವನನ್ನು ಸತ್ಕರಿಸಿದರು. ಭಸಿತ ರುದ್ರಾಕ್ಷಿಗಳಿಂದ ಕೂಡಿ ಉಳಿದ ಮುನಿಗಳೆಲ್ಲರು ಶಿವನ ಧ್ಯಾನದಲ್ಲಿದ್ದರು. ಆಗ ವಿಷ್ಣುವು ಶಿವನು ಲೀಲೆಗಾರನೆಂದನು. ಆಗ ವ್ಯಾಸಮುನಿ ಕೃಷ್ಣನನ್ನು ಕುರಿತು ಪ್ರಶ್ನಿಸಿದನು. ಶಿವನು ಆಕಾರವೊ ನಿರಾಕಾರವೊ ಸೃಷ್ಟಿಕರ್ತರು ಯಾರು? ಧರೆ ಮೊದಲಾದ ತತ್ವಗಳನ್ನು ಹರಹಿ ಬ್ರಹ್ಮಾಂಡ ಎಂದೆನಿಸಿ ಸುರ ನರ ಉರಗಲೋಕಗಳ ಭರ ಭಾರಕ್ಕೆ ಕರ್ತೃ ಯಾರು? ದಿನ ಮಾಸ ಸಂವತ್ಸರ ಕಾಲ ಯುಗ ಎಂದು ಅನುಗೊಳಿಸಿದವರಾರು! ಮನು ಮುನಿ ದನುಜ ದೇವರುಗಳು ಯಾರ ನೆನಹಿನಲ್ಲಿದ್ದಾರೆ? ರವಿ ಶಶಿ ಮಂಗಳ ಬುಧ ಗುರು ಶುಕ್ರ ಶನಿ ರಾಹು ಕೇತುಗಳು ಧ್ರುವ ಮೊದಲಾದ ನಕ್ಷತ್ರಗಳನ್ನು ತಿರುಗಿಸುವವರು ಯಾರು? ಹೀಗೆ ಎಲ್ಲವನ್ನು ರೂಪುಗೊಳಿಸಿ ಪಾಪ ಪುಣ್ಯಕ್ಕೆ ಕರ್ತರು ಯಾರು ಎಂದನು. ಆಗ ಕೃಷ್ಣನು ಹೀಗೆ ಹೇಳಿದನು— ಬ್ರಹ್ಮಸೃಷ್ಟಿಯನ್ನು ಹೊನ್ನು ಹೆಣ್ಣು ಮಣ್ಣಾಗಿ ಭಂಗಬಡಿಸಿ ಲೋಕವನ್ನು ಕಾಡುವುದು. ನನ್ನ ಆಜ್ಞೆಯಿಂದ. ರಕ್ಷಣಕ್ಕೆ ನಾನೆ ಕರ್ತ. ಜಗತ್ತಿನಲ್ಲಿ ಶಿವನು ಭಿಕ್ಷುಕ. ಮೋಕ್ಷಸಾಧನಕ್ಕೆ ನನ್ನದೇ ಕೃತ್ಯಗಳು ಎಂದನು. ಆಗ ನಾರಾಯಣನು ವ್ಯಾಸನನ್ನು ಕುರಿತು ಈ ಲೋಕದ ಒಡೆಯರು ಬ್ರಹ್ಮನೋ ಶಿವನೋ ನಾನೋ ಎಂದನು. ಜೋಗುಳವನ್ನು ಕೇಳಿದ ಮಗು ತಾಯಿಯನ್ನು ಮರೆಯುವಂತೆ ಕೃಷ್ಣನೇ ದೈವವೆಂದು ವ್ಯಾಸನು ಹೇಳಿದನು. ಅಲ್ಲಿ ನೆರೆದಿದ್ದ ಮುನಿಗಳು ಈ ಮಾತಿಗೆ ಪ್ರತಿಭಟಿಸಿದರು. ಹರಿ ಮತ್ಸ್ಯ ಕೂರ್ಮ ವರಾಹ ಮೊದಲಾದ ಭವದಲ್ಲಿ ಬಂದ ಕೃಷ್ಣನು ಸಮುದ್ರಮಧ್ಯದಲ್ಲಿ ಲಿಂಗವನ್ನು ಪೂಜಿಸಿದುದನ್ನು ಅರಿಯದೆ ನೀನು ಉಸುರುವರೆ ಎಂದರು. ಒಂದು ಹೂವು ಕಡಿಮೆಯಾಗಲು ತನ್ನ ಒಂದು ಕಣ್ಣನ್ನು ತೆಗೆದು ಶಿವನು ಪೂಜಿಸಿದನು. ನಿಂದ್ಯವನ್ನು ನುಡಿಯುವುದಾದರೆ ಕಾಶಿಗೆ ಬಂದು ನುಡಿಯೆಂದರು. ವ್ಯಾಸನು ಕಾಶಿಗೆ ಬಂದು ವಿಶ್ವನಾಥನ ಮುಂದೆ ನಿಂತು ಕೇಶವನೆ ಘನವೆಂದು ಕೈಯೆತ್ತಿದನು. ಆ ನಿಂದೆಯನ್ನು ಕೇಳಿದ ಶಿವನ ಮುಂದಿದ್ದ ನಂದೀಶನು ಘರ್ಜಿಸುತ್ತ ಬಂದು ವ್ಯಾಸನ ಬಾಳನ್ನು ಸ್ತಂಭಿಸಿದನು. ಆಗ ವ್ಯಾಸನು ವಿಷ್ಣುವನ್ನು ಧ್ಯಾನಿಸಿದನು. ಆಗ ವಿಷ್ಣುವು ತಂದು ಮಮಕರ್ತ ಮಹಾದೇವ. ಭೂತೇಶ್ವರನ ಮಹತ್ವದ ಮುಂದೆ ನಮ್ಮ ಮಾತು

ಎಲ್ಲಿಯದೆಂದನು. ನಿನ್ನ ಮಾತನ್ನು ಕೇಳಿ ನಾನು ನಿಂದಿಸಿದೆ ಮುಂದೇನು ಎಂದು ವ್ಯಾಸನು ಕೇಳಿದನು, ಆಗ ವಿಷ್ಣುವು ವಿಶ್ವನಾಥನನ್ನು ಸ್ತುತಿಸಿದರೆ ಆತನು ಕರುಣಿಸುವನೆಂದನು. ಮೊದಲಿನಂತೆ ಹಸ್ತವನ್ನು ಕೊಡುತ್ತಾನೆ ಎಂದನು. ವ್ಯಾಸನು ವರವಿಶ್ವನಾಥ ಜಯುತಂ ಎಂದು ಪ್ರಾರ್ಥಿಸಿದನು. ಈಶ್ವರನು ವ್ಯಾಸನ ಸ್ತೋತ್ರಕ್ಕೆ ಮೆಚ್ಚಿ ಹಸ್ತವನ್ನಿತ್ತನು. ಭೂಮಿಯಲ್ಲಿ ಕಾಶಿಯು ಕ್ಷೇತ್ರ ಕೈಲಾಸಕ್ಕೆ ಸಮವೆನಿಸಿ ಮೆರೆಯುತ್ತದೆ. ಅಲ್ಲಿ ಸತ್ತವರು ಲಿಂಗವಾಗಿ ಹುಟ್ಟಿ ಪೂಜೆಗೊಳ್ಳುತ್ತಾರೆ. ಅದಕ್ಕೆ ಸಾಕ್ಷಿ ಎಂದರೆ ಪಾಣ್ಬನು ಮಧು ಭಾಂಡದಲ್ಲಿ ಆಳಿದು ಸುರಭಾಂಡೇಶ್ವರನಾಗಿ ಉದಿಸಿದನು. ಕಾಶಿಯಮಹಿಮೆಯನ್ನು ಏನೆನ್ನಲಿ, ಅಹಲ್ಯಾವ್ಯಾಜದಿಂದ ಗೌತಮನಿಂದ ಶಾಪ ಪಡೆದ ಇಂದ್ರನು ಕಾಶಿಯಲ್ಲಿ ಬಂದು ತಪಸ್ಸು ಮಾಡಲು ಶಿವನು ಒಲಿದನು. ರಾಕ್ಷಸನಿಂದ ಭಂಗಪಟ್ಟ ಭೂಮಿಯು ಕಾಶಿಯಲ್ಲಿ ತಪಸ್ಸನ್ನು ಮಾಡಲು ವಿಶ್ವನಾಥನು ಮೆಚ್ಚಿ ವರವಿತ್ತನು. ವಿಶ್ವನಾಥನು ಇಲ್ಲಿ ನೆಲೆಸಿ ಮಾಧವ ಮೊದಲಾದವರಿಂದ ಪೂಜೆಗೊಳ್ಳುತ್ತಿದ್ದಾನೆ. ಭಗೀರಥನು ಉಗ್ರತಪಸ್ಸಿನಿಂದ ಶಿವನನ್ನು ಮೆಚ್ಚಿಸಿ ಕಾಶಿಗೆ ಗಂಗೆಯನ್ನು ತಂದನು. ಭಾಗೀರಥಿಯಲ್ಲಿ ಸ್ನಾನಮಾಡಿ ಆಗಮೋಕ್ತವಾಗಿ ವಿಶ್ವನಾಥನನ್ನು ಪೂಜಿಸಿದರೆ ಆತನು ಬೇಗ ಮುಕ್ತಿಯನ್ನು ಕೊಡುತ್ತಾನೆ ಎಂದು ವ್ಯಾಸನು ಸಾರಿದನು.

ವಾರಣಾಸಿಗೆ ಉತ್ತರದಲ್ಲಿ ಕೇತಾರವಿದೆ. ಅಲ್ಲಿಗೆ ಪಾಂಡುನಂದನರು ಬಂದಾಗ ಶಿವನು ಮರೆಯಾದನು. ಈಶ್ವರನು ಮರೆಯಾದುದನ್ನು ಕಂಡು ಧರ್ಮರಾಯನು ತಮ್ಮಂದಿರಿಗೆ ತಿಳಿಸಿದನು. ಶಿಷ್ಯನು ಗುರುವನ್ನು ಅರಸುವ ರೀತಿಯಲ್ಲಿ ಧರ್ಮರಾಯನು ಶಿವನನ್ನು ಹುಡುಕಿದನು. ಭೀಮನು ಬೆಟ್ಟವನ್ನೇರಿ ದಾರಿಯನ್ನು ನೋಡುವಲ್ಲಿ ಕಾಡೆಮ್ಮೆಯ ಹಿಂಡೊಂದನ್ನು ಕಂಡನು. ಅದನ್ನು ಹೊಡೆದುಕೊಂಡು ಬರುವಾಗ ಒಂದು ಎಮ್ಮೆ ಹಿಂಡಿನಿಂದ ಓಡಿಹೋಯಿತು. ಅದರ ಬೆನ್ನಟ್ಟಿ ಬರುವಾಗ ಆ ಎಮ್ಮೆ ಪಾಂಡವರನ್ನು ಕಂಡು ತನ್ನ ರೂಪನ್ನು ಬಿಟ್ಟು ಶಿವೆಯ ಆಕಾರವನ್ನು ತಾಳಿ ಈ ಭೂಮಿಗಿಳಿಯಿತು. ಭೀಮಾರ್ಜುನ ಧರ್ಮರಾಯರು ಕೂಡಿ ಅದನ್ನು ಬಂದು ಹಿಡಿಯಲು ಈಶ್ವರ ಭೂಮಿಗೆ ಖಂಡೇಂದುಧರಲಿಂಗವಾಗಿ ತೋರಿದ. ಪಾಂಡವರು ಈಶ್ವರನನ್ನು ಪೂಜಿಸಿ ತಮ್ಮ ಪಾಪವನ್ನು ಕಳೆದುಕೊಂಡರು. ಕೇತಾರಲಿಂಗವ ಪೂಜಿಸಿದವರಿಗೆ ಅಲ್ಲಿನ ಉದಕವನ್ನು ಕುಡಿದವರಿಗೆ ಈಶ್ವರನು ಹರಶರಣರ ಪದವೀಯುತ್ತಾನೆ.

ಇಂದ್ರನು ವೈಹಾಳಿಗೆ ಹೋಗಿ ಬರುವಾಗ ಅಮರಾವತಿಗೆ ಬಂದ ದೂರ್ವಾಸ ಶಿವಪ್ರಸಾದವನ್ನು ಕೊಟ್ಟನು. ಆ ಮಂದಾರ ಮಾಲೆಯನ್ನು ಇಂದ್ರನು ಸ್ವೀಕರಿಸಿ ಆನೆಯ ತಲೆಯ ಮೇಲಿಟ್ಟನು. ಆ ಮಾಲೆಯ ಪರಿಮಳಕ್ಕೆ ದುಂಬಿಗಳು ಆನೆಯ ಮಸ್ತಕಕ್ಕೆರಗಿದವು. ಆಗ ಆನೆ ಆ ಮಾಲೆಯನ್ನು ನೆಲಕ್ಕೆ ಹಾಕಿತು. ಅದರಿಂದ ದೂರ್ವಾಸ ಕೆರಳಿ ಇಂದ್ರನ ಐಶ್ವರ್ಯವೆಲ್ಲ ಕಡಲನ್ನು ಸೇರಲಿ ಎಂದು ಶಪಿಸಿದನು. ಚಿಂತಾಕ್ರಾಂತನಾದ

ಇಂದ್ರನು ಕೃಷ್ಣನಲ್ಲಿಗೆ ಹೋದನು. ಬ್ರಹ್ಮ ಕೃಷ್ಣ ಇಂದ್ರರು ಬಂದು ಶಿವನನ್ನು ಸ್ತುತಿಸಿದರು. ಪ್ರಸನ್ನನಾದ ಈಶ್ವರ ನೀವೆಲ್ಲ ಸೇರಿ ಕಡಲನ್ನು ಕಡೆದರೆ ಇಂದ್ರನ ಐಶ್ವರ್ಯ ದೊರೆಯುತ್ತದೆ ಎಂದನು. ಹರಿ ಅಜ ಸುರರು ಸೇರಿ ಆದಿಶೇಷನನ್ನು ನೇಣು ಮಾಡಿಕೊಂಡು ಮೇರುಗಿರಿಯನ್ನು ಮಂತುಮಾಡಿ ಕಡೆದರು. ಮೊಸರನ್ನು ಕಡೆಯಲು ಬೆಣ್ಣೆ ಬರುವಹಾಗೆ ಎಲ್ಲ ವಸ್ತುಗಳೂ ಬಂದವು. ಮುಂದುವರೆದು ಕಡೆದಾಗ ವಿಷ ಉದಿಸಿತು. ದೇವತೆಗಳು ಕಂಗೆಟ್ಟಾಗ ಈಶ್ವರನು ಆ ವಿಷವನ್ನು ಸೇವಿಸಿದನು. ಅಲ್ಲಿಗೆ ಶರಣರೊಡನೆ ಗಿರಿಜೆ ವಿಘ್ನೇಶ ಷಣ್ಮುಖ ಎಲ್ಲ ಬಂದರು. ಸುರದುಂದುಭಿ ಮೊಳಗಿತು. ಆಕಾಶದಿಂದ ಪುಷ್ಪವೃಷ್ಟಿಯಾಯಿತು. ಪನ್ನಗನ ವಿಷಜ್ವಾಲೆಯನ್ನು ತಾಳಲಾರದೆ ಈಶ್ವರನು ಕೊಳದಲ್ಲಿ ಪವಡಿಸಿದನು. ಕೇಶವ ಮೊದಲಾದವರು ಈಶ್ವರನನ್ನು ಕುರಿತು ತಪಸ್ಸು ಮಾಡಿದರು. ಈಶ್ವರನು ಪ್ರತ್ಯಕ್ಷವಾದನು. ಆಗ ದೇವತೆಗಳೆಲ್ಲ ಸೇರಿ ಉತ್ಸವವನ್ನು ಮಾಡಿದರು. ಅಲ್ಲಿ ನೆರೆದಿದ್ದವರು ಎಲ್ಲ ಕ್ಷೇತ್ರಕ್ಕೂ ನೀಲಕಂಠವೆ ಮಿಗಿಲೆಂದು ಕಂಕಣವನ್ನು ಕಟ್ಟಿದರು. ಈ ರೀತಿಯಲ್ಲಿ ಬಲ್ಲಷ್ಟು ಕ್ಷೇತ್ರಗಳನ್ನು ರೂಪುಗೊಳಿಸಿದೆ.

ಚೆನ್ನಬಸವರಾಜ ಬಂದಂದು ಮೊದಲಾಗಿ ಮರ್ತ್ಯಲೋಕ ಶೂನ್ಯವಾಯಿತು ಬೇರೊಬ್ಬನನ್ನು ಕಳಿಸು ಎಂದು ನಾರದನು ಶಿವನಿಗೆಹೇಳಿದನು. ಶಿವನು ಈ ಮಾತನ್ನು ಕೇಳಿ ಮಹಾಕಾಳನನ್ನು ಕರೆದು ಮರ್ತ್ಯದಲ್ಲಿ ಹುಟ್ಟಿ ಸೌರಾಷ್ಟ್ರ ಸೋಮೇಶ್ವರನನ್ನು ಪೂಜಿಸಿ ವರವನ್ನು ಪಡೆಯೆಂದನು. ಅರಸಾಗಿದ್ದವನು ಆಳಾಗುವಂತೆ ನಿಮ್ಮ ಊಳಿಗದಲ್ಲಿದ್ದವನು ನರಲೋಕದಲ್ಲಿ ಹೇಗೆ ಹುಟ್ಟಲಿ ಎಂದನು. ಆಗ ಈಶ್ವರನು ಮಹಾಕಾಳನನ್ನು ಕುರಿತು ನೀನು ನರರಿಗೆಲ್ಲ ಅರಸನಾಗಿ ಗುರು ಲಿಂಗ ಜಂಗಮದ ಸೇವೆಯನ್ನು ಮಾಡು ಎಂದನು. ಕನ್ನಡದೇಶ ಕಾವೇರಿಗೆ ದಕ್ಷಿಣದಲ್ಲಿ ಉನ್ನತ ಕನಕಾರಣ್ಯದಲ್ಲಿ ಪನ್ನಗಧರಲಿಂಗವಾಗಿ ನಿನಗೆ ಪ್ರಸನ್ನನಾಗುತ್ತೇನೆ ಹೋಗು ಎಂದನು. ಆಗ ಮಹಾಕಾಳನು ಬಂದು ಸೌರಾಷ್ಟ್ರಪುರದಲ್ಲಿ ಇಂದುಧರನ ಭಕ್ತ ಚಾಮರಾಜೇಂದ್ರನ ನಂದನನಾಗಿ ಹುಟ್ಟಿದನು. ಅವನು ಆ ಮಗುವಿಗೆ ನಂಜರಾಯ ಎಂದು ಹೆಸರಿಟ್ಟನು. ನಂಜರಾಯನು ಬೆಳೆದು ವಿದ್ಯಾಭ್ಯಾಸವನ್ನು ಮುಗಿಸಿ ಮದುವೆ ಮಾಂಗಲ್ಯ ಉತ್ಸವ ಸಂಭ್ರಮದಿಂದ ಇದ್ದನು. ಭುಜಂಗೇಶ್ವರನು ಅವನ ಸ್ವಪ್ನದಲ್ಲಿ ಬಂದು ತ್ರಿಕೂಟಕ್ಕೆ ದಕ್ಷಿಣದಲ್ಲಿ ಕನಕಪುರದಲ್ಲಿ ನಾವು ಏಕಾಂತದಲ್ಲಿದ್ದೇವೆ ನೀನು ಅಲ್ಲಿಗೆ ಬಂದು ಪೂಜಿಸಿದರೆ ಎಲ್ಲ ಭೋಗಗಳನ್ನು ಕೊಡುತ್ತೇವೆ ಎಂದನು. ತಿರುವಂಜಕಳನಾಥ ಲಿಂಗವು ಚೇರಮನಿಗೆ ಸ್ವಪ್ನದಲ್ಲಿ ಹೇಳಿದ ಹಾಗೆ ಈಶ್ವರನು ಸೋಮರಾಜನಿಗೆ ಸ್ವಪ್ನದಲ್ಲಿ ಭುಜಂಗೇಶ್ವರನು ಜಂಗಮವಾಗಿ ತೋರಿ "ನೀನು ಮುಂದೆ ನಡೆ, ನಾವು ಬರುತ್ತೇವೆ" ಎಂದನು. ಸೋಮೇಶ್ವರನಿಗೆ ಪೂಜೆ ನೈವೇದ್ಯವನ್ನು ಮಾಡಿ ಕುರಿತು ಪುಷ್ಪವನ್ನು ಕೇಳಿದರೆ ಆ ಸ್ವಾಮಿಯು ಪ್ರಸಾದವನ್ನು ಕೊಟ್ಟನು. ಸೋಮನಾಥನ ಅಣತಿಯಂತೆ ಸೌರಾಷ್ಟ್ರದಿಂದ ಕರಿ ಘಟೆ ಕಾಲಾಳು ತುರಗ ರಾವುತರಿಂದ ಕೂಡಿ ದೇವಣ ಒಡೆಯ ನಂಜಯ ಶಶಿವಂಶದ ಸೋಮರಾಯ ಮಂತ್ರಿ ಮನ್ನೆಯರು ಸಾಮಂತರು

ದೊರೆಗಳು ಕೊಟ್ಟಿಗೆ ಕೊಲ್ಲಾರ ಎಲ್ಲ ನಡೆದುವು.

ಪಯಣಗತಿಯಲ್ಲಿ ನಿಂತು ಉಪ್ಪಯಣವನ್ನು ಮಾಡಿ ಸುತ್ತೂರಿಗೆ ಬಂದು ಕಾವೇರಿಯಲ್ಲಿ ಮಿಂದು ಸೋಮೇಶ್ವರನಿಗೆ ಪ್ರದಕ್ಷಿಣೆ ಬಂದ ಕಾರಣ ಅದು ಸುತ್ತೂರೆನಿಸಿತು. ಅಲ್ಲಿ ಸುತ್ತಲೂ ಬಳಸಿದ ಪ್ರಾಕಾರ ಮಂಟಪ ಗುಡಿ ಗೋಪುರ ನಂದಿಯ ಕಂಭದಿಂದ ಶಿವಭವನ ಮೆರೆಯಿತು. ಗೊಪಾಲಕೃಷ್ಣ ವಿನಾಯಕ ಹರಿಹರ ಪಾರ್ವತಿ ಎಡದಲ್ಲಿರಲು ಶಿವನು ಸೋಮೇಶ್ವರಲಿಂಗವಾಗಿ ರೂಪುದೋರಿದನು. ದೊರೆಗಳು ಆ ಲಿಂಗವನ್ನು ಪೂಜಿಸಿದರು. ಆ ಸಮಯದಲ್ಲಿ ಅಲ್ಲಿಗೆ ಚರಮೂರ್ತಿಗಳು ಬಂದರು. ಎಲ್ಲಿಂದ ಬಂದಿರಿ ಎಂದು ಅವರನ್ನು ವಿಚಾರಿಸಿದಾಗ ಬೆಳಗುಂದಗ್ರಾಮದ ವೀರಭದ್ರನಿಲಯದಿಂದ ಬಂದೆವೆಂದರು. ನಂಜರಾಜನು ಅವರಿಗೆ ಎಳನೀರು ಸಕ್ಕರೆ ಹಣ್ಣುಗಳನ್ನು ಕೊಟ್ಟು ಸತ್ಕರಿಸಿ ಕಳಿಸಿದನು. ಸೋಮೇಶನಿಗೆ ನಮಸ್ಕರಿಸಿ ಹೊರಟು ಕಾಡಿನಲ್ಲಿ ಬೀಡು ಬಿಟ್ಟಿದ್ದರು. ಅಲ್ಲಿನ ಮೆಳೆಯೊಂದರಲ್ಲಿದ್ದ ಮೊಲ ಏರಿಬಂದು ನಾಯಿಯನ್ನು ಹಿಂದಕ್ಕೆ ಅಟ್ಟಿತು. ಇದನ್ನು ಕಂಡವರು ಬಂದು ದೊರೆಗೆ ತಿಳಿಸಿದರು.

ಇದು ಗೆಲವಿನ ತಾಣವೆಂದು ಭಾವಿಸಿ ಮೆಳೆಕಡಿಯುವಾಗ ಹಾವು ಸುತ್ತಿದ ಲಿಂಗವೊಂದನ್ನು ಕಂಡರು. ಈ ವಿಚಾರವನ್ನು ಕೇಳಿ ತಿಳಿದ ಸೋಮೇಂದ್ರ ನಂಜರಾಯನು ಕಾಲ್ನಡೆಯಲ್ಲಿ ಬಂದು ಹಾವನ್ನು ನೋಡಲು ಅದು ಆ ಕ್ಷಣದಲ್ಲಿ ಲಿಂಗವನ್ನು ಹೊಕ್ಕಿತು. ಇದನ್ನು ಚೋದ್ಯ ಎನ್ನುವುದಾದರೆ ಕಾಳಹಸ್ತಿಯಲ್ಲಿ ಲಿಂಗವನ್ನು ಹಾವು ಮದಗಜ ಸೇಲದಿ ಪೂಜಿಸಿದುದನ್ನು ಹೇಳುತ್ತೇನೆ. ನಂಜರಾಯನು ಅಂದು ನಮ್ಮ ಸ್ವಪ್ನದಲ್ಲಿ ಬಂದ ಲಿಂಗ ಎಂದು ಸಂಭ್ರಮದಿಂದ ಪೂಜಿಸಿ ಭುಜಂಗೇಶ್ವರಲಿಂಗವೆಂದು ಕಾಣಿಕೆಯನ್ನಿಕ್ಕಿದರು. ಸೋಮರಾಯನು ಸೆಟ್ಟರಮಲ್ಲಯ್ಯ ಎಂಬ ಪ್ರಧಾನಿಗೆ ಹಣವನ್ನು ಕೊಟ್ಟು ಅಲ್ಲಿ ಪಟ್ಟಣವನ್ನು ಕಟ್ಟಿಸಿದನು. ಕೋಟೆ ಕೊತ್ತಳಗಳಾದುವು. ಇಪ್ಪತ್ತೈದು ಲೀಲಾ ವಿಗ್ರಹಗಳಿಂದ ಒಪ್ಪುವ ಚಿತ್ರಶಾಲೆಗಳನ್ನು ಭುಜಂಗನಿಗೆ ಮಾಡಿಸಿದನು.

ಸೋಮರಾಜನು ತನ್ನ ಮಗ ನಂಜರಾಜನಿಗೆ ಪಟ್ಟಕಟ್ಟಿದನು. ಆಗ ಮಂತ್ರಿ ಮನ್ನೆಯರು ಸಾಮಂತರು ದೊರೆಗಳು ಬಂದು ಕಾಣಿಕೆಯಿಕ್ಕಿದರು. ನಂಜರಾಜನಿಗೆ ಹಸ್ತ್ಯಶ್ವರಥ ಪದಾತಿಗಳ ಸಂದಣಿ ಬಂದಿತು. ಟಗರು ಕೋಣ ಮಲ್ಲಯುದ್ಧ ಖಾನರು ಕನ್ನಡಿಗರು ತೆಲುಗರು ಪಾತ್ರದ ಸತಿಯರುಗಳಿಂದ ಕೂಡಿದ ನಂಜರಾಜನ ಓಲಗ ಇಂದ್ರನ ಸಭೆಯಂತೊಪ್ಪಿತು.

ಪಾಠಕರು ಸೋಮಕುಲೋದ್ಭವನೆಂದು ಕೈಯೆತ್ತಿ ಹೊಗಳಿದರು. ನಂಜರಾಯನು ವಂಶಾವಳಿಯನ್ನು ಕೇಳಲು ಮಂತ್ರಿ ಹೇಳಿದನು. ಕ್ರಮವಾಗಿ–ಬ್ರಹ್ಮ ಅತ್ರಿ ಸೋಮ ಬುಧ ಪುರೂರವ ನಹುಷ ಯಯಾತಿ ಹಸ್ತಿನಾಪುರದ ದುಷ್ಯಂತ ಭರತ ಹಸ್ತಿನೃಪಾಲ

ಕುರುವ ಪ್ರದೀಪ ಶಾಂತ ವಿಚಿತ್ರವೀರ್ಯ ಧೃತರಾಷ್ಟ್ರ ಪಾಂಡುನಂದನರು ಕೌರವ ಪಾಂಡವರು ದಾಯಾದ್ಯತನದಿಂದ ಕೊಲ್ಲದ ಕೊಲೆಯನ್ನು ಕೊಂಡು ಶಾಶ್ವತ ಅಪಕೀರ್ತಿಯನ್ನು ಪಡೆದು ಪ್ರಾಯಸ ಪಟ್ಟರೆಂದನು. ಘನವಿದ್ವಾಂಸರನ್ನು ಕರೆಸಿ ಶಾಸ್ತ್ರವನ್ನು ಕೇಳಲು ಅವರಿಗೆ ಜ್ಞಾನೋದಯವಾಗಿ ಅವರ ಪಾಪ ಸರಿಯಿತು ಎಂದನು. ನಂಜರಾಯನು ಓಲಗವನ್ನು ಪರಿಹರಿಸಿ ಅರಮನೆಗೆ ಬಂದು ಇದ್ದನು. ಆ ರಾತ್ರಿಯ ಸ್ವಪ್ನದಲ್ಲಿ ಭುಜಂಗೇಶ್ವರನು ಅವನ ಕನಸಿನಲ್ಲಿ ಬಂದು ಕರ ಮನ ಭಾವದಲ್ಲಿ ನೀನು ಲಿಂಗವನ್ನು ಧರಿಸು ಮುಂದೆ ನಾವು ನಿನಗೆ ಪರಿಣಾಮವನ್ನು ಕೊಡುತ್ತೇವೆಯೆಂದನು. ಆ ಕ್ಷಣದಲ್ಲಿ ಪಟ್ಟದರಸು ನಂಜರಾಯ ಸೆಟ್ಟರಮಲ್ಲನನ್ನು ಕರೆದು ತಟ್ಟುಮಾಡೆಂದು ಹೇಳಿ ವೈಹಾಳಿಗೆ ಹೊರಟನು–ಅರಸು ವೈಹಾಳಿಯಿಂದದಲ್ಲಿ ಹೋಗಿ [ಹೇಮಾ] ದ್ರಿಪುರದ ಸೋಮೇಶ್ವರನಿಗೆ ನಮಸ್ಕರಿಸಿದನು. ಅಲ್ಲಿಂದ ಬೆಳಗುಂಡಕ್ಕೆ ಹೋಗಿ ವಿರೇಶ್ವರನಿಗೆ ಪೂಜೆಮಾಡಿಸಿ ಅಲ್ಲಿದ್ದ ಅಪ್ಪಶಿಖಿಯ ಚನ್ನಬಸವೇಶ್ವರ ಚೆನ್ನೇಶ ಪಟ್ಟದಹಿರಿಯರು ಶಿವರಾತ್ರಿಯಾರ್ಯರಿಗೆ ಕಾಣಿಕೆ ಕೊಟ್ಟು ನಮಸ್ಕರಿಸಿದನು. ಸುಜ್ಞಾನೇಶ್ವರನಿಂದ ಮಾತಂಗತಮನಿಗೆ ಅಜ್ಞಾನ ಹೋದಂತೆ ನೀವು ನನಗೆ ಆಜ್ಞಾಪಿಸಿ ನನ್ನ ಭವವನ್ನು ಛೇದಿಸಿ ಎಂದನು. ಆಗ ಶರಣರು ನಮ್ಮ ಆಚಾರ್ಯರು ಸುತ್ತೂರಿನಲ್ಲಿದ್ದಾರೆ ಅವರನ್ನು ಕರೆಸಿ ಎಂದನು.

ಆಚಾರ್ಯರನ್ನು ಸುತ್ತೂರಿನಿಂದ ಕರೆಸಿದಾಗ ಚರಮೂರ್ತಿಗಳು ಅವರದು ಪಂಡಿತಾರಾಧ್ಯರ ಸ್ಥಳವೆಂದು ಹೇಳಿ ಕೊಂಡಾಡಿದರು. ನಂಜರಾಯ ಅವರನ್ನು ದಂಡಿಗೆ ಪಲ್ಲಕ್ಕಿಯ ಮೇಲೆ ಕೂರಿಸಿ ಕರೆತಂದನು. ಅರಮನೆಯಲ್ಲಿ ಬಿಡಾರ ಮಾಡಿಸಿ ಹಿರಿಯರನ್ನು ಉಪಚರಿಸಿದನು. ನಾನಾ ವಸ್ತು ಅಕ್ಕಿ ಬೇಳೆಗಳನ್ನು ತಂದು ಬಿನ್ನಹ ಮಾಡಿದನು. ಭುಜಂಗೇಶ್ವರಲಿಂಗಕ್ಕೆ ಅಭಿಷೇಕ ಮಾಡಿಸಿ ಪೂಜಿಸಿದನು. ಸಂಗೀತ ನೃತ್ಯ ಸೇವೆಗಳು ನಡೆದವು. ಮಾನಿನಿಯರು ಭುಜಂಗೇಶ್ವರನಿಗೆ ಆರತಿಯನ್ನೆತ್ತಿದರು. ಭುಜಂಗೇಶ್ವರನ ರಥೋತ್ಸವದ ಅನಂತರ ನಂಜರಾಯ ಅಂತಃಪುರಕ್ಕೆ ಹೋದನು.

ಜೋಯಿಸರಿಂದ ಶುಭಲಗ್ನವನ್ನು ತಿಳಿದು ಉಮ್ಮತ್ತೂರನ್ನು ಶೃಂಗರಿಸಿದನು. ದಿವ್ಯವಸ್ತುಗಳನ್ನು ತರಿಸಿದನು. ಪನ್ನೀರಿನಿಂದ ಮಜ್ಜನಮಾಡಿ ರತ್ನದಾಭರಣಗಳನ್ನು ತೊಟ್ಟು ಬಂದು ಗುರುವಿನಡಿಗಳಿಗೆರಗಿ ಬಿನ್ನವಿಸಿದನು. ಪಟ್ಟು ಸೂಪು ಸಕಲಾತಿಗಳನ್ನು ಗುರುಗಳಿಗೆ ಕೊಟ್ಟನು. ಪಟ್ಟದಾನೆಯ ಮೇಲೆ ಅವರನ್ನು ಕೂರಿಸಿ ಮೆರೆಸಿದನು. ಅಂದು ನಂಬಿ ಚೇರಮ ಚೋಳರಾಯರು ಇಂದು ನಂಜೇಂದ್ರನೆಂದು ಕೊಂಡಾಡುವ ಯಾಚಕರಿಗೆ ಉಡುಗೊರೆಯಿತ್ತನು. ಮಂಗಳಕರವಾದ ಉತ್ಸವ ಅರಮನೆಗೆ ಬಂದಿತು. ನಂಜೇಂದ್ರನು ಸಂಭ್ರಮದಿಂದ ಗುರುಗಳನ್ನು ಉಪ್ಪರಿಗೆಯ ಸಿಂಹಾಸನದಲ್ಲಿ ಮೂರ್ತಗೊಳಿಸಿದನು. ಸ್ತ್ರೀಯರು ಬಂದು ಪಾದಾರ್ಚನೆ ಮಾಡಿದರು. ಉಪಕರಣವೆಲ್ಲವನ್ನು ತಂದು ಎಡೆ ಮಾಡಿದರು. ರಂಗವಲ್ಲಿಯಿಟ್ಟು ಕಲಶವಿಕ್ಕಿದರು. ನಾಲ್ಕು ಆಚಾರ್ಯರನ್ನು ಕುರಿತು

ನಾಲ್ಕು ದಿಕ್ಕಿನಲ್ಲಿ ನಾಲಕ್ಕು ಕಲಶವನ್ನಿಟ್ಟರು. ಮಧ್ಯದಲ್ಲಿ ಗುರುಕಲಶವಿಟ್ಟು ಅನೇಕ ರೀತಿಯಿಂದ ಪೂಜಿಸಿದರು. ನಂಜರಾಜೇಂದ್ರನು ತಂದೆ ತಾಯಿ ಸತಿ ಸುತ ಬಾಂಧವರೊಡನೆ ಗುರುವಿನ ಪಾದವನ್ನು ಹಿಡಿದನು. ಗುರುಗಳು ಆಗಮಕ್ರಿಯೆಯಿಂದ ಶಿವನಿಗೆ ಭಸಿತ ರುದ್ರಾಕ್ಷಿಯನ್ನು ಧರಿಸಿದರು. ಪಂಚಾಮೃತಾಭಿಷೇಕವಾಯಿತು. ಗಂಧಪುಷ್ಪಗಳಿಂದ ಪೂಜಿಸಿದರು. ನೃತ್ಯ ಗೀತೆಗಳು ನಡೆದುವು. ಗುರುವು ಹಸ್ತಮಸ್ತಕ ಸಂಯೋಗವನ್ನು ಮಾಡಿದನು. ವಸ್ತುವನ್ನು ಧ್ಯಾನಿಸಿನೋಡಿ ಸ್ವಸ್ಥವಾಗಿ ಬದುಕೆಂದು ಶಿಷ್ಯನ ಕರಸ್ಥಲ ದಲ್ಲಿ ಲಿಂಗವನ್ನಿತ್ತನು. ಕಲಶೋದಕವನ್ನು ತಳಿದು ಕಂಕಣವನ್ನು ಕಟ್ಟಿದನು. ವಾದ್ಯ ಘೋಷದ ಮಧ್ಯೆ ಸ್ತ್ರೀಯರು ಶೋಭನದಿಂದ ಆರತಿ ಬೆಳಗಿದರು. ತಿರುಜ್ಞಾನ ಸಂಬಂಧಿ ಯಿಂದ ಕೂನಪಾಂಡ್ಯನು ಶರೀರದ ರುಜೆಯನ್ನು ಕಳೆದು ಸುಂದರ ಪಾಂಡ್ಯನಾದಂತೆ ನಂಜರಾಯನು ಮೆರೆದನು. ಷಟ್ದರ್ಶನದವರಿಗೂ ಧನ ಕನಕ ವಸ್ತ್ರಾದಿಗಳನ್ನು ದಾನ ಮಾಡುತ್ತಿರಲು ನಂಜರಾಜನ ಹೆಸರು ಪ್ರಸಿದ್ಧವಾಯಿತು.

ನಂಜರಾಯನು ಶಿವನಸಮುದ್ರ ಎನ್ನುವ ಪಟ್ಟಣವನ್ನು ಕಟ್ಟಿಸಿ ಅಲ್ಲಿ ಭುವನೇಶ್ವರಿ ಸೋಮೇಶ ವೀರೇಶ ನಾರಾಯಣರನ್ನು ಪ್ರತಿಷ್ಠಿಸಿದನು. ಸೂರ್ಯ ಶಶಿವೀಧಿಗಳು ರಚಿತವಾದವು. ಅರಮನೆ ಕಟ್ಟಿಸಿದನು. ಕೇರಿಗಳನ್ನು ಮಾಡಿಸಿ ದೊರೆಗಳು ಮೊದಲಾದ ನಾಲ್ಕು ಜಾತಿಗಳನ್ನು ತಂದಿರಿಸಿದನು. ಕೋಮಟಿಗ ವೈದ್ಯ ಪಾಂಚಾಳರಿಗೆ ಕೇರಿಗಳನ್ನು ಹಂಚಿಕೊಟ್ಟನು. ಕೊಳ ಉದ್ಯಾನವನಗಳನ್ನು ಮಾಡಿಸಿದನು. ವಸಂತಮಾಸ ಬಂದಾಗ ನಂಜರಾಜೇಂದ್ರ ವನಿತೆಯರೊಡನೆ ವನಭೋಜನ ಮಾಡಿ ಗುರು ಲಿಂಗ ಜಂಗಮಕ್ಕೆ ನೆನೆವ ಪದಾರ್ಥಗಳನ್ನು ಕೊಟ್ಟು ದಿನಚರಿ ನಡೆಸಿದನು.

ನಂಜನಗೂಡು ನಂಜುಂಡೇಶ್ವರನಿಗೆ ಗುಡಿ ಮಂಟಪ ಉಪ್ಪರಿಗೆ ಪ್ರಾಕಾರಗಳನ್ನು ನಿರ್ಮಿಸಿ ಕೀರ್ತಿ ಪಡೆದನು. ಸಾವಿರಕಾಲಮಂಟಪವನ್ನು ಕಟ್ಟಿಸಿದನು. ಅಲ್ಲಿನ ವೀರ ಭದ್ರನನ್ನು ಪೂಜಿಸಿದನು. ಕೆರೆ ಕೊಳ ಉದ್ಯಾನವನಗಳನ್ನು ಮಾಡಿ ಕೀರ್ತಿವೆತ್ತನು.

ಕುಂಭಕೋಣದ ಪಡುವೀಡ ಸ್ವಾಮಿಗಳು ನಂಜರಾಯನ ಕೀರ್ತಿಯನ್ನು ಕೇಳಿ ತಮ್ಮ ಶಿಷ್ಯವರ್ಗವನ್ನು ಉಪಕರಣಗಳನ್ನು ಕೊಟ್ಟು ದೇಶಸಂಚಾರಕ್ಕಾಗಿ ಕಳಿಸಿದರು. ಪಡುವೀಡ ಸ್ವಾಮಿಯ ಬಗೆ ಧಾರಿಣಿಯಲ್ಲಿ ಚರಿಸಿತು. ಕ್ರಮವಾಗಿ ಪರಶಿವ ಸದಾಶಿವ ಮೂರ್ತಿ ಮಾಹೇಶ್ವರ ರೇವಣಸಿದ್ಧ ರುದ್ರಮುನಿ ಅವರ ಶಿಷ್ಯರು ಕ್ರಮವಾಗಿ ಶಾಂತ ಮಲ್ಲಿಕಾರ್ಜುನ ಪಡುವೀಡಸ್ವಾಮಿ ಪಡುವೀಡಸ್ವಾಮಿಗಳ ಹಸ್ತೋದ್ಭವ ಮಹಾತ್ರೇಶ್ವರ.

ಚೆನ್ನಬಸವರಾಜ ಬಸವಲಿಂಗೇಶ್ವರ ಚೆನ್ನಮಲ್ಲೇಶ್ವರ ಅನ್ನದಾನೇಶ್ವರ ಶಂಕರದೇವ . . . ಶಾಂತೇಶ್ವರ ಶಾಂತಮಲ್ಲಿಕಾರ್ಜುನ ಶಾಂತವೀರೇಶ್ವರ ಶಾಂತ

ಲಿಂಗೇಶ್ವರ ರೇವಣಸಿದ್ಧೇಶ್ವರ ಮುಂತಾದ ಶರಣರು–ಸಿದ್ಧಮಲ್ಲೇಶ್ವರ ಶಿವಲಿಂಗ ದೇವರು ರುದ್ರಮುನಿ ಪರ್ವತೇಶ ಸಿದ್ಧರಾಮೇಶ್ವರ ಶಿಷ್ಯ ಶಿವನಂಕಾರ್ಯ ಸಿದ್ಧ ವೀರಣಗುರುದೇವ ಗುರುಮಲ್ಲೇಶ್ವರ ಪರ್ವತ ಮಲ್ಲೇಶ ಗುರುಲಿಂಗೇಶ್ವರ ಮುರುಳು ಸಿದ್ಧೇಶ್ವರ ನೀಲಕಂಠೇಶ್ವರ ಕರಿಯುಸಿದ್ಧೇಶ್ವರ ಹೀಗೆ ಶಿವನ ಸಹಸ್ರನಾಮಗಳನ್ನು ಧರಿಸಿ ಶಿವಲಿಂಗವನ್ನು ಪೂಜಿಸುತ್ತ ಶಿವಶಾಸ್ತ್ರಗಳನ್ನು ಕೇಳುತ್ತ ಅವನಿಯೊಳಗೆ ಚರಿಸುತ್ತಿದ್ದಾರೆ.

ಶಿವನು ಹರಿ ಅಜ ಸುರರ ಮನೆಗೆ ಭಿಕ್ಷೆಗೆ ಹೋದಂತೆ ಚರಮೂರ್ತಿಗಳು ಭಕ್ತರ ಮನೆಗೆ ಭಿಕ್ಷೆಗೆ ಹೋದರು. ಕಾಶಿ ಕೇತಾರ ಶ್ರೀಶೈಲ ರಾಮೇಶ್ವರ ನೀಲಕಂಠ ಮುಂತಾಗಿ ದೇಶ ದೇಶದ ಪುಣ್ಯಕ್ಷೇತ್ರಗಳಿಗೆ ಚರಿಸಿದರು. ಅಂಗ ವಂಗ ಕಳಿಂಗ ಮೊದಲಾದ ಐವತ್ತಾರುದೇಶ ಗಳನ್ನು ಸುತ್ತುತ್ತ ನಂಜನಗೂಡಿಗೆ ಜಾತ್ರೆಗೆ ಬಂದರು. ನಂಜನಗೂಡಿಗೆ . . . ಮಿಸುನಿ ಲೋಹ ಹಲಿ ಪಚ್ಚೆಯ ಕಂತೆಯವರು ಬಂದರು. ರಾಮಗಿರಿ ಕಂಬಾಳು ಬುಕ್ಕ ಸಾಗರ ನಿಡುಮಾಮಿಡಿ ಮೊದಲಾದ ಬಗೆಯವರು ಬಂದರು. ನಂಜರಾಜನು ಅವರೆಲ್ಲ ರನ್ನು ಸಂತೋಷದಿಂದ ಇದಿರುಗೊಂಡನು. ಅಕ್ಕಿ ಬೇಳೆ ಬೆಲ್ಲ ಕಣಿಕ ಪದಾರ್ಥ ಸಕ್ಕರೆ ಎಳನೀರು ಕಬ್ಬು ಹಣ್ಣು ಕಾಯಿ ಕಡಲೆ ದವನಗಳನ್ನು ತಂದು ಕೊಟ್ಟು ಉಪ ಚರಿಸಿದರು. ಅವರು ಮಾಡಿದ ಭರ್ಗನ ಪೂಜೆ ಕೈಲಾಸಕೆಯ್ದಿತು.

ನಂಜರಾಜನು ಮಂತ್ರಿ ಸೆಟ್ಟರಮಲ್ಲಯ್ಯನ ಮೇಲೆ ಹಸ್ತವನ್ನಿಟ್ಟು ಅಲ್ಲಿ ಮಠವನ್ನು ಮಾಡಲು ಸಮಾಲೋಚಿಸಿದನು. ಮಳೆಗಾಲದ ಬಿನ್ನಹವೆಂದು ನಂಜರಾಯನು ಶಿವ ರಾತ್ರೆಯಾರ್ಯ ಶಿವಪೂಜೆಯಾರ್ಯ ತೂಗಾದಿಯ ಬಸವೇಶ್ವರ ಜೆಡೆಯಕೂಡುವ ಮುರುಳುಸಿದ್ಧೇಶ್ವರ ಬಾಲಬ್ರಹ್ಮಚಾರಿ ಸಾಲೂರ ಶಾಂತೇಶ್ವರನಿಗೆ ಬಿನ್ನಹ ಮಾಡಿದನು. ಜಾತ್ರೆಗೆ ಬಂದವರೆಲ್ಲರು ಹರಿದು ಹೋದರು. ತಡೆದ ಹಿರಿಯರೊಡನೆ ನಂಜರಾಯ ಮಂತ್ರಿ ಸಹಿತನಾಗಿ ಉಮ್ಮತ್ತೂರಿಗೆ ಬಂದನು. ಪಂಚಮುಖನ ಹೆಸರಿನ ಮೇಲೆ ಪಂಚ ಮಠವನ್ನು ಮಾಡಿದನು.

ಉಮ್ಮತ್ತೂರಿಗೆ ಪೂರ್ವದಲ್ಲಿ ಪದಿನಾಡು. ಅದರ ಮೂಡುಗಡೆ ಶ್ವೇತಗಿರಿ. ಅಲ್ಲಿ ಕುಂಭೇಶ ಸೋಣೆಯ ವೀರೇಶ್ವರ ಸಿದ್ಧೇಶ್ವರ ಲಕ್ಷ್ಮೀ ಸಹಿತನಾಗಿ ವಿಷ್ಣು ತಪಸ್ಸು ಮಾಡಿದನು. ವೃದ್ಧಗಿರಿಯಲ್ಲಿ ಮುನೀಶ್ವರರು, ಹೆದ್ದಿನಿಯಲ್ಲಿ ಕಾರೇಶರಿರುವರು ಶ್ರದ್ಧೆಯ ಸೈ(ಸೋ)ಲಿಗರು ಬೆಟ್ಟದ ಸುತ್ತ ಬಳಸಿಕೊಂಡಿದ್ದಾರೆ. ಕಾಸರಗಿರಿಯಲ್ಲಿ ಕುಂಭೇಶನಿರಲು ಲಕ್ಷ್ಮಿ ಅಲ್ಲಿಗೆ ಬಂದು ತಪವಿದ್ದಳು. ಆಗ ಶಂಭುಮೆಚ್ಚಿ ಪ್ರತ್ಯಕ್ಷನಾದನು. ವರವನ್ನು ಬೇಡು ಎನ್ನಲು ಲಕ್ಷ್ಮಿಯು ಹೊನ್ನುಹೊಳೆಯನ್ನಾಗಿ ಮಾಡುವಂತೆ ಪ್ರಾರ್ಥಿಸಿದಳು. ಕಾವೇರಿ ಯಲ್ಲಿ ಕೂಡಿ ಪೂಜೆಗೆ ಯೋಗ್ಯಳಾಗುತ್ತೇನೆ ಎಂದಳು. ಶಿವನ ವರದಂತೆ ಲಕ್ಷ್ಮಿ ಹೊನ್ನು ಹೊಳೆಯಾಗಿ ಕೆರೆ ಕಟ್ಟೆ ಕಾಲುವೆಗಳನ್ನು ಕೊಟ್ಟಳು. ದಿವ್ಯಲಿಂಗವನ್ನು ಪೂಜಿಸಿ ನೀಲ

ಕಂಠೇಶ್ವರನನ್ನು ಭಕ್ತಿಯಿಂದ ಅರ್ಚಿಸಿ ಕಾವೇರಿಯನ್ನು ಕೂಡಿದಳು. ಮತ್ತಿಗಡಹಿನ ಮಲ್ಲೇಶ್ವರನಿಗೆರಗಿದಳು.

ಲಕ್ಷ್ಮಿಯನ್ನು ಹುಡುಕಿಕೊಂಡು ಕೃಷ್ಣನು ತಿರುಗಿದನು. ಶಿವನಿಗೆ ನಮಸ್ಕರಿಸಿ ಹೊನ್ನ ಸಂಪಗೆಯಿಂದ ಪೂಜಿಸಿದನು. ಈಶ್ವರನ ಸೂಚನೆಯಂತೆ ಕೃಷ್ಣನು ಕಮಲೆಯೊಡನೆ ಶ್ವೇತಗಿರಿಯಲ್ಲಿ ನೆಲಸಿದನು. ಅಂದು ರಥೋತ್ಸವ ನಡೆಯಿತು. ನೃಪರು ಬಂದು ಸಂಭ್ರಮಿಸಿದರು. ಮಳೆ ಬೆಳೆ ಪದಿನಾಡಿಗೆ ಕುಂದುವುದಿಲ್ಲ ಎಂದರು. ನಂಜರಾಜೇಂದ್ರನು ಪದಿನಾಡು ಪುಣ್ಯದ ಬೀಡೆಂದು ಸಿಂಹಾಸನಗಳನ್ನು ಮಾಡಿದನು.

ನಂಜರಾಜನು ಸುತ್ತೂರ ಶಿವರಾತ್ರಿಯಾರ್ಯನಿಗೆ ಪಟ್ಟಕಟ್ಟಿದನು. ಉತ್ತಮವಾದ ನಾಣ್ಯವನ್ನು ಹೊದ್ದಿಸಿ ತೊತ್ತು ಬಂಟರನ್ನುಕೊಟ್ಟು ಕಳಿಸಿದನು. ಶಿವಪೂಜೆಯಾರ್ಯನಿಗೆ ಸಾವಿರಕಲ್ಲ ಮಂಟಪದಲ್ಲಿ ಪಟ್ಟಕಟ್ಟಿದನು. ಅವನ ಕರದಲ್ಲಿ ಗಂಗಾಧರ ಉದಿಸಿ [ಗರಳ] ಪುರದಲ್ಲಿ ಮಹತ್ತುಗೂಡಿ ನಿಂತನು. ಕಾವೇರಿಗೆ ದಕ್ಷಿಣದ ಹೇಮಾದ್ರಿಯ ಕುಂತೂರಿನಲ್ಲಿ ಸಾಲೂರ ಶಾಂತೇಶ್ವರನಿಗೆ ಪಟ್ಟ ಕಟ್ಟಿದನು. ಶಿವನಸಮುದ್ರದಲ್ಲಿ ಜಡೆಯಕೂಡುವ ಸ್ವಾಮಿ ಶಿವಯೋಗಿ ಮರುಳಸಿದ್ಧೇಶನಿದ್ದನು. ಅವನಿಗೆ ಶ್ವೇತಗಿರಿಗೆ ಪಶ್ಚಿಮದಲ್ಲಿ ಗ್ರಾಮವನ್ನಿತ್ತನು. ಎರಗಿ ನಮಸ್ಕಾರಮಾಡಲು ಯರಗಂಬಳ್ಳಿ ಎಂದು ಆ ಸಿಂಹಾಸನ ಮೆರೆದಿದೆ. ತೂಗಾದಿಯ ಸಿದ್ಧಬಸವೇಶ್ವರನನ್ನು ಉಮ್ಮತ್ತೂರಿನ ಉಪ್ಪರಿಗೆಯ ಮಠಕ್ಕೆ ಪಟ್ಟಕಟ್ಟಿದನು. ಸೆಟ್ಟರಮಲ್ಲಯ್ಯ ಹೊಂಡರಬಾಳನ್ನು ಕಟ್ಟಿಗೆಗೆಂದು ನೇಮಿಸಿದನು. ಪಟ್ಟದರಸು ನಂಜರಾಯ ಪರ್ವವನ್ನುಮಾಡಿ ಪಟ್ಟಿಯ ಹಚ್ಚಡವಿತ್ತು ಅಲ್ಲಲ್ಲಿ ಮಠಗಳನ್ನು ಕಟ್ಟಿಸಿ ಎಲ್ಲ ವಸ್ತುಗಳನ್ನು ಕೊಟ್ಟು ಪಲ್ಲಕ್ಕಿ ಅಂದಳದಿಂದ ಮೆರೆಯಿಸಿ ಅವರೆಲ್ಲರನ್ನು ಕಳಿಸಿಕೊಟ್ಟನು. ಸುತ್ತೂರು ನಂಜನಗೂಡು ಹೊಂಡರಬಾಳು ನಮಸ್ಕಾರಪುರ ಕುಂತೂರ ಸಿಂಹಾಸನಗಳನ್ನು ಮಾಡಿಸಿದನು. ಪದಿನಾಡಿನಲ್ಲಿ ಪುರ ಅಗ್ರಹಾರ ಶಿವಭವನ ಕೆರೆ ಕೊಳಗಳನ್ನು ಮಾಡಿಸಿದನು. ನವಚೋಳರು ಲಿಂಗಪ್ರತಿಷ್ಠೆಯನ್ನು ಮಾಡಿದಂತೆ ಶಿವಭಕ್ತ ನಂಜರಾಯನು ಮಠಮನೆಗಳನ್ನು ಮಾಡಿ ಮೆರೆದನು.

ನಂಜರಾಜನು ಭಸಿತವನ್ನು ಕೆಂಚಸೋಮನ ಕೈಯಲ್ಲಿ ಕೊಟ್ಟು ಹೆಸರನ್ನು ಹೇಳಿ ಧರ್ಮಗಳನ್ನು ಸಿದ್ದೆಯರಾವುತನಿಗೆ ತಿಳಿಸು ಎಂದನು. ನಂಜರಾಜೇಂದ್ರನು ನಾಗಭೂಷಣನ ಓಲಗದಲ್ಲಿ ಬಾಗಿಲು ಕಾದಿದ್ದನು. ನಾಳೆಯ ಸೋಮವಾರ ತಮಗೆ ಪ್ರಯಾಣವೆಂದು ನಂಜರಾಜೇಂದ್ರನು ತಿಳಿಸಿದನು. ಕೆಂಚಸೋಮನ ಸ್ವಪ್ನದಲ್ಲಿ ಬಂದು ಹೂಳಿದ್ದ ಹಣವನ್ನು ಹೇಳಿ ತೆಗೆಸಿದನು. ನಂಜರಾಯನನ್ನು ಭಾಳಲೋಚನನ ಭಕ್ತ ಎಂದು ಕೊಂಡಾಡಲು ಮಹತ್ತು ಹರ್ಷಿಸಿತು. ಗಾಣಿಗ ಕೆಂಚಸೋಮನಿಗೆ ಪ್ರಾಣಬಂದು ಎಲ್ಲ ವಿವರಗಳನ್ನು ಹೇಳಿದನು. ಗಂಗರಾಜನು ಎಲ್ಲವನ್ನು ನಡೆಸಿದನು.

ಎಲ್ಲ ರಾಜರೂ ಉಮ್ಮತ್ತೂರಿನಲ್ಲಿ ನಂಜರಾಯ ಮಾಡಿದ ಭಕ್ತಿ ತಮ್ಮದೆಂದೇ ಭಾವಿಸಿದರು. ಪುರ ಅಗ್ರಹಾರಗಳನ್ನು ಧರ್ಮದಿಂದ ನಡೆಸಿದರು. ನಂದಾಲದ ತಿಮ್ಮರಾಜ ಸಿಂಹಾಸನಗಳಿಗೆ ಪುರವನ್ನು ಕೊಟ್ಟನು. ಹಿಂದೆ ಚಾಮರಸಗೌಡ, ದೇಪಿಯರಾಮ, ಚೆನ್ನೇಂದ್ರ ಭೂಪ ಅವರ ತಮ್ಮ ಇಮ್ಮಡಿರಾಮ ಅವರ ಮಕ್ಕಳು ನಂಜರಾಜ, ಕೆಂಪೇಂದ್ರರು ಪತ್ತುನಾಡಿನಲ್ಲಿ ದಾನಮಾಡಿದರು. ನೀಲಕಂಠನಿಗೆ ಹೊಂಡರಬಾಳು ಕುಣಿಗಿಲ ಬಸವಲಿಂಗೇಶನಿಗೆ ಗಣಿಗನೂರು, ಶಿವನಂಕಾರ ದೇವಗೆ ಜ್ಯೋತಿಪುರ, ಕಾಮ ಗೆರೆಯ ಗುರುಲಿಂಗೇಶ್ವರನಿಗೆ ಸರಗೂರ ಮಠವನ್ನು ಇಮ್ಮಡಿರಾಮನು ಕೊಟ್ಟನು. ಶಿಲೆಯ ಸಿಂಹಾಸನವನ್ನು ಮಾಡಿ, ಕಾಷ್ಠದ ನಿಳಯಗಳನ್ನು ಬಿಡಿಸಿ ಚಂದ್ರಶೇಖರ ಭೂಪಾಲ ಮೆರೆದನು. ವ್ಯವಹಾರಮುಖದಿಂದ ಬಂದ ಪದಾರ್ಥವನ್ನು ಗುರುಲಿಂಗ ಚರಕ್ಕೆ ಸವೆದು ಸಿದ್ದೆಯದೇವ ಶಿವನಲ್ಲಿ ಸಂದನು.

ದೇಶಾಂತರಗೆಯ್ದು ಮಹತ್ತು ಪರ್ವತದಲ್ಲಿ ನಿಂತ ವಿಚಾರ —

ಅನ್ನದಾನಿ ಮಲ್ಲೇಶ ತುಂಗಗಿರಿಯಲ್ಲಿ ಜಂಗಮವೆ ಲಿಂಗವಾಗಿ ಮೆರೆದನು. ಮಲ್ಲೇಶ್ವರನು ಇಚ್ಛಾಪದಾರ್ಥವ ತಂದು ಕೊಟ್ಟುದರಿಂದ ಅನ್ನದಾನಿ ಮಲ್ಲೇಶ್ವರನೆಂದು ಹೆಸರಾದನು. ಪಂಚಾಮೃತ ಅಭಿಷೇಕ ಮಾಡಿ ಪ್ರಸಾದ ತಂದು ಕೊಡಲು ಇಂದುಧರ ಮಲ್ಲೇಶ್ವರ ತಾನು ಸವಿದು ಒಂದು ಮಠವನ್ನು ಕೊಟ್ಟನು. ಮಹತ್ತು ಅಲ್ಲಿಂದ ಕದಳೀ ಪುರಕ್ಕೆ ಬಂದಿತು. ಅಲ್ಲಿನ ವೀರೇಶ್ವರನನ್ನು ಸ್ತುತಿಸಿದಾಗ ಆತ ಬಂದು ಪೂಜಾರಿಯ ಮೂಲಕ ಮಠ ಮಾಡಲು ತಿಳಿಸಿದನು. ಅದರಂತೆ ಅಲ್ಲಿನ ದೊರೆ ಮಠವನ್ನು ಕಟ್ಟಿಸಿದನು. ಹಿರಿಯ ಕುಮಾರಸ್ವಾಮಿ, ಚೆನ್ನಬಸವೇಶ ಮೊದಲಾದವರು ಅಲ್ಲಿ ಚರಿಸುತ್ತಿದ್ದಾರೆ. ಕುಮಾರಸ್ವಾಮಿ ಬಸವಿ ಬಸವನನ್ನು ಇರಿದ ಲಿಂಗದ್ರೋಹಿಯ ಹೆಸರನ್ನು ತೊಡೆದು ಹಾಕಿ ಕೀರ್ತಿ ಪಡೆದನು. ಅಲ್ಲಿಂದ ಮುಂದೆ ಮಹತ್ತು ಅಲ್ಲಮಪ್ರಭು, ಬಸವ ಚೆನ್ನಬಸವಣ್ಣನ ಪಾದವನ್ನು ನೆನೆಯುತ್ತ ಕಲ್ಯಾಣವನ್ನು ಹೊಕ್ಕರು. ಮಡಿವಾಳ ಮಾಚಯ್ಯ, ಮೋಳಿಗೆ ಮಾರಯ್ಯ, ಕಿನ್ನರ ಬ್ರಹ್ಮಯ್ಯ, ಹಾದರದ ಬ್ರಹ್ಮಯ್ಯ, ಮೇದರ ಕೇತಯ್ಯ, ಆಯ್ದಕ್ಕಿಯ ಮಾರಯ್ಯ, ಮಾದಾರ ಚೆನ್ನಯ್ಯ ಮೊದಲಾದ ಶರಣರು ಕಲ್ಯಾಣದಿಂದ ಕೈಲಾಸಕ್ಕೆ ಹೋಗುತ್ತಿದ್ದುದನ್ನು ಕೇಳಿ ಮಹತ್ತು ಬಂದರು. ಕಲ್ಯಾಣದ ತ್ರಿಪುರಾಂತಕೇಶನನ್ನು ಪೂಜಿಸಿದರು. ಅಲ್ಲಿ ಬಿಜ್ಜಳನಿದ್ದನು. ಅಲ್ಲಮ ಪ್ರಭುವಿನ ಕೃಪೆಯಿಂದ ಬಸವಣ್ಣ ಎಲ್ಲ ಪವಾಡವನ್ನು ಮೆರೆದನು. ಕಲಿ ಹೆಚ್ಚಿತು ಎಂದು ತ್ರಿಪುರಾಂತಕೇಶ್ವರನ ನಿಲಯದಲ್ಲಿ ಬಸವಣ್ಣನು ಶಿಲೆಯಾಕಾರವನ್ನು ತಾಳಿ ನೆಲೆಸಿದನು. ತುರುಕರು ಬಂದು ಬಸವನನ್ನು ಹೊಡೆಯಲು ಕೈಯೆತ್ತಲು ಅವರ ಕೈ ಸ್ತಂಭಿಸಿತು. ಅವರೆಲ್ಲರೂ ಅಡ್ಡಬಿದ್ದು ಪರ್ವಮಾಡಿ ಜಾತ್ರೆ ನೆರೆಯಿಸಿದರು. ಶಿಶು ಬಾಲ ವೃದ್ಧರಿಗೆಲ್ಲ ಅಶನಾರ್ಥವನೀವ ಬಸವೇಶನೆಂದು ಮಹತ್ತು ಭಸಿತವನ್ನು

ಧರಿಸಿತು. ಕಲ್ಯಾಣದಿಂದ ದೇಶಾಂತರ ಬಂದು ಕೊಲ್ಲಿಪಾಕಿಯಲ್ಲಿ ಸೋಮೇಶನನ್ನು ಕಂಡು ಸ್ತುತಿಸಿದರು.

ಮಹತ್ತು ಶ್ರೀಗಿರಿಗೆ ಬಂದು ಮಲ್ಲಿಕಾರ್ಜುನನನ್ನು ದರ್ಶಿಸಿದರು. ಶ್ರೀಶೈಲವನ್ನು ಕಂಡಾಕ್ಷಣ ಪಾಪನಾಶವಾಗುತ್ತದೆಂದು ಕೇಶವ ಮೊದಲಾದ ದೇವತೆಗಳು ಬಂದು ಮಲ್ಲೇಶನನ್ನು ಬಲಗೊಂಡರು. ಮಲ್ಲಿಕಾರ್ಜುನನೇ ಒಡೆಯನೆಂದು ಷಡುದರುಶನದವರು ಭಾವಿಸುವರು. ಶಿಲಾದಮುನಿ ಶಿವನನ್ನು ಕುರಿತು ತಪಸ್ಸುಮಾಡಿ ಭಕ್ತಿ ಜ್ಞಾನ ವೈರಾಗ್ಯ ಸ್ವರೂಪರಾದ ನಂದೀಶ ಭೃಂಗೀಶ ಪರ್ವತರಾಜರನ್ನು ಮಕ್ಕಳಾಗಿ ಪಡೆದನು. ಮಲ್ಲಿಗೆ ಮೊಲ್ಲೆ ಜಾಜಿ ಮಂದಾರ ಕಮಲಗಳನ್ನು ಕೀಳ್ಪಡಿಸುವ ಮೂರ್ತಿಯನ್ನು ಕಂಡು ಅವರು ಮಲ್ಲಿಕಾರ್ಜುನ ಎಂದು ಕರೆದರು. ಸುರರು ಹೂಮಳೆಗರೆದರು. ಪಾಪಮಾಡಿದವರು ಪಾತಾಳ ಗಂಗೆಯಲ್ಲಿ ಮಿಂದು ಜ್ಯೋತಿರ್ಲಿಂಗವನ್ನು ಕಂಡು ನಮಿಸಿದವರ ಪಾಪ ಹರಿಯುತ್ತದೆ. ಮುನಿಯು ಗಿರಿಯಾಗಲು ಮಲ್ಲಿಕಾರ್ಜುನ ಲಿಂಗವಾದನು. ನಲವತ್ತೆಂಟುಗಾವುದ ವಿಸ್ತರ ದಲ್ಲಿ ಮಲ್ಲಿಕಾರ್ಜುನ ಲಿಂಗವಾಗಿ ಹಲವು ಹೆಸರನ್ನು ಧರಿಸಿದನು. ನಂದಿಗಿರಿ, ಬ್ರಹ್ಮಗಿರಿ ವಿಷ್ಣುಗಿರಿ, ಸ್ಕಂದಗಿರಿ, ಭೃಂಗಗಿರಿ ಎಂದು ನಾಮವಾದವು. ಅವರೆಲ್ಲ ಅಲ್ಲಿ ಬಂದು ತಪಸ್ಸು ಮಾಡಿದರು. ಉಡುತಡಿಯ ಮಹಾದೇವಿ ಸಿದ್ಧರಾಮೇಶ್ವರ ಸಕಲೇಶ್ವರ ಮಾದರಸ ಸಿದ್ಧೇಶ್ವರರು ಅಲ್ಲಿ ಬಿಡದೆ ಪ್ರದಕ್ಷಿಣೆ ಮಾಡಿದರು.

ಮಹತ್ತು ಅಲ್ಲಲ್ಲಿ ಮುನಿಗಳನ್ನು ಲಿಂಗವನ್ನು ನೋಡುತ್ತ ಬಂದು ಮಲ್ಲಿಕಾರ್ಜುನನ ದರ್ಶನವನ್ನು ಮಾಡಿದರು. ಸಾರಂಗಮಂಟಪದಲ್ಲಿ ಸಾರಂಗ ಸಿದ್ಧೇಶ್ವರಲಿಂಗವನ್ನು ಕಂಡು ಬಿಡಾರ ಮಾಡಿದರು. ಆಗ ಜೋಗಿಗಳು ಬಂದು ಶ್ರೀಗಿರಿ ತಮ್ಮದೆಂದರು. ಹನ್ನೆರಡು ಸಾವಿರ ಜೋಗಿಗಳು ಬಂದು ಮುತ್ತಿದಾಗ ವೀರಕುಮಾರ ಜಂಗಮರೆಲ್ಲರು ಕೂಡಿ ವಿಚಾರಿಸಿದರು. ಆಗ ಜೋಗಿಗಳು ತಂದೆಗಳಿಸಿದ ಒಡವೆ ಮಕ್ಕಳಿಗೆ ಸೇರುವಂತೆ ಸಾರಂಗ ಸಿದ್ಧನು ಶ್ರೀಗಿರಿಯಲ್ಲಿ ತಪವಿರಲು ಮಲ್ಲಿಕಾರ್ಜುನ ಕೊಟ್ಟನೆಂದರು. ನಾಗಾರ್ಜುನ ಇಲ್ಲಿ ತಪಸ್ಸು ಮಾಡಿದಾಗ ಅವನಿಗೆ ಶಿವನು ಕೊಟ್ಟನು. ಇದರಲ್ಲಿ ಸಂದೇಹವೇನೆಂದರು. ಜೋಗಿಗಳು ಸಾರಂಗಮಠ ತಮ್ಮದೆಂದರು, ವಾದ ವಿವಾದಗಳು ನಡೆದು ಬಗೆಹರಿಯದೇ ಜೋಗಿಗಳು ಜಗಳ ತೆಗೆದರು. ರೇವಣಸಿದ್ಧನ ಪಡೆಯು ಮೇಲೆ ಜೋಗಿಗಳ ಭೈರವಸೇನೆ ಬಿದ್ದಿತು. ಲಿಂಗವೆಗಂಡ, ಜಂಗಮವೆ ಪ್ರಾಣ, ಕಂಗೊಳಿಸುವ ಪಾದತೀರ್ಥ ಅಂಗಕ್ಕೆ ವಜ್ರಾಂಗಿಯು ಜೋಡು ಎನ್ನುವಂತೆ ಲಿಂಗದ ವೀರರು ನೆರೆದರು. ಜೋಗಿಗಳನ್ನು ಸದೆಬಡಿದು ಸಾರಂಗಮಠದಲ್ಲಿ ಮಹತ್ತು ನೆಲೆಸಿದರು. ಪರ್ವವನ್ನು ಮಾಡಿ ಮಲ್ಲಿಕಾರ್ಜುನನನ್ನು ಪೂಜಿಸಿದರು. ಭಿಕ್ಷವತಿ ಪಟ್ಟವನ್ನು ನೇಮಿಸಿದರು, ಅರಸುಗಳೆಲ್ಲ ಒಂದಾಗಿ ಮಲ್ಲಿಕಾರ್ಜುನನಿಗೆ ರಥವನ್ನು ನಡೆಸಿದರು.

ಬಸವನಗೃಹ, ಸಾರಂಗಸಿಂಹಾಸನ, ರೇವಣನಗೃಹ ಮುಂತಾದ ಕಡೆಗಳಲ್ಲಿ

ಶಿವನನ್ನು ಪೂಜಿಸುವರು. ಚಂದ್ರಗೊಂಡದ ಸ್ವಾಮಿ ಕೈಲಾಸಕ್ಕೆಡೆಯಹಾಡಿ ಬಂದು ಪ್ರಾಕಾರವನ್ನುಮಾಡಿ ಚಂದವನ್ನು ನೋಡಿ ಮಲ್ಲಿಕಾರ್ಜುನ ತಾನೆಯೆಂದು ಅವರೊಳಗೆ ಇಟ್ಟುಕೊಂಡನು. ಹಂಚ್ಚ ನಂಜೇಶ್ವರನು ಪ್ರತಿದಿವಸ ಫಲಾಹಾರ ಭಿಕ್ಷಾನ್ನವನ್ನು ಊಟ ಮಾಡಿ ಇರಲು ಮಲ್ಲೇಶ್ವರನು ಮೆಚ್ಚಿ ಗಂಗೆಯು ಪಥದೋರಿ ಅವನನ್ನು ಕೈಲಾಸಕ್ಕೆ ಒಯ್ದನು. ಬಂದ ಭಕ್ತರಿಗೆ ಬೇಡಿದಿಷ್ಟವನಿತ್ತು ಪೂಜೆಗೊಂಡ ಚಂದ್ರಶೇಖರಮೂರ್ತಿ ಸಾಲಂಕಿಯಲ್ಲಿರಲು ಮಲ್ಲೇಶ್ವರನು ಒಲಿದನು. ಮಕ್ಕೆ ಮೊದಲಾದ ದೇಶಗಳಲ್ಲಿ ತಿರುಗಿ ದೆಹಲಿಗೆ ಬಂದು ಬಾದಶಹನ ಕೋರಿಕೆಯಂತೆ ಮಳೆಯನ್ನು ಬರಿಸಿದ. ಮಳೆಯ ಮಲ್ಲೇಶನನ್ನು ಬಾದಶಹನು ಮೆರವಣಿಗೆ ಮಾಡಿ ಬಿರುದು ಬಾವಲಿಗಳನ್ನು ಕೊಟ್ಟನು. ನಿಡುಮಾವಡಿಯ ಕರಿಯಸಿದ್ಧೇಶ್ವರರು ಮೃಡಮೂರ್ತಿ ಭಿಕ್ಷವೆಂದೆನಲು ತೆಂಗಿನಮರ ತಾನೇ ಭಿಕ್ಷೆ ನೀಡಿತು. ಕಂಬಾಳ ಮರುಳಸಿದ್ಧೇಶ್ವರರು ದಂಡಿಗೆಯನ್ನು ಹೊರಿಸಿ ಕೊಂಡು ಸಂಚರಿಸಿದರು.

ತೋಟದ ಸಿದ್ಧೇಶ ಇಳೆಯ ಕ್ಷೇತ್ರವನ್ನೆಲ್ಲ ಸುಳಿದಾಡುತ್ತ ಬರುವಾಗ ಮಳೆ ಬರಲು ಆ ಕ್ಷಣ ಹೊಳಲುಗುಂಡದ ಮಹಾದೇವಿ ಕದವನ್ನು ತೆರೆದಳು. ಸಿದ್ಧೇಶ್ವರ ಬಳಲಿದಿರಿ ಎಂದು ಮಹಾದೇವಿ ಅವರಿಗೆ ಉಪಚರಿಸಿದಳು. ಅವರು ಬಂದಿರುವ ಸುದ್ದಿ ಯನ್ನು ಆ ಊರಿನ ಗೌಡ ಮತ್ತು ಪೂಜಾರಿಗೆ ತಿಳಿಸಿದಳು. ಅವರು ಬಂದು ಪರ್ವವನ್ನು ಮಾಡಲು ಸಿದ್ಧೇಶರು ಬಂದರು. ಅಲ್ಲಿಯ ಭಕ್ತರು ಬಂದು ಬಿನ್ನಹ ಮಾಡಿದರು. ತೋಟದ ಸಿದ್ಧೇಶ ಅಲ್ಲಿರುವಾಗ ರಾಜಕಾರ್ಯ ಬರಲು ಭಕ್ತರೆಲ್ಲ ಹೊರಟುಹೋದರು. ಇತ್ತ ಸಿದ್ಧೇಶ ಸುಖ ಸಮಾಧಿಯಲ್ಲಿದ್ದರು.

ಸಿದ್ಧೇಶ್ವರನ ಸುತ್ತ ಹುತ್ತ ಬೆಳೆಯಿತು. ಮರಲೆ ಗೂಡಿಕ್ಕಿತು. ಖಗ ಮೃಗ ವನಚರ ವೆಲ್ಲ ಸುತ್ತ ಬಳಸಿತು. ಹೀಗೆ ಹದಿನೆಂಟು ವರ್ಷ ಕಳೆದ ಮೇಲೆ ಎಲ್ಲರೂಊರಿಗೆ ಬಂದರು. ಭಸಿತವಿತ್ತ ಭಕ್ತನು ಬಂದು ತೋಟವನ್ನು ನೋಡಲು ಹುತ್ತ ಬೆಳೆದಿದ್ದಿತು. ಅಲ್ಲಿ ಬಂದು ನೋಡಿದಾಗ ಸಿದ್ಧೇಶ್ವರನು ಉನ್ಮನಿಧ್ಯಾನದಲ್ಲಿದ್ದನು. ಹಾವು ಹೊರಬಂದಿತು. ಹಸ್ತ ದಿಂದ ಹುತ್ತವನ್ನು ನೂಕಿ ಸಿದ್ಧೇಶ್ವರನನ್ನು ಕಂಡು ಭಕ್ತ ಸ್ತುತಿಸಿದನು. ಎಲ್ಲರೂ ಸೇರಿ ಪರ್ವವನ್ನು ನಡೆಸಿದರು. ಸಿದ್ಧೇಶ್ವರನು ಅವನ್ನು ಸ್ವೀಕರಿಸಿ ಸಂಚರಿಸುತ್ತಿದ್ದನು.

ಆಗ ಭಕ್ತರು ಬಂದು ಬಗೆ ಬಗೆಯ ಕಾಣಿಕೆಯನ್ನಿತ್ತರು. ಒಬ್ಬಳು ತನ್ನ ಸೀರೆಯನ್ನೇ ಹರಿದುಕೊಟ್ಟಳು. ಅವಳ ಗಂಡ ಆಕ್ಷೇಪಿಸಿದಾಗ ಸಿದ್ಧೇಶ್ವರನು ಅವಳ ಸೀರೆಯನ್ನು ಮೊದಲಿದ್ದಂತೆಯೇ ಮಾಡಿದನು. ಜಗತ್ತೆಲ್ಲ ಸಿದ್ಧೇಶ್ವರ ಜಯ ಎಂದಿತು. ಎಳನೀರನ್ನು ತರುವವನೊಬ್ಬ ಬಳಲಿ ಒಂದನ್ನು ಕುಡಿಯಲು ಉಳಿದ ಎಳನೀರು ಇಳುಹಿದ್ದ ಜಾಗದಲ್ಲಿ ಮಾಯವಾಯಿತು. ಅದನ್ನು ತಿಳಿದು ಆತ ಸಿದ್ಧೇಶನಿಗೆ ನಮಿಸಿ ದನು. ಕೆರೆಯಲ್ಲಿ ಹರವಿಯನ್ನು ಬಿಡಲು ಅದು ದೂರ ಹೋಯಿತು. ಸಿದ್ಧೇಶನು

ತಿರುಗು ಎನ್ನಲು ಹರವಿ ಹಿಂದೆ ಬಂದಿತು. ಜನರು ಅದನ್ನು ನೋಡಿ ಸ್ತುತಿಸಿದರು.

ಸಪ್ಪೆಯಸ್ವಾಮಿ, ಉಪ್ಪಿನಹಳ್ಳಿಯದೇವ, ಬೋಳಬಸವ, ಪಟ್ಟಣದಸ್ವಾಮಿ, ಒಪ್ಪೊತ್ತಿನ ಚೆನ್ನಬಸವ, ಚಿನ್ನದ ಕಂತೆಯಸ್ವಾಮಿ, ಮೋಟಾಳಿನ ಚೆನ್ನವೀರೇಶ, ಕಳಲೆಯ ಶಿವನಂಕಾರ್ಯ, ಗಂಗಾಧರ, ಪಶುಪತಿಸ್ವಾಮಿ ಮೊಗ್ಗೆಯ ಪ್ರಭುಸ್ವಾಮಿ, ಮೌನದಶಾಂತೇಶ, ಜಗುನಿಯ ಮರುಳಸಿದ್ಧೇಶ. ಲಂಬಕರ್ಣದ ಚೆನ್ನಬಸವೇಶ, ನಿಜಗುಣಸ್ವಾಮಿ, ಕೊಟ್ಟೂರ ಬಸವೇಶ, ಕೋರಾನ್ನದಸ್ವಾಮಿ ಮುಂತಾದವರಿಗೆಲ್ಲ ಇಷ್ಟಲಿಂಗ ಸಿದ್ಧೇಶ.

ಭೈರವಾಂಕನಿಗೆ ಕೈರಲಗಿನ ಮೊನೆಯಲ್ಲಿ ಲಿಂಗವನ್ನು ತೋರಿದಂತೆ ಚಿಕ್ಕಯ್ಯನಿಗೆ ಲಿಂಗ ಎರಳೆಯಿಂದ ಶೋಭಿಸಿತು. ಕೊಟ್ಟೂರಿನಲ್ಲಿ ಶಿವಕಾಳಿಗಯ್ಯನು ಕಟ್ಟಿಗೆಯ ಕಾಯಕವನ್ನು ಮಾಡಿ ಕೈಲಾಸಕ್ಕೆ ಹೋದನು. ಜಡೆಯಕೂಡುವ ಸಿದ್ಧಮಲ್ಲಿಕಾರ್ಜುನ ಸ್ವಾಮಿ, ಶಿವನಂಕಾರ್ಯ ಪಡೆದ ಶಿಷ್ಯರು ಪರ್ವತಸ್ವಾಮಿಯೊಡನೆ ಮಲ್ಲಿಕಾರ್ಜುನ ನಿದ್ದನು. ಶೂನ್ಯತತ್ವ ಶಾಂಭವಲೋಕ ರಜತಾದ್ರಿ ಇಂದ ಇಳಿದು ಚೆನ್ನಮಲ್ಲೇಶ್ವರ ಶ್ರೀಗಿರಿಯಲ್ಲಿ ಭಕ್ತರಿಗೆ ಪ್ರಸನ್ನನಾದನು.

ಕೈಲಾಸಕ್ಕೆ ಸಮವೆನಿಸುವ ಶ್ರೀಗಿರಿಗೆ ಶರಣ ಸತ್ಪುರುಷರು ಬಂದು ಮಲ್ಲಿಕಾರ್ಜುನನಿಗೆ ಪೂಜೆಗಳನ್ನು ಸಲ್ಲಿಸುವರು. ನೂಲಪೂಜೆ ವಿಭೂತಿ ಸಂಕ್ರಾಂತಿ ಶಿವರಾತ್ರಿಗಳಲ್ಲಿ ಮಲ್ಲಿ ಕಾರ್ಜುನನನ್ನು ಪೂಜಿಸುವರು. ನರ ಸುರ ಮುನಿ ದಿಕ್ಪಾಲರ ಭಾವದಲ್ಲಿ ನೆಲಸಿ ಮಲ್ಲಿಕಾರ್ಜುನನು ಪೊರೆವನು. ಗುರು ಲಿಂಗ ಜಂಗಮ ಚಾರಿತ್ರವನ್ನು ಬರೆದೋದಿ ಕೇಳಿದವರಿಗೆ ಗುರುಸಿದ್ಧಮಲ್ಲೇಶನು ಕರೆದು ವರ ಭೋಗ ಮೋಕ್ಷವನ್ನು ಕೊಡುತ್ತಾನೆ.

ಉಮ್ಮತ್ತೂರು ಒಡೆಯರು

ಮೈಸೂರು ಜಿಲ್ಲೆ ಚಾಮರಾಜನಗರ ತಾಲ್ಲೂಕಿನ ಉಮ್ಮತ್ತೂರು ಈ ಒಡೆಯರ ರಾಜಧಾನಿ. ಇವರು ವಿಜಯನಗರದ ಮಾಂಡಲಿಕರಾಗಿದ್ದು ಕ್ರಿ. ಶ. ಸು 1511 ರಿಂದ ಈಚೆಗೆ ಕೃಷ್ಣದೇವರಾಯನ ಅವಕೃಪೆಗೆ ಒಳಗಾಗಿ ಧಾಳಿಗೀಡಾದರು[1]. ಕ್ರಿ. ಶ. 1415 ರಲ್ಲಿ ಉಮ್ಮತ್ತೂರು ವಿಜಯನಗರದ ರಾಣೆಯಾಗಿದ್ದಿತು ಎನ್ನುವ ವಿಚಾರ 288 ನಂಜನಗೂಡು ಕ್ರಿ. ಶ. 1415 ರ[2] "ದೇವರಾಯ ಮಹಾರಾಯ ಪೃಥ್ವೀರಾಜ್ಯಗೆಯ್ಯು

---

1 ಕೃಷ್ಣದೇವರಾಯನು ಉಮ್ಮತ್ತೂರನ್ನು ಸಾಧಿಸಿದ ಸಂಗತಿಯು ಶ್ರೀಕೃಷ್ಣದೇವರಾಯನ ದಿನಚರಿಯ "ಉಮ್ಮತ್ತೂರು ಶಿವನಸಮುದ್ರಕ್ಕೆ ಬಂದು ಗಂಗರಾಜವೊಡೆಯರ ಮೇಲೆ ಕಾರ್ಯವಮಾಡಿ ಆ ಸ್ಥಳವನ್ನು ಒಂದು ದಿನದಲ್ಲಿಯೆ ಸಾಧಿಸಿ" (ಪುಟ 38) ಎನ್ನುವುದರಿಂದ ತಿಳಿದು ಬರುತ್ತದೆ. ಸಂಪಾದಕ ಡಾ. ವಿ. ಎಸ್. ಎಸ್. ಆಚಾರ್ಯ, ಬಿ. ಎಂ. ಶ್ರೀಸ್ಮಾರಕಪ್ರತಿಷ್ಠಾನ, ಬೆಂಗಳೂರು 1983.

2. ಇಲ್ಲಿ ಕೊಟ್ಟಿರುವ ಶಾಸನೋಲ್ಲೇಖಗಳು ಕನ್ನಡ ಅಧ್ಯಯನ ಸಂಸ್ಥೆ ಪ್ರಕಟಿಸಿದ ಪರಿಷ್ಕೃತ ಎಪಿಗ್ರಾಫಿಯಾಕರ್ನಾಟಿಕ ಸಂಪುಟಗಳಿಗೆ ಸೇರಿದುವು.

ವಲ್ಲಿ * * * ಉಮ್ಮತ್ತೂರ ಠಾಣೆಯಗಸು ಚಿಕ್ಕದೇವಪ್ಪನು" ಎನ್ನುವ ಶಾಸನದಿಂದ ತಿಳಿದು ಬರುತ್ತದೆ. ಬಹುಶಃ ಈತನು ಉಮ್ಮತ್ತೂರು ಒಡೆಯರ ಮೂಲಪುರುಷನಿದ್ದಿರ ಬಹುದು.

135 ಗುಂಡ್ಲುಪೇಟೆ ಕ್ರಿ. ಶ. 1492ರ ಶಾಸನದಿಂದ ಉಮ್ಮತ್ತೂರು ಒಡೆಯರಿಗೆ. " ಶ್ರೀಮನ್ಮಹಾಮಂಡಲೇಶ್ವರಂಜಪಾದಿಕೋಳಾಹಳ ಪೆಸಾಳಿಹನುಮಅರಸಂಕಸೂನೆಗಾಬಿ ಘೇಣಂಕಚಕ್ರೇಶರ ಗಜಬೇಂಟೆಕಾಬಿ ಎನ್ನುವ ಬಿರುದುಗಳಿದ್ದಂತೆ ತಿಳಿದು ಬರುತ್ತದೆ. 26 ಗುಂಡ್ಲುಪೇಟೆ ಕ್ರಿ. ಶ. 1506 ಇವರನ್ನು "ಕಲಿಯುಗ ಖಿಲೀಕೃತ ವೇದಶಾಸ್ತ್ರೋದ್ಧರಣ ವ್ರತರಾದ ಸಕಲ ವರ್ಣಾಸ್ರಮೋಕ್ತ ಧರ್ಮಪ್ರತಿಷ್ಠಾಪನ ಧುರಂಧರರಾದ ಸೂರ್ಯಕುಲಪ್ರಸೂತರಾದ " ಎಂದು ಪ್ರಶಂಸಿಸಿದೆ ಹೀಗೆ ಅನೇಕ ಪ್ರಶಸ್ತಿಗಳಿಗೆ ಭಾಜನರಾದ ಉಮ್ಮತ್ತೂರು ಒಡೆಯರ ಪ್ರಸ್ತಾಪ ಗುರು ಲಿಂಗ ಜಂಗಮ ಚಾರಿತ್ರದಲ್ಲಿ ಹೀಗಿದೆ—

ಈಶ್ವರನ ಸೂಚನೆಯಂತೆ ಮಹಾಕಾಳನೆನ್ನುವವನು ಸೌರಾಷ್ಟ್ರಪುರದ ಚಾಮರಾಜನ ಮಗನಾಗಿ ಜನಿಸಿದನು ಆ ಮಗನಿಗೆ 'ಶಿತಿಕಂಠನ ಭಕ್ತ ನಂಜರಾಯ' ಎಂದು ಹೆಸರಿಟ್ಟರು. ನಂಜರಾಯನು ಮದುವೆ ಮಾಂಗಲ್ಯ ಉತ್ಸವಗಳ ಸಂಭ್ರಮದಿಂದಿರುವಾಗ ಒಂದು ದಿವಸ ಭುಜಂಗೇಶ್ವರನು ಅವನ ಕನಸಿನಲ್ಲಿ ಬಂದು ನಾವು ಕನಕಪುರದಲ್ಲಿದ್ದೇವೆ (ಉಮ್ಮತ್ತೂರು). ಅಲ್ಲಿಗೆ ಬಂದು ನಮ್ಮ ಸೇವೆಮಾಡು ಎಂದನು. ಆದೇಶದಂತೆ ಸೌರಾಷ್ಟ್ರ ಪುರದಿಂದ ದೇಪಣ್ಣೊಡೆಯ ನಂಜರಾಯ ಸೋಮರಾಯರು ಹೊರಟು ಪ್ರಯಾಣ ಮಾಡುತ್ತ ಸುತ್ತೂರಿಗೆ ಬಂದರು. ಅಲ್ಲಿ ಸೋಮೇಶನನ್ನು ಪೂಜಿಸಿ ಮುಂದೆ ನಡೆದಾಗ ಮೆಳೆಯೊಳಗಿದ್ದ ಮೊಲವೊಂದು ನಾಯಿಯನ್ನು ಎದುರಿಸಿ ಹಿಂದಕ್ಕೆ ಅಟ್ಟಿತು. ಆಗ ಅವರು ಇದು 'ಗೆಲವುಳ್ಳ ತಾಣವೆಂದು ' ಮರಗಿಡಗಳನ್ನು ಕಡಿಸಿದರು. ಆ ಸಮಯದಲ್ಲಿ ಲಿಂಗಕೆ ಹಾವು ಸುತ್ತಿರುರುವುದನ್ನು ಸೇವಕರು ಕಂಡರು.ಅವರಿಂದ ವಿಷಯ ತಿಳಿದ ಸೋಮೇಂದ ನಂಜರಾಯರು ಕಾಲ್ನಡೆಯಿಂದ ಬಂದು ನೋಡಲು ಹಾವು ಲಿಂಗದೊಳಗೆ ಪ್ರವೇಶಿಸಿತು ಅಂದು ನಮ್ಮ ಸ್ವಪ್ನದಲ್ಲಿ ಬಂದ ಭುಜಂಗೇಶ್ವರಲಿಂಗ ಇದೆ ಎಂದು ಭಾವಿಸಿದ ಅವರು ಸೆಟ್ಟರಮಲ್ಲಯ್ಯನ ಮೂಲಕ ರಾಜಧಾನಿಗೆ ಒಪ್ಪುವಂತೆ ಉಮ್ಮತ್ತೂರನ್ನು ನಿರ್ಮಿಸಿದರು.

ಗುರು ಲಿಂಗ ಜಂಗಮ ಚಾರಿತ್ರದ ಸಂಗತಿಗಳನ್ನು ಪೋಷಿಸುವ ಅನೇಕ ವಿಷಯ ಗಳು ಶಾಸನಗಳಲ್ಲಿ ಹೀಗೆ ಲಭ್ಯವಾಗುತ್ತವೆ.

ಉಮ್ಮತ್ತೂರು ದೊರೆಗಳು ಸೌರಾಷ್ಟ್ರಪುರದಿಂದ ಹೊರಟರು ಎನ್ನುವ ಮಾತನ್ನು 231 ಚಾಮರಾಜನಗರ 1512 ರ ಶಾಸನದಲ್ಲಿ ಬರುವ "ಸೌರಾಷ್ಟ್ರಪುರದ...ದೇಪಣ ಒಡೆಯರು ಕುಮಾರ ನಂಜರಾಯ ಒಡೆಯರು" ಎನ್ನುವ ಮಾತು ಪೋಷಿಸುತ್ತದೆ. 181 ನಂಜನಗೂಡು 1467 ರ ಶಾಸನದಂತೆ ಉಮ್ಮತ್ತೂರ ಸೋಮಯ

ದೇವಗಳು ಶ್ರೀ ನಂಜುಂಡೇಶ್ವರ ದೇವರ ಅಮೃತಪಡಿ ಅಭಿಷೇಕ ಅಂಗಭೋಗ ರಂಗ ಭೋಗಕ್ಕೆ ತಗಡೂರಸೀಮೆ ಹೊಳೆಯ ಮುಳ್ಳೂರುಗ್ರಾಮವನ್ನು ಕೊಟ್ಟಿದ್ದಾನೆ. 178 ಗುಂಡ್ಲುಪೇಟೆ 1478 ರ ಶಾಸನದಂತೆ ಉಮ್ಮತ್ತೂರ ವಂಶಾವಳಿ ಹೀಗಿದೆ–

ವೀರಹನುಮಪ್ಪ ಒಡೆಯ
|
ಇಮ್ಮಡಿರಾಯ
|
ದೇವಣ್ಣ ಒಡೆಯ — ಬೆದ್ದೆಯ ನಂಜರಾಯ ಒಡೆಯ
|
ಚನ್ನನಂಜರಾಯ ಒಡೆಯ

ಡಾ. ಎಂ. ಆರೋಗ್ಯಸ್ವಾಮಿಯವರು[1] ರೈಸ್‌ರವರು ಕೊಟ್ಟಿರುವ ವಂಶಾವಳಿ ಯೊಂದಿಗೆ ಕೊಯಮತ್ತೂರು ಜಿಲ್ಲೆ ಅವಿನಾಶಿ ಸುತ್ತಮುತ್ತ ದೊರೆತ ಕೊಂಗು ಶಾಸನ ಗಳನ್ನು ಆಧರಿಸಿ ರಚಿಸಿದ ತಾತ್ಕಾಲಿಕ ವಂಶಾವಳಿ.

ಸೋಮರಾಯ
|
ದೇಪಣ್ಣ — ವೀರನಂಜರಾಯ I (1482–99)
|
ಇಮ್ಮಡಿ ದೇಪಣ್ಣ — ಚಿಕ್ಕ(1508–12)
|
ವೀರನಂಜರಾಯ
1507–19

[1] The ummattur chieftaincy - DR. M. Arokiaswamy M. A., P. HD. Journal of the mythic socitey, culture and Heritage Number, pages 156-162.

ಡಾ. ಬಾ. ರಾ. ಗೋಪಾಲರು ಎಪಿಗ್ರಾಫಿಯ ಕರ್ನಾಟಿಕವನ್ನು ಪರಿಷ್ಕರಿಸುವ ಸಂದರ್ಭದಲ್ಲಿ–

ಇಮ್ಮಡಿರಾಯ ಒಡೆಯ
(ಸೋಮರಾಯ)

- (ಹೆಸರಿಲ್ಲದ ಶಾಖೆ)
  - ಚಿಕ್ಕರಾಯ ನಂಜರಾಜ
  - ಗೋವಣ್ಣ
- ನಂಜರಾಜ
  - ಚನ್ನನಂಜರಾಜ-ಇಮ್ಮಡಿ ಚಿಕ್ಕರಾಯ,
  - (ಹೆಸರಿಲ್ಲ)

ಎಂದು ವಂಶಾವಳಿಯನ್ನು ರೂಪಿಸಿದ್ದಾರೆ. ಗುರು ಲಿಂಗ ಜಂಗಮ ಚಾರಿತ್ರದಿಂದ ತಿಳಿದು ಬರುವಂತೆ ದೇಪಣ್ಣ, ನಂಜರಾಯ, ಸೋಮರಾಯರು ಸೌರಾಷ್ಟ್ರಪುರದಿಂದ ಹೊರಟರು ಆದುದರಿಂದ ಈ ಕಾವ್ಯದ ನಂಜರಾಯನನ್ನು ಮೊದಲನೆಯ ನಂಜರಾಯನೆನ್ನಬಹುದು.

ಆರಾಧ್ಯಚಾರಿತ್ರದಲ್ಲಿ ನೀಲಕಂಠದೇಶಿಕನು ತನ್ನನ್ನು ಕುರಿತು ಹೇಳುವಾಗ ನಂಜರಾಯನ ಬಗ್ಗೆ ಹೀಗೆ ಹೇಳಿದ್ದಾನೆ—

ಅರಿರಾಯ ಗರ್ವಪರ್ವತದಳನ ಭಿದುರನುರು
ತರ ವಿಪಕ್ಷ ಪ್ರಬಲಸೇನಾಬ್ಧಿ ಬಾಡಬಂ
ಪರಭೂಮಿಪಾಲ ಜೀವಪ್ರಭಂಜನ ಭೋಗಿ ಯಶಾಚಕಾಮರಭೂಜನಂ
ಕರಮೆಸೆವ ಗಜಬೇಂಟೆಕಾಜಿನೀಶ್ವರಪಾದ
ಸರಸಿರುಹ ಸೇವಕಂ ವೀರನಂಜೇಂದ್ರನಿಂ
ಪರಿಪೂಜಿತಂ ನೀಲಕಂಠದೇಶಿಕನುಸಿರ್ದನೀ ಕೃತಿಯನಳ್ತಿಯಿಂದೆ[1] (1–44)

ಎಂದು ಹೇಳಿದ್ದಾನೆ. ಚೆನ್ನಬಸವಪುರಾಣಕಾರನು ಪರಮಜಂಗಮಕ್ಕೆ ದಾಸೋಹ ಮಾಡಿದ ದೊರೆಗಳ ಸಾಲಿನಲ್ಲಿ ನಂಜರಾಯನನ್ನು ಸೇರಿಸಿದ್ದಾನೆ (63–55).

ನಂಜರಾಯನು ನ್ಯಾಯವೈಶೇಷಿಕ ದರ್ಶನಕ್ಕೆ ಸಂಬಂಧಿಸಿದ 'ಕಾಣಾದ ಸಂಗ್ರಹ ವಿವರಣಂ' ಎನ್ನುವ ಸಂಸ್ಕೃತಗ್ರಂಥವನ್ನು ರಚಿಸಿದ್ದಾನೆ. ಈ ಗ್ರಂಥದ ಸ್ವರೂಪವನ್ನು ಕುರಿತು ಮೈಸೂರಿನ ಕುಂತೂರುಮಠದ ಶ್ರೀನಿ ಪ್ರಸ್ವ ಇಮ್ಮಡಿ ಶಿವಬಸವಸ್ವಾಮಿಗಳು — "ಇದಕ್ಕೆ ಮೂಲವಾದ ಕಾಣಾದಸಂಗ್ರಹವು ಸಂಪೂರ್ಣವಾಗಿ ದೊರೆಯುತ್ತಿಲ್ಲ. ಕೇವಲ ದ್ರವ್ಯಭಾಗ ಮಾತ್ರ ದೊರಕಿದೆ. ಇದು ಅಮುದ್ರಿತ. ಆದರೆ ನಂಜರಾಜನು ಸಮಗ್ರ

ಆರಾಧ್ಯಚಾರಿತ್ರ. ಸಂಪಾದಕ ಎನ್, ಬಸವಾರಾಧ್ಯ. ಕನ್ನಡ ಅಧ್ಯಯನ ಸಂಸ್ಥೆ 1980.

ಗ್ರಂಥಕ್ಕೆ ಟೀಕೆಯನ್ನು ಬರೆದ ವೈಶೇಷಿಕರ ದ್ರವ್ಯ– ಗುಣ– ಕರ್ಮ– ಸಾಮಾನ್ಯ– ವಿಶೇಷ– ಸಮವಾಯ ಮತ್ತು ಅಭಾವ ಎಂಬ ಸಪ್ತ ಪದಾರ್ಥಗಳಿಗನುಗುಣಸಾರವಾಗಿ ಏಳುಅಧ್ಯಾಯಗಳನ್ನು ಮಾಡಿದ್ದಾನೆ. ಕಣಾದನು ಅಭಾವವನ್ನು ಏಳನೇಪದಾರ್ಥವೆಂದು ಅಂಗೀಕರಿಸದಿದ್ದರೂ ವ್ಯೋಮಶಿವಾಚಾರ್ಯ, ಉದಯನ ಮುಂತಾದವರಂತೆ ಈತನು ಅದನ್ನು ಪ್ರತ್ಯೇಕಪದಾರ್ಥವೆಂದು ಒಪ್ಪಿದ್ದಾನೆ. ಮೂಲಗ್ರಂಥವು ಸಂಪೂರ್ಣವಾಗಿ ಲಭ್ಯವಾಗಿ ಅದರೊಡನೆ ಇದನ್ನು ಪ್ರಕಾಶಿಸಿದರೆ ಈ ಕೃತಿಯ ಮಹತ್ವವು ವಿದ್ವತ್ ಪ್ರಪಂಚಕ್ಕೆ ತಿಳಿಯುತ್ತದೆ."[1] ಎಂದಿದ್ದಾರೆ.

ಉಮ್ಮತ್ತೂರಿನಲ್ಲಿ ಇಂದು ಕೋಟೆಯ ಉಳಿಕೆಗಳು ಅಲ್ಲಲ್ಲಿವೆ. ಅರಮನೆಯ ಯಾವ ಶೇಷವೂ ಉಳಿದಿಲ್ಲ. ಅರಮನೆಯಿದ್ದ ನಿವೇಶನವನ್ನು ಈಗ ಅರಮನೆ ಹೊಲ ಎಂದು ಗುರುತಿಸುತ್ತಾರೆ. ರಂಗನಾಥ ದೇವಾಲಯದಲ್ಲಿ ತಳದಲ್ಲಿ 2½ಅಡಿ ಅಗಲದ 25 ಅಡಿ ಎತ್ತರದ ಒಂದು ಒಳ್ಳೆಯ ಗರುಡಗಂಬವಿದೆ. ಕಂಬದ ಪಶ್ಚಿಮಮುಖದಲ್ಲಿ 3 ಅಡಿ ಎತ್ತರದ ಭಕ್ತ ವಿಗ್ರಹವಿದೆ. ಉಳಿದ ಮುಖಗಳಲ್ಲಿ ಹನುಮಂತ ಗರುಡ ಪರವಾಸು ದೇವರ ಶಿಲ್ಪಗಳಿವೆ. ರಂಗನಾಥ ವಿಗ್ರಹ 4½ ಅಡಿ ಉದ್ದವಿದ್ದು ಕಾಲ್ದೆಸೆಯಲ್ಲಿ ಕುಳಿತ ಭಂಗಿಯ ಶ್ರೀದೇವಿ ಭೂದೇವಿ ವಿಗ್ರಹಗಳಿವೆ. ದೇವಾಲಯದ ಬಲಗಡೆ ನವರಂಗದಲ್ಲಿ ಬೆಣ್ಣೆಕೃಷ್ಣನ ವಿಗ್ರಹವಿದೆ, ಎಡಗಡೆ ಅಮ್ಮನವರ ದೇವಾಲಯವಿದೆ.

ಭುಜಂಗೇಶ್ವರ ದೇವಾಲಯದ ದೀಪಸ್ತಂಭ ತಳಭಾಗದಲ್ಲಿ 2¾ ಅಡಿ ಇದ್ದು 30 ಅಡಿ ಎತ್ತರವಿದೆ.ಮೇಲ್ಭಾಗದಲ್ಲಿ ದೀಪಗಳನ್ನಿಡಲು ಕಬ್ಬಿಣದ ಚೌಕಟ್ಟಿದೆ. ಪ್ರಾಕಾರ ದಲ್ಲಿ 2 ಅಡಿ ಎತ್ತರದ ಸುಬ್ರಹ್ಮಣ್ಯ ವಿಗ್ರಹವಿದೆ.ದೇವಾಲಯದ ಹಿಂಭಾಗದ ಪಂಚಲಿಂಗ ಗಳಲ್ಲಿ 3 ನೆಯದರಲ್ಲಿ ಜಟೆಯಿದ್ದು 4 ಕೈಗಳ ಗಂಗೆಯಿದೆ.ಗಂಗೆಯ ಮೇಲಿನ ಎರಡು ಕೈ ಗಳಲ್ಲಿ ಕಮಲವಿದೆ. ಕೆಳಗಿನ ಎರಡು ಕೈಗಳು ಅಭಯ ಮತ್ತು ವರದಮುದ್ರೆಗಳಲ್ಲಿವೆ ಬಲಗಡೆಯಲ್ಲಿ ರಂಗನಾಥದೇವಾಲಯದ ಗರುಡಗಂಬದ ಮೇಲಿರುವ ಭಕ್ತವಿಗ್ರಹದಂತಹ ಒಂದು ಶಿಲ್ಪವಿದೆ, ಬಹುಶಃ ಈ ದೇವಾಲಯದ ರಚನೆಗೆ ಕಾರಣನಾದವನ ಶಿಲ್ಪವಿರ ಬಹುದು. ನವರಂಗದಲ್ಲಿ 3 ಅಡಿ ಎತ್ತರದ ಸೂರ್ಯನ ಸುಂದರವಾದ ವಿಗ್ರಹವಿದೆ.ಗುರು ಲಿಂಗ ಜಂಗಮ ಚಾರಿತ್ರದಲ್ಲಿ ಭುಜಂಗೇಶ್ವರ ದೇವಾಲಯದ ವಿವರಗಳು ಹೀಗಿವೆ—

ಅಂಗಡಿ ರಾಜಬೀದಿಯ ಉಪ್ಪರಿಗೆಯ । ಮುಂಗಡೆಯಲಿ ಗೋಪುರವ
ಕಂಗೊಳಿಸುವ ಶುಕನಾಸಿ ಗರ್ಭಗೃಹ । ರಂಗಮಂಟಪವ ರಚಿಸಿದ

ಅಖಿಲಭಾರತ ವೀರಶೈವ ಮಹಾಸಭಾ ೨೦ನೆಯಅಧಿವೇಶನ ಮೈಸೂರು 1983, ಸಂಸ್ಮರಣ ಸಂಪುಟ ಪುಟ 199–200.

ಇಪ್ಪತ್ತೈದು ಲೀಲಾವಿಗ್ರಹಗಳಿಂ । ದೊಪ್ಪುವ ಚಿತ್ರಶಾಲೆಗಳ
ತಪ್ಪದೆ ಪ್ರಾಕಾರವ ನಿರ್ಮಿಸಿದನು । ಕಪ್ಪು ಗೊರಲನು ಭಜಂಗನಿಗೆ ೪: ೪೬, ೪೭

ಶಿವನಸಮುದ್ರ ಉಮ್ಮತ್ತೂರು ಒಡೆಯರ ಪ್ರಮುಖವಾದ ಕೋಟೆ. ಇಲ್ಲಿನ ಸೋಮೇಶ ಇವರ ಕುಲದೇವತೆ. ಕಾಣಾದ ಸಂಗ್ರಹವಿವರಣಂ ಎನ್ನುವ ಗ್ರಂಥದಲ್ಲಿ ನಂಜರಾಜನು ಈ ಸೋಮೇಶನನ್ನು—

ಸೋಮೇಶ್ವರಂ ಶಿವಸಮುದ್ರ ಪುರೇಶ್ವರ೯ ತಂ
ಆಮ್ನಾಯವೇದ್ಯ ಪುಹಿಮಶಾಸಮಹಂ ನಮಾಮಿ

ಎಂದು ಸ್ತುತಿಸಿದ್ದಾನೆ. ಗುರು ಲಿಂಗ ಜಂಗಮ ಚಾರಿತ್ರದಲ್ಲಿ—

ಶರಧಿಗೆ ರಾಮನು ಸೇತುಗಟ್ಟಿಸಿದಂತೆ । ಹರಿವ ನದಿಗೆ ಪಾಲವನು
ವಿರಚಿಸಿ ಮಂತ್ರಿ ಪಟ್ಟಣವನು ಮಾಡಿಯೆ । ಹರನ ಹೆಸರನಿಟ್ಟನವನು

ಶಿವನ ಸಮುದ್ರವೆಂದೆಂಬ ಹೆಸರನಿಟ್ಟು । ಭುವನೇಶ್ವರಿಯನೊಡರ್ಚಿ
ಅವನಿಪ ಸೋಮೇಶನ...ಮಾಡಿ... । ...ಭಕ್ತಿಯಿಂದ ಭಜಿಸಿ

ವೀರೇಶ್ವರನಿಗೆ ಮಂಟಪವನೆ ಕಟ್ಟಿ । ನಾರಾಯಣನಿಗೆ ಗುಡಿಯು
ಪ್ರೀತಿಸಿದಖಿಲ ಭೋಗಂಗಳ...ಗೆಯ್ದು । ...ಶಶಿವೀಧಿಗಳ ೪: ೧೨೧–೧೨೩

ಇಂದು ಶಿವನಸಮುದ್ರದಲ್ಲಿ ಎತ್ತರವಾದ ಪಶ್ಚಿಮಾಭಿಮುಖವಾದ ಮಹಾದ್ವಾರದಿಂದ ಕೂಡಿದ ಸೋಮೇಶ್ವರದೇವಾಲಯವಿದೆ. ದೇವರು ಪೂರ್ವಾಭಿಮುಖನಾಗಿ ಪ್ರತಿಷ್ಠೆಗೊಂಡಿದ್ದಾನೆ. ನವರಂಗದ ಬಲ ಮತ್ತು ಎಡಗಡೆಗಳಲ್ಲಿ ಗಣೇಶ ಮತ್ತು ಸುಬ್ರಹ್ಮಣ್ಯರ ವಿಗ್ರಹಗಳಿವೆ. ಪ್ರವೇಶದ ಒಳಗಡೆ ಸೂರ್ಯ ಚಂದ್ರರ ಮೂರ್ತಿಗಳಿವೆ. ಮಧ್ಯದ ಮೇಲ್ಚಾವಣಿಯಲ್ಲಿ $4\frac{1}{2}$ ಅಡಿ $\times$ 2 ಅಡಿಯ ದೊಡ್ಡ ಮೀನಿದೆ. ದೇವಾಲಯದ ಮೂರ್ತಿ ಮೀನಾಕ್ಷಿ $4\frac{1}{2}$ಅಡಿ ಎತ್ತರವಿದ್ದು 4 ಕೈಗಳಿಂದ ಕೂಡಿದೆ.

ರಂಗನಾಥ ದೇವಾಲಯ ದ್ರಾವಿಡಶೈಲಿಯ ದೊಡ್ಡಕಟ್ಟಡ. ಇಲ್ಲಿನಮೂರ್ತಿ ಶ್ರೀರಂಗಪಟ್ಟಣದ ಮೂರ್ತಿಗಿಂತ ಚಿಕ್ಕದು. ಜಗನ್ಮೋಹನರಂಗನಾಥ ಎಂದು ಕರೆಯುತ್ತಾರೆ. ತಕ್ಷಕನು ಈ ದೇವರನ್ನು ಪೂಜಿಸಿದನೆಂದು ಪ್ರತೀತಿ. ಕಾವೇರಿಯ ಮೂರ್ತಿ ಕೂಡ ಇಲ್ಲಿದೆ.

ಗುರು ಲಿಂಗ ಜಂಗಮಚಾರಿತ್ರದಲ್ಲಿ ನಂಜರಾಯನು 'ಇಂದುಧರನಿಗೆ ನಂಜುಂಡೇಶ್ವರನಿಗೆ ಚಂದದಿ ಗುಡಿ ಮಂಟಪದ ಮುಂದೆಯುಪ್ಪರಿಗೆ ಪ್ರಾಕಾರವ ನಿರ್ಮಿಸಿ । ಯೆಂದು ಸತ್ಕೀರ್ತಿಪಡೆದನು' ೪–೧೩೫ ಎಂದಿದೆ.

273ನಂಜನಗೂಡು ಕ್ರಿ. ಶ. 1488 ರ ಶಾಸನದ ಪ್ರಕಾರ ದೇವರಾಯಪುರ (ಬದನವಾಳು ತಗಡೂರುಸ್ಥಳ) ವನ್ನು ಶ್ರೀಕಂಠೇಶ್ವರನ ನೈವೇದ್ಯ ಅಲಂಕಾರಗಳಿಗಾಗಿ ದತ್ತಿಬಿಟ್ಟಿದ್ದಾನೆ. ನಂಜನಗೂಡಿನ ನಂಜುಂಡೇಶ್ವರದೇವಾಲಯ ದ್ರಾವಿಡಶೈಲಿಯ ಸೊಗಸಾದ ಗೋಪುರವುಳ್ಳ ದೊಡ್ಡದೇವಾಲಯ. ನವರಂಗದ ಎಡ ಮತ್ತು ಬಲಪಾರ್ಶ್ವಗಳಲ್ಲಿ ಚಿಕ್ಕಗುಡಿಗಳಿದ್ದು ಲಿಂಗಗಳನ್ನು ಪ್ರತಿಷ್ಠಿಸಿದ್ದಾರೆ. ಪ್ರಾಕಾರದ ದಕ್ಷಿಣಪಾರ್ಶ್ವದಲ್ಲಿ 63ಪುರಾತನರ ಲೋಹದ ಮತ್ತು ಕಲ್ಲಿನಪ್ರತಿಮೆಗಳಿವೆ. ಪಶ್ಚಿಮದಲ್ಲಿ ಸಾಲಾಗಿಲಿಂಗಗಳಿವೆ. ಉತ್ತರದಲ್ಲಿ ಶಿವನ ಪಂಚವಿಂಶತಿಲೀಲೆಗಳನ್ನು ನಿರೂಪಿಸುವ ಪ್ರತಿಮೆಗಳಿವೆ. ಪಾರ್ವತಿಯ ವಿಗ್ರಹ ಸೊಗಸಾಗಿದೆ. ನಾರಾಯಣನ ವಿಗ್ರಹ ಸುಂದರವಾಗಿದೆ. ದೇವಸ್ಥಾನದ ಉತ್ತರಭಾಗದಲ್ಲಿ ಸುಬ್ರಹ್ಮಣ್ಯನ ವಿಗ್ರಹವಿದೆ. ಕೈಪಿಡಿಯಲ್ಲಿರುವ ಗೂಡುಗಳಲ್ಲಿ ಅಷ್ಟದಿಕ್ಪಾಲಕರು ವೀರಭದ್ರ ನಾರಾಯಣ 10 ವಿಧದ ದಕ್ಷಿಣಾಮೂರ್ತಿಗಳು 7 ವಿಧದ ತಾಂಡವೇಶ್ವರಮೂರ್ತಿಗಳು, 16 ವಿಧದ ಸುಬ್ರಹ್ಮಣ್ಯಮೂರ್ತಿಗಳು 25 ಲೀಲಾಮೂರ್ತಿಗಳು, 32 ವಿಧದ ಗಣಪತಿಮೂರ್ತಿಗಳು, ಸಪ್ತಮಾತೃಕೆಯರ ಮೂರ್ತಿಗಳಿದ್ದು ಶಿಲ್ಪಶಾಸ್ತ್ರದ ದೃಷ್ಟಿಯಿಂದ ಕುತೂಹಲಕರವಾಗಿವೆ. ಚೈತ್ರಮಾಸದಲ್ಲಿ ದೊಡ್ಡಜಾತ್ರೆ ನಡೆಯುತ್ತದೆ, ಚಿಕ್ಕಜಾತ್ರೆ ಶ್ರೀಕಂಠಮುಡಿ ಮತ್ತು ಗಿರಿಜಾಕಲ್ಯಾಣಗಳು ಇತರ ಮುಖ್ಯ ಉತ್ಸವಗಳು,

ವೀರಶೈವ ವಿಚಾರ

ಬಸವಾದಿ ಪ್ರಣೀತ ವೀರಶೈವಧರ್ಮದ ಇತಿಹಾಸ ಬೆಳವಣಿಗೆಗಳನ್ನು ತಿಳಿಯಲು ಲಕ್ಕಣದಂಡೇಶನ ಶಿವತತ್ವಚಿಂತಾಮಣಿ, ಗುಬ್ಬಿ ಮಲ್ಲಣಾರ್ಯನ ವೀರಶೈವಾಮೃತ ಮಹಾಪುರಾಣ, ವಿರೂಪಾಕ್ಷ ಪಂಡಿತನ ಚೆನ್ನಬಸವಪುರಾಣ, ಸಿದ್ಧನಂಜೇಶನ ಗುರುರಾಜ ಚಾರಿತ್ರಗಳು ಆಕರವಾಗಿ ನಿಲ್ಲುತ್ತವೆ.ಈ ಕೃತಿಗಳು ತಮ್ಮ ಕಾಲದವರೆಗಿನ ಇತಿಹಾಸವನ್ನು ಸಂಗ್ರಹಿಸಿವೆ. ಹೀಗೆ ಸಂಗ್ರಹಿಸುವಾಗ ಹಿಂದಿನ ಕೃತಿಗಳನ್ನು ಆಧರಿಸಿವೆ. ಜೊತೆಗೆ ತಮ್ಮ ಸಮಕಾಲೀನ ವೀರಶೈವ ಸಂಗತಿಗಳನ್ನು ವಿವರಿಸುತ್ತವೆ. ಈ ಮಾಲಿಕೆಗೆ ಮರುಳಸಿದ್ಧ ವಿರಚಿತ ಗುರು ಲಿಂಗ ಜಂಗಮ ಚಾರಿತ್ರ ಕೂಡ ಸೇರುತ್ತದೆ. ಕೃತಿಯ ಮೊದಲ ಮೂರು ಆಶ್ವಾಸಗಳಲ್ಲಿ ಕೈಲಾಸ ವರ್ಣನೆ, ಲೋಕಸೃಷ್ಟಿ, ಲಂಕಾಪಟ್ಟಣದ ಮತ್ಸ್ಯಕೇಶ್ವರ, ಸೇತು ಮಧ್ಯದ ರಾಮೇಶ್ವರ, ಕಾಶಿಯ ವಿಶ್ವನಾಥ ಮುಂತಾಗಿ ಕ್ಷೇತ್ರ ಮಾಹಾತ್ಮ್ಯಗಳಿವೆ. ಕುಂಭಕೋಣ ಶ್ರೀಶೈಲ ತಿರುಮಕೂಡಲು ತಲಕಾಡು ಶಿವಗಂಗೆ ಹಂಪೆ ಉಳುವೆ ಗೋಕರ್ಣಗಳಿಗೆ ಸಂಬಂಧಿಸಿದ ಐತಿಹ್ಯಗಳಿವೆ.

ನಾಲ್ಕನೆಯ ಸಂಧಿಯಲ್ಲಿ ಉಮ್ಮತ್ತೂರು ರಾಜವಂಶದ ಸ್ಥಾಪನೆ, ಸುತ್ತೂರು ನಂಜನಗೂಡು ಹೊಂಡರಬಾಳು ನಮಸ್ಕಾರಪುರ ಕುಂತೂರ ಸಿಂಹಾಸನಗಳನ್ನು ಮಾಡಿದ ವಿವರಗಳಿವೆ. ಐದನೆಯ ಸಂಧಿಯಲ್ಲಿ ತುಂಗಗಿರಿಯ ಅನ್ನದಾನಿಮಲ್ಲೇಶ ಬಾಳೆಹಳ್ಳಿಮಠ ಕಲ್ಯಾಣ ಸಾರಂಗಮಠ ಮಳೆಯಮಲ್ಲೇಶ ಮುಂತಾದ ಚರ

ಮೂರ್ತಿಗಳ ವಿವರಗಳಿವೆ.

ವೀರಶೈವ ಧರ್ಮದ ಬಗೆಗಳು ಮತ್ತು ಕಂಥೆಗಳ ಉಲ್ಲೇಖ ಗುರುರಾಜಚಾರಿತ್ರದಲ್ಲಿ ಮೊದಲಬಾರಿಗೆ ಲಭ್ಯವಾಗಿದ್ದು ಹೀಗಿವೆ—

ಮೊದಲೊಳು ಪಂಚವಣ್ಣಿಗೆಯಡಾರ್ಯ ದ್ವಿತಿಯದೊಳು
ಸದಮಲದ ಪಡವಿಡಿಯ ಸ್ವಾಮಿಯೂ ತೃತೀಯದೊಳು
ವಿದಿತ ಮುತ್ತಿನಕಂಥೆಯಯ್ಯ ತ್ರಿವಿಧಾಭಿಧಾನಂ ಸಿದ್ಧಮಲ್ಲೇಶಗೇ
ಒದಗಲಾ ಮೂಲವೃಕ್ಷದ ಶಾಖೆ ದೆಸೆದೆಸೆಗೆ
ಮುದದಿ ಪರಿಯಲು ಚಿಗುರು ಮೊಗ್ಗೆ ಪೂ ಕಾಯ್ಹಣ್ಣು
ತೇದಿಯೊಳುಂ ಪಲವು ಪೆಸರ್ವೆತ್ತಂತೆ ಮಹೇಶ್ವರರ ಬಗೆಯು ಬೇರಾದುದು ೩–೧೮

ತಮ್ಮ ಸ್ವೇಚ್ಛಾಪುರಗಳಲ್ಲಿ ಮಠಗಳ ಕಟ್ಟಿ
ಸುಮಾನದಿಂದಿರಲ್ಕವರ ಶಿಷ್ಯಪ್ರಚಯ
ಸಮ್ಮದದೊಳಾ ಪುರಂಗಳ ನಾಮವಿಡಿದು ಕರೆಯಲ್ಕದೇ ವರ್ಗವಾಯ್ತು
ಕಮ್ಮಗೋಲನ ಗೆಲುವ ಚರಮೂರ್ತಿಗಳು ಕೂಡಿ
ತಮ್ಮ ಹೃತ್ಪದದಿಂದ ಚರಿಸುತ್ತಮಿರ್ದರ್ ಜ
ಗಂ ಮೋಹಿಸುವ ದಿವ್ಯ ಚರವೇಷಮಂ ಧರಿಸಿ ಪಾವನ ಚರಿತ್ರರೊಲಿದು ೩–೧೯

ಅವರೊಳೊರ್ವಂ ವೀರಮಾಹೇಶ ಚಿನ್ನದಿಂ
ಸವೆದ ಕಂಥೆಯ ಧರಿಸಲವರ ಕರವನಜ ಸಂ
ಭವರು ಚಿನ್ನದ ಕಂಥೆಯುಂಶವೆಂಬರು ಕಬ್ಬಿನದ ಕಂಥೆಯೊಬ್ಬಯ್ಯನು
ಸುವಿಲಾಸದಿಂ ಧರಿಸಲವರ ಶಿಷ್ಯಪ್ರಚಯ
ವಿವರಿಸಲು ತನ್ನಾ ವರ್ಗವಿಡಿದರು ಕಣಾ
ತವೆ ಪಟ್ಟುಗಂಥೆಯುಂ ಧರಿಸಿದಯ್ಯನ ಶಿಷ್ಯರಾ ಪಟ್ಟುಗಂಥೆ ವರ್ಗಂ ೩–೨೦

ವಿಲಸಿತದ ಪಚ್ಚೆಯದ ಕಂಥೆಯಯ್ಯನ ಶಿಷ್ಯ
ಕುಲವು ಪಚ್ಚೆಯ ಕಂಥೆಯುಂಶವೆಂಬರು ಗೋಣಿ
ಯಲಿ ಮಾಡಿ ಕಂಥೆಯುಂ ಧರಿಸಿದಯ್ಯನ ಶಿಷ್ಯವರ್ಗ ಗೋಣಿಯ ಕಂಥೆಯು
ಹೊಲಿದು ಜಾಳಿಗೆಗಂಥೆ ಧರಿಸಿದಯ್ಯನ ಶಿಷ್ಯ
ರೊಲಿದು ಜಾಳಿಗೆಗಂಥೆ ವರ್ಗವೆಂದಾಡುವರು
ಬಲವನ್ ಮಹೇಶ ಕುಪ್ಪಸಗಂಥೆಯುಂ ಧರಿಸೆ ತನ್ನಾಮ ಬಗೆಯಾದುದು ೩–೨೧

ಧರೆಗೆ ದಕ್ಷಿಣ ಕಾಶಿಯೆಂದೆನಿಸುತಿಹ ಕಕುಂದ್
ಗಿರಿಯ ಮೇಲಣ ಗವಿಯೊಳೊಬ್ಬಯ್ಯ ನೆಲಸಲೊಡ
ನರರೆ ಮೇಗಣ ಗವಿಯ ಬಗೆಯೆಂದು ತತ್ ಶಿಷ್ಯ ಸಂಪ್ರದಾಯಂ ಪೇಳ್ವುದಂ
ಹಿರಿದಪ್ಪ ಹುಲಿಯ ಚರ್ಮದ ಕಂಥೆಯುಂ ಧರಿಸಿ
ಮೆರೆವಯ್ಯಗಾ ವರ್ಗನಾಮಂ ಪ್ರಸಿದ್ಧವುಂ
ಪರಮಸತ್ಪುರುಷರಲ್ಪವ ಪಿಡಿಯೆ ಲೋಕದೊಳು ಯೋಗ್ಯಂ ವಿಶೇಷವಹುದು ೩–೨೨

ಇದೇ ಆನುಪೂರ್ವಿಯಲ್ಲಿ ಮರುಳುಸಿದ್ಧನೂ ಬಗೆ ಮತ್ತು ಕಂಥೆಗಳನ್ನು ಹೇಳಿದ್ದಾನೆ.—

ರೇವಣ ಸಿದ್ಧೇಶ್ವರ ಶಿಷ್ಯರಂ ಜಗ । ತ್ಪಾ[ವನರು] ರುದ್ರಮುನಿಪ
ದೇವರ ಶಿಷ್ಯರು ಶಾಂತಮಲ್ಲೇಶ್ವರ। ದೇವರು ಮಹತ್ತುಗೂಡಿ ೨–೯೬

ಪೊಡವಿಯೊಳಗೆ ದೇಶಾಂತರವ ಮಾಡುತ। ಪಡೆ...ಜೆಗೊಳಲ
ನುಡಿವರು ಪೊಡವಿಡಸ್ವಾಮಿಯೆಂದೆಲ್ಲರು। ಬಿಡದೆ ಬಂದರು ಕುಂಭಕವರು ೨—೯೭

* * *

ಪಡುವೀಡ ಸ್ವಾಮಿಯಿದ್ದೆಡೆಗೆ ಶೈವರು ಬಂದು । ಪೊಡವಿಯ ಮೇಲಡ್ಡಬಿದ್ದು
ಮೃಡಮೂರ್ತಿ...ನೆಂದನೆನ...।...ಬಂದುದು ಮಹತ್ತೆಲ್ಲ ೨–೧೦೬

* * *

ಚಿನ್ನದ ಕಂತೆ ಬೆಳ್ಳಿಯ ಕಂತೆ ಕಬ್ಬುನ । ರನ್ನದ ಕಂತೆ [ತಾಮ್ರಗಳ]
ಚಿನ್ನ ಮೇಲಳವಟ್ಟ ಮುತ್ತಿನಗಂತೆಯು । ಉನ್ನತ ಮಹಿಮರೆಯಿದಿದರು ೨–೧೦೮

ಕಾವಿಯ ಕಾಗಿನ ಕುಪ್ಪಸಕಂತೆಯು । ದೇವಾ [ಂಗ ಸಕಲಾತಿಗಳ]
ತೀವಿದ ಕಂಬಳಿ ಪಚ್ಚೆಯ ಕಂತೆಯು । ದೇವರುಗಳು ಬಂದರೆಲ್ಲ ೨–೧೦೯

ಉಮ್ಮತ್ತೂರಿನಲ್ಲಿ ನಂಜರಾಜನು ಆಳುತ್ತಿರುವಾಗ ಅವನ ಮಹತ್ತನ್ನು ತಿಳಿದ ಪಡುವೀಡಸ್ವಾಮಿಯು ತನ್ನ ಶಿಷ್ಯರಿಗೆ ಉಪಕರಣಗಳನ್ನಿತ್ತು ಕಳಿಸಿದನು. ಅವರು ಬೀಡ ವೊಂದು ಹಲವು ಕೊಂಬೆಗಳಾದಂತೆ, ಹಸುವಿನ ಹಾಲು ಮೊಸರು ತುಪ್ಪ ಆಳಿಯಾದ ಹಾಗೆ, ಚಿನ್ನ ಹಲವು ಬಗೆಯ ಅಭರಣಗಳಾದಂತೆ ವಸುಧೆಯೊಳಗೆ ಚರಮೂರ್ತಿಗಳು ಚರಿಸಿದರು. ಆ ವಿವರಗಳನ್ನು ಮರಳುಸಿದ್ಧ ಹೀಗೆ ಹೇಳಿದ್ದಾನೆ—

ಪರಶಿವನಿಂದ ಸದಾಶಿವಮೂರ್ತಿಯುಮ್ಮ । ವರಿಂದ ಮಾಹೇಶ್ವರನು
ವರ ಮಾಹೇಶ್ವರ ರೇವಣಸಿದ್ಧೇಶ್ವರನ । ವರಿಂದ ರುದ್ರಮುನಿಯು ೨–೧೪೭

ಅವರ ಶಿಷ್ಯರು ಶಾಂತಮಲ್ಲಿಕಾರ್ಜುನ ದೇವ । ರವರಿಗೆ ಪಡುವೀಡಸ್ವಾಮಿ
ಅವರ ಹಸ್ತೋದ್ಭವ ಮಹಾತ್ರೇಶ್ವರ...।...ಸಹೋದರವಿನ್ನು ೨–೧೪೮

ಚೆನ್ನಬಸವರಾಜ ಬಸವಲಿಂಗೇಶ್ವರ । ಚೆನ್ನಮಲ್ಲೇಶ್ವರರೆಂದು
ಅನ್ನದಾನೇಶ್ವರ ಶಂಕರದೇವ...।...ರೇಶ್ವರ ಕೇಳು ೨–೧೪೯

ಶಾಂತಮಲ್ಲೇಶ್ವರ ಶಾಂತಮಲ್ಲಿಕಾರ್ಜುನಸ್ವಾಮಿ । ಶಾಂತವೀರೇಶ್ವರನೆಂದು
ಶಾಂತಲಿಂಗೇಶ್ವರ ರೇವಣಸಿದ್ಧೇಶ್ವರ । ಮುಂತಾದ ಶರಣರು ಎಲ್ಲ ೨–೧೫೦

ಸಿದ್ಧಮಲ್ಲೇಶ್ವರ ಶಿವಲಿಂಗದೇವರು । ರುದ್ರಮುನಿಯು ಪರ್ವತೇಶ
ಸಿದ್ಧರಾಮೇಶ್ವರ ಶಿಷ್ಯ [ಶಿವ] ನಾಚಾರ್ಯನು । ಸಿದ್ಧವೀರಣ ಗುರುದೇವ ೨–೧೫೧

ಗುರುಮಲ್ಲೇಶ್ವರ ಪರ್ವತಮಲ್ಲೇಶ । ಗುರುಲಿಂಗೇಶ್ವರನಿಂದ
ಮರುಳುಸಿದ್ಧೇಶ್ವರ ನೀಲಕಂಠೇಶ್ವರ । ಕರಿಯುಸಿದ್ಧೇಶ್ವರ ಕೇಳು ೨–೧೫೨

ಶಿವನ ಸಹಸ್ರನಾಮಂಗಳ ಧರಿಸಿಯೆ । ಶಿವಲಿಂಗವನು ಪೂಜಿಸುತ
ಶಿವಶಾಸ್ತ್ರಂಗಳ ಕೇಳುತ ಮಹತ್ತು । ಅವನಿಯೊಳಗೆ ಚರಿಸುತಿಹರು ೨–೧೫೩

ಮರುಳುಸಿದ್ಧ ವೀರಶೈವ ಪರಂಪರೆಯನ್ನು ಹೇಳಿಕೊಂಡು ಬಂದು ಉಮ್ಮತ್ತೂರು ನಂಜರಾಯನ ಕಾಲದಲ್ಲಿ ಸ್ಥಾಪನೆಯಾದ ಐದುಮಠಗಳ ವಿವರವನ್ನು ಹೀಗೆ ಕೊಡುತ್ತಾನೆ—

ಸೌರಾಷ್ಟ್ರದಿಂದ ಹೊರಟ ದೇಪಣ್ಣ, ನಂಜರಾಯ, ಸೋಮರಾಯರು ಉಪ್ಪಯಣವನ್ನೆತ್ತಿ ಸುತ್ತೂರಿಗೆ ಬಂದರು. ಅಲ್ಲಿನ ಗೋಪಾಲಕೃಷ್ಣ ವಿನಾಯಕ ಹರಿಹರ ಪಾರ್ವತಿ ಮತ್ತು ಸೋಮೇಶ್ವರರನ್ನು ಪೂಜಿಸಿ ಇದ್ದರು. ಆಗ ಅಲ್ಲಿಗೆ ಚರಮೂರ್ತಿಗಳು ಭಿಕ್ಷಕ್ಕೆ ಬಂದರು. ಅವರನ್ನು ದೊರೆಗಳು ವಿಚಾರಿಸಿ ಬೆಳಗುಂದದಿಂದ ಬಂದವರೆಂದು ತಿಳಿದು ಉಪಚರಿಸಿ ಕಳಿಸಿದರು.

ನಂಜರಾಜನು ಪಟ್ಟಾಭಿಷಕ್ತನಾದ ಅನಂತರ ಭುಜಂಗೇಶ್ವರನು ಅವನ ಕನಸಿನಲ್ಲಿ ಬಂದು ಕರ ಮನ ಭಾವದಲ್ಲಿ ನೀನು ಲಿಂಗವನ್ನು ಧರಿಸೆಂದನು. ಆಗ ನಂಜರಾಯನು ಪ್ರಧಾನಿ ಸೆಟ್ಟರಮಲ್ಲಯ್ಯನನ್ನು ಕರೆದುಕೊಂಡು ವೈಹಾಳಿಗೆಂದು ಹೊರಟು ಹೇಮಾದ್ರಿ (ಕುಂತೂರು)ಗೆ ಹೋಗಿ ಸೋಮೇಶನಿಗೆ ನಮಸ್ಕರಿಸಿದನು.ಅಲ್ಲಿಂದ ಬೆಳಗುಂದಕ್ಕೆ ಹೋಗಿ ವೀರೇಶ್ವರನಿಗೆ ಪೂಜೆಮಾಡಿಸಿದನು. ಅಲ್ಲಿದ್ದ ಅಷ್ಟಶಿಖಿಯ ಚೆನ್ನಬಸವೇಶ್ವರ, ಚೆನ್ನೇಶ, ಪಟ್ಟದ ಹಿರಿಯರಾ ಶಿವರಾತ್ರೆಯಾರ್ಯರಿಗೆ ಕಾಣಿಕೆಕೊಟ್ಟು ನನ್ನ ಭವವನ್ನು ಛೇಧಿಸಿರೆಂದನು. ಆಗ ಅವರು ನಮ್ಮಿಂದ ಆಗುವುದಿಲ್ಲ ನಮ್ಮ ಆಚಾರ್ಯರು ಸುತ್ತೂರಿನಲ್ಲಿದ್ದಾರೆ

ಅವರನ್ನು ಕರೆಸು ಎಂದರು. ಸುತ್ತೂರಿನಿಂದ ಬಂದ ಆಚಾರ್ಯರನ್ನು ಕಂಡು ಚರಮೂರ್ತಿಗಳು ಅವರನ್ನು ಪಂಡಿತಾರಾಧ್ಯರ ಸ್ಥಳವೆಂದು ಹೇಳಿ ಕೊಂಡಾಡಿದರು. ಅವರನ್ನು ನಂಜರಾಯ ದಂಡಿಗೆಯಲ್ಲಿ ಕೂಡಿಸಿ ಕರೆತಂದು ಶುಭಲಗ್ನದಲ್ಲಿ ಅವರಿಂದ ಹಸ್ತ ಮಸ್ತಕ ಸಂಯೋಗವನ್ನು ಹೊಂದಿದನು. ಅವರಿಂದ ಕರಸ್ಥಲದ ಲಿಂಗವನ್ನು ಪಡೆದನು. ಷಟ್ದರ್ಶನದವರಿಗೂ ದಾನ ಧರ್ಮಗಳನ್ನು ನಡೆಸಿ ಹೆಸರಾದನು.

ನಂಜನಗೂಡು ಜಾತ್ರೆಗೆ ಚರಮೂರ್ತಿಗಳು ಬಂದರು. ನಂಜರಾಯನು ಸೆಟ್ಟರ ಮಲ್ಲಯ್ಯನೊಡನೆ ಮಠಗಳನ್ನು ಮಾಡುವ ಬಗ್ಗೆ ಸಮಾಲೋಚಿಸಿದನು. ಅದರಂತೆ ಶಿವ ರಾತ್ರಿಯಾರ್ಯ, ಶಿವಪೂಜೆಯಾರ್ಯ, ತೂಗಾದಿಯ ಬಸವೇಶ್ವರ, ಜಡೆಯ ಕೂಡುವ ಮರುಳುಸಿದ್ಧೇಶ್ವರ, ಬಾಲಬ್ರಹ್ಮಚಾರಿ ಸಾಲೂರ ಶಾಂತೇಶ್ವರನಿಗೆ ಮಳೆಗಾಲದ ಬಿನ್ನಹವೆಂದು ಹೇಳಿ ಉಳಿಸಿಕೊಂಡು ಉಮ್ಮತ್ತೂರಿಗೆ ಬಂದರು.

ನಂಜರಾಜನು ಸುತ್ತೂರು ಶಿವರಾತ್ರಿಯಾರ್ಯನಿಗೆ ಪಟ್ಟಕಟ್ಟಿ ನಾಣ್ಯವನ್ನು ಕೊಟ್ಟು ತೊತ್ತು ಬಂಟರನ್ನು ನೇಮಿಸಿ ಕಳಿಸಿದನು. ಶಿವಪೂಜೆಯಾರ್ಯನಿಗೆ ಸಾವಿರಕಲ್ಲ ಮಂಟಪದಲ್ಲಿ ಪಟ್ಟಕಟ್ಟಿದನು. ಅವನ ಕರದಲ್ಲಿ ಗಂಗಾಧರ ಉದಿಸಿ ಗರಳಪುರದಲ್ಲಿ ನಿಂತನು. ಕುಂತೂರಿನಲ್ಲಿ ಸಾಲೂರ ಶಾಂತೇಶ್ವರನಿಗೆ ಪಟ್ಟಕಟ್ಟಿದನು. ಶಿವನ ಸಮುದ್ರದಲ್ಲಿ ಜಡೆಯಕೂಡುವ ಸ್ವಾಮಿ ಮರುಳಸಿದ್ಧೇಶನಿಗೆ ಪಟ್ಟಕಟ್ಟಿದನು. ಅವರಿಗೆ ಎರಗಂ ಒಳ್ಳಿಯನ್ನು ದಾನವಿತ್ತನು. ಉಮ್ಮತ್ತೂರಿನ ಉಪ್ಪರಿಗೆಯ ಮಠಕ್ಕೆ ತೂಗಾದಿಯ ಸಿದ್ಧಬಸವೇಶ್ವರನಿಗೆ ಪಟ್ಟಕಟ್ಟಿದನು. ಹೊಂಡರಬಾಳನ್ನು ಸೆಟ್ಟರಮಲ್ಲಯ್ಯ ಕಟ್ಟಿಗೆಗೆಂದು ನೇಮಿಸಿದನು.

ಸುತ್ತೂರು ನಂಜನಗೂಡು ಹೊಂಡರಬಾಳು ನಮಸ್ಕಾರಪುರ ಕುಂತೂರ ಸಿಂಹಾಸನಗಳನ್ನು ಮಾಡಿ ನಂಜರಾಯ ಮೆರೆದನು.

ನಂಜರಾಯನು ಪಂಚಮಠಗಳನ್ನು ಸ್ಥಾಪಿಸಿದ ಸಂಗತಿಯನ್ನು ಸಮಕಾಲೀನ ಶಾಸನಗಳು ಬೆಂಬಲಿಸುತ್ತವೆ.—

ಸೊತ್ತಿಯೂರು (ಕ್ರಿ.ಶ. 1015–16), ಶೋತ್ರಿಯಗ್ರಾಮ, ಶ್ರೋತ್ರಿಯೂರು (ಕ್ರಿ.ಶ. 1032), ಸೊತ್ತಿಯೂರು (13ನೆಯಶತಕ), ಸುತ್ತೂರು (ಕ್ರಿ.ಶ. 1530) ಎಂದು ಶಾಸನೋಕ್ತವಾದ ಸುತ್ತೂರು ಪ್ರಾಚೀನ ಗ್ರಾಮಗಳಲ್ಲಿ ಒಂದು. ಹೊಯ್ಸಳರ ಕಾಲದಲ್ಲಿ ಈ ಪ್ರಾಂತದ ರಾಜಧಾನಿ ಕೂಡ ಆಗಿದ್ದಿತು. ಅಲ್ಲಿ ಈಶಾನ್ಯ ಈಶ್ವರವೊಡೆಯ ಮತ್ತು ಮೂಲಸ್ಥಾನ ಮುಡೆಯರ ದೇವಾಲಯಗಳಿದ್ದುವು. ಈಶಾನ ಈಶ್ವರವೊಡೈಯಾರ್ ಎಂಬುದು ಸುತ್ತೂರುಮಠದ ಗುರುಪರಂಪರೆಯಲ್ಲಿ ಎರಡನೆಯ ಗುರುವಿನ ಹೆಸರಾಗಿತ್ತು ಎಂದು ಭಾವಿಸಲಾಗಿದೆ.[1] ಆದರೆ ಅದು ದೇವರ ಹೆಸರಾಗಿದ್ದು ಆ ದೇವನ ಹೆಸರಿನಲ್ಲಿ ದೇವಾಲಯವೊಂದು

———

1 ಶಿವರಾತ್ರಿ ಶಿವಾಚಾರ್ಯ ಪುಟ XIII-XIV, 1961

ಅಸ್ತಿತ್ವದಲ್ಲಿತ್ತೆಂಬುದನ್ನು ಶಾಸನವುಸೂಚಿಸುತ್ತದೆ ಎಂದು ಡಾ. ಬಾ. ರಾ. ಗೋಪಾಲರು ಅಭಿಪ್ರಾಯ ಪಟ್ಟಿದಾರೆ, "ಈಶಾನಈಸ್ವರವೊಡೆ [ಯಾರ್] ದೇಗುಲದ ಮೂಡಣ ದೆಸೆಯ ಮಠದ ಪೂವಿನಸೆಟ್ಟಿ" ಎಂದು 215 ನಂಜನಗೂಡು ಕ್ರಿ. ಶ. 1032 ಶಾಸನ ದಿಂದ ತಿಳಿದುಬರುವುದರಿಂದ ಆ ಕಾಲಕ್ಕಾಗಲೆ ಸುತ್ತೂರಿನಲ್ಲಿ ಒಂದು ಮಠವಿದ್ದಿತೆಂದು ತಿಳಿದು ಬರುತ್ತದೆ.

ಸುತ್ತೂರುಮಠದ ಪೀಠಪರಂಪರೆಯ ಉಲ್ಲೇಖ ಮುಂದೆ 236 ನಂಜನಗೂಡು ಕ್ರಿ. ಶ.1503 ರಲ್ಲಿ ಕಂಡುಬಂದು ಅದರಲ್ಲಿ–

1. ದುಂದುಭಿ ಸಂವತ್ಸರದ ಮೂಖ ಶು ೧೦ ಸನಿವಾರದಲೂ ಸಜನಸುದ್ಧ ಶಿವಾಚಾರ ಸಂಪು

2. ನರಾದಂತ ಸಿವರಾತ್ರೆದೇವರ ನಿರೂಪದಿಂದ ಲಿಂಗಣ ಒಡೆಯರು ಬಸವಪ್ರತಿಷ್ಠೆಯ ಮಾಡಿದ ಪುಣ್ಯದ ಸೇವೆ.

ಎನ್ನುವ ವಿವರ ದೊರೆಯುತ್ತದೆ. ಕಾಲಮಾನದ ದೃಷ್ಟಿಯಿಂದ ಗುರು ಲಿಂಗ ಜಂಗಮ ಚಾರಿತ್ರದಲ್ಲಿ ಬರುವ ಶಿವರಾತ್ರೆಯಾರ್ಯರು ಇವರೇ ಎಂದು ಭಾವಿಸಬಹುದು. ಉಮ್ಮತ್ತೂರ ನಂಜರಾಜನು ಈ ಶಿವರಾತ್ರೆದೇವರಿಗೆ ಪಟ್ಟಕಟ್ಟಿ ಮಠವನ್ನು ಮಾಡಿ ಕೊಟ್ಟಿದ್ದಾನೆ.

ಪಟ್ಟದ ಭಂಡಾರಿ ಒಸವಪ್ಪಒಡೆಯರ ಉಲ್ಲೇಖ 395 ಮತ್ತು 396 ನಂಜನಗೂಡು 1514 ರ ಶಾಸನಗಳಲ್ಲಿ ಬರುತ್ತದೆ. ಇವರ ಗುರು ಶಿಷ್ಯಪರಂಪರೆಯನ್ನು ಘನಲಿಂಗದೇವರು ಹೀಗೆ ಹೇಳಿದ್ದಾರೆ–

ಸುತ್ತೂರು ಸಿಂಹಾಸನದ ಪರ್ವತದೇವರ ಶಿಷ್ಯರು
ಭಂಡಾರಿ ಬಸವಪ್ಪೊಡೆಯ ದೇವರು
ಆ ಭಂಡಾರಿ ಬಸವಪ್ಪೊಡೆಯ ದೇವರ ಶಿಷ್ಯರು ಕೂಗಲೂರು ನಂಜಯ್ಯದೇವರು
ಆ ನಂಜಯ್ಯದೇವರ ಕರಕಮಲದಲ್ಲಿ ಉದಯವಾದ ಶರಣವೆಣ್ಣಯ್ಯ ನಾನು
ಎನ್ನಗುರುವಿನ ಗುರು ಪರಮಾರಾಧ್ಯ ತೋಂಟದಾರ್ಯನಿಗೆ
ಗುರುಭಕ್ತಿಯಿಂದೆನ್ನ ಶರಣುಮಾಡಿದರು[2]

---

1 ಎಪಿಗ್ರಾಫಿಯ ಕರ್ಣಾಟಕ III ಪೀಠಿಕೆ 72–73, ಕನ್ನಡಅಧ್ಯಯನಸಂಸ್ಥೆ ಮೈಸೂರು

2 ಘನಲಿಂಗದೇವರ ವಚನಗಳು–ಸಂಪಾದಕರು : ಶ್ರೀ ಶಿವರಾತ್ರಿರಾಜೇಂದ್ರಸ್ವಾಮಿಗಳು, ಜಗದ್ಗುರು ಶಿವರಾತ್ರೀಶ್ವರ ಗ್ರಂಥಮಾಲಾ, ಮೈಸೂರು. 1964.

ಈ ಮಠದ ಪರಂಪರೆಯಲ್ಲಿ ಬಂದ ಶಿವರಾತ್ರೀಶ್ವರರು ವೃಷಭೇಂದ್ರ ವಿಜಯಪುರಾಣವನ್ನು, ಘನಲಿಂಗದೇವರು ವಚನಗಳನ್ನು ಬರೆದಿದ್ದಾರೆ. ಕಳಿಲೆ ಕೆಂಪನಂಜಾರ್ಯ, ನಮಸ್ಕಾರಪುರೀ ಸಿದ್ಧನಂಜಾರ್ಯ, ಸುತ್ತೂರು ಸಿಂಹಾಸನದ ಗುರು ನಂಜಾರ್ಯನ ಶಿಷ ಚೆನ್ನಬಸವ ಮೊದಲಾದವರೂ ಸಮಕಾಲೀನರು. ಇವರ ಇಷ್ಟಾನುಸಾರ ಶಿವಾಧಿಕ್ಯ ಶಿಖಾಮಣಿ ಟೀಕೆಯನ್ನು ಸೋಸಲೆ ರೇವಣಾರ್ಯ (ಕ್ರಿ. ಶ. ಸು. 1623) ಬರೆದಿದ್ದಾನೆ. ಅಮುಗಿ ದೇವಯ್ಯಗಳ ಸಾಂಗತ್ಯವನ್ನು ಬರೆದ ಶಿವಲಿಂಗ ಕವಿ (ಕ್ರಿ. ಶ. 1622) ಸುತ್ತೂರು ಸಿಂಹಾಸನಾಧೀಶ್ವರರಾದ ಕಪ್ಪಿನ ನಂಜೇಶ್ವರರ ಶಿಷ್ಯ.

75 ಗುಂಡ್ಲುಪೇಟೆ ಕ್ರಿ. ಶ. 1576ನೆಯ ಶಾಸನ ಸೋಮಹಳ್ಳಿಯಲ್ಲಿದೆ. ಅದರ ಪ್ರಕಾರ "ಸಜ್ಜನ ಶುದ್ಧ ಶಿವಾಚಾರ ಸಂಪನ್ನರಾದ ದೇವ ಪೃಥ್ವೀ ಮಹಾಮಹತ್ತಿನೊಳಗಾದ ನಂಜನಗೂಡು ಹಿರಿಯಮಠದ ಪಟ್ಟದ ಗಂಗಾಧರ ದೇವರುಗಳಾದ ಮಹಾಮಹತ್ತಿನ ಆರೋಗಣೆಗೆ ಕೊಟ್ಟಂಥಾ ಶಿಲಾಸಾದನ" ಎನ್ನುವ ಸಂಗತಿ ತಿಳಿದು ಬರುತ್ತದೆ ಸಾವಿರಕಲ್ಲಮಂಟಪದಲ್ಲಿ ಪಟ್ಟವನ್ನು ಪಡೆದ ಶಿವಪೂಜೆಯಾರ್ಯರ ಕರಸಂಜಾತ ಗಂಗಾಧರ ನಂಜನಗೂಡಿನಲ್ಲಿ ನೆಲೆ ನಿಂತಂತೆ ತಿಳಿದು ಬರುತ್ತದೆ. ಮುಂದೆ ಅವರು ಸೋಮಹಳ್ಳಿಯಲ್ಲಿ ಐಕ್ಯರಾಗಿರಬಹುದು. ಇಂದಿಗೂ ಅವರ ಗದ್ದುಗೆ ಸೋಮಹಳ್ಳಿ ಮಠದಲ್ಲಿದೆ.

ಸಾಲೂರ ಶಾಂತೇಶ್ವರರಿಂದ ಪಟ್ಟಾಭಿಷಿಕ್ತವಾದ ಕುಂತೂರು ಮಠಕ್ಕೆ ಸಂಬಂಧಿಸಿದಂತೆ 8 ಕೊಳ್ಳೇಗಾಲ 1539 ಮತ್ತು 9 ಕೊಳ್ಳೇಗಾಲ 1544ರ ಶಾಸನಗಳಲ್ಲಿ ಸಾಲೂರ ನಂಜಯದೇವ ಮತ್ತು ಪಟ್ಟದ ಕೆಂಪನಂಜಯದೇವಗಳು ಕ್ರಮವಾಗಿ ರಾಮಾಭಟ್ಟಯ್ಯ ಮತ್ತು ಕಂಪರಾಣಗಳಿಂದ ಅರಮನೆಗೆ ಸಂಬಳ ಸರತಿ ಆಗಿ ಮೂವತ್ತು ವರಹವನ್ನು ತೆಗೆದುಕೊಂಡು ಬರುತ್ತಿದ್ದುದನ್ನು ಬಿಡಲಾಗಿದೆ.

ಶಿವನಸಮುದ್ರದಲ್ಲಿ ಜಡೆಯಕೊಡುವ ಸ್ವಾಮಿ ಶಿವಯೋಗಿ ಮರುಳುಸಿದ್ಧೇಶ ಶಿವಪೂಜೆ ಮಾಡುತ್ತಿರಲು ಆತನಿಗೆ ನಂಜರಾಯನು ಪಟ್ಟವನ್ನುಕಟ್ಟಿ ಎರಗಂಬಳ್ಳಿಯನ್ನು ದತ್ತಿಯಾಗಿ ಕೊಟ್ಟನು. ಎರಗಂಬಳ್ಳಿಮಠ ಎಂದು ಪ್ರಸಿದ್ಧವಾದ ಈ ಮಠಕ್ಕೆ ಸಂಬಂಧಿಸಿದಂತೆ 199 ಯಳಂದೂರು ಕ್ರಿ. ಶ. 1510ರ ಶಾಸನ ನಾಲ್ವತ್ತು ಭಾಂಡಾರವೊಡೆಯರ ಶಿಷ್ಯರು ಲಿಂಗಂಣ ವೊಡೆಯರು ಬಸವ ರಾಜದೇವ 202 ಯಳಂದೂರು ಕ್ರಿ. ಶ. 1512 ಶಾಸನ ಯೆಱಗಂಬಳಿಯ ಸಿಹ್ಮಾಸನದ ಮಹತ್ತಿನೊಳ ಪಟ್ಟದ ಸಿವನಂ[ಕಾ]ರ ದೇವರ 205 ಯಳಂದೂರು ಕ್ರಿ. ಶ. 1521 ಶಾಸನ ಎಱಗಂಬಳಿಯ ಸಿಂಹಾಸನದ ಜಡೆಯ[ಕೂ]ಡುದೇವರ ಶಿಷ್ಯರು ಚಿಕ್ಕಬಸವಪ್ಪ ಒಡೆಯರ,207 ಯಳಂದೂರು 1527 ರಲ್ಲಿ ಎಱಗಂಬಳಿಯ ಸನದ ಜೆಡೆಯ ಕೊಡ ಎನುವ, 200 ಯಳಂದೂರು 1566 ರ ಶಾಸನ ಯಱಗಂಬಳಿಯ ನಿರಾಸಿಮಠ ಜೆಡೆಯಕುಡುವ ದೇವರ ಶಿಷ್ಯರು ಚರಿತರುವ

ಚಿಂನವೀರಂಣ ವೊಡೆಯರ ಶಿಷ್ಯರು ಹೊಂಣವೀರಂಣವೊಡೆಯರ ದೇವರ ಉಲ್ಲೇಖಿಸು. ಗಳನ್ನು ಹೊಂದಿವೆ. ಈ ಮಠಕ್ಕೆ ಸೇರಿದವರು ಕ್ರಿ. ಶ. 1623 ರಲ್ಲಿದ್ದ ನಮಸ್ಕಾರಪುರೀ ಸಿದ್ಧನಂಜಾರ್ಯರು. ಇವರು ಕಳಲೆನಂಜಾರ್ಯನ ಪ್ರಾರ್ಥನಾನು ಸಾರವಾಗಿ ಶಿವಾಧಿಕ್ಯಶಿಖಾ ಮಣಿಗೆ ವೀರಭದ್ರೀಯವೆಂಬ ಹೆಸರಿನ ಟೀಕೆಯನ್ನು ಬರೆದಿದ್ದಾರೆ. ಪದ್ಮಶ್ರೀ ಬಿ. ಶಿವ ಮೂರ್ತಿಶಾಸ್ತ್ರಿಗಳು ಮುಪ್ಪಿನ ಷಡಕ್ಷರಿ ಎರಗಂಬಳ್ಳಿ ಮಠಕ್ಕೆ ಸೇರಿದವರೆಂದು ಅಭಿಪ್ರಾಯಪಟ್ಟಿದ್ದಾರೆ.

ನಂಜರಾಯನು ಉಮ್ಮತ್ತೂರಿನಲ್ಲಿ ಉಪ್ಪರಿಕೆಯ ಮಠವನ್ನು ಸ್ಥಾಪಿಸಿ ತೂಗಾದಿಯ ಬಸವೇಶ್ವರನಿಗೆ ಪಟ್ಟಕಟ್ಟಿದನು. 231 ಚಾಮರಾಜನಗರ ಕ್ರಿ. ಶ. 1512 ರ ಪ್ರಕಾರ ಹೊಂಡರಬಾಳನ್ನು ದತ್ತಿಬಿಟ್ಟಿದ್ದಾನೆ. 232 ಚಾಮರಾಜನಗರ ಕ್ರಿ. ಶ. 1540ರ ಶಾಸನದಂತೆ ಉಪ್ಪರಿಕೆ ಮಠದ ಹಿರಿಯಯ್ಯಡೆಯ ಪ್ರಾಮಾಣದ ಚನ್ನಬಸವರಾಜ ದೇವರ ನಿರೂಪದಿಂ ಕಾಳಮಲ್ಲಿಕಾರ್ಜುನ ದೇವರು ಪಾರುಪತ್ಯೆಕಾಱ ಕೆಂಪಿನಲಿಂಗಒಡೆಯರು ದೇವರು ಕೂಡಿ ಕಟ್ಟಿದ ಭಾವಿಯ ಜೀರ್ಣೋದ್ಧಾರವನ್ನು ಮಾಡಿದರು. ಇಂದು ಉಮ್ಮತ್ತೂರಿನಲ್ಲಿ ಈ ಮಠ ಕಂಡು ಬರುತ್ತಿಲ್ಲ.

ಮೈಸೂರು ಜಿಲ್ಲೆಯ ವ್ಯಾಪ್ತಿಯಲ್ಲಿ ಈ ಪಂಚ ಮಠಗಳು ಬರುತ್ತವೆ. ಇವು ವೀರಶೈವ ಧರ್ಮದ ಪುರೋಭಿವೃದ್ಧಿಗೆ ಮಹತ್ತರ ಸೇವೆಯನ್ನು ಸಲ್ಲಿಸಿವೆ.

ಉಮ್ಮತ್ತೂರು ನಂಜರಾಜನ ಅನಂತರ ಎಲ್ಲರಾಜರೂ ನಂಜರಾಯ ಮಾಡಿದ ಭಕ್ತಿ ತಮ್ಮದೆಂದೇ ಭಾವಿಸಿದರು. ಅದರಂತೆ ಹಂದಾಲದತಿಮ್ಮರಾಜ ಸಿಂಹಾಸನಗಳಿಗೆ ಪುರಗಳನ್ನು ಕೊಟ್ಟನು. ಪದಿನಾಡಿನ ದೊರೆದಗಳಾ ಚಾಮರಸಗೌಡ, ದೇಪಿಯರಾಮು, ಚೆನ್ನೇಂದ್ರ ಅವರ ತಮ್ಮ ಇಮ್ಮಡಿರಾಮ ಅವರ ಮಕ್ಕಳು ನಂಜರಾಜ ಕೆಂಪೇಂದ್ರರು, ದಾನಗಳನ್ನು ನೀಡಿದ್ದಾರೆ. ಇಮ್ಮಡಿ ರಾಮನಂತೂ ನೀಲಕಂಠನಿಗೆ ಹೊಂಡರಬಾಳು, ಕುಣಿಗಿಲಬಸವ ಲಿಂಗೇಶನಿಗೆ ಗಣಿಗನೂರು, ಶಿವನಂಕಾರದೇವರಿಗೆ ಜ್ಯೋತಿಪುರ, ಕಾಮಗೆರೆಯ ಗುರು ಲಿಂಗೇಶ್ವರನಿಗೆ ಸರಗೂರ ಮಠವನ್ನು ಕೊಟ್ಟನು. ತಲಕಾಡು ಚಂದ್ರಶೇಖರ ಭೂಪನು ಕಾಷ್ಠದ ನಿಳಯಗಳನ್ನು ಬಿಡಿಸಿ ಶಿಲೆಯ ಸಿಂಹಾಸನವನ್ನು ಮಾಡಿ ಮೆರೆದನು. ನಂಜರಾಯನ ಪ್ರಧಾನ ಸಿದ್ದೆಯರಾವುತನು ವ್ಯವಹಾರ ಮುಖದಿಂದ ಬಂದ ಪದಾರ್ಥವನ್ನು ಗುರು ಲಿಂಗ ಜಂಗಮಕ್ಕೆ ಸವೆದನು.

ಕೆಂಚ ಸೋಮನನ್ನು ಕುರಿತು ಗುರು ಲಿಂಗ ಜಂಗಮ ಚಾರಿತ್ರ ಹೀಗೆ ಹೇಳಿದೆ—

ಭಸಿತವ ಕೆಂಚಸೋಮನ ಕೈಯಲಿ ಕೊಟ್ಟು । ಹೆಸರ ಹೇಳಿಯೆ ಧರ್ಮಗಳ ।
ಒಸೆದು ಸಿದ್ದೆಯರಾವುತಗೆ ಪೇಳೆಂದ । ಶಶಿದಲೆಯನ ಭಕ್ತನವನು ೪–೨೧೫
ನಾಗಭೂಷಣನ ಓಲಗದೊಳು ನಂಜೇಂದ್ರ। ಬಾಗಿಲ ಕಾಯ್ದು ಕೊಂಡಿರಲು
ಬೇಗದಿ ಕೆಂಚಸೋಮೇಂದ್ರಗೆ ಪೇಳೆಂದು। ಈಗ ಕಳುಹೆ ನಾನು ಬಂದೆ ೪–೨೧೬

ಹೂಳಿದ ಹಣವ ಸ್ವಪ್ನದಿ ಕೆಂಚ ಸೋಮಂಗೆ । ಹೇಳಿ ತೆಗೆಸಿ ನಂಜರಾಯಂ
ಬಾಳಲೋಚನಭಕ್ತನು ಎಂದು ಕೊಂಡಾಡೆ। ಕೇಳಿ ಮಹತ್ತು ಹರುಷದಿ ೪–೨೧೯

* * *

ಗಾಣಿಗ ಕೆಂಚ ಸೋಮಂಗೆ ಪ್ರಾಣವು ಬಂದು। ಹೇಳಿದನೆಲ್ಲ ವಿವರವ
ಕ್ಷೋಣಿಪ ಗಂಗರಾಜನು ಕೇಳಿಯಶಾ। ಕ್ಷಣದೆ ಸರ್ವವನವ ಮಾಡೆ ೪–೨೨೧

156 ಚನ್ನಪಟ್ಟಣ 1513 ರ ಶಾಸನದಲ್ಲಿ ಕೆಂಚಸೋಮನ ತಂದೆ ದೇವರಾಯ ಪಟ್ಟಣದ ತಿಮ್ಮಣ ಒಡೆಯ ಎಂದು ತಿಳಿದು ಬರುತ್ತದೆ. ಕೃಷ್ಣದೇವರಾಯನು ಅವನ ನಾಯಕತನಕ್ಕೆ ಚನ್ನಪಟ್ಟಣವನ್ನು ಕೊಟ್ಟಿದ್ದಾನೆಂದು ತಿಳಿದು ಬರುತ್ತದೆ. ಕೆಂಚ ಸೋಮನು ಶಿವಗಂಗೆಯ ದೇವಾಲಯಗಳಿಗೆ ಸೇವೆಸಲ್ಲಿಸಿದ್ದಾನೆ. ಚನ್ನಬಸವಪುರಾಣ 63–55 ರಲ್ಲಿ ಪರಮ ಜಂಗಮಕ್ಕೆ ದಾಸೋಹವನ್ನು ಮಾಡುವ ದೊರೆಗಳ ಸಾಲಿನಲ್ಲಿ ಕೆಂಚಸೋಮನ ಹೆಸರಿದೆ.

ಗುರು ಲಿಂಗ ಜಂಗಮ ಚಾರಿತ್ರದ ಐದನೆಯ ಸಂಧಿಯಲ್ಲಿ ಬೆಟ್ಟದಪುರದಮಠ, ಬಾಳೆಹಳ್ಳಿಮಠ, ತ್ರಿಪುರಾಂತಕೇಶ್ವರ, ಕೊಲ್ಲಿಪಾಕಿ, ಶ್ರೀಶೈಲದ ಸಾರಂಗಮಠ, ಮಳೆಯ ಮಲ್ಲೇಶ, ನಿಡುಮಾಮಿಡಿಯ ಕರಿಯಸಿದ್ಧೇಶ್ವರ, ಕಂಬಾಳ ಮರುಳ ಸಿದ್ಧೇಶ್ವರ ಮತ್ತು ತೋಟದ ಸಿದ್ಧಲಿಂಗರ ವಿವರಗಳು ದೊರೆಯುತ್ತವೆ.

ಗುರು ಲಿಂಗ ಜಂಗಮ ಚಾರಿತ್ರ ಕರ್ನಾಟಕದಲ್ಲಿ ಹದಿನೈದು ಹದಿನಾರನೆಯ ಶತಮಾನದ ವೀರಶೈವ ಧರ್ಮದ ಸ್ವರೂಪ ಸಾಧನೆಗಳನ್ನು ಗುರುತಿಸುವಲ್ಲಿ ಮಹತ್ವದ ಆಕರವಾಗಿದೆ.

ಗುರು ಲಿಂಗ ಜಂಗಮ ಚಾರಿತ್ರದ ಮೂರನೆಯ ಆಧ್ಯಾಯದಲ್ಲಿ ಪುರಾಣಿಕನೊಬ್ಬನ ಪುರಾಣವನ್ನು ಹೇಳಿದನು ಎನ್ನುವ ಸಂದರ್ಭವನ್ನು ಮರುಳುಸಿದ್ಧ ಸೃಷ್ಟಿಸಿದ್ದಾನೆ. ಆ ಚೌಕಟ್ಟಿನಲ್ಲಿ ನಂಜನಗೂಡು, ತಿರುಮಕೂಡಲು ನರಸೀಪುರ, ತಲಕಾಡು, ಶಿವಗಂಗೆ, ಹಂಪೆ, ಉಳಿವೆ, ಗೋಕರ್ಣ, ಕಾಶಿ, ಕೇತಾರ, ಶ್ರೀಶೈಲ, ರಾಮೇಶ್ವರಗಳ, ಮಹಾತ್ಮೆಯನ್ನು ವಿವರಿಸಿದ್ದಾನೆ. ಅವುಗಳಿಗೆ ಸಂಬಂಧಿಸಿದಂತೆ ಆದುವರೆಗೆ ಪ್ರಚಲಿತವಿದ್ದ ಪುರಾಣ ಪ್ರಸಂಗಗಳನ್ನು ಬಳಸಿಕೊಂಡಿದ್ದಾನೆ. ಈ ಕಾವ್ಯ ಕ್ಷೇತ್ರಸಾಹಿತ್ಯಕ್ಕೆ ಒಂದು ಮಾದರಿಯಾಗಿದ್ದು ಆಸ್ತಿಕರಿಗೆ ರೋಚಕವಾಗಿದೆ.

---

1 ಒಂದು ಹಸ್ತಪ್ರತಿಯ ಅಂತ್ಯದಲ್ಲಿ ''ಗೌರೀವರ ಪೂಜಾಧುರಂಧರ ಅಲ್ಲಮಪ್ರಭುದೇವರ ಸಂಪ್ರದಾಯಕರಾದ ನಿಡುಮಾಮಿಡಿ ಪಟ್ಟದ ದೇವರು ನೀಲವೃಷಾಖ್ಯರುಗಳಿಗೆ'' ಎನ್ನುವ ಮಾತಿದೆ.

ಕಾವ್ಯ ಸಮೀಕ್ಷೆ

ಗುರು ಲಿಂಗ ಜಂಗಮ ಚಾರಿತ್ರ ಒಂದು ವಸ್ತು ನಿಷ್ಠ ಕಾವ್ಯ. 5 ಸಂಧಿ 945 ಸಾಂಗತ್ಯ ಪದ್ಯಗಳ ಈ ಕೃತಿಯ ಪ್ರತಿಯೊಂದು ಪದ್ಯವೂ ಒಂದಲ್ಲ ಒಂದು ವಿಶೇಷ ಸಂಗತಿಯನ್ನು ನಿರೂಪಿಸುತ್ತದೆ. ಈ ಕಾವ್ಯದ ಕರ್ತೃ ಪುರಾಣಿಕ ಮನೋಧರ್ಮದ ಪ್ರತಿಭಾವಂತ ಕವಿ. ಗುರು ಲಿಂಗ ಜಂಗಮ ಚಾರಿತ್ರದಲ್ಲಿ ವರ್ಣನೆಗಳಿಗೆ ಅವಕಾಶ ಕಡಿಮೆ. ಇಲ್ಲಿ ಬರುವ ಕೈಲಾಸ ವರ್ಣನೆ, ಲೋಕ ಸೃಷ್ಟಿಯ ವರ್ಣನೆ, ವನವರ್ಣನೆ, ಶ್ರೀಶೈಲ ವರ್ಣನೆ ಮುಂತಾದವು ಕೂಡ ಕಾವ್ಯಾಂಗಕ್ಕೆ ಪೂರಕವಾಗಿವೆ.

ಕೈಲಾಸವರ್ಣನೆಯಲ್ಲಿ ಬರುವ ರಜತಾದ್ರಿಯ ಚಿತ್ರ ಹೊಸ ಕಲ್ಪನೆಯಿಂದ ಕೂಡಿದ್ದು ಮನೋಹರವಾಗಿದೆ–

ಶಶಿ ಬೆಳದಿಂಗಳ ಕಡನನೀವಂದದಿಂ। ದೆಸೆದಿಕ್ಕು ಪಸರಿಸೆ ಕಾಂತಿ
ಭಸಿತ ಪುಣ್ಯದ ರಾಶಿಯೋ ಎಂಬಂದದಿಂ । ದೆಸೆದಿಹುದು ರಜತಾದ್ರಿ ೧–೪೩

ಪಡುವೀಡಸ್ವಾಮಿ ಕುಂಭಕೋಣದಲ್ಲಿರುವಾಗ ಸೂರ್ಯಾಸ್ತವಾಗುತ್ತದೆ. ಅದನು ವರ್ಣಿಸುವಾಗ–

ಅಂಬುಧಿಜಸಖನು ಪ್ರಾಗದ್ರಿಗೆಯಿದ್ದಕೇಳು। ಕುಂಭೇಶ್ವರನ...
ಅಂಬುಧಿಯೊಳು ಮಿಂದುರೆ ಶುಚಿಯಾಗಿ।ಸಂಭ್ರಮದಿಂ ಬಹೆನೆಂದು ೧-೧೪

ಎನ್ನುವಲ್ಲಿ ಕವಿ ಪ್ರಕೃತಿಗೆ ಚೇತನಾರೋಪಣವನ್ನು ಮಾಡಿದ್ದಾನೆ. ಸೂರ್ಯಾಸ್ತವಾದ ಮೇಲೆ ಕವಿಗೆ ಪಂಜುಗಳು ಕಂಡರೀತಿ ನವೀನವಾಗಿದ್ದು ಕಾವ್ಯದ ಸೊಗಸನ್ನು ಹೆಚ್ಚಿಸುವ ಸಂದರ್ಭಗಳಾಗಿವೆ. ಆ ಪದ್ಯಗಳು ಹೀಗಿವೆ–

ತರಣಿ ತನ್ನಯ ಕಿರಣಂಗಳನೆಲ್ಲವ । ನೆರೆದ ಪರುಷೆಯ ಕೈಯಲ್ಲಿ
ಇರಿಸಿದನೊ ಎಂಬಂದದಿ ಕಣ್ಗುರೆ । ಕರಮೆಸೆದವು ಪಂಜುಗಳು ೨–೧೩೩

ಚಂದ್ರನು ಮಾಡಿದ ತಪನೆಲ್ಲವನೀಗ । ಇಂದುಧರಗೆ ಪೇಳಲೆಂದು
ಬಂದ ನಕ್ಷತ್ರ ಜನರ ಕೈಯೊಳು ತಾವೇ । ನಿಂದಂತೆ ಪಂಜು ಮೆರೆದವು ೨–೧೩೪

ಅಮೂರ್ತವಾದುದನ್ನು ಕೂಡ ಮೂರ್ತಗೊಳಿಸ ಬಲ್ಲ ಸಮರ್ಥನಾದ ಕವಿ ಮರುಳುಸಿದ್ಧ. ಈ ಮಾತಿಗೆ ಸಮರ್ಥನೆಯಾಗಿ ಶಿವನ ಸ್ವರೂಪ ವರ್ಣನೆ ನಿಲ್ಲುತ್ತದೆ.

ಆಕಾಶದೊಳಗೆ ತೋರುವ ಮಿಂಚಿನಂದದಿ । ಸಾಕಾರ ರೂಪಾಗಿ ಶಿವನು
ಲೋಕಸೃಷ್ಟಿಗೆ ಬೀಜವೊ ತಾನೆಂಬಂತೆ । ಆಕಾರವಾಗಿ ತೋರಿದನು ೨–೬

ಷಡುಋತು ತಮ್ಮಯ ಕಾಲಂಗಳ ತಾವೆ । ಬಿಡದೆ ತೋರುವ ತೆರನಂತೆ
ಪ್ಮೃಡನು ತನ್ನಯ ರೂಪವ ತಾನೆ ತೋರಿದನಾಗ । ಬೆಡಗದನೇನ ಬಣ್ಣಿಪೆನು ೨–೭

ರಾಜನೊಳಗೆ ಷೋಡಶಕಳೆಗಳು ತಾವೆ । ರಾಜಿಸುವಂದದಿ ಕೇಳು
ಬೀಜವೃಕ್ಷ ನ್ಯಾಯದಂದದಿ ಪರಶಿವ । ಮೂಜಗದೊಳಗೆ ತೋರಿದನು ೨–೮

ತಿಲದೊಳು ತೈಲ ತಾಪದೊಳಗೆಯಗ್ನಿಯು ಜಲ । ಶಿಲೆಯೊಳು ತೋರುವ ತೆರದೊಳಗೆ
ಚೆಲುವೆತ್ತ ಶಿವನ ಕಳೆಗಳಲ್ಲಿ ತೋರಿತು । ಹೊಳೆವ ಚಂದ್ರಪ್ರಭೆಯಂತೆ ೨–೯

ಪಂಚತತ್ವವು ಪಂಚ [ಕ]ಲೆ ಪಂಚ । ಪಂಚ ಮುಖಗಂಳ ಧರಿಸಿ
ಪಂಚಾಕ್ಷರ ರೂಪ ತಾನಾಗಿ ಸದಾಶಿವ । ಪಂಚವರ್ಣವು ತಾನಾದ ೨–೧೦

ಪ್ರಕೃತಿ ವ್ಯಾಪಾರದ ಸೂಕ್ಷ್ಮನಿರೀಕ್ಷಣಾ ಶಕ್ತಿ, ಲೋಕ ಸಂಗತಿಗಳ ದಟ್ಟವಾದ ಅನುಭವಗಳಿಂದ ನಿರೂಪಣೆ ತರ್ಕಬದ್ಧವಾಗಿದ್ದು ಶಿವನ ಆಕಾರ ಓದುಗನ ಮನಃಪಟಲದಲ್ಲಿ ಸ್ಥಾಯಿಯಾಗಿ ನಿಲ್ಲುತ್ತದೆ. ಹೀಗೆಯೇ ನಂಜರಾಯನ ವ್ಯಕ್ತಿ ಚಿತ್ರಣವನ್ನು ಕೊಡುವಾಗ ಮರುಳಸಿದ್ಧ ಪೌರಾಣಿಕ ಪ್ರತಿಮೆಗಳನ್ನು ಬಳಸಿಕೊಂಡು ಕಿರಿದರಲ್ಲಿ ಹಿರಿದನ್ನು ಹೇಳುವ ಪ್ರಯತ್ನ ಮಾಡಿದ್ದಾನೆ—

ಸಿರಿಯೊಳು ಸುರಪತಿ ರೂಪಿಂ ಮನಸಿಜ । ತರಣಿಸುತನ ಉದಾರತೆಯಂ
ಮರುತನ ಸುತನ ಪರಾಕ್ರಮದಿಂದಲಿ । ಕರಮೆಸೆದನು ನಂಜರಾಯ ೪–೧೭

ಮಾತು ಕಥೆಗಳೊಳು ಸುರರ ಗುರುವಿನಂತೆ । ನೀತಿಶಾಸ್ತ್ರದಿ ಬ್ರಹ್ಮನಂತೆ
ಚಾತುರ್ಯದಿಂದ ಕೃಷ್ಣನಂದದಿ ಮೆರೆದನು । ಭೂತಳದೊಳು ನಂಜರಾಯ ೪–೧೮

ಇಲ್ಲೆಲ್ಲ ವಿಸ್ತಾರವಾದ ವರ್ಣನೆಗೆ ಅವಕಾಶವಿದೆ. ಕವಿ ಇಲ್ಲಿ ಆ ಚಪಲಕ್ಕೊಳಗಾಗದೆ ತನ್ನ ಔಚಿತ್ಯಜ್ಞಾನವನ್ನು ಮೆರೆದಿದ್ದಾನೆ. ನಂಜರಾಯನ ಬಗ್ಗೆ ಹೇಳಬಹುದಾದ ಎಲ್ಲ ಸಂಗತಿಗಳೂ ಇಲ್ಲಿ ಬಂದಿರುವುದು ಗಮನಾರ್ಹವಾಗಿದೆ. ನಂಜರಾಯನಿಗೆ ದೀಕ್ಷೆಯಾದ ಅನಂತರ ಆಚಾರ್ಯರು ಹೇಳುವ ಹಿತೋಕ್ತಿ ಎಲ್ಲ ಕಾಲಕ್ಕೂ ನಿಲ್ಲುವಂಥದಾಗಿದೆ.—

ರಕ್ಷಿಸು ಬಡವರನಾಥರುಗಳ ನೀನು । ಈ ಕ್ಷಿತಿಯೊಳು ಸುಖದೊಳು
ಭಿಕ್ಷವ ನೀಡೆಂದು ಹರಸಿ ಶ್ರೀ ಗುರುಭೋಗ । ಮೋಕ್ಷಪದವನಿತ್ತನವಗೆ ೪–೧೧೭

ನಂಜರಾಯನ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಈ ಬಗೆಯ ಮಾತುಗಳು ಎಷ್ಟರ ಮಟ್ಟಿಗೆ ಸಾರ್ಥಕವಾಗಿದೆ ಎನ್ನುವುದಕ್ಕೆ ಇತಿಹಾಸ ಸಾಕ್ಷಿಯಾಗಿದೆ.

ಮರುಳುಸಿದ್ಧನು ಘಟನೆಗಳನ್ನು ನಿರೂಪಿಸುವಲ್ಲಿ ತೋರಿಸಿರುವ ಚಿತ್ರಣಶಕ್ತಿ ಗಮನಾರ್ಹವಾಗಿದೆ. ಶ್ರೀಶೈಲದ ಸಾರಂಗಮಠವನ್ನು ಜೋಗಿಗಳೊಡನೆ ಹೋರಾಡಿ ಮಹತ್ತು ವಶಪಡಿಸಿಕೊಂಡ ಪ್ರಸಂಗ ಇದಕ್ಕೆ ಉತ್ತಮವಾದ ನಿದರ್ಶನ. ಹನ್ನೆರಡು ಸಾವಿರ ಜೋಗಿಗಳು ಬಂದು ವಾದ ಮಾಡಿ ಸಾಗದೆ ವೀರಕುಮಾರ ಜಂಗಮರಾಯರೊಂದಿಗೆ ಹೋರಾಡಿದ ಪ್ರಸಂಗ ಹೀಗಿದೆ—

ಪಗಲೊಡೆಯನ ಮೇಲೆ ಕೂಡಿ ಗೂಗೆಗಳಲ್ಲಿ । ಜಗಳವ ತೆಗೆವಂದದೊಳು
ಖಗರಾಜನ ಸರ್ಪ ತುಡುಕುವಂದದಿ ಕೇಳು । ವಿಗೆ ಮುನಿದರು ಜೋಗಿಗಳು ೫–೧೦೮

ಆಗ ಅವರನ್ನು ಎದುರಿಸಿದ ಲಿಂಗದವೀರರು—

ಲಿಂಗವೆ ಗಂಡ ಜಂಗಮವೆ ಪ್ರಾಣವು ವಿಂಗೆ । ಕಂಗೊಳಿಸುವ ಪಾದತೀರ್ಥ
ಅಂಗಕೆ ವಜ್ರಾಂಗಿಯು ಜೋಡುತಾನೆಂದು । ಲಿಂಗದ ವೀರರು ನೆರೆದು ೫–೧೧೧

* * *

ಮದಕರಿ ಕದಳಿಯವನವ ಹೊಕ್ಕಂದದಿ । ಸದೆಬಡಿದರು ಜೋಗಿಗಳ
ವಿದುಳು ಸುರಿಯೆ ರಕ್ತದ ಮಳೆ ಕರೆದಂತೆ । ಕದನವನೇನ ಹೇಳುವೆನು ೫–೧೧೭

ಜೋಗಿಗಳು ಮತ್ತು ಲಿಂಗದ ವೀರರ ಹೋರಾಟದ ಸಂದರ್ಭವನ್ನು ಕವಿ ಚಿತ್ರಿಸುವಲ್ಲಿ ಪೌರುಷ ಪರಾಕ್ರಮಗಳು ನಿಚ್ಚಳವಾಗಿದ್ದು ಮರುಳುಸಿದ್ಧನ ಕಾವ್ಯಸಿದ್ಧಿಯು ಹಿರಿಮೆಗೆ ಕಾರಣವಾಗಿವೆ.

ಮರುಳುಸಿದ್ಧನಿಗೆ ಗುರು ಲಿಂಗ ಜಂಗಮಚಾರಿತ್ರದಲ್ಲಿ ಒಂದು ಹೊಸವಸ್ತುವನ್ನು ಸಾದರಪಡಿಸುತ್ತಿರುವ ಅರಿವಿದೆ. ಓದುಗರು ಏನೆಂದು ಭಾವಿಸುವರೋ ಎನ್ನುವ ಕಾಳಜಿಯೂ ಇದೆ, ಅದಕ್ಕೆ ಅನುಗುಣವಾಗಿ ಆತ ಅನೇಕ ಸಂವಾದಿಘಟನೆಗಳನ್ನು ಒಂದರ ಪಕ್ಕದಲ್ಲಿ ಒಂದರಂತೆ ಇಡುತ್ತಾಹೋಗುತ್ತಾನೆ, ಉದಾಹರಣೆಗೆ ಸೋಮರಾಯನ ಕನಸಿನಲ್ಲಿ ಭುಜಂಗೇಶ್ವರ ಬಂದು ತಿಳಿಸಿದಂತೆ ಸೌರಾಷ್ಟ್ರಪುರದಿಂದ ದೇಪಣ ನಂಜುರಾಯ ಸೋಮರಾಗುರು ಉಪ್ಪಯಣವನ್ನೆತ್ತಿ ಹೊರಡುವಾಗಿನ ಪ್ರಸಂಗವನ್ನು ಗಮನಿಸಬಹುದು—

ಲೋಕದ ಕ್ಷೇತ್ರವೆಲ್ಲಕೆ ಮಹಾತ್ಮವೆನಿಸುವ । ತ್ರಯಿಕೂಟಕೆ ದಕ್ಷಿಣದಿ
ಶ್ರೀಕರಕನಕಪುರದೊಳೊಲಿದಿರ್ಪೆವು । ಏಕಾಂತದಿ ನಾವೆಂದ ೪–೨೦

ಅಲ್ಲಿಗೆ ಬಂದು ನೀನೆಮ್ಮ ಪೂಜಿಸಿದೊಡೆ । ಎಲ್ಲ ಭೋಗಂಗಳನೀವೆ
ನಿಲ್ಲದೆ ಬಹುದು ನೀನೆಂದು ಭುಜಂಗೇಶ । ನಲ್ಲಿ ಪೊ...ಪೇಳಿದನು ೪–೨೧

ಹೀಗೆ ಹೇಳಿದ ಕವಿ ಮುಂದಿನ ಪದ್ಯದಲ್ಲಿಯೇ—

ತಿರುವಂಜಕಳನಾಥಲಿಂಗವು ಬಂದು ತಾ।ನಿರುವ ಠಾವನು ಸ್ವಪ್ನದೊಳು
ಕರೆದು ಚೇರಮನಿಗೆ ಪೇಳಿದಂದದಿ ಕೇಳು । ವರಭುಜಂಗೇಶ್ವರ ಪೇಳ್ದ ೪–೨೨

ಎಂದಿದ್ದಾನೆ. ಇಂತಹುದೇ ಇನ್ನೊಂದುಪ್ರಸಂಗ ನಂಜರಾಯ ಮಂತ್ರಿತರರು ಸುತ್ತೂರಿನಲ್ಲಿ ದೇವಪೂಜೆ, ಚರಮೂರ್ತಿಗಳ ಸೇವೆಯನ್ನು ಸಲ್ಲಿಸಿ ಮುಂದೆ ಹೋಗುವಾಗ ನೋಡಬಹುದು. ನಾಯಿಯನ್ನು ಮೆಳೆಯಲ್ಲಿದ್ದ ಮೊಲ ಹಿಂದಕ್ಕಟ್ಟಿತು. ಅದು ಗೆಲವುಳ್ಳ ತಾಣವೆಂದು ರಾಜಧಾನಿಯನ್ನು ಕಟ್ಟಲು ಮೆಳೆಯನ್ನು ಕಡಿಯುವಾಗ—

ಬಳಸಿಕೊಂಡಿರಲೊಂದು ಲಿಂಗವ ಫಣೆಯುದ । ನೆಳಸಿ ಕಂಡರು ಪೇಳೆ ನೃಪೆಗೆ ೬–೩೯

ಸೋಮೇಂದ್ರ ನಂಜರಾಯರು ಅಲ್ಲಿಗೆ ಬರಿಕಾಲಿನಲ್ಲಿ ಬಂದು ಕಾಣಲು ಹಾವು ಲಿಂಗವನ್ನು ಪ್ರವೇಶಿಸಿತು ಎಂದು ಮರುಳುಸಿದ್ಧ ಹೇಳುತ್ತಾನೆ. ಅನಂತರ ಈ ಮಾತನ್ನು ಸಮರ್ಥಿಸುವುದಕ್ಕೆ—

ಕಾಳ ಹಸ್ತಿಯೊಳಗೆ ಲಿಂಗವ ಪೂಜಿಸೆ । ವ್ಯಾಳನ ಮದಗಜ ಸೆಳದಿ
ಕೇಳಿ ಸರ್ಪನು ಲಿಂಗದಲ್ಲಿ ಮೆರೆದುದನು । ಪೇಳುವೆನಿದು ಚೋದ್ಯವೆನಲು ೪–೪೧

ಎಂದು ಮತ್ತೊಂದು ಸಂವಾದಿ ಘಟನೆಯನ್ನು ಕೊಡುತ್ತಾನೆ. ಕವಿಯ ಈ ಎಚ್ಚರಿಕೆಯನ್ನು ಕಾವ್ಯದುದ್ದಕ್ಕೂ ಕಾಣಬಹುದು.

ಮರುಳುಸಿದ್ಧ ಈ ಕೃತಿಯಲ್ಲಿ ಅನೇಕ ಪುರಾಣ ಪ್ರಸಂಗಗಳನ್ನು ಐತಿಹ್ಯಗಳನ್ನು ತಂದಿದ್ದಾನೆ. ಗೋಕರ್ಣಕ್ಕೆ ಸಂಬಂಧಿಸಿದಂತೆ ಬರುವ ರಾವಣ ಪ್ರಸಂಗ, ಶಿವಗಂಗೆಗೆ ಸಂಬಂಧಿಸಿದಂತೆ ಬರುವ ಗಿರಿಜಾಕಲ್ಯಾಣ, ಕಾಶಿಗೆ ಸಂಬಂಧಿಸಿದಂತೆ ವ್ಯಾಸನ ತೋಳಿನ ಪ್ರಸಂಗ, ತಿರುಮಕೂಡಲಿಗೆ ಸಂಬಂಧಿಸಿದಂತೆ ಬ್ರಾಹ್ಮಣ ಸಂಗಮದಲ್ಲಿ ಅಸ್ತಿಯನ್ನು ಹಾಕಲು ಅದು ಕಾಶಿಯಲ್ಲಿ ಹೂವಾಗಿ ಕಾಣಿಸಿಕೊಂಡ ಪ್ರಸಂಗ, ತಲಕಾಡಿನಲ್ಲಿ ವೈದ್ಯೇಶ್ವರ ಲಿಂಗದ ಪ್ರಸಂಗ ಮುಂತಾದುವನ್ನು ಗಮನಿಸಬಹುದು.

ಕಾವೇರಿನದಿಗೆ ಸಂಬಂಧಿಸಿದಂತೆ ಲೋಪಾಮುದ್ರೆ ಮತ್ತು ಅಗಸ್ತ್ಯರ ಪ್ರಸಂಗ ತುಂಬ ಪ್ರಸಿದ್ಧವಾಗಿದ್ದು ಈ ಕಾವ್ಯದಲ್ಲಿ ಕೂಡ ಎಡೆ ಪಡೆದಿದೆ. ಇದರಂತೆಯೇ ಬಿಳಿಗಿರಿರಂಗನ ಬೆಟ್ಟದಲ್ಲಿ ಹುಟ್ಟಿ ಚಾಮರಾಜನಗರ ಮತ್ತು ಯಳಂದೂರು ತಾಲ್ಲೂಕುಗಳನ್ನು ಫಲವತ್ತಾಗಿ ಮಾಡಿರುವ ಸುವರ್ಣಾವತಿ ಅಥವಾ ಹೊನ್ನು ಹೊಳೆಗೆ ಸಂಬಂಧಿಸಿದಂತೆ ಐತಿಹ್ಯವನ್ನು ಕವಿ ಹೀಗೆ ಹೇಳಿದ್ದಾನೆ—

ಕಾಸರ ಗಿರಿಯೊಳು ಕುಂಭೇಶ್ವರನಿರೆ । ಕೇಶವನರ್ಧಾಂಗಿ ಬಂದು
ದೋಷವ ಕಳೆದುಕೊಂಬೆಯೆಂದು ತಪವಿರ್ದ । ಈಶನ ಕುರಿತವಳಲ್ಲಿ ೪–೧೮೬

ಗುರು ಶಿಷ್ಯ ತಂದೆ ಮಗೊಡೆಯರು ಬಂಟರಿಗೆ ಸಂ । ಗರವನೆಸಗಲದರಿಂದ
ದೊರಗೊಳ್ಳೆ ಪಾಪ ಲೋಭಿಗಳ ಕೈವಶದಲಿ । ಇರಲಾರೆನೆಂದಾ ಸಿರಿಯು ೪-೧೮೭

ಮದನೈಯುನ . . . . । ಹದಿನೆಂಟು ಜಾತಿಯು ಕೈಯಂ
ಸದೆದು ಒಡಿದು ಎನ್ನ ಕಾಸಿ ಕರಗಿಸಲು । ತಿದರಿಂದ . . . ೪-೧೮೮

ಕುಂಬೇಶ್ವರಗಿರಿಯೊಳುಗ್ರ ತಪವಿರೆ । ಶಂಭು ತಾನೆ ಮೆಚ್ಚಿ ಬಂದು
ಅಂಬುಜವದನೆ ವರವ ಬೇಡೇದೆನೆ । ಪೊಂಬೊಳೆಯಾಗಿ ಮಾಡೆನ್ನ ೪- ೧೮೯

ಕಾವೇರಿಯೊಳಗೆನ್ನನು ಕೂಡಿದೊಡೆ ಸ್ವಾಮಿ । ದೇವಪೂಜೆಗೆ ಯೋಗ್ಯಳಹೆನು
ಆ ವೇಧೆಗಳನೆಲ್ಲ ಪರಿಹರಿಸುವೆನೆಂದು । ಭಾವಜಹರಗೆರಗಿದಳು ೪– ೧೯೦

ಭಾವಿಸಿ ಪೊಂಬೊಳೆಯಾಗಿ ಪರಿದು ನೀ । ಕಾವೇರಿಯ ಬೆರಸೆಂದು
ಗೋವಿಂದನರಸಿಗೆ ಪೇಳಲೀಶ್ವರ ಮೆಚ್ಚಿ । ಭೂವಲಯದಿ ಜಲವಾಗಿ ೪– ೧೯೧

ಹೊನ್ನುಹೊಳೆಯಾಗಿ ಕೆರೆ ಕಟ್ಟೆ ಕಾಲುವೆ । ಭಿನ್ನವಿಲ್ಲದೆ ಕೊಟ್ಟಳವಳು
ಪನ್ನಗಧರ ದಿವ್ಯಲಿಂಗವ ಪೂಜಿಸಿ । ಸನ್ನುತ ನೀಲಕಂಠೇಶ್ವರನ ೪– ೧೯೨

ಭಕ್ತಿಯಿಂದರ್ಚಿಸಿ ಪರಿವ ಕಾವೇರಿಯು । ನರ್ತಿಯಿಂದಲಿಯೊಡಗೂಡಿ
ಮತ್ತಿಗಡಹಿನ ಮಲ್ಲೇಶ್ವರಗೆರಗಲು । ದತ್ತ ಕೃಷ್ಣನು ಚಿಂತಿಸಿದ ೪- ೧೯೩

ಈ ಹೊನ್ನುಹೊಳೆಯ ಐತಿಹ್ಯಕ್ಕೆ ಸಂಬಂಧಿಸಿದಂತೆ 1 ಯಳಂದೂರು 1654–55 ಶಾಸನದಲ್ಲಿ ಭಿನ್ನಪಾಠವೊಂದು ದೊರೆತಿದ್ದು ಹೀಗಿದೆ—

4 ... ...ಹಿಮಾ
5 ಚಲಕ್ಕೆ ತೆಂಕಣದೆಸೆಯೊಳ್ನೀಲ ಗಿರಿಯಿಪೂರ್ವದಲ್ಲಿ ಕಪಿಲ ಋಷೀ
6 ಶ್ವರಂ ತಪಮಂ ಮಾಡುತ್ತೆ ದೇವಗಂಗಾ ಜಲಮಂ ಕಮ
7 ಂಡಲದೊಳ್ತುಂಬಿ ಕೊಂಡಿರಲಲ್ಲಿಗೆ ನಂದೀಶ್ವರಂ ಬಂದೆಲೆ ಮುನಿ
8 ವರ ಈ ಕಮಂಡಲೋದಕವನುತ್ತರ ಮುಖಮಪ್ಪಂತೆ ಪರಿಯಿ
9 ಸೊಂದು ನದಿಯಂ ಮಾಡದು ಪುಣ್ಯನದಿಯಪ್ಪುದು ಸಕಲಜನ
10 ರ್ಗೆ ಭುಕ್ತಿ ಮುಕ್ತಿಯಂ ಕುಡುಉದೆಂದು ನಿರೂಪಿಸಲಂತೆಗೆಯ್ವೆನೆ
11 ಂದಾ ಕಮಂಡಲವಾರಿಯನುತ್ತರಾಭಿಮುಖವಾಗಿ ಪರಿವಂ

12 ತೆ ಮಾಡಿ ಸುವರ್ಣಾವತಿಯುಂಬ ಪೆಸರನಿತ್ತನಾ ನದಿಯು ತೀರದಲ್ಲೊಂದು
13 ಪುರಮಿಪ್ಪರ್ದದಱ ಮಹಿಮೆಯೆಂತೆನೆ ...

ಈ ಬಗೆಯ ಕಥೆಗಳು ಐತಿಹ್ಯಗಳು ಭಾರತದ ಎಲ್ಲ ನದಿಗಳಿಗೂ ಸಂಬಂಧಿಸಿದಂತೆ ದೊರೆಯುತ್ತವೆ. ಅಂತಹುದಕ್ಕೆ ಅನುಗುಣವಾಗಿ ಮುರುಳುಸಿದ್ಧ ಚಾಮರಾಜನಗರ ಯಳಂದೂರು ತಾಲ್ಲೂಕುಗಳ ಸುತ್ತಮುತ್ತ ಪ್ರಚಲಿತವಿದ್ದ ಈ ಕಥೆಯನ್ನು ಇಲ್ಲಿ ಸೇರಿಸಿದ್ದಾನೆ. ಇಂತಹ ಪೌರಾಣಿಕ ಪ್ರಸಂಗಗಳನ್ನೇ ಅಲ್ಲದೆ ಮುರುಳುಸಿದ್ಧ ಕೆಲವು ಲೌಕಿಕ ಸಂಗತಿಗಳನ್ನೂ ಕೂಡ ದಾಖಲಿಸಿದ್ದಾನೆ. ಉದಾಹರಣೆಗೆ ಸುತ್ತೂರು ಮತ್ತು ಎರಗಂಬಳ್ಳಿಗೆ ಆ ಹೆಸರುಗಳು ಬಂದುದನ್ನು ನೋಡಬಹುದು. ಸುತ್ತೂರಿಗೆ–

ನಿಂದುಪ್ಪಯಣವ ಮಾಡಿ ಸುತ್ತೂರೊಳು । ಮುಂದಂ ಕಾವೇರಿಯೊಳೆಲ್ಲ
ಚೆಂದದಿ ಸೋಮೇಶ್ವರಗೆ ಪ್ರದಕ್ಷಿಣ । ಬಂದ ಕಾರಣ ಸುತ್ತೂರೆನಿಸೆ

ಎರಗಂಬಳ್ಳಿಗೆ— ೪–೩೦

ಎರಗಿ ನಮಸ್ಕಾರವನು ಮಾಡಲಾಗಿಯೆ । ಎರಗಂಬಳ್ಳಿ ತಾನೆಂದು
ಉರುವಿಯೊಳಗೆ ಪೆಸರಾಗಿ ಚರಿಸಿ ತಾನು । ಮೆರೆದುದು ಸಿಂಹಾಸನವು ೪–೨೦೫

ಎಂದು ತಿಳಿಸಿದ್ದಾನೆ.

ಗುರು ಲಿಂಗ ಜಂಗಮಚಾರಿತ್ರ ಕೈಲಾಸದವರ್ಣನೆ, ಈಶ್ವರನ ಒಡ್ಡೋಲಗದಿಂದ ಪ್ರಾರಂಭವಾಗುತ್ತದೆ. ಆದರೆ ಅಲ್ಲಿಗೇ ನಿಲ್ಲದೆ ನಮ್ಮ ಭೌಗೋಲಿಕ ಪರಿಸರವನ್ನು ಕುರಿತು ಹೆಚ್ಚು ವಿವೇಚಿಸುತ್ತದೆ. ಕೇತಾರದಿಂದ ರಾಮೇಶ್ವರದವರೆಗೆ, ಗೋಕರ್ಣದಿಂದ ಕುಂಭಕೋಣದವರೆವಿಗೆ ಈ ಕಾವ್ಯದ ಭೌಗೋಳಿಕ ಹರ ಹಿದೆ. ಪುರಾಣಪ್ರಸಂಗಗಳನ್ನು ಬಿಟ್ಟರೂ ಪುರಾತನ ಶರಣರಿಂದ ಹಿಡಿದು ಅರ್ವಾಚೀನ ಶರಣರವರೆಗೆ ಒಂದುಸಾವಿರ ವರ್ಷದ ಶೈವ ವೀರಶೈವ ಇತಿಹಾಸವನ್ನೊಳಗೊಂಡಿದೆ. ಇಷ್ಟೆಲ್ಲ ಆದರೂ ಈ ಕೃತಿ ತನ್ನ ಸಮಕಾಲೀನ ಇತಿಹಾಸಕ್ಕೆ ಸ್ಪಂದಿಸಿ ಅದನ್ನು ದಾಖಲಿಸುವ ಮೂಲಕ ಮಾಹಿತಿಗಳ ಆಕರವಾಗಿ ಗಮನಾರ್ಹ ಕೃತಿಯಾಗಿದೆ. ಮುರುಳಸಿದ್ಧನ ಸಾಹಿತ್ಯಿಕಸೇವೆ ಸಫಲವಾಗಿದೆ.

ಹಸ್ತಪ್ರತಿವಿವರ

ಗುರು ಲಿಂಗ ಜಂಗಮ ಚಾರಿತ್ರವನ್ನು ಕನ್ನಡ ಅಧ್ಯಯನಸಂಸ್ಥೆಯ ಕೆ. ಎ. 456 ಸಂಖ್ಯೆಯ ಹಸ್ತಪ್ರತಿಯ ಸಹಾಯದಿಂದ ಪರಿಷ್ಕರಿಸಿದೆ. ಈ ಹಸ್ತಪ್ರತಿಯಲ್ಲಿ ಕ್ರಮವಾಗಿ ದ್ವಾದಶಾನುಪ್ರೇಕ್ಷೆ (1-63ಪುಟ) ಗುರು ಲಿಂಗ ಜಂಗಮಚಾರಿತ್ರ (1–94ಪುಟ) ಛಂದೋಂಬುಧಿ (95–96ಪುಟ)ಗಳಿವೆ.ಹಸ್ತಪ್ರತಿಯಉದ್ದ 26 ಸೆಂಟಿಮೀಟರ್, ಅಗಲ

24 ಸೆಂಟಿ ಮೀಟರ್, ಪ್ರತಿಪುಟದಲ್ಲಿ 20 ಪಂಕ್ತಿಗಳಿವೆ. ಪ್ರತಿ ಪಂಕ್ತಿಯಲ್ಲಿ 22 ಅಕ್ಷರಗಳಿವೆ. ಇದಕ್ಕೆ ಆಕರವಾದ ಹಸ್ತಪ್ರತಿಯಲ್ಲಿ 'ಎರಡನೆಯಪುಟವಿಲ್ಲ' ಎನ್ನುವ ಟಿಪ್ಪಣಿಯಿದ್ದು ಒಂದನೆಯಸಂಧಿ 13-24 ಪದ್ಯ ಪೂರ್ತಿ ಲುಪ್ತವಾಗಿದೆ. ಈ ಹಸ್ತಪ್ರತಿಯನ್ನು 1933–34 ರಲ್ಲಿ ಮರುಪ್ರತಿಮಾಡಲಾಗಿದ್ದು ಅಕ್ಷರಗಳು ಸ್ಫುಟವಾಗಿವೆ. ಹಸ್ತಪ್ರತಿಯ ಸ್ಥಿತಿ ಚೆನ್ನಾಗಿದೆ.

ಈ ಕೃತಿಯ ಪ್ರಕಟಣೆಯಲ್ಲಿ ನೆರವಾದ ಡಾ. ಎಚ್. ತಿಪ್ಪೇರುದ್ರಸ್ವಾಮಿಯವರು, ಎನ್. ಬಸವಾರಾಧ್ಯರು, ವೈ.ಸಿ. ಭಾನುಮತಿಯವರಿಗೆ ವಂದನೆಗಳು.

ಜಿ. ಜಿ. ಮಂಜುನಾಥನ್

ಮರುಳಸಿದ್ಧ ವಿರಚಿತ

ಗುರು ಲಿಂಗ ಜಂಗಮ ಚಾರಿತ್ರ

ಒಂದನೆಯ ಸಂಧಿ

ಶ್ರೀಪಶುಪತಿ ನಿರ್ಮಲ ನಿತ್ಯ . . . . . . । . . . .
ಶ್ರೀಪರಮೇಶ್ವರ [ಗುರುಸಿದ್ಧಮ]ಲ್ಲನ । ಶ್ರೀಪದವೆನ್ನ ರಕ್ಷಿಪುದು ೧

ಶ್ರೀಸದಾಶಿವ ಮಹೇಶರುದ್ರರಿಗೆ । [ಭಾಸ]ವಾಗಿಹ ಪರಶಿವನೆ
ಲೇಸ ಕೊಟ್ಟೆಳೆಯ ಭಕ್ತರಿಗೆ ಒಲಿದು ಕೃಪೆ । ಮಾಸದೆ ಗುರುಸಿದ್ಧಮಲ್ಲ ೨

ಶ್ರೀಗಂಗಾಧರ ಶ್ರೀಗೌರೀವರ । ಶ್ರೀಗಣನಾಥನ ಜನಕ
ಶ್ರೀಗುರು ಲಿಂಗ ಜಂಗಮವಾಗಿಯೆ ಬಂದ । ಶ್ರೀಗುರುವಿಗೆ ಶರಣೆಂಬೆ ೩

ಶ್ರೀಪತಿ ವಾಮನ ಪೂಜಿತ ಪಾದಪದ್ಮನೆ । ಗೋಪತಿ ಶಿರಕರಪಾತ್ರ
[ಪಾಪಹೃ]ದಯ ಚಿದ್ದೀಪನೆನಿಸುವ ಉ । ಮಾಪತಿ ಶಿವಗೆರಗುವೆನು ೪

ದರ್ಪಕಾಂಗವ ದಹ [ನವ ಮಾಡಿ] ಭಸಿತವ । ತಪ್ಪದೆ ಧರಿಸಿದ ದೇವ
ಸರ್ಪಕಂಕಣಧರ ಮುಪ್ಪುರವನು [ಸುಟ್ಟ । ಕಪ್ಪುಗೊರಳ] ಸಲಹೆಂದು ೫

ಹತ್ತುದಲೆಯುನಯ್ಯ ಹಾವಡಿಗನ ಕಣ್ಣ । ಕಿತ್ತು ಕಾಲೊಳಗಿಟ್ಟು ಮೆರೆವ
ಎತ್ತೊಂದರಿಂದ ಲೋಕವ ಪಾಲಿಸುವಗೆ । ಎತ್ತಿಮುಗಿವೆ ಕೈಯನು ೬

ಬಣ್ಣಿಸುವವನುರೆ ಕಣ್ಣನಿತ್ತವನಿಂದ । ಹಣ್ಣಿಕೊಂಡಿಹ ಲೋಕಗಳ
. . . . . ಗತಿ ಸಂಹಾರವ ಮಾಳ್ಪ । [ಕಣ್ಣುಮೂರುಳ್ಳಗೆ]ಶರಣು ೭

ಹೆಣ್ಣಿಂದ ಲೋಕವೆಲ್ಲವ ಸೃಷ್ಟಿಸಿ ದೇವ । ಹೆಣ್ಣಿಗರ್ಧಾಂಗವನಿತ್ತು
ಕಣ್ಣುಗೆಡಿಸಿದ ನರಸುರರನೆತ್ತಾಡುವ । ಪುಣ್ಯಸ್ವರೂಪಗೆ ಶರಣು ೮

ಖಗವಾಹನದಿಂದಾದ ಕಾರ್ಯಂಗಳ । ಹಗಲಿರುಳಿಂದುರೆ ನೋಡಿ
ಜಗವ ಪಾಲಿಸುತಿರ್ಪ ಪರಮೇಶ್ವರನಿಗೆ । ಸೊಗಸಿಂದ ನಾ ನಮಿಸುವೆನು ೯

ಪನ್ನಗಧರ ನಿನ್ನ ಶಕ್ತಿಯೆ ಪ್ರಣಮದಿ । ನಿನ್ನ ಷಡಂಗವಾಗಿರ್ದು
ನಿನ್ನ ವಾಮಾಂಗದಿ ತೋರುವ ಗೌರಿಯ । ಉನ್ನತ ಪದವನೆರಗುವೆನು ೧೦

ಶ್ರೀಕಂಠ ಶಿವನುತ್ತಮಾಂಗದಿ ನೆಲಸಿ ಮೂ । ಲೋಕವೆಲ್ಲವ ರಕ್ಷಿಪ ತಾಯೆ
ಸಾಕಾರರೂಪಿಂದ ಪದವೃಷ್ಟಿಯ ಕೊಟ್ಟು । ನೀ ಕರುಣಿಸು ಗಂಗೆಯೆನ್ನ ೧೧

ನಂದೀಶ ಭೃಂಗೀಶ ವೀರಭದ್ರೇ . . . . . । . . . . . . ಶ
ಒಂದಾಗಿ ನಿಮ್ಮ ಪಾದವ ಕೊಂಡಾಡುವೆ । ಮುಂದೆ ಪೊಗಳುವೆ ನಾ ನಿಮ್ಮ ೧೨

ಎಲ್ಲಗಣ . . . . , ... । . . . , ...
. . . . । ೧೩

. . . . । . . . .
. . . . । . . . ಉರಗನ ಹೇಳಿಗೆಯುಂತೆ ೨೪

ದುರ್ಬುದ್ಧಿ ಮನುಜ . . . . . . । . . . . . ನೆಯ ಕಟ್ಟಿಕೊಂಡೆ
ಒಬ್ಬ . . . . ನತ್ತು ಲೋಕವೆಲ್ಲವ ಮೀ । ಹಬ್ಬುವುದದನೇನೆಂಬೆ ೨೫

ಅವರಾ . . . ಏಳನೂರು . . . . .। ಅವರವರನೆತ್ತಾಡುತಿಹುದ
ವಿವರಿಸುವಡೆ ಮತ್ತೇನುಂಟು ಲೋಕದಿ । ಜವಧರ್ಮರಾಯನೆ ಬ[ಲ್ಲ] ೨೬

ಕ್ಷಮೆ ದಯೆ ಶಾಂತಿ ಸದ್ಗುಣವಿಲ್ಲದವರಿಗೆ । ಯಮನಂತೆ ತೋರಿಸುತಿಹನು
ಕ್ಷಮೆ ದಯೆ ಶಾಂತಿ ಸದ್ಗುಣ . . . . । . . . . . ಧರ್ಮವಾಗಿಹನು ೨೭

. . . . ಎಂಟು । ಅಂತಿಂತೆಂದೆ . . .
. . . . . ಜಂಗಮುವರ್ಚಿಸಿ । ಅಂತಕಯೆದ್ದು ಬಾ . . . ೨೮

ಅದು . . . ಗುರು ಲಿಂಗ ಜಂಗಮದ । ಸದಮಲ . . .
. . . ಸ್ತೋತ್ರವ ಮಾಡಿದ ವಿವರವ । ಸದುಹೃದಯರು ಲಾಲಿಪುದು ೩೦

ಕೃತಿನಾಮವು ಮಹತ್ತಿನ ಸಂಗ...... । . . . . . .
. . ಪಾಲಿಸುವರೆ ಗುರು ಲಿಂಗ ಜಂಗಮ । ಕ್ಷಿತಿಯೊಳು ೩೧

ಶರಣಪುರಾಧೀಶ್ವರ [ಗುರುಮೂರ್ತಿಯ । ಕರಜಾತ ಮರುಳು] ಸಿದ್ಧೇಶ
ವಿರಚಿಸಿದೆನು ಮಹತ್ತಿನ ಕಾವ್ಯವ । ಬರದೋದಿ ಕೇಳಿ ಲಾಲಿಪುದು ೩೨

. . . . । ವಸೆದು ಘ್ರಾಣಿಸುವಂದದೊಳು
ರಸದಾಡಿಮದ ಪಣ್ಬಾಯಿ ಬಿಟ್ಟಂದದಿ । ರಸಿಕರು ಕೇಳೆನ್ನ ನುಡಿಯನು ೩೩

. . . . . ಸುಲಿದ ಬಾಳೆಯ ಹಣ್ಣು । ಮಕ್ಕಳ ತೊದಲ್ನುಡಿಯಂತೆ
. . . ಸ್ನೆಯರ ಸೊಬಗನೇನೆಂದು ಮನವು । ೩೪

ಈ ಕಥೆಗಾವುದು ಮೊದಲೆಂದಡೆ ಕೇಳಿ । ಲೋಕವೆಲ್ಲ . . . ನೆನಿಪ
ಶ್ರೀ ಶೈಲದ . . . . । ಏಕಚಿತ್ತದಿ ಕೇಳಿಯೆಲ್ಲ ೩೫

ಸರ್ವೇಶ್ವರನ ಸದ್ಯೋಜಾತಮುಖದೊಳು । ಉರ್ವಿನಾಂ ಪುಟ್ಟ . . .
. . . . । ಪಾರ್ವತಿ . . . . . ಹುದಂ ೩೬

ಧರೆಯನಿಲ್ಲವೇ ಪೃಥ್ವಿ . . . . , . । . . . .
ಇರಿಸದ ಎಲ್ಲೆಗಟ್ಟಿನ . . . ವೊಯೆನೆ । ಕರವೆಂಸೆದುದು ಹೇಮಾದ್ರಿ ೩೭

ಸಾವಿರ . . . . । . . . . ನು
ಕಾವಲ . . . . ಇಷ್ಟೈಲ್ಯರೆಲ್ಲ ಕೇಳಿ । ಐವಿಯು ನೆರೆ ಪೇಳುವೆನು ೩೮

ವೆಂಟ್ಟೆ ನಡೆವ ಕಲ್ಲೆಲ್ಲವೂ ನವರ . . । . . . .
ಮೆಟ್ಟಿದ ಮರಗಳೆಲ್ಲ ಕಲ್ಪವೃಕ್ಷವ । ಹಡೆಯುದನ ... ಮಧನು ೩೯

ಅಲ್ಲಲ್ಲಿ ಮನುಮುನಿ [ಮ]ನುಜ ದೇವರ್ಕಳು । ಅಲ್ಲಲ್ಲಿ ಗರುಡ ಗಂಧರ್ವ
ಅಲ್ಲಲ್ಲಿ ಕಿನ್ನರ ಕಿಂಪುರುಷರುಗಳು । ಅಲ್ಲಲ್ಲಿ ವಿದ್ಯಾಧರರು ೪೦

ಇಂತಪ್ಪ ಮೇರುವಿನುತ್ತರಭಾಗದಿ । ಸಂತತ ರಜತಾದ್ರಿಯುನು
ಅಂತಿಂತೆಂದು ವರ್ಣಿಸುವಡೆ ನೋಡಿ . . . । . . . ಅಳವಲ್ಲವದನು ೪೧

ಕುಂದ ಕುಲಿಶ ಸ್ಫಟಿಕ ಹಿಮ ಕ್ಷೀರ । ಚಂದನಾಗರು ಶಂಖ ಪದ್ಮ
ಇಂದು ರವಿಯು ಫಣಿರಾಜನ ಕೀರ್ತಿ । . . . ತಂದಡೆ ರಜತಾದ್ರಿ ೪೨

ಶಶಿ ಬೆಳದಿಂಗಳ ಕಡನನೀವಂದದಿಂ । ದೆಸೆದಿಕ್ಕು ಪಸರಿಸೆ ಕಾಂತಿ
ಭಸಿತ ಪುಣ್ಯದರಾಶಿಯೋ ಎಂಬಂದದಿಂ । ದೆಸೆದಿಹುದು ರಜತಾದ್ರಿ ೪೩

ದೀಪದೊಳಗೆ ಮುಟ್ಟಿಸಿದ ಕರ್ಪೂರ ತಾ । ನಾ ಪರಿ ಪ್ರಭೆಯಾದಂತೆ
ಶ್ರೀಪರಮೇಶ್ವರ ನಿಮ್ಮ ಪ್ರತಾಪವೆ । ರೂಪಾಗಿ ಬೆಳ್ಪಟ್ಟುವಾಗಿ ೪೪

ಸತ್ಯದಗಳು ಸಾತ್ವಿಕದ ಕೋಟೆಯು । ಮುಕ್ತಿಯು ತೆನೆಗಳಲ್ಲಲ್ಲಿ
ಭಕ್ತಿಯೆ . . . . ವಾಡವೆ । ಉತ್ತಮ ಚತುರ್ವಿಧ ಪಥವು ೪೫

ನಿತ್ಯತ್ವವೇ ನೆಲಮಾಡಂಗವು ಕೇಳಿ । ತತ್ವವೆ ರಾಜಮಂದಿರವು
ಸತ್ಸುಚಿತ್ತಾನಂದ ಶರಣರ ಗೋಷ್ಠಿಯಿಂ । ದರ್ಶಿಯಿಂ ಕೈಲಾಸವಿಹುದು ೪೬

ಗಣನಿಧಿ ಬಸವೇಶ್ವರ ಸಿಂಹಾಸನ । ಮಣಿವಕಾದಿ ಸಿದ್ಧಿಗಳೆಸಲು
ಪ್ರಣವಂ ಕರ್ಣಿಕೆ . . . . . ಮಧ್ಯದಿ । . . . ನೊಪ್ಪಿದ ಸರ್ವೇಶ ೪೭

ದಶಭುಜ ಪಂಚವದನ ತ್ರಿಣೇತ್ರದಿ ಕ । ಣ್ಗೆಸೆವ . . . .
ನಸುನಗೆ ಫಣಿಕುಂಡಲ ಪುಲಿಸಂಬಂಧಿ । ಪಶುಪತಿ ಶಿವನೊಪ್ಪಿದನು ೪೮

ಗಂಗೆಯಂ ಶಿರದೊಳಂ ಗೌರಿ . . . . . । ತಲೆಯೊಳು ತಳೆದ
. . . . . . ದಹನನಪಾಂಗಲೇಕ್ಷಿತ ಗಣ । ಪುಂಗವನೊಪ್ಪಿದ ಶಿವನು ೪೯

. . . . । . . . .
ಇಷ್ಟಫಲಂಗಳ ಕೊಡಿಯೆಂದು ಪ್ರಮಥರು । . . . ಕೈಮುಗಿದಿಹರು ೫೦

ನಿತ್ಯಾನಿತ್ಯನೆ ಸಕಲದೇವರ ದೇವ । ಅತ್ಯತಿಷ್ಠದ್ದಶಾಂಗುಲನೆ
ಸತ್ಯುಚಿತ್ತಾನಂದ ಸಲಹೆಂದು ವೇದಂಗ । ಳೆತ್ತಿ ಕರವ ಮುಗಿದಿಹವು ೫೧

ಸಾಕಾರ ರೂಪ ನಿರಾಕಾರ ವಸ್ತುವೆ । ಏಕೋದೇವನದ್ವಿತೀಯ
ಲೋಕೇಶ್ವರ ಸರ್ವಜ್ಞ ಸಲಹೆಂದು । ನಾಕು ವೇದಗಣವೊಪ್ಪುತಿಹವು ೫೨

ವಿಶ್ವಬ್ರಹ್ಮಾಂಡನಾಯಕ ಸಾರ್ವಭೌಮನೆ । ವಿಶ್ವಾಧಿಕ ರುದ್ರಯೆಂದು
ವಿಶ್ವತೋಮುಖ ವಿಶ್ವತೋಚಕ್ಷು ನೀನೆ । ವಿಶ್ವನಾಥನೆ ಸಲಹೆನಲು ೫೩

ಹೀಗೆಂದು ವೇದಂಗಳು ಕೊಂಡಾಡಲು । ಆಗ ಗಿರಿಜೆ ನಿಂದು ನಮಿಸಿ
ನಾಗಭೂಷಣ ನಿಮ್ಮ ಓಲಗವನು ದೇವ । ಈಗ ನಾನೋಡುವೆನೆನಲಂ ೫೪

ಎಂದಡೊಳ್ಳಿತು ಎಂದು ಚಂದ್ರಶೇಖರಮೂರ್ತಿ । ನಂದೀಶನ ಮೊಗ ನೋಡೆ
ಅಂದು ಸನ್ನೆಯ ಮಾಡೆ ದೇವತೆಗಳು ಕೇಳಿ । ಬಂದರು ಶಿವನೋಲಗಕೆ ೫೫

ನವರತ್ನಮಯ ಸಿಂಹಾಸನದೊಳು ತಾನೆ । ಶಿವನು ಗಿರಿಜೆಯ ಸಹಿತಿರಲು
ಕುರಿತು ಬಂದರು ರುದ್ರ ಹರಿಯಜ ಸುರರೆಲ್ಲ । ವಿವಿಧ.........ಳೆ ನಂದೀಶ ೫೬

ಭದ್ರಕಾಳಿಯ ರಮಣನು ವೀರಭದ್ರನು । ರುದ್ರದೈವದ ಗಂಡ ಸ್ವಾಮಿ
ರುದ್ರಗಣಂಗಳ ಸಹವಾಗಿ ಬಂದನು । ಚಿದ್ರೂಪ ನೋಡ ಚಿತ್ತೈಸು ೫೭

ಮೂಷಕವಾಹನ ಗಣನಾಥರು ನೋಡಿ । ಈಶನೆ ನಿಮ್ಮೋಲಗಕೆ
ಭಾಷೆಪಾಲಕನೆ ಭವರೋಗವೈದ್ಯನೆ ವಿ । ಘ್ನೇಶನ ನೋಡ ಚಿತ್ತೈಸು ೫೮

ಸಲಕ ತತ್ವಂಗಳನೊಳಗಿಟ್ಟು . . . . • ತನ್ನ । ಶಿಖಿಯೇರಿ ಕುಣಿದಾಡಿದಾತ
ಮುಖವಾರುಳ್ಳ ಕುಮಾರನು ಬಂದನು । ಸುಖಮಯ ನೋಡ ಚಿತ್ತೈಸು ೫೯

ನಂದಿಯುವಿಡಿದೇರಿ ಪ್ರಮಥಗಣಂಗಳು । ಒಂದಾಗಿ ಈಶಾನ್ಯಮೂರ್ತಿ
ಬಂದೈದನೆ ನಿಮ್ಮ ಪೇರೋಲಗಕೆಂದು । ಚಂದದಿ ನೋಡ ಚಿತ್ತೈಸು ೬೦

ಗರುಡನ . . . . ಚಕ್ರ ಚಾಪ । ಕರ್ಣನಾಲ್ಕರಿಂದುರೆ ಪಿಡಿದು
ಹರಿದಶಕೋಟಿಯೋಲಗಕೆಯ್ತಂದರು । ಗುರುಮೂರ್ತಿ ನೋಡ ಚಿತ್ತೈಸು ೬೧

. . . ಪೋಗಿ ಚತುರ್ಮುಖವಾದುರೆ । ಅಂಚೆಗಮನನೆಯ್ತಂದ
ಮುಂಚಾಗಿ ನವಕೋಟಿ ಬ್ರಹ್ಮರು ಸಹಿತ ವಿ । ರಿಂಚಿ ೬೨

. . . . . . ಮತ್ತೆರಡುಕೋಟಿ । ವೃಂದಾರಕರೊಡಗೂಡಿ
ಬಂದೈದನೆ ಪಲಗಣ್ಣರೂಪಿನ ಪು । ರಂದರನ ನೋಡ ಚಿತ್ತೈಸು ೬೩

. . . . । . . . . . . ಜಗವನೆಲ್ಲವ ಪೊರೆವಗ್ನಿ
ಸೊಗಸಾಗಿ ಬಂದನು ಅಘಹರ ನೋಡೆಂದು । ಮಿಗೆ ನಂದೀಶ ನುಡಿದನು ೬೪

. . . . । . . . . ರಾಧೇಶನು ಬಂದ
ಮೋಸದೊಳಿರಬೇಡ ಮೃತ್ಯುದೇವತೆಗಳ । ನೀಶನೆ ನೋಡ ಚಿತ್ತೈಸು ೬೫

ಅಸುರರು . . . . . . ಟಿಗೆಯೆಲ್ಲ । ಹೆಸರೆನಿಸುವ ನೈಋತ್ಯ
ದೆಸೆಯರಾಣ್ಮರೊಳಗಿವನೊಬ್ಬ ದೈತ್ಯನು ಸ್ವಾಮಿ । ಪಶುಪತಿ ನೋಡ ಚಿತ್ತೈಸು ೬೬

ಶರನಿಧಿಗೊಡೆಯ ನವರತ್ನಂಗಳನೆಲ್ಲ । ನಿರಿಸಿಕೊಂಡಿರುವನು ಬಿಡದೆ
ಪರಿವಾರ ಜಲದೇವತೆಗೂಡಿ ಬಂದನು । ವರುಣನು ನೋಡ ಚಿತ್ತೈಸು ೬೭

ಎಲ್ಲರ ಜೀವಕೆ ಪ್ರಾಣವಾಗಿಹ ವಾಯು । ಫುಲ್ಲಶರನಿಗತಿಹಿತವ
ಹುಲ್ಲೆಯನೇರಿ ಕಿನ್ನರ ಕಿಂಪುರುಷರ । ನಿಲ್ಲದೆ ನೋಡ ಚಿತ್ತೈಸು ೬೮

ಹರಗೆಳೆಯನು ನವನಿಧಿಗೊಡೆಯನುಯೆಂದು । ಧರೆಯೆಲ್ಲ ಪೊಗಳುತ್ತಿರಲು
ಗರುಡ ಗಂಧರ್ವ ವಿದ್ಯಾಧರರೊಡಗೂಡಿ । ತುರಗವನೇರಿ ಕುಬೇರ ೬೯

ದಿವ ರಾತ್ರಿ ದಿನ ಮಾಸ ಸಂವತ್ಸರಂಗಳು । ನವಗ್ರಹಕೆಲ್ಲಾದಿತ್ಯ
ಧ್ರುವ ಮೊದಲಾದ ನಕ್ಷತ್ರಂಗಳನೆಲ್ಲ । ವಿವರವ ನೋಡಚಿತ್ತೈಸು ೭೦

ಈಗೆ ಭೃಗು ಗೌತಮುನು ದಧೀಚಿ ವಸಿಷ್ಠನು । ಈಗೆ ದೂರ್ವಾಸನಗಸ್ತ್ಯ
ಬಗೆ . . . . . ಮನು ಮುನಿಗಳಿಯ್ಯಂದರು । ಜಗದೀಶ ನೋಡಿ ನೀವೆಂದ ೭೧

ಪಾತಾಳ ಲೋಕದ ನಾಗರ್ಕಳು ಕೇಳಿ । ಭೂತಳದ ಶರಣರೆಲ್ಲ
ಮಾತೇನು ಸ್ವರ್ಗಲೋಕದ ದೇವರ್ಕಳು । ಭೂತೇಶ ನೋಡಬೇಕೆಂದ ೭೨

ಹರಿಯುಜರುಗಳು ಕಟ್ಟಿಗೆಕಾರರಾಗಿಯೆ । ತರತರದೊಳು ಪವುಜ
ನಿರಿಸುವ ಚಂಡಕೀರ್ತಿಗಳೆಲ್ಲ ಕೊಂಡಾಡೆ । ಗಿರಿಜೆ ನೀ ನೋಡೆಂದ ಶಿವನು ೭೩

ಶರಣ ಪ್ರಮಥನಾಥರು ರುದ್ರಗಣಗಳು । ಹರನ ಸಮೀಪದೊಳಿಪ್ಪ
ಹರಿಯಜ ಮನು ಮುನಿ ದಿಕ್ಪಾಲಕರು ಎಲ್ಲ । ತರತರದಲ್ಲಿ ನಿಂದಿಹರು ೭೪

ಕಂಬಲಾಶ್ವತರು ಗಾನವ ಪಾಡಿ . . . । . . . . . .
ತುಂಬುರು ನಾರದರುಗಳು ವೀಣೆಯ ಕಿವಿ । ಗಿಂಬಾಗಿ ಕೇಳಿಸುತಿಹರು ೭೫

ವರನಂದಿ ಮದ್ದಳೆಯು . . . . . . । ಬಾಜಿಸೆ ಬ್ರಹ್ಮಾಂಡದಲ್ಲಿಯು
. . . . . . ನಂದಿಸಲಾವು ಜೀವನು । ನರಪತಿ ಕೇಳಿಸುತಿಹನು ೭೬

ಭರತ ಕಟ್ಟಳೆಯು ಶಾಸ್ತ್ರಂಗಳನರಿದಾ । ಹರಿ ಬ್ರಹ್ಮನು ನಂದಿ ನುಡಿಸೆ
ಕರವಮುಗಿದು ಜಯಜಯ ಹರಯೆಂದುರೆ । ತಿರುಪ ಕಟ್ಟಿದನಲ್ಲಿ ಭೃಂಗಿ ೭೭

ಕಂಗಳ ಮೆಳ್ಳಿಸಿ ಪಲ್ಲುಗಡಿದು ಮುನಿ । ಪುಂಗವರುಗಳನೇಡಿಸುತ
ಹೆಂಗಳಗಾಳಾದ ಸುರರನೆಲ್ಲ ನೋಡಿ । ಭಂಗಿಸಿದನು ಭೃಂಗೀಶ ೭೮

ಮಾಯಕೋಲಾಹಳನೆಂಬ ಬಿರಿದ ಕಟ್ಟಿ । ಗಾಯು . . . ದಿಂದ ಭೃಂಗಿ
ಆಯುತವರಿದು ನಾಟ್ಯವನಾಡಲು ದೇವಿ । ಕಾಯುಜಹರನ ನೋಡಿದಳು ೭೯

ರಕ್ತ ಮಾಂಸವು ತ್ವಕ್ಕು ಶರಿರಕೆ ಆಧಾರ । ಶಕ್ತಿ ಸಾಹಸವು ನನ್ನಿಂದ
ಅಸ್ತಿಮಾತ್ರವು ದೇವ ನಿನ್ನವೆಂದೆನೆ ಕೇಳಿ । ಮತ್ತೆ . . . ಶರೀರವನು ೮೦

ಭಕ್ತಿಭರಿತ ಅಸ್ತಿಮಾತ್ರದೊಳಿರೆ ಕಂಡು । ಮತ್ತೊಂದು ಪಾದವ ಕೊಡಲು
ಚಿತ್ತಜಹರ ಜಯ ಎಂದು ದೇವರ್ಕಳು । ಎತ್ತಿ ಕೈಮುಗಿದು ನಮಿಸಲು ೮೧

ಅಂಗವೆ ಲಿಂಗ ಲಿಂಗವೆ ಅಂಗವಾದನ ।ಭೃಂಗೀಶನ ನೋಡು ದೇವಿ
ಕಂಗಳಿಂದಲಿ ನೋಡಿ ಗಿರಿಜೆ ಕೊಂದೊಡಲು । ಮುಂಗಡೆಯ ವಾದ್ಯ ನುಡಿಯೆ ೮೨

ತಾಳ ದಂಡಿಗೆ ಮದ್ದಳೆ ಭೇರಿ ನಿಸ್ಸಾಳ । ಸೂಳೈಪ ಶಂಖಗಳಿಂದ
ಕಾಳೆ ಬುರುಗಲಿ ರಣವಾದ್ಯಗಳನ . . . । . . . . . . ರೆಲ್ಲರು ನುಡಿಸೆ ೮೩

ಆ ಸಮಯದೊಳಗೆ ಚಂಡಕೀರ್ತಿಗಳೆಲ್ಲ । ರೀಶನ ಕೊಂಡಾಡುತಿರಲು
ಬಾಸವಾ [ಳ] ರ ಗಂಡ ಭವರೋಗವೈದ್ಯ ಸ । ರ್ವೇಶ್ವರ ಜಯಜಯಯೆಂದು ೮೪

ಚಂಡಕೀರ್ತಿಗಳು ಕೈವಾರಿಸಿ ಕೊಂಡಾಡೆ । ಖಂಡೇಂದುಧರ ನೋಡುತಿರಲು
ತಂಡತಂಡದಿ ಹರಿಯಜರು ಕೈಮುಗಿವುದ । ಕಂಡು ಗಿರಿಜೆ ಚಿಂತಿಸಲು ೮೫

ಇಂತಪ್ಪ ಓಲಗವನು ನೋಡಿ ದೇವಿ । ಚಿಂತಿಸುವಂತಸ್ಥವರಿದು
ಅಂತು ಓಲಗವನು ಹರಯಿಸಿ ತನ್ನಯ । ಕಾಂತೆಯ ಕೇಳಿದ ಶಿವನು ೮೬

ನಮ್ಮಿಂದಲಾದ ಕೊರತೆಯಾವುದು ದೇವಿ । ಗವ್ಮನೆ ಪೇಳೆಂದೆನಲು
. . . ಸೃಷ್ಟಿಯ ನೋಡಿ ಚಿಂತಿಸಿದೆನು । ದಮ್ಮಯ್ಯ ನಿಮ್ಮಿಂದಲ್ಲ ೮೭

ಎಂದರೊಳ್ಳಿತು ಸೃಷ್ಟಿಯ ವಿವರವ ನಾವು । ಮುಂದೆ ಪೇಳುವೆವೆಂದನು
. . .ಗಣಮೇಳ । ದಿಂದ . . . ರನವೊಟ್ಟಿದನು ೮೮

. . . ಮಹತ್ತಿನ ಸಾಂಗತ್ಯವನಾ । ನಂದದಿ ಬರೆದೋದಿ ಕೇಳಿ
ಮುಂದೆ ಶಿವನು ಭಕ್ತಿ ಮುಕ್ತಿಯ ಕೊಡುವನು । ೮೯

ಎರಡನೆಯ ಸಂಧಿ

ಪತ್ರವಾಹನ ಗರ್ವ ಪರ್ವತ ಕುಲಿಶನೆ । ಪತ್ರವಾಹನ ಸ್ತೋತ್ರ ಪಾತ್ರ
ಪತ್ರವಾಹನ ನಯನಾರ್ಚಿತ ಪಾದಗ ' ಪತ್ರವಾಹನಪಿತ ಶರಣು ೧

ವೊಂದಣ ಕಥೆ ಯಾವುದೆಂದಡೆ ಪೇಳುವೆ । ಬಂದು ಶ್ರೀಗಿರಿಜೆಯು ಕೈಮುಗಿದು
ಇಂದುಧರನ ಸೃಷ್ಟಿಯಂದವ ಕೇಳಲು । ಅಂದು ಪೇಳಿದುದ ನಾನುಸುರ್ವೆ ೨

ಹರನು ತನ್ನರಸಿಗೆ ಪೇಳಿದ ಕಥೆಯೆನ । ಗರುಹ ಬೇಕೆಂದಾ ಶಿಷ್ಯ
ಗುರುವಿಗೆರಗೆ ನೋಡಿ ಕರುಣದಿ ಪೇಳ್ದುದಾ । ನೊರೆವೆ ಶರಣರೆಲ್ಲ ಕೇಳಿ ೩

ನಾಲಿಗೆಯಿ[ಲ್ಲದ ಘಂಟೆಯು]ನುಡಿವುದೆ । ಕಾಲಿಲ್ಲದವನೋಡುವನೆ
ಮೂಲಮಂತ್ರವ ತಿಳಿಯದ ಪಶುಬಲ್ಲನೆ । ಮೇಲಾದ ಶಿವತತ್ವವನು ೪

ಪರತತ್ವ ಪರನಾದ ಬಿಂದು ಕಳೆಗಳಿಂದ । ಪರಿಣಾಮ ತಲೆದೋರಿದಂತೆ
ಉರುತರ ಪ್ರಣವ ಪಂಚಾಕ್ಷರಿಯಿಂದ । . . . , ... ೫

ಆಕಾಶದೊಳಗೆ ತೋರುವ ಮಿಂಚಿನಂದದಿ । ಸಾಕಾರ ರೂಪಾಗಿ ಶಿವನು
ಲೋಕಸೃಷ್ಟಿಗೆ ಬೀಜವೊ ತಾನೆಂಬಂತೆ । ಆಕಾರವಾಗಿ ತೋರಿದನು ೬

ಷಡುರುತು ತಮ್ಮಯ ಕಾಲಂಗಳ ತಾವೆ । ಬಿಡದೆ ತೋರುವ ತೆರನಂತೆ
ಮೃಡನು ತನ್ನಯ ರೂಪವ ತಾನೆ ತೋರಿದನಾಗ । ಬೆಡಗದನೇನ ಬಣ್ಣಿಪೆನು ೭

ರಾಜನೊಳಗೆ ಷೋಡಶ ಕಳೆಗಳು ತಾವೆ । ರಾಜಿಸುವಂದದಿ ಕೇಳು
ಬೀಜವೃಕ್ಷನ್ಯಾಯದಂದದಿ ಪರಶಿವ । ಮೂಜಗದೊಳಗೆ ತೋರಿದನು ೮

ತಿಲದೊಳು ತೈಲ ತಾಪದೊಳಗೆಯಗ್ನಿಯು ಜಲ । ಶಿಲೆಯೊಳು ತೋರುವ ತೆರದೊಳಗೆ
ಚೆಲುವೆತ್ತ ಶಿವನ ಕಳೆಗಳಲ್ಲಿ ತೋರಿತು । ಹೊಳೆವ ಚಂದ್ರಪ್ರಭೆಯಂತೆ ೯

ಪಂಚತತ್ತ್ವವು ಪಂಚ[ಕ]ಲೆ ಪಂಚ । ಪಂಚಮುಖಂಗಳ ಧರಿಸಿ
ಪಂಚಾಕ್ಷರ ರೂಪತಾನಾಗಿ ಸದಾಶಿವ । ಪಂಚವರ್ಣವು ತಾನಾದ ೧೦

ತತ್ಪುರುಷಾನನ ವಾಮದೇವಘೋರ । ವೊಪ್ಪುವ ಸದ್ಯೋಜಾತ
. . . . ಮುಖಂಗಳ ಧರಿಸಿದ । ಕಪ್ಪುಗೊರಳ ಸದಾಶಿವನು ೧೧

ಒಂದೊಂದು ಮುಖ ಒಂದೊಂದು ರೂಪನಂ ತಾಳಿ । ಒಂದೊಂದು ಮೂರ್ತಿಗಳಾಗಿ
ಒಂದೊಂದು ನಾಲ್ಕುಮುಖವು ಎಂಟುಹಸ್ತದಿಂ । ದಿಂದುಧರನ ಪೂಜಿಪರು ೧೨
ಹಳದಿ ಬಿಳಿದು ಕೆಂಪು ಕಪ್ಪುವರ್ಣಂಗಳ । ತಳೆದಾ ಮೂರ್ತಿಗಳೆಲ್ಲ
ಬಳಸಿ ಉತ್ತರ ಪೂರ್ವ ದಕ್ಷಿಣ ಪಶ್ಚಿಮ । ಗಳೆ ಮುಖವಾಗೊಪ್ಪುತಿಹವು ೧೩

ಧರಣಿ ಸಲಿಲ ಶಿಖಿ ಮರುತಾಂಬರಗಳ । ಹರಹಿಯೊಂದೊಂದು ಮೂರ್ತಿಗಳನು
ಕರಮೆಸೆದವು ಬ್ರಹ್ಮಾಂಡವೆಂದೆನಿಸಿಯೆ । ಹರನ ವಿನೋದವಿನ್ನೆಂತೊ ೧೪

ಹಲಸಿನ ವೃಕ್ಷವು ತಃದಿ ಬೇರಿಂದಃರೆ । ಫಲವಾದಂದದಿ ಕೇಳು
ಹಲವು ಬ್ರಹ್ಮಾಂಡಗಳನೆಲ್ಲ ಸೂಡಿದ ತಲೆ । ಯೊಂದ ಸೂಡಿದ ಶಿವನು ೧೫

ಇಂತು ಬ್ರಹ್ಮಾಂಡಗಳನು... । ಚಿಂತಿಸಿ ಪರಮೇಶ್ವರನು
ಸಂತತ ಸ್ಥಿತಿ ಗತಿ ಸಂಹಾರಕೆ ಕರ್ತೃ । ವೆಂತೆಂದು ನೋಡಿಯೆ ತಿಳಿದ ೧೬

ಸತ್ವ ರಜ ತಮೋಗುಣ ಮೂರನೆ[ನೆ] । ವುತ್ತಜ ಹರಿ ರುದ್ರಯೆಂದು
ಚಿತ್ತಜಹರ ನೋಡಿ ಸ್ಥಿತಿ ಗತಿ ಸಂಹಾರ । ಕರ್ತೃಗಳೆಂದು ನೇಮಿಸಿದ ೧೭

ಸ್ಥಿತಿಕರ್ತನಜನೆಂದು ಕರ್ತ ಹರಿಯು । ನ್ನತ ಸಂಹಾರನೆ ರುದ್ರ
ಪ್ರತಿಪಾಲಿಸಿ ಲೋಕವನು ಬಿಡದೆಯೆಂದು । ಶಿತಿಕಂಠ ಮಣಿಹವನಿತ್ತ ೧೮

ಇಂದುಧರನು ನೇಮಿಸಿ ಮಣಿಹವ ಕೊಡೆ ನೀ । ನೆಂದವರೆಲ್ಲ ಧ್ಯಾನಿಸುವ
ಚಂದವರಿದು ಸಿರಿ ಸರಸತಿ ಕಾಳಿಯು । ರುಂದು ಸೃಷ್ಟಿಸಿ ಕೊಟ್ಟ ಶಿವನು ೧೯

ಸತಿಯಹಾದುದ ಕಂಡು ಸುತರಾಗಬೇಕೆಂದು । ಶಿತಿಕಂಠನ ಧ್ಯಾನಿಸಲು
ಪ್ರತಿಯಹಾಗಿ ನವಬ್ರಹ್ಮ ಸೃಷ್ಟಿಸಿತ್ತುಮಾ । ಪತಿಯಾಜ್ಞ್ಞೆ ಸೃಷ್ಟಿ ಮಾಡೆಂದ ೨೦

ಆದೊಡಾವುದು ಸೃಷ್ಟಿಗೆ ಬೀಜವೆಂ । ದಾದಿ ಬ್ರಹ್ಮವ ಕೇಳಿದೊಡೆ
ವೇದಮಂತ್ರಾದಿ ಆಗಮಂಗಳಿಗೆಲ್ಲ ತಾಯಾದ । ಆದಿಶಕ್ತಿಯು ಕೇಳೆನಲು ೨೧

ಪರಾಶಕ್ತಿಯು ಪಾದಾರವಿಂದವನಾಗ । ಸ್ಮರಿಸಲು ಸರಸಿಜಭವನು
ವರವ ಕೊಟ್ಟಳಂ ಮಂತ್ರಶಕ್ತಿಯನಾಗಲೆ । ವಿರಚಿಸಿದನು ಬ್ರಹ್ಮನೆಂದು ೨೨

ಬ್ರಹ್ಮಾಂಡವೆಂಬ ... ದಂಡವ ನಿರ್ಮಿಸಿ । ಬ್ರಹ್ಮನಂ . . . .
. . . . । ೨೩

ಒಂದು ಜಂಬೀರ ಫಲವ ಕೊಯ್ಯೆ ಮೂರಾ । ದಂದದಿ ಒಂದು ಪಾತಾಳ
ಒಂದು ಭೂತಳ ಒಂದು ಸ್ವರ್ಗ . . . । ಚಂದದಿ ಮೂರುಲೋಕವನು ೨೪

ಬಿಸಜಸಂಭವನೀರೇಳು ಲೋಕವನೆಲ್ಲ । ಹಸನಾಗಿ ನೋಡಿ ನಿರ್ಮಿಸಲು
ರಸವೈದ್ಯನಾಂತ ತಂಗರಡಗೆಯಂತೆ ರಂ । ಜಿಸಿದವದೇನ ಬಣ್ಣಿಪೆನೊ ೨೫

ಜಲಜಸಂಭವನು ಕುಲಾಲನ ತೆರದಿಂದ । ಹಲವು ಘಟಂಗಳ ರಚಿಸಿ
ಸಲೆ ಪುಣ್ಯ ಪಾಪಶನಾರ್ಥಂಗಳನೆಲ್ಲ । ತಲೆಯೊಳು ಲಿಖಿತವ ಬರೆದ ೨೬

ಜವಳಿಯಂ ಲೆಕ್ಕವ ನೋಡಿ ವಿಳಾಸವ । ವಿವರವಾಗಿಯೆ ಒರೆದಂತೆ
ಶಿವಲಿಖಿತವ ನೋಡಿ ಪಣೆಯೊಳು ಬರೆದನು । ನವಬ್ರಹ್ಮರಾಣ್ಮನು ಕೇಳ ೨೭

ಸರಸಿಜಭವ ಸೃಷ್ಟಿಯ ಮಾಡಲಾಕ್ಷಣ । ಹರಿಯುದ ನೋಡಿ ರಕ್ಷಿಸುವ
ಉರಿಗಣ್ಣಿನಿಂದ ರುದ್ರನು ಸಂಹಾರವ ಮಾಡೆ । ಕರಮೆಸೆದುದು ಶೂದ್ರನಂತೆ ೨೮

ಸುರ ನರ ಉರಗಲೋಕಂಗಳ ವಿವರವ । ಸರಿಮಾಡಿ ಬೊಮ್ಮ ನಿರ್ಮಿಸಿದ
ಪರಿಯಂತೆ . , . . ನಭ ಪಾತಾಳ । ಹರದರಂಗಡಿಯಂತಿಹುದು ೨೯

ಸಂಬಾರದ . . . ಗೆಯಂತೆ ಪಾತಾಳ । ಮುಂಬರ ಪರಿಯುಂತರವು
ಕುಂಭಿನಿಯೊಳು ನಾನಾವಸ್ತುವನಜ । ತುಂಬಿ ಕೊಂಡಿಹ ಕೋಮಟಿಗ ೩೦

ಲೋಕಾಲೋಕದ ವರ್ಣನೆಗಳನೆಲ್ಲ । ನಾಕುದಿಕ್ಕನು ನೋಡಿ ಬ್ರಹ್ಮ
ನಾಕುವೇದವು ನಾಕು ಯುಗಧರ್ಮ ಪಾದವ । ನಾಕುಮೊಗನು ಸೃಷ್ಟಿಸಿದ ೩೧

ಜಲಕರ್ಣಿಕಾ ಶಕ್ತಿ ಕೂರ್ಮ ದಿಗ್ಗಜ ಫಣಿ । ಗಳ ಮೇಲೆ ಕಾಲಾಗ್ನಿರುದ್ರ
. . . . ಯಮ ಕೂಷ್ಮಾಂಡ ಗಣನಾಥ । ತಳೆದೇಳು ಲೋಕವೊಪ್ಪಿಹವು ೩೨

ಅತಳ ವಿತಳ ವಸುತಳವವನೀತಳ । . , . ಯುದಿಂ ರಸಾತಳವ
ಮಹಾತಳವೆಂಬೇಳು ಲೋಕಂಗಳ । ಮತಿಯಾಣ್ಮ ಸೃಷ್ಟಿ ಮಾಡಿದನು ೩೩

ಪನ್ನಗದೈತ್ಯರುಗಳಿಗೆ ಹಸಿಗೆಯ ಮಾಡಿ । ಯುನ್ನತ ಪಾ . . . ಕೇಶ್ವರನ
ನನ್ನಿಯಿಂ ನಿರ್ಮಿಸಿದನು ಕೇಳು ಬಿಡದಾ । ಸನ್ನುತನಜ ಮೇಲೆ ಧರಣಿ ೩೪

, ... ಶರಧಿ . . . ದ್ವೀಪ ನವಖಂಡವ । ಮೇರು ಶೃಂಗ ಶೈಲವನು
ಸುರಪುರ ಮೊದಲಾದ ಪಟ್ಟಣವನೆಲ್ಲ । ವಿರಚಿಸಿದನು ಬ್ರಹ್ಮನಂದು ೩೫

ಧ್ರುವ ಮೊದಲಾದ ನಕ್ಷತ್ರ ಮಂಡಲಗಳ । . . . . . ನಿರ್ಮಿಸಿಯೆ
ರವಿ ಶಶಿ ಮೊದಲಾದ ನವಗ್ರಹಗಳನೆಲ್ಲ । ಜವದಿಂದ . . . . ಸುತಿಹನು ೩೬

ಮೇರುಪರ್ವತ ಮೊರೆಯಾಗದಂದದಿ ಬ್ರಹ್ಮ । ಮೂರು ಕಂಕಣ ನಾಕುಗಿರಿಯು
ಸೇರಿಸಿ ಸುರಧೇನು ಕಲ್ಪವೃಕ್ಷಂಗಳ । ನೋರಂತೆ ಸುರನದಿಗಳನು ೩೭

ಭುವರ್ಲೋಕ ಜನೋಲೋಕ ಧ್ರುವರ್ಲೋಕ ಸ್ವರ್ಲೋಕ । ತವೆ ಸತ್ಯ ತಪಲೋಕಗಳ
ಶಿವಲೋಕ ಮಹರ್ಲೋಕಂಗಳನೆಲ್ಲ । ಆ ವಿಧವ ಕೇಳೆಂದನಾರ್ಯ ೩೮

ಸುರ ನರರೆಂಬ ವೃಕ್ಷವ ಭಿತ್ತಿ ಬ್ರಹ್ಮನು । ಧರೆಯ ಹರಹಿ ಕಟ್ಟೆಗಟ್ಟಿ
ಮರುತ ಜಲವ ತಂದೆರೆದಾತೆ ಲೋಕವ । ಶರನಿಧಿ ಬಳಸಿ ಕೊಂಡಿಹುದು ೩೯

ಹರನ . . . . ಯ ಕಂಡು ಧರಿಸಿರ್ದ ಉರಗನು । ಸರಿದು ಮೇರುವಿನಿಂದಿಳಿದು
ಧರೆಯು ಬಳಸಿ ಪಾತಾಳಬಿಲಕೆ ತಾನೆ । ಪರಿವಂತೆ ಶರಧಿಯೊಪ್ಪಿದವು ೪೦

ಕಾಳದೈತ್ಯರು ದಿವಿಜರ ಮೇಲೆ ಬಹರೆಂದು । ಏಳು ಸುತ್ತಿನ ಕೋಟೆಯಿರೆ
ಏಳುಸುತ್ತಿನ ಅಗಳನು ತೆಗೆದಂದದಿ । ಏಳುದ್ವೀಪವು ಏಳುಶರಧಿ ೪೧

ಲವಣೇಕ್ಷು ಸುರೆ ಸರ್ಪಿ ದಧಿ ದುಗ್ಧ ಜಲನಿಧಿ । ನವಖಂಡ ಪೃಥ್ವಿಯೆಲ್ಲವನು
ಅವರವರ ಹೆಸರನೆ ಮಾಡಿಯಜ ತನ್ನ । ಕುವರರಿಗವನಂದು ಕೊಟ್ಟ ೪೨

ಈ ತೆರದಿಂದ ನಿರ್ಮಿಸಿ ಪಂಚಶತಕೋಟಿ । ಭೂತಳವನೆ ಹಸುಗೆ ಮಾಡಿ
ಧಾತರಾದವರವರಿಗೆ ತಕ್ಕ ವಳಿತವ । ಚಾತುರ್ಯದಿಂ ಬ್ರಹ್ಮನಿತ್ತ ೪೩

ಒಂದೊಂದು ವರ್ಣದ ಭೂಮಿ ಫಲಾಹಾರ । ಒಂದೊಂದು ಕುಲಗೋತ್ರದಿಂದ
ಒಂದೊಂದು ಲಿಂಗವ ಪೂಜಿಸಿ ಕೊಂಡುರೆ । ಚಂದದಿಂದಿರುತಿಹರೆಲ್ಲ ೪೪

ಪಲವು ವರ್ಣದ ಭೂಮಿ ಫಲಹಾರ । ಪಲವು ವರ್ಣದ ಮಾನವರು
ಪಲವು ಲಿಂಗವನೆಲ್ಲ ಬಿಡದೆ ಪೂಜಿಪರಲ್ಲಿ । ಚೆಲುವೆತ್ತ ಭರತಖಂಡದೊಳು ೪೫

ಷಡುದರುಶನಗಳು ತಮ್ಮ ದೇವರುಗಳ । ನೊಡೆಯನೆಂದೇ ಪೂಜಿಪರು
ಮೃಡನರ್ಚಿಪರು ಶೈವ ವೀರಶೈವರುಯೆಲ್ಲ । ಪೊಡವಿಯೊಳಗೆ ಕೇಳೆಂದ ೪೬

ಧರೆ ಜಲ ಶಿಖಿ ರವಿ ಶಶಿ ಪವನಾಕಾಶ । ಸ್ವರುಪನ ನೋಟ ಮಾತ್ರದೊಳು
ಪರಿಣಾಮವ ಕೊಂಡು ಮುದದಿಂದ ಕೇಳು । ಹರನು ಲೋಕವನು ರಕ್ಷಿಸುವ ೪೭

ಧರೆಯನೆಲ್ಲವನಾಳುವ ರಾಯನು ತನ್ನ । ಪರಿವಾರಕೆ ಸಂಬಳವ
ತರವನರಿದು ನೆರೆದು ಕೊಡುವಂದದಿ । ಹರನು ರಕ್ಷಿಸುವರೆಲ್ಲರನೂ ೪೮

ಅವರವರುಗಳು ಮಾಡಿದ ಫಲವೆಲ್ಲವ । ನವರವರ್ಗಳಿಗಿತ್ತು ತಾನು
ಅವರವರಿಂದಲಿ ಪೂಜಿಸಿ ಕೊಂಬನು । ಶಿವನ ಸಾಕ್ಷಿಕನಾಗಿ ಕೇಳು ೪೯

. . . . ಕತೆಗಳು , ... ಮಾತನೆಲ್ಲವ । ಚಾತುರ್ಯದಿಂದಲಿ ತಿಳಿದು
ನೀತಿವಿದನು ನ್ಯಾಯವ ತಿದ್ದುವಂದದಿ । ಭೂತೇಶನೆಲ್ಲರ ರಕ್ಷಕನು ೫೦

ಮುಟ್ಟಿ ಪೂಜಿಸಿದರ್ಗೆಯಿಂದ ವರವನು । ಕೊಟ್ಟು ಕಡನ ತಿದ್ದುವಂತೆ
ದಿಟ್ಟಿಮೂರನು ಕೊಟ್ಟು ರಕ್ಷಿಪನಲ್ಲದೆ । ಹುಟ್ಟಿದರ್ಗೆಲ್ಲ ಕೊಡುವನೆ ೫೧

ವರುಷ ಹಿಮೋಷ್ಣಕಿರಣನಾಗಿ ಲೋಕದಿ । ಚರಿಸಾಡುವ ಸೂರ್ಯನಂತೆ
ಹರ ಗುರು ಲಿಂಗ ಜಂಗಮವಾಗಿಯೆ ತಾನು । ಧರೆಯೊಳು ಪೂಜಿಸಿಕೊಂಬ ೫೨

ದಶವಾಯು ಪಿಂಡಾಂಡ ಬ್ರಹ್ಮಾಂಡದೊಳಗೆಲ್ಲ । ವಸೆದು ಚರಿಸುವಂದದೊಳು
ಶಶಿಧರ ಚರ ಗುರು ಲಿಂಗವಾಗಿಯೆ ಕೇಳು । ವಸುಧೆಯೊಳಗೆ ಚರಿಸುವನು ೫೩

ಏಕೋದೇವ ತ್ರಯೋರ್ಭ್ರ್ವ ವೆಂದಾ । ನಾಲ್ಕುವೇದವು ಪೊಗಳುವವು
ಸಾಕಾರ ರೂಪಾಗಿ ಪರಶಿವ ತಾನೊಂ । ದಾಕಾರವಾಗಿ ತೋರುವನು ೫೪

ನಾದವೆ ಲಿಂಗ ಬಿಂದುವೆ ಜಂಗಮವಾ । ಬೋಧಾಗುರುಮೂರ್ತಿ ಕಲೆಯು
ವೇದಾಗಮ ಮಂತ್ರಶಾಸ್ತ್ರಂಗಳಿಗೆ । ಲ್ಲಾದಿಯೆ ಪ್ರಕೃತಿ ತಾನೆಂದು ೫೫

ಆದಿಯೆ ಭಕ್ತ ಅನಾದಿಯೆ ಜಂಗಮ । ನಾದ ಬಿಂದು ಕಲಾಲಿಂಗ
ವೇದಾದಿ ಮಂತ್ರಂಗಳಿಂದಲಿ ಶ್ರೀಗುರು । ಬೋಧಿಸುವನು ಶಿಷ್ಯರನು ೫೬

ಶೈವಾದಿಗಳಿಗೆಲ್ಲ ಸ್ಥಾವರವಾಗಿಯೆ । ಭೂವಳಯದಿ ಪೂಜೆಗೊಂಬ
ಶ್ರೀವೀರಶೈವರಿಗಿಷ್ಟಲಿಂಗಮದಾಗಿ । ದೇವ ಪೂಜೆಯ ಕೈಕೊಂಬ ೫೭

ಸುರರೆಲ್ಲರ ಕೈಯ ಸ್ಥೂಲಪೂಜೆಯ ಕೊಂಬ । ವರ ಮುನಿಗಳ ಹೃದಯದೊಳು
ಹರನು ಧ್ಯಾನಾರೂಢನಾಗಿಯೆ ಇರುವನು । ಕರುಣಾಕರ ಪರಶಿವನು ೫೮

ಗುರು ಲಿಂಗ ಜಂಗಮದುರುಚಾರಿತ್ರವೆ । ವರ ಮಹತ್ತೆಂದೆನಿಸಿ
ಚರಮೂರ್ತಿಯಾಗಿಯೆ ಚರಿಸುತಿಹನು ಶಿವ । ಧರೆಯೊಳು ಭಕ್ತರಿಗೊಲಿದು ೫೯

ಹರಿಯಜ ಸುರಮನು ಮುನಿ ದಿಕ್ಪಾಲರು । ನರರೆಲ್ಲರು ಪೂಜಿಸಿಯೆ
ವರವ ಪಡೆದುದಕೆ ಸಾಕ್ಷಿಯೆ ಶ್ರೀಗಿರಿ । ಧರೆಯೊಳು ಕಾಶಿಯ ಕ್ಷೇತ್ರ ೬೦

ಜಲವೊಂದು ನೆಲೆಗೊಂಡು ಸಸ್ಯಾದಿಗಳಿಗೆಲ್ಲ । ಹಲವು ರುಚಿಯು ಪುಟ್ಟುವಂತೆ
ಸಲೆ ವಿಶ್ವಬ್ರಹ್ಮಾಂಡದೊಳಗೆಲ್ಲ ಶಿವನ । ಕಲೆ ಪರಿಪೂರ್ಣವಾಗಿಹುದು ೬೧

ಹರಿ ಮತ್ಸ್ಯ ಕೂರ್ಮಾವತಾರವಾದಲ್ಲಿಯೆ । ಹರನ ಪೂಜಿಸಿದನು ಬಿಡದೆ
ಶರಧಿ ಮಧ್ಯದೊಳಂ ಲಂಕಾಪಟ್ಟಣದೊಳು । ವರ ಮತ್ಸ್ಯಕೇಶ್ವರನವನು ೬೨

ರಾವಣನನುಜ ವಿಭೀಷಣನೆಂಬ . . . . । . . . .
ಭೂವಳಯಂದಿ ಲಿಂಗ . . . . ಸಿಶ । ಯವ ಪೂಜೆಯು ಮಾಡಿದನು ೬೩

ದಶಕಂಠನ ಕೊಂದ . . . ಪಚಯುವ । ಕಂಡು ಬಿಸಜಾಕ್ಷ ಬಿಡದವನು
ವಸುಧೆಯೊಳ್ಸೇತು ಮಧ್ಯದಿ ರಾಮೇಶ್ವರ । ನೊಸೆದು ಪೂಜಿಸಿದನು ಕೇಳು ೬೪

ಮೆಚ್ಚಿ ರಾಮೇಶ್ವರನಾಕ್ಷಣದಲ್ಲಿಯೆ । ಅಚ್ಯುತ ಕೇಳೆಲೊ ನೀನು
ಇಚ್ಛೆಯೆಲ್ಲವು . . . ನಮಗೆನೆ । ನಿಚ್ಚ ಕಾಶಿಯ ಉದಕವನು ೬೫

ತಂದು ಮಜ್ಜನ ಮಾಡಿದೊಡಾ ಪೂಜೆಯು । ಚಂದದಿ ಕೈಕೊಂಬೆವೆಂದು
ಇಂದುಧರನು ಪೇಳಲು ರಾಮನ ಕೂಡೆ । ಯಂದು ಲೋಕಕೆ ಬೆಸಸಿದನು ೬೬

ಆವನಾದೊಡೆಯೇನಂ ಕಾಶಿಯ ಉದಕದ । ಕಾವಡಿಯನು ತಂದು ಬಿಡದೆ
ದೇವ ರಾಮೇಶಗೆ ಮಜ್ಜನಕೆರೆಯೆಂದು । ಗೋವಿಂದ ನೇಮಿಸಿ ನುಡಿದ ೬೭

ಕಾಶಿಯೊಳಗೆ ವಿಶ್ವನಾಥನ ಪೂಜಿಸಿ । ಲೇಸ ಪಡೆವರೆಲ್ಲ ಕೇಳಿ
ಶಾಶ್ವತ ರಾಮೇಶ್ವರಕೆ ಬಂದಲ್ಲದೆ । ನಾಶವಾಗದು ನಿಮ್ಮ ಪಾಪ ೬೮

ಅಂದು ಮೊದಲು ಕಾಶಿಗೆ ರಾಮೇಶಕೆ । ಕುಂದದೆಯೆಡೆಯಾಡುವರ
ಇಂದುಧರನು ನೋಡಿ ರಾಮೇಶ್ವರ ತಾನೆ । ಚಂದದಿ ಮುಕ್ತಿಯನೀವ ೬೯

ಉತ್ತುಂಗಚೋಳನಯಿವಡಿ ಚೋಳ ಕರಿಕಾಲ । ಸತ್ಯೇಂದ್ರ ಚೋಳರಾಜೇಂದ್ರ
ಉತ್ತಮ ಪಗಲ್ಚೋಳ ಕೈವಲ್ಯ ಮನುಜೇಂದ್ರ । ನಿತ್ಯದ ನೆಲೆ ಧರ್ಮಚೋಳ ೭೦

ನವಚೋಳರು ಎಲ್ಲ ಲಿಂಗಪ್ರತಿಷ್ಠೆಯ । ನವನಿಯೊಳಗೆ ಮಾಡಿ ಬಿಡದೆ
ನವವಿಧ ಪೂಜೆಯ ಮಾಡಲಾ ಭಕ್ತಿಗೆ । ಶಿವನು ಕೈವಲ್ಯವನಿತ್ತ ೭೧

ಅಕ್ಕರಿಂ ಪಾಂಡ್ಯನು ಮಧುರಾಪುರದೊಳು । ಚೊಕ್ಕನಾಥನ ಪೂಜೆ ಮಾಡಿ
ಒಕ್ಕಲು ಸಹವಾಗಿ ಕೈವಲ್ಯಕೈದಿದ । ಮುಕ್ಕಣ್ಣನ ಕೃಪೆಯಿಂದ ೭೨

ಶರಧಿಯ ನಡುವೆ ಹಡಗು ತೇಲುವಂದದಿ । ಧರೆಯೆಲ್ಲ ಪ್ರಳಯವನೆಯ್ದೆ
. . . . ವಲ್ಮೀಕನಾಥನ ಮಹಿಮೆಯೊಳಾ । ತಿರುವಾರೂರು ತೇಲಾಡೆ ೭೩

ನಂಬಿಯಣ್ಣನು ತಾನು ತ್ಯಾಗರಾಯನ ನೋಡಿ । ಕುಂಭಿನಿಯೊಳು ನಡೆಸಾಡೆ
ಕುಂಭಕುಚದಿ ಪಡಿಹೊನ್ನ ಬೇಡಿದೊಡಿತ್ತು । ಸಂಭ್ರಮದಿಂ ಪೂಜೆಗೊಂಡ ೭೪

ಕಾಳಹಸ್ತಿಯೊಳಾ ಲಿಂಗವ ಪೂಜಿಸೆ । ವ್ಯಾಳ ನಿಳಿಯ ಮದಗಜವು
. . . . . . ಪೂಜಿಸೆ । ಭಾಳಲೋಚನ ಕೃಪೆಯಿತ್ತ ೭೫

ಕಂಚಿಯಂ ಪುರದೊಳಗೇಕಾಮ್ರನಾಥನ । ಪಂ[ಚವಿಧದಿ] ಪೂಜೆಮಾಡಿ
ವಂಚನೆಯಿಲ್ಲದಾತ್ಮಜನೀಯೆ ಸಿರಿಯಾಳ । ಕಾಂಚನಾದ್ರಿಗೆ ಕೊಂಡೊಯ್ದ ೭೬

ಧರೆಯಂ . . . ದೆಂದಜಹರಿಗಳು । ಅರುಣಾದ್ರಿಯೊಳು ಕಾದುತಿರಲು
ಸುರರೆಲ್ಲ ಮೊರೆಯಿಡೆ ಹರನು ಕೇಳಿಯೆ ಬಂದು । ಉರಿಲಿಂಗವಾದವರೆಡೆಯು ೭೭

ದುರುಳರು ಮುಂದುಗಾಣದೆ ಕೆಡುತಹರೆಂದು । ಗಿರಿಜೆ ಸಹಿತ ಬಂದು ಶಿವನು
ಕರುಣದಿ ನಿಜರೂಪ ತೋರಿ ಮೆರೆದನಲ್ಲಿ । ಹರುಷದಿಂದಣ್ಣಮಲ್ಲೇಶ ೭೮

ಶಶಿಕಳೆ ಬಿಸಿಗಣ್ಣು ಕೆಂಜೆಡೆ ಧವಲಾಂಗ । ದಶಭುಜ ಪಂಚಮುಖಗಳು
ಎಸೆವ ಕುಂಡಲವೆಡದೊಳಗಂಬಿಕೆ ಸಹ । ಪಶು ಪತಿ ರೂಪ ತೋರಿದನು ೭೯

ಪಾದವ ಮಾಧವ ಮಸ್ತಕವನು ಅಜ । ಪಾದಿಸಿ ಕಂಡವರೆಲ್ಲ
ವೇದಾತೀತನು ಅಣ್ಣಮಲ್ಲೇಶನು । ಮೇದಿನಿಯೊಳು ಲಿಂಗವಾದ ೮೦

ಸುರರು ಹೂಮಳೆಗರೆಯಲು ದುಂದುಭಿನಾದ । ಮೊರೆಯಲು ವರನಂದಿ ಭೃಂಗಿ
ಕರಿಮುಖ ಗುಹ ಗಣ ವೀರ ಮಹಾರುದ್ರ । ಶರಣರೆಲ್ಲರು ಬಂದು ನೆರೆಯೆ ೮೧

ಪಂಕಜನಾಭ ಪದ್ಮಜ ಸುರರೆಲ್ಲರು । ಸಂಕ್ರಾಂತಿಯ ದಿನದಲ್ಲಿ
ಶಂಕರನಿಗೆ ಮದುವೆಯ ಮಾಡಿದರಂದು । ಶಾಂಕರಿಯನು ಮುದದಿಂದ ೮೨

ಕ್ಷಿತಿಯು ರಥವ ಮಾಡಿಯೆರನುದೇವಗೆ । ಪ್ರತಿಯಾಗಿರನವೆ ನಿರ್ಮಿಸಿಯೆ
ಅತಿಶಯದಿಂದ ಶಿವನ ಮೂರ್ತಿಗೊಳಿಸಲು । ಮತಿಯಾಣಲಕ್ಷ್ಮಿಯಕಾಂತ ೮೩

ಆಲವಟ್ಟಿಗೆ ಛತ್ರ ಚಾಮರಗಳನೆಲ್ಲ । ನೀಲಕುಂತಳೆಯರು ಪಿಡಿದು
ಓಲೆ ಮೂಕುತಿ ಬುದಿ ಪಿಲ್ಲಿ ಮಂಟಿಗೆಯಿಟ್ಟು । ಬಾಲಕಿಯರು ಪಾಡುತಿಹರು ೮೪

ತಾಳ ದಂಡಿಗೆ ಮದ್ದಳೆ ತಿತ್ತಿಯುಪಾಂಗ । ಸ್ತ್ರೀಳಾಯವರಿದು ನುಡಿಸುವ
ಕೇಳುವೆಗಳ ಕೇಳಿಸುವರು ಸತಿಯರು । ಭಾಳಲೋಚನನ ಸಮ್ಮುಖದಿ ೮೫

ಕಲಶ ಕನ್ನಡಿ ಗುಡಿ ತೋರಣಗಳನೆತ್ತಿ । ನಳಿನಮುಖಿಯರು ಸಂಭ್ರಮದಿ
ತಳಿರ ತಂಪುಗಳಿಂದರವಟ್ಟಿಗೆಯಿಂದ । ಬಳಸಿ ತಂದರು ಮಹಾರಥವ ೮೬

ಗಿರಿಜೆಗೆ ನಂಬಿಕೆಯನು ಮಾಡುವಂದದಿ । ಗಿರಿಯ ಬಳಸಿ ಚಂದ್ರಧರನು
ತಿರುಣಾಮಲೆಯೊಳಗಣ್ಣಾಮಲ್ಲೇಶನ । ಹರುಷದಿ ಸುರರು ಪೂಜಿಸಲು ೮೭

ಧರೆಯೊಳು [ಮೆರೆಯುವ] ಕಂಚಿಪಟ್ಟಣದೊಳು । ಹರಭಕ್ತ ಚೇರಮನೃಪನು
ತಿರುವಂಜಕರನಾಥ ಲಿಂಗವ ಪೂಜಿಪ । ಹರಭಕ್ತ ಶ್ರೇಷ್ಠ ಸಂಪನ್ನ ೮೮

. . . .ನದ ಮಳೆಗರೆಯ . . . । . . . . ಡವ ಪಡೆದು
ಹನ್ನೆರಡುಸಾವಿರ . . . ವಹವಾಗಿ । ಪನ್ನಂಗಧರನು... ೮೯

ನಂಬಿಯಣ್ಣನ ಕೂಡಿ ಗೆಳೆಯನಾಗಿರ್ದುರೆ । ಕುಂಭಿನಿಯೊಳು ತಾನು ಮೆರೆದು
ಸಂಭ್ರಮದಿಂದ ಅಶ್ವ ಗಜಗಳ ನೆರೆಯೆ । ಶಂಭುಪಾದವ......ದರು ೯೦

ಜ್ಞಾನಾನಂದ ಚಿದಂಬರೇಶ್ವರನನು । ಮಾನವಿಲ್ಲದೆ ನಾಟ್ಯವಾಡಿ
ಭಾನುಪ್ರಕಾಶನು ಭಕ್ತರ ಕೈಯಲಿ । ತಾನೇ ಪೂಜಿಸಿಕೊಂಡು ೯೧

ಸೇವಂತಿಗಪ್ಪನು ಮಣ್ಣುಮಳೆಯ ಕರೆ । ಯಾ ವೈಷ್ಣವ ಚೋಳಮಡಿದ
ಭೂವಳಯದಿ ಕರಿಕಾಲಚೋಳನು । ಕಾವೇರಿಯ ಕಟ್ಟೆಗಟ್ಟಿ ೯೨

ಕುಂಭಕೋಣೆಯೊಳಂ ಕಾಶೀಗಂಗೆಯುದಯಿಸಿ । ತೆಂಬ ವಾರ್ತೆಯ ಕೇಳಿ
ಕಂಭ ಸಮ್ಮೇಳ ತುಡುಮು ಧಮಾಮಿಗಳತಿ । ಸಂಭ್ರಮದಿಂದೆಯ್ದಿದರು ೯೩

ನಂದಿಯಣೆಯೆ ವ್ಯಾಸನ ತೋಳುವಳೆಯು । [ಚಂ]ದದ ಗುಡಿಗಳ ನೆತ್ತಿ
ಮುಂದೆ ಪಾತ್ರದ ಸತಿಯರು ಸಹವಾಗಿಯೆ । ಬಂದುದು ಕುಂಭಕೆ ಪರುಸೆ ೯೪

ಎತ್ತಿದ ಸತ್ತಿಗೆ ಬಾವುಟ...... । ಸುತ್ತಬಳಸಿ ಕಾಲಾಳು
ಉತ್ತಮವಾದಶ ಗಜ ರಥಗಳ ನೆರೆ । ಯರ್ತಿಯಿಂ ನೃಪರೆಯ್ದಿದರು ೯೫

ರೇವಣಸಿದ್ಧೇಶ್ವರ ಶಿಷ್ಯರು ಜಗ । ತ್ಪಾ[ವನರು]ರುದ್ರಮುನಿಪ
ದೇವರ ಶಿಷ್ಯರು ಶಾಂತಮಲ್ಲೇಶ್ವರ । ದೇವರು ಮಹತ್ತುಗೂಡಿ ೯೬

ಪೊಡವಿಯೊಳಗೆ ದೇಶಾಂತರವ ಮಾಡುಂತ । ಪಡೆ ... ಜೆಗೊಳಲ
ನುಡಿವರು ಪೊಡವಿಡಸ್ವಾಮಿಯೆಂದೆಲ್ಲರು । ಬಿಡದೆ ಬಂದರು ಕುಂಭಕವರು ೯೭

ಕೊಂಬು ಕಹಳೆ ಶಂಖ ವಿರಣ ವಾದ್ಯ । ...... ದ ಮಹತ್ತು
ಕುಂಭೇಶ್ವರನ ಸಂದರುಶನವನು ಮಾಡಿ । ಇಂಬರಿದಲ್ಲಿರುತಿಹರು ೯೮

ಬಂದ ಮಹತ್ತನು ...... ಗಳು । ತಂದು ವಿಭೂತಿ ವೀಳೆಯುವ
ಚೆಂದದಿ ಕಾಣಿಕೆ ಮುತ್ತುಗಳನಿತ್ತು ತೀರ್ಥಕೆ । ಮುಂದೆ ಚಿತ್ತೈಸೆಂದವರು ೯೯

...... ಬಂದು ರಥವನ್ನು ಮೇಳೈಸಿ । ಚಿತ್ತಜಹರಗೆ ಕೈಮುಗಿದು
ಮುತ್ತು ನಾನಾರತ್ನ ಸಿಂಹಾಸನದೊಳ । ಗರ್ತಿಯಿಂ ಕುಂಭೇಶ್ವರನ ೧೦೦

...... ನಾನಾವಾದ್ಯ ಸಂಭ್ರಮದಿಂ । ದುರೆ...ರೆಲ್ಲ
ತರತರದಿಂದ ಛತ್ರವೆತ್ತಿ ಚಾಮರ ಬೀಸೆ । ದೊರೆಗಳು ನಡೆಯಿಸೆ ರಥವ ೧೦೧

...... ತುರಗ ರಥ ಕಾಲಾಳು । ....
ಹರ ಗಿರಿಜಾಕಲ್ಯಾಣಕೆ ನಡೆವರು । ಧರೆಯೊಳು ತೇರು ನಡೆದುದು ೧೦೨

ಗಿರಿಯರಸನ ಮಂಗಳ ಕೊಡಿ ಕೊಂಡೆಂದ । ದು . . . ಗಂಗೆ
ಶಿರದಿಂದ ...... ಪರಿವಂತೆ । ಹರರಥದೊಳು ... ಳತೆ ೧೦೩

ಗಿರಿರಾಜನು ಧಾರೆಯನೋಡಿ ...... । ಶೈವರು ಎಲ್ಲ ಬಂದು
ಪರಿಮಳದುದಕವ ತಂದು ಮಜ್ಜನ ಮಾಡಿ । . . . . ದೊಳಾಗ ೧೦೪

ಕಸ್ತುರಿ ಪುಣುಗು ಜವಾದಿ ಕುಂಕುಮಂಗಳ । ಹಸ್ತದಿಂದೊತ್ತಿ ಲೇಪಿಸುತ
ವಸ್ತ್ರಾಭರಣವ ತಂದು ಧರಿಸಿದರು । . . . ತಂದೆಗೊಲಿದು ೧೦೫

ಪಡುವೀಡ ಸ್ವಾಮಿಯಿದ್ದೆಡೆಗೆ ಶೈವರು ಬಂದು । ಪೊಡವಿಯ ಮೇಲಡ್ಡ ಬಿದ್ದು
ಮೃಡಮೂರ್ತಿ ...... ನೆಂದನೆನ । ... ಬಂದುದು ಮಹತ್ತೆಲ್ಲ ೧೦೬

ಶಂಖಗಳನೆ ಧ್ವನಿ ಮಾಡಿಸಿ ಕೊಳುತಲಿ । ಅಂಕೆಯಿಲ್ಲದೆ ಬರುತಿರಲು . . . .
ಪಂಕಜಮುಖಿಯರು ಆರತಿಗಳನೆತ್ತಿ । ಸಂಕಿಮಾಡಿದರು ಜೋಗಿಗಳು ೧೦೭

ಚಿನ್ನದ ಕಂತೆ ಬೆಳ್ಳಿಯಕಂತೆ ಕಬ್ಬಿನ । ರನ್ನದಕಂತೆ [ತಾ] ಮ್ರಗಳ
ಚಿನ್ನ ಮೇಲಳವಟ್ಟ ಮುತ್ತಿನಗಂತೆಯು । ಉನ್ನತಮಹಿಮರೆಯಿದಿದರು ೧೦೮

ಕಾವಿಯ ಕಾಗಿನ ಕುಪ್ಪಸಕಂತೆಯ । ದೇವಾ [ಂಗ ಸಕ] ಲಾತಿಗಳ
ತೀವಿದ ಕಂಬಳಿ ಪಚ್ಚೆಯ ಕಂತೆಯು । ದೇವರುಗಳು ಬಂದರೆಲ್ಲ ೧೦೯

ಬಿಟ್ಟ ಕೆಂಜೆಡೆ ಸುಲಿಪಲ್ಲು ಭಸ್ಮಾಂಗವು । ತೊಟ್ಟರು . . . . ಭರಣ
ವೆಂಟ್ಟದ ಹಾವುಗೆ ಕರ್ಣಕುಂಡಲವಿಟ್ಟು । ಖಟ್ವಾಂಗಧರರೆಯ್ದಿದರು ೧೧೦

ನಡೆಮುಡಿಯಿಂದ ಪೊಂಗುರುಜು ತೋರಣದಿಂದ । [ಬಿಡದೆತ್ತು]ವಾರತಿಯಿಂ ದ
ಬಿಡದೆ ಕರೆವ ಕಹಳಾಶಂಖಧ್ವನಿಯಿಂದ । ನಡೆದು ಕೊಳುತ್ತೆ ಬಂದರವರು ೧೧೧

ಕಾವನ ಮಾವನ ವೈರಿಯು . . . ಯೊ । ಗೋವಿಂದನ ಸತಿವನೆಯೊ
ಭಾವಜನಂಬಿನ ಬತ್ತಳಿಕೆಯೊಯೆನೆ । ತಾವರೆಗಳೊಪ್ಪುತಿಹವು ೧೧೨

ಪರಮೇಷ್ಠಿಯು [ಜನ] ನಿಗೆ ಪಿತನಾದೆನು । ಹರಿಯು ಧರಿಸಿಕೊಂಡೆನೆಂದು
ಹರಪೂಜೆಗೆ ಯೋಗ್ಯನಾದೆನು ನಾನೆಂದು । ಕರೆವಂತೆ ತೆರೆ ನೂಕುವುದು ೧೧೩

ಕಮಲಕರ್ಣಿಕೆಗಳ ಸಿಂಹಾಸನವಾಗಿ । ಕುಮುದಂಗಳೆ ಕಾಣಿಕೆ ಯಿು
ಕಮಲಾ . . . ಯೆಂದುರೆ ಕರೆವಂತೆ । ಭ್ರಮರಂಗಳು ಆ ಕೊಳದಿ ೧೧೪

ಚತುರ್ವಿಧ ಪದಗಳೆ ಸೋಪಾನಗಳಲ್ಲಿ । ಪ್ರತಿಯಿಲ್ಲದಂದೆ ನಿರಾ
. . . ಮುಕ್ತಿಯ ಕೊಟ್ಟಾ ಸಲಿಲದಿಂ । ಹಿತವನೆ ಮಾಳ್ಪುದು ಕೊಳನು ೧೧೫

ಎಲುವನೊರ್ವನು ಕಾಶಿಗೊಯ್ದು ತ . . . । . . ಲು ಕುಂಭದೊಳಗೆ ಸಂಪಗೆಯ
. . . . ಕುಂಡದ ಮಹಿಮೆಯ । ನೊಲಿದು ಬಣ್ಣಿಸಬಲ್ಲರಾರುಂಟು ೧೧೬

ಬಂದ ಮಹತ್ತು ತೀರ್ಥ ದರುಶನ ಮಾಡೆ । ಬಂದವರೆಲ್ಲರು ಮಿಂದು
ತಂದು ಕಾಣಿಕೆಗಳ ಮಾಡುವ ಹೊತ್ತಿಗೆ । ಚಂದದ ನೃಪರೆಲ್ಲ ಕೇಳು ೧೧೭

ಹಿರಿಯರುಗಳು ಎಲ್ಲ ಒಂದೆಡೆಯೊಳಗಿರೆ । ನೆರೆದು ಜೋಗಿಗಳೆಲ್ಲ ಬಂದು
ಧರೆಯೊಳು ಕುಂಭಕ್ಷೇತ್ರವು ತಮದೆನೆ । ಮೊರೆದೆದ್ದುದು ಮಹತ್ತಾಗ ೧೧೮

ದೊರೆಗಳು ಜಗಳವ ನಿಲಿಸಿ ಈ ಕ್ಷಣದೊಳು । ಹಿರಿಯರುಗಳನೆಲ್ಲ ಕರೆದು
ಗುರುಮೂರ್ತಿ ಪಡುವೀಡಸ್ವಾಮಿಗೆ ನಮಿಸಿಯೆ । ನೆರೆವ ಜೋಗಿಗಳ ನೋಡಿ ೧೧೯

ನಿಮಗೇನು ಕಾರಣ ಬಂದಿತು ಎಂದಾ । ವಿವರವ ಕೇಳೆ ದೊರೆಗಳು
ಶಿವ ಭೈರವ ರೂಪ ತಾಳಿದಂದಾಯಿತು । ಇವರಿಗೆ ಏನು ಸಂಬಂಧ ೧೨೦

ನಿಮ್ಮ ಶಂಖನು ತಂದು ಬಿಡದಾಗಲೆ ಕೇಳಿ । ನವಿ ಮ್ಮ ಕೊಳದೊಳು ಬಿಟ್ಟು
ಗಮ್ಮನೆ ಕರೆದು ಕೊಂಡವರಿಗೆ ಈ ಕ್ಷೇತ್ರ । ನಿಮ್ಮದೆಂದವರು ನೇಮಿಸಲು ೧೨೧

ಎಂದಡೊಳ್ಳಿತು ಎಂದು ಜೋಗಿಗಳಾಕ್ಷಣ । ತಂದು ಬಿಟ್ಟರು ಶಂಖನಲ್ಲಿ
ನಿಂದು ಮಹತ್ತೆಲ್ಲ ನೋಡುತ್ತಿರಲಾಗಿ । ಅಂದು ಶಂಖವು ಮುಳುಗಿ ಪೋಗೆ ೧೨೨

ಹರಿ ಮತ್ಸ್ಯ ಕೂರ್ಮಾವತಾರವಾಗುವಂದು । ಧರಿಸಿದ ಶಂಖವ ತಂದು
ಹರನ ಸಮೀಪದೊಳಿರಿಸಲಾ ಶಂಖ । ಹರಿಯು ನೋಡುವವೊಲು ಮುಳುಗೆ ೧೨೩

ಇಂದುಧರನ ಬಿಟ್ಟು ಪೋದ ತಪ್ಪಿಗೆ ತಾ । ನೊಂದು ಕಮಲವಾಗಿ ಪುಟ್ಟಿ
ಬಂದು ಬೆಳೆದು ಕೊಳನೊಳಗುರೆ ಪುಷ್ಪವಾ । ದಂದದಿ ತೋರಿತಾ ಶಂಖ ೧೨೪

ಹರಿಯಜರಿರ್ವರು ಕಾದುವ ಮಧ್ಯದಿ । ಉರಿಲಿಂಗವಾದಂತೆ ಕೇಳು
ಹರಸಮಯರು ಗೆಲಬೇಕೆಂದಾ ಗಂಗೆ । ಸರಸಿಯಿಂ ಕಳುಹೆ ಶಂಖವನು ೧೨೫

ಪಾತಾಳಲೋಕದೊಳಿರ್ದ ಶೇಷನು ತಾನು । ಭೂತಳವನು ನೋಡಲೆಂದು
ಪ್ರೀತಿಯಿಂದಲಿ ಭೋರ್ಗರೆವುತ ಬರಲದು । ಭೂತೇಶ ಶರಣರಿರ್ದೆಡೆಗೆ ೧೨೬

ಶರವಣವೆಂಬ ಕೊಳದೊಳಿರ್ದ ಷಣ್ಮುಖ । ಗಿರಿಜೆಯು ಕರೆಯೆ ಬಂದಂತೆ
ಹರಶರಣರಿರ್ದೆಡೆಗೆ ಬರಲು ಶಂಖ । ಪರಸಮಯವು ನೋಡುತಿರಲು ೧೨೭

ಬಂದ ಶಂಖವನು ಮಹತ್ತು ಪೂಜಿಸಿ ನೋಡಿ । ಯಿ . . . ಸರಿಲ್ಲಿ
ಅಂದು ದೊರೆಗಳೀಕ್ಷೇತ್ರವು ನಿಮಗಹು । ದೆಂದು ನೇಮಿಸಿ ಶರಣೆನಲು ೧೨೮

ರೇವಣಸಿದ್ಧೇಶ್ವರನ ಶ್ರೀಪಾದವ । ಭೂವಳಯದಿ ಸ್ಮರಿಸುತಲಿ
ಭೂವಳಯದೊಳು ಪವಾಡವ ಮೆರೆದರು । ದೇವರು ಪಡುವೀಡ ಸ್ವಾಮಿ ೧೨೯

ಅಲ್ಲಲ್ಲಿ ಮಠಮನೆ ಸಿಂಹಾಸನ . . . । . . . .
ಅಲ್ಲಲ್ಲಿ ಕೆರೆ ಕೊಳನರವಟ್ಟಿಗೆ ವನ । ವೆಲ್ಲವ ಮಾಡಿ ...... ಗಳು ೧೩೦

ಇತ್ತ ಕಡಲೆ ಕಬ್ಬು ಹಣ್ಣು ಕಾಯ್ಗಳನೆಲ್ಲ । ಭಕ್ತಿಯಿಂದ ತಂದು ಬಿಡದೆ
ಚಿತ್ತಜಹರ ನೈವೇದ್ಯವ ಮಾಡಿಯೆ । ಅರ್ತಿಯಿಂ ಬಿಜಯಂ ಮಾಡಿಸಲು ೧೩೧

ಅಂಬುಜ ಸಖನು ಪ್ರಾಗದ್ರಿಗೆಯ್ದಿದ ಕೇಳು । ಕುಂಭೇಶ್ವರನ . . . . . .
ಅಂಬುಧಿಯೊಳು ಮಿಂದುರೆ ಶುಚಿಯಾಗಿಯೆ । ಸಂಭ್ರಮದಿಂ ಬಹೆನೆಂದು ೧೩೨

ತರಣಿ ತನ್ನಯ ಕಿರಣಂಗಳೆಲ್ಲವ । ನೆರೆದ ಪರುಷೆಯ ಕೈಯಲ್ಲಿ
ಇರಿಸಿದನೊ ಎಂಬಂದದಿ ಕಣ್ಗುರೆ । ಕರಮೆಸೆದವು ಪಂಜುಗಳು ೧೩೩

ಚಂದ್ರನು ಮಾಡಿದ ತಪ್ಪನೆಲ್ಲವನೀಗ । ಇಂದುಧರಗೆ ಪೇಳಲೆಂದು
ಬಂದ ನಕ್ಷತ್ರ ಜನರ ಕೈಯೊಳು ತಾವೆ । ನಿಂದಂತೆ ಪಂಜು ಮೆರೆದವು ೧೩೪

ನೋಡಬೇಕೆನ್ನ ಸತಿ ಯತೀಶ್ವರನೊಡ । ನಾಡುವ ಮಾತನೆಂದೆನುತ
ಕೂಡೆ ಬಂದನು ಚಂದ್ರ ಪೂರ್ವಾದ್ರಿಯೊ । ಳ್ಮೂಡಿದಂದನೇನೆಂಬೆ ೧೩೫

ಚಂಚಲಾಕ್ಷಿಯರುಗಳಂಚೆಗಮನೆಯರು । ಪಂಚಶರನ ಪಡೆಯಂತೆ
ಕುಂಚ ಕಾಳಂಜಿಯವಿಡಿದು ನಡೆದರಲ್ಲಿ । ಪಂಚಮುಖನ ಸಮ್ಮುಖದಿ ೧೩೬

ವೃತ್ತಕುಚೆಯರೆಲ್ಲ . . . ಮಾಡಿ ಭೋರಿಟ್ಟು । ಮುತ್ತಿನಾಭರಣವ ತೊಟ್ಟು
ಎತ್ತಿ ಬೀಸುವರು ಚಾಮರಿ ಸೀಗುರಿಗಳ । ಚಿತ್ತಜಹರನ ಸಮ್ಮುಖದಿ ೧೩೭

ಆಳಿ ಗಿಳಿ ಕೋಗಿಲೆ ಕಲಹಂಸೆಗಳ ತಮ್ಮ । ಹೊಳೆವಂಗದೊಳಗೆ ತೋರುತ್ತ
ನಳಿನ ಮುಖಿಯರೆಲ್ಲವಿಡಿದು ನಿಂದಿರುವರು । ಕಲಶ ಕನ್ನಡಿಯ ಸಂಭ್ರಮದಿ ೧೩೮

ಸೆಳೆವರು ನೋಟವೆಂದೆಂಬ ಪಾಶದೊಳಲ್ಲಿ । ಸುಳಿದಾಡುವ ವಿಟಮೃಗವ
ಬಳಲಿದ ರಸಿಕರ್ಗೆ ಸುಖವನೆ ಮಾಳ್ಪುದು । ಕೊಳ ವನದಂದದಿ ಕೇಳು ೧೩೯

ಬಂದ ಬಂದವರೆಲ್ಲ ನೋಡಿ ಧ್ಯಾನಿಸಿದೊಡೆ । ಮುಂದಣ ಬೆಳೆಯಿಲ್ಲವೆಂದು
ಇಂದುಧರನು ಸೃಷ್ಟಿಗೆ ಸತಿಯರು ಬೀಜ । ವೆಂದವರಿರಿಸಿಕೊಂಡಿಹನು ೧೪೦

ಹರನ ನೋಡಿಹೆನೆಂದು ಬಂದವರುಗಳೆಲ್ಲ । ರಿರದವರನೆ ನೋಡುತಿಹರು
ಪರಿಭವದೊಳು ಬರಿಸುವಡೆ ಹರನು ಕೆಳ । ಗುರುಮಾಡಿ ಕೊಂಡಿಹನವರ ೧೪೧

ಹಾಡುವ ಬೇಡುವ ಬಿಡದೆ ಕೊಂಡಾಡುವ । ನೋಡುವ ಜನರುಗಳಿಂದ
ಆಡುವ ಪಾತ್ರದ ಸಂಭ್ರಮದಿಂದ । ರೂಢಿನ ರಥವೇರಿ ಬಂದ ೧೪೨

ಭೇರಿ ವ್ಮೃದಂಗ ಕಹಳೆ ಶಂಖ ನಿಸ್ಸಾಳ । ವೀರಣ . . . . . ದ್ರಗಳಿಂದ
ಭೋರೆಂಬ ನಾನಾವಾದ್ಯ ಧ್ವನಿ . . . .। ೧೪೩

ಬಂದ ಶಿವಗೆ ಶೈವರು ಪೂಜೆಯು ಮಾಡಿ । ಚೆಂದದಿ ನೈವೇದ್ಯವಿತ್ತು
ಇಂದುಂಧರನು ಒಡೆಯರು ಭಕ್ತರುಗಳಾ । ನಂದದಿ ಸಲಹುತ್ತಿಹನಂ ೧೪೪

ಇಂತು ಕುಂಭೇಶ್ವರ ಚಾರಿತ್ರವನೊಲ್ದು । ಸಂತತ ಕೇಳಿದವರ್ಗೆ
ಚಿಂತಾಯುಕ ಗುರು ಸಿದ್ಧಮಲ್ಲೇಶ್ವರ । ಸಂತಸವಿತ್ತು ರಕ್ಷಿಸುವ ೧೪೫

ಗುರು ಲಿಂಗ ಜಂಗಮದುರು ಚಾರಿತ್ರವ । ಬರೆದೋದಿ ಕೇಳಿದವರ್ಗೆ
ಹರ ತನ್ನ ಪದವಿಯು ಕೊಡುವನೆಂಬಲ್ಲಿಗೆ । ಎರಡನೆ ಸಂಧಿಪೂರಾಯು ೧೪೬

ಮೂರನೆಯ ಸಂಧಿ

ದಶಶತಕರನ ಸುತನ ಕೊಂದು ಬಿಡದಾ । ಕುಸುಮವನಿತ್ತ ಶ್ವೇತನಿಗೆ
ಒಸೆದು ಕೃಪೆಯನಿತ್ತ ಗುರುಸಿದ್ಧಮಲ್ಲನ । ಎಸೆವಡಿದಳಿಗೆರಗುವೆನು ೧

ಗುರು ಲಿಂಗ ಜಂಗಮವಾರಿಧಿ ಪರಶಿವ । ಧರೆಯೊಳು ಚರಿಸಿ ಮೆರೆದುದ
ವಿರಚಿಸುವೆ ನಾನು ಬಲ್ಲಂದದಿ ಕೇಳಿ । ಹರಶರಣರು ಎಲ್ಲ ಬಿಡದೆ ೨

ಮುಂದಣ ಕಥೆಯಾವುದೆಂದೊಡೆ ಪೇಳುವೆ । ನಿಂದುಧರನು ಗುರುವಾಗಿ
ಬಂದು ಪರಮ ಭಕ್ತರಿಗೆ ಬೋಧಿಸಿದುದೊಂ । ದಂದವ ಕೇಳೇದನಾರ್ಯ ೩

ಎಂದಡೊಳ್ಳಿತು ಸ್ವಾಮಿ ಗುರು ಲಿಂಗ ಜಂಗಮ । ದಂದವ ಪೇಳೆಂದು ನಮಿಸೆ
ಇಂದುಧರನು ದೇವಿಯರಿಗೆ ಬೆಸಸಿದ । ಚೆಂದವ ಕೇಳೆಂದನಾರ್ಯ ೪

ಲಿಂಗವೆ ನಾದ ಬಿಂದುವೆ ಜಂಗಮ ಕೇಳು । ಮಂಗಳ ಕಳೆ ಗುರುಮೂರ್ತಿ
ಲಿಂಗ ಜಂಗಮ ಗುರುವಾಗಿ ಮಹತ್ವದಿ । ಗಂಗಾಧರ ಭಕ್ತಗೊಲಿದು ೫

ಲಿಂಗವೆ ಸ್ಥಾವರ ಜಂಗಮ ಚರಮೂರ್ತಿ । ಕಂಗೊಳಿಸುವ ಕಳೆ ತಾನೆ
ಲಿಂಗ ಜಂಗಮಕೆಲ್ಲ ಗುರುವಾಗಿ ತೋರಿದ । ಮಂಗಳಮಯ ಪರಶಿವನು ೬

ಗುರುಸದಾಶಿವನೀಶ್ವರ ಮಹೇಶ್ವರ ರುದ್ರ । ಪರಶಿವನಿಂ ದೀಕ್ಷೆವಡೆದು
ಚರಿಸುತಿಹರು ಕೃತಯುಗದಿ ಪಾರ್ವತಿಗಲ್ಲಿ । ಹರಿಯಜರಿಗೆ ಗುರುವಾಗಿ ೭

ಗುರುವಾಗಿ ತ್ರೇತಾಯುಗದೊಳು ಚರಿಪರು । ವರ ಷಡಕ್ಷರ ಪಂಚಾಕ್ಷರವೆ
ನಿರುತದಿ ತ್ರೀಯಕ್ಷರ ಏಕಾಕ್ಷರ । ಧರೆಯೊಳು ರುದ್ರಮೂರ್ತಿಗಳು ೮

ದಾರುಕ ರೇಣುಕ ಕರ್ಣ ಶಂಕುಕ । ರ್ಣೋರೀರು ತತ್ವಜ್ಞಾನಿಗಳು
ಕಾರುಣ್ಯಮೂರ್ತಿಗಳೆಲ್ಲ ದ್ವಾಪರದಿ । ಧಾರಿಣಿಯೊಳು ಗುರುವಾಗೆ ೯

ನಾಕುಯುಗದಿ ನಾಕುರೂಪನೆ ಧರಿಸಿದ । ಶ್ರೀಕರ ಶಿವ ಗುರುವಾಗೆ
ಈ ಕಲಿಯುಗದೊಳು ರೇವಣಸಿದ್ಧೇ । ಶ್ವ ನಾಗಿ ಮರುಳುಸಿದ್ಧೇಶ (?) ೧೦

ಏಕೋರಾಮಯ್ಯ ಪಂಡಿತಾರಾಧ್ಯರು । ಲೋಕವ ರಕ್ಷಿಸಲೆಂದು
ಆಕಾರವಾಗಿಯೆ ಮೂರ್ತಿಯಾದ ನಂಬಿ । ಗೇ ಕಾಣೆ ಪರಶಿವ ತಾನೆ ೧೧

ಗುರು ರೇವಣೇಶನು ಸೋಮೇಶನಿಂ ಪೊಣ್ಮೆ । ವರಜ್ಯೋತಿ ಸಿದ್ಧವಟ್ಟದೊಳು
ಮರುಳುಸಿದ್ಧೇಶ್ವರನುದಯವಾದನು ಕೇಳು । ಶರಣ ಏಕೋರಾಮಯ್ಯ ೧೨

ಬಾಲಬ್ರಹ್ಮೇಶ್ವರನಿಂದ ಪುಟ್ಟಿದನಾ । ಮೇಲಾರಾಧ್ಯ ಪಂಡಿತರು
ಶೂಲಧರನು ತ್ರಿಪುರಾಂತಕೇಶ್ವರನಿಂದ । ಲೀಲೆಯಿಂ ಗುರುಗಳೆಯ್ದಿದರು ೧೩

ಅವರವರಾಚರಣೆಯು ಮಾರ್ಗಂಗಳು । ಅವರವರಿಗೆ ಬೇರೆ ಕೇಳು
ವಿವರಿಸುವೆನು ಶಿವಲಾಂಛನವನೆ ತೊಟ್ಟು । ಅವನಿಯೊಳ್ಮೆರೆದರಂದವನು ೧೪

ಮೇರುವೆಗೀಶಾನ್ಯ ನಕ್ಷತ್ರಗಿರಿಯೊಳು । ಚಾರುಲೋಹದ ಕಳಶದೊಳು
ಮಾರಹರನು ಶಾಂತಮಲ್ಲಿಕಾರ್ಜುನನು । ದಾರ ರೇವಣಸಿದ್ಧ ಭಜಿಸಿ ೧೫

ರುರುವರ್ಣ ರುಗ್ವೇದ ಗಾಯತ್ರಿಛಂದಸ್ಸು । ವರಜ್ಞಾನ ಶಕ್ತ್ಯತ್ರಿಗೋತ್ರ
ಗುರುಸದಾಶಿವತತ್ವ ಸಿಂಹವಾಹನದಿಂದ । ಕರಮೆಸೆದನು ರೇವಣಾರ್ಯ ೧೬

ಆದೊಡೆ ಪೇಳುವೆ ದೇವ ವೃಕ್ಷದ ಕೆಳ । ಗಾದಿಯೆ ಕಬ್ಬಿಣದಂಡ
ಭೇದಿಸಲಷ್ಟಶಿಖಿಯು ಸಿದ್ಧದಯಾಧರ್ಮ । ನಾದ ಕಂಬಲಗದ್ದುಗೆಯು ೧೭

ಅವರಿಗೆ ಕುಪ್ಪಸಕಂತೆ ಪದ್ಮಾಸನ । ವವರಿಗೆ ಬಲಮುರಿಲೋಕ
ಅವರೀರೂಪನೆ ಧರಿಸಿರೆ ರೇವಣಸಿದ್ಧ । ಶಿವಯೋಗಿ ಚರಿಸಾಡುತಿಹನು ೧೮

ಮೇರುಪರ್ವತಕಗ್ನಿಯ ದಿಕ್ಕಿನ ಸುಕು । ಮಾರಗಿರಿಗೆ ಪೊಂಗಳಸ
ಚಾರು ಕಪಿಲ ಸಿದ್ಧಮಲ್ಲಿಕಾರ್ಜುನದೇವ । ಓರಂತೆ ಪೂಜಿಪ ಶರಣ ೧೯

ಅರುಣ ವರ್ಣೀಚ್ಛಶಕ್ತಿಯಜುರ್ಃಶೃತೀ । ಶ್ವರ ಭರದ್ವಾಜಗೋತ್ರ
ವರವ್ಯಪ್ರವಾಹನ ಜಗತೀಛಂದಸ್ಸಿಂದ । ಮರುಳಸಿದ್ಧೇಶ್ವರನೆಸೆದ ೨೦

ಅಲ್ಲಿ ಮಂದಾರು ತರುವಿನ ಕೆಳಗೆ ತಾ । ನಲ್ಲಿ ಮರುಳುಸಿದ್ಧೇಶ
ಸಲ್ಲೀಲೆಯಿಂದ ಕುಠಾರ ದಂಡಂ ಕೇ । ಳಲ್ಲಿ ವಿಚಾರ ಕಪ್ಪರವು ೨೧

ಗದ್ದುಗೆ ಪುಲಿಚರ್ಮ ಬಹುಶಿಖಿಯುವರಿಗೆ । ಸಿದ್ಧಾಸನ ಜಜ್ಜುಗೆಯೆ
ಶಬ್ದವಜಾತ ಭಿಕ್ಷಾಯೆಂಬ ಧ್ವನಿಯಿಂದ । ಉದ್ಧರಿಸುವನು ಲೋಕವನು ೨೨

ಮೇರುವಿಗೆ ನೈಋತ್ಯದಿಕ್ಕಿಲಿ . . . . । ಚಾರು ಕನಕ ಪರ್ವತದಿ
ಆ ರಮ್ಯ ರಜತಕಳಸ ಮಧ್ಯದೊಳಗಲ್ಲಿ । ಯೋರಂತೆ ಭೋಗಮಲ್ಲೇಶ ೨೩

ಇಂತೊಪ್ಪುವಭೋಗ ಮಲ್ಲೇಶಲಿಂಗವ । ಸಂತತ ಏಕೊರಾಮಯ್ಯ
ಚಿಂತೆಯಿಲ್ಲದೆ ಚೂತವೃಕ್ಷದಡಿಯೊಳಾ । ಕಂತುಹರನ ಪೂಜಿಪರು ೨೪

ಸಾಮವೇದಂ ಶ್ವೇತವರ್ಣ ಕಾಶ್ಯಪಗೋ । ತ್ರ ಮಹೇಶ್ವರ ಕ್ರಿಯಾಶಕ್ತಿ
ಶ್ರೀಮಂದನುಷ್ಟುಪು ಛಂದದಿಂದೇಕೋ । ರಾಮನೊಪ್ಪಿ ಗಜವಡರಿ ೨೫

ಅವರಿಗೆ ಬೆಳ್ಳಿಯ ಮುದ್ರೆ ಶ್ವೇತಾಂಬರ । ವವರಿಗೆ ಬೆತ್ತವೆ ದಂಡ
ಅವರಿಗೆ ರತ್ನಗಂಬಳಿಯೆ ಹೊದ್ದಿಗೆ ಕೇ । ಳವರಿಗೆ ಚಕ್ರಮಕುಟವು ೨೬

ಚಂದ್ರಾಸನ ಸಿದ್ಧ ದಯಧರ್ಮನಾದವಾ । ನಂದ ವಿಚಾರಕಪ್ಪರವು
ಚಂದದಿಂ ಚರಿಸಾಡುತಿಹನೇಕೋರಾಮ । ನಂದವ ಕೇಳೆಂದನಾರ್ಯ ೨೭

ಇನ್ನು ಕೇಳೈ ಮೇರುವಿಗೆ ವಾಯುವ್ಯದ । ಚೆನ್ನ ತ್ರಿಕೂಟಪರ್ವತದಿ
ಉನ್ನತ ತಾಮ್ರಕಳಶ ಪಂಡಿತೇಶ್ವರ । ಚೆನ್ನಮಲ್ಲೇಶನ ಭಜಿಪ ೨೮

ಭಸಿತ ರುದ್ರಾಕ್ಷಿ ಪಂಚಾಕ್ಷರಿ ಮಂತ್ರ ರಾ । ಜಿಸುವ ಮಂತ್ರಕುಂಡಲದಿ
ಶಶಿಧರ ಧ್ಯಾನದಿಂ ಪಂಡಿತಾರಾಧ್ಯರು । ಪಶುಪತಿ ಶಿವನ ಪೂಜಿಪರು ೨೯

ಜಗತೀಛಂದಸ್ಸು ಗೌತಮಗೋತ್ರಾಥರ್ವಣ । ನಿಗಮರುದ್ರ ಸಿತವರ್ಣ
ಮಿಗೆ ಹಂಸವಾಹನ ಮಂತ್ರ ಶಕ್ತಿಗಳಿಂದ । ಸೊಗಯಿಸಿದನು ಪಂಡಿತೇಶ ೩೦

ಅವರಿಗೆ ಪಂಚಶಿಖಿಯು ಕಾವಿಯಕಂತೆ । ಯುವರ ಗದ್ದುಗೆ ಕೃಷ್ಣಾಜಿನವು
ಅವರಿಗೆ ಪಾಸ್ಪಶಿ ಮಕುಟದಿ ವೃಕ್ಷವ । ನಾರಿಸರವರಂದದೊಳು ೩೧

ಚಿಪ್ಪುಗೊಡಲಿ ಕರದೊಳು ತಾಮ್ರದ ಮುರಿ । ಯೊಪ್ಪುವಾಚಾರ ಕಪ್ಪರವು
ತಪ್ಪದೆ ಸಿದ್ಧ ಸದಾಚಾರ ಭಿಕ್ಷದಿಂ । ದಪ್ರತಿಮನು ಚರಿಸುವನು ೩೨

ರೇವಣಸಿದ್ಧೇಶ ಮರುಳುಸಿದ್ಧೇಶ್ವರ । ದೇವ ಏಕೋರಾಮಯ್ಯ
ಪಾವನಾತ್ಮಕ ಪಂಡಿತೇಶ್ವರ ಸಹವಾಗಿ । ಭೂವಳಯದಿ ಚರಿಸುವರು ೩೩

ಗುರುಲಿಂಗ ಜಂಗಮವಾಗಿಯೆ ಶಿವ ತಾನು । ಕರುಣದಿ ಭಕ್ತರಿಗೊಲಿದು
ಧರೆಯೊಳು ಹರನ ಮಹತ್ವವೆ ರೂಪಾಗಿ । ಚರಿಸುತಿಹರು ಲೋಕದೊಳು ೩೪

ಅಷ್ಟತ್ರಿಂಶತ್ಕಲಾಪರಮೇಶ್ವರನೆಂದು । ಅಷ್ಟದಿಕ್ಕಿಲಿ ಕೀರ್ತಿಸುವ
ದೃಷ್ಟವ ನೋಡೆಂದಾಚಾರ್ಯನೊರೆದನು । ಸೃಷ್ಟಿಯೊಳಗೆ ಚರಿಪುದನು ೩೫

ಷೋಡಶ ದ್ವಾದಶ ದಶಕಳೆಯುವರೆಂದು । ರೂಢಿಯ ಜನರು ಕೊಂಡಾಡಿ
ನೋಡಿ ಚಂದಿರನಾದಿತ್ಯನಗ್ನಿಯನುರೆ । ಬೇಡುವರಿಷ್ಟಫಲವನು ೩೬

ಹರನ ಕಣ್ಣಲ್ಲದಿರ್ದೊಡೆ ಧಾರಿಣಿಯೊಳು ।ವರವ ಕೊಡೆಂದು ಭೂಸುರರು
ಕರಮುಟ್ಟಿ ಪೂಜಿಸಿ ಯಜ್ಞಾದಿ ಕರ್ಮವ । ಸುರಮುನಿಗಳು ಮಾಡುತಿಹರು ೩೭

ಹರನಕ್ಷಿ ತಮ್ಮಯ ಕಾಂತಿಯಿಂದಲಿ [ಕೂಡಿ] । ಚರಿಸಾಡುವಂತೆ ಲೋಕದೊಳು
ಕರುಣದಿ ತ್ರಿವಿಧ ಸ್ವರೂಪನಾಗಿಯೆ ಶಿವ । ಚರಿಸುತಿಹನು ಭಕ್ತಿಗೊಲಿದು ೩೮

ಮುಂತು ದೃಷ್ಟವ ಕೇಳಿ ಕೇಳಿ ಯಾನಂದದಿ । ಸಂತೋಷದಿಂದಲಿ ಶಿಷ್ಯ
ಚಿಂತೆ ಪೋಯಿತು ಎಂದು ಗುರುವಿಗೆ ನಮಿಸ । ಲಂತು ಬೆಳಗು ಪಸರಿಸಲು ೩೯

ಇತ್ತ ಕುಂಭೇಶ್ವರನಂ ನೋಡುವೆನಂ । ದರ್ತಿಯಿಂ ರಥವ ಮೇಳೈಸಿ
ಹೊತ್ತುಮೂಡಲು ಪೂರ್ವಾಚಲದೊಳು ಕಾ । ರ್ಗತ್ತಲೆ ಪರಿದುದೇನೆಂಬೆ ೪೦

ಹರೆದುದು ತಿಮಿರ ಮೈಮುರಿದುದು ಪಗಲ್ವಕ್ಕಿ । ಸರಗೆಯ್ದು ಕೂಗೆ ಕುಕ್ಕುಟನು
ಸರಸಿಜ ನಸುದೆರೆಯಲು ಬಾಗಿಲುಗಳ । ಮೊರೆದೆದ್ದು ವಾರಡಿಯಲ್ಲಿ ೪೧

ತನ್ನ ಪುರುಷನಲ್ಲದೆ ಪರ ಪುರುಷರ । ಮುನ್ನವೆ ತಾ ನೋಡೆನೆಂದು
ನನ್ನಿಯಿಂ ಬಾಗಿಲನಿಕ್ಕಿದಂದದೊಳಾ । ಕನ್ನೆಯಿದ್ದಳು ಮುನಿದಿರ್ದು ೪೨

ಖಗ ಮೃಗಗಳ ಧ್ವನಿಗಳ ವಾದ್ಯಗಳಿಂದ । ಸೊಗಯಿಪ ಕಮಲಗಳಿಂದ
ಅಘಹರ ಶಿವನ ಪೂಜಿಸಲೆಂದು ರವಿ ಬಂದು । ಮಿಗೆ ಪೂರ್ವಾದ್ರಿಯೊಳ್ನಿಂದು ೪೩

ಪಡುವೀಡ ದೇವರುದಯವಾಗುತಲೆದ್ದು । ಬಿಡದೆ ಮಹತ್ತಿಗೆ ನಮಿಸಿ
ಮೃಡನ ಪೂಜೆಯ ಮಾಡುತಿರಲೊರ್ವ ಪೌರಾಣಿ । ನುಡಿದ ಕ್ಷೇತ್ರದ ಮಹತ್ವವನು ೪೪

ಮಾಸ ಫಾಲ್ಗುಣ ಶುದ್ಧ ಪೌರ್ಣಮಿಯೊಳು ಜಗ । ದೀಶ ನಂಜನಜಾತ್ರೆಗೆಂದು
ದೇಶದೇಶದ ಒಡೆಯರು ಭಕ್ತರೆಲ್ಲರು ವಿ । ಲಾಸದಿ ಬರುತಿಹರೆಂದ ೪೫

ಕಪ್ಪಿನಿ ಕುಂಡಲಿ ಸಂಗಮ ಕ್ಷೇತ್ರದಿ । ಕಪ್ಪುಗೊರಲ ನಂಜುಂಡ
ತಪ್ಪದೆ ನಾಲ್ಕುಯುಗದಿ ಪೂಜೆಗೊಂಡು ಕ । ಣ್ಗೊಪ್ಪಿದನೇನ ಪೇಳುವೆನು ೪೬

ಪರಶುರಾಮನು ಕ್ಷತ್ರಿಯ ಕಾರ್ತವೀರ್ಯರ । ಕರ ಸಹಿಸದೆ ಕೊಲಲವನ
ದುರಿತಾಪವಾದವ ನಂಜುಂಡೇಶ್ವರ । ಪರಿಹರಿಸಿದುದ ಕೇಳೆಂದ ೪೭

ಇನ್ನು ತಿರುಮಕೂಡಲ ಮಹಿಮೆಯ ಕೇಳು । ಪನ್ನಗಧರ ತಾನೊಲಿದು
ತನ್ನಭಿಧಾನದಗಸ್ತ್ಯಗೆ ಲಿಂಗಪ್ರ । ಸನ್ನನಾದುದುಸುರುವೆನು ೪೮

ಲೋಕದೊಳಗೆ ಪುಣ್ಯಕ್ಷೇತ್ರಗಳಿಗೆ । ತ್ರೈಕೂಟ ಮಿಗಿಲೆಂದೆನುತ
ತೂಕವನರಿದ ಗುಂಜಿಯ ನರಸಿಂಹ ವಿ । ವೇಕವದೇನ ಪೇಳುವೆನು ೪೯

ನಳಿನಭವನ ಕೊಂದ ಕಥನದಿಂದೀಶ್ವರ । ನಿಳೆಯ ಕ್ಷೇತ್ರವನೆಲ್ಲ ತಿರುಗಿ
ಬಳಲಿ [ಸ್ಫಟಿ]ಕಸರೋವರದೊಳು ಮಿಂದು । ...... ನಿಂದು ನೋಡಿದನು ೫೦

ಇಂದುಶೇಖರನೀಕ್ಷಿಸೆ ಬ್ರಹ್ಮರೂಪದು । ಬಂದಂದು ಬಯಲಾಗಲಲ್ಲಿ
ನಂದಿಯ ಕಾವಲ ... ರುದ್ರಪಾದವ । ದೆಂದು ನುಡಿವರು ಲೋಕದೊಳು ೫೧

ಹರನೆರಡನೆಯ ಲೀಲೆಯೊಳಗೆ ಶಂಕರ । ಗಿರಿಜೆಯ ಕೈವಿಡಿಯಲಾಗಿ
ಹರಿಯಜ ಸುರ ಮನು ಮುನಿದಿಕ್ಪಾಲರು । ಶರಣ ಪ್ರಮಥರುದ್ರರೆಯಿದೆ ೫೨

ಉತ್ತರ ಭಾಗವಳಿಯೆ ದಕ್ಷಿಣ ಭಾಗ । ವತ್ತ ಮೇಲಕೆ ಲಘುವಾಗೆ
ಚಿತ್ತಜಹರ ನಾರದ ಮುನಿಯನು ಕೇಳೆ । ವೃತ್ತಾಂತವ ಪೇಳ್ದನವನು ೫೩

ನೆರೆದ ಜನರು ಎಲ್ಲ ಭೈತ್ರವ ಮೆಟ್ಟಲು । ಭರದಿವಾರಂಡಲಾದಂತೆ
ಧರೆಯ ಭಾರವ ತಾಳ್ದ ರುದ್ರರೆಲ್ಲರು ಬರೆ । ತರಣಿಸುತನ ಭಾಗವೇಳೆ ೫೪

ನಾರದಮುನಿ ಬಿನ್ನಹ ಮಾಡೆ ಶಿವನಿಗೆ । ಸೇರಿರ್ದ ವಿಶ್ವಕರ್ಮನನು
.... । ೫೫

ಎಂದ ನುಡಿಯ ಕೇಳಿ ಆಗಸ್ತ್ಯನ ಮೊಗವ ನೋಡಿ । ಇಂದುಧರನು ಪೋಗೆಂದೆನಲು
ನೊಂದು ಮುನಿಯು ವಿಶ್ವಕರ್ಮಗೆ ಶಾಪವ । ನಂದು ಕೊಟ್ಟವನಿತೆಂದ ೫೬

ಗಿರಿಗಳ ಚೆಂಡಾಡಿ ಶರಧಿಗಳನೆ ಕುಡಿವ । ವರ ಕಲಿ ರುದ್ರರುಗಳಿರಲು
ಭರಭಾರಕೆ ಕರ್ತನು ನೀನು ನಿನ್ನೊಳ । ಗಿರುವೆವು ನಾವೆಂದ ಶಿವನು ೫೭

ಇದ್ದುದ ನುಡಿದು ಗುದ್ದಿಸಿ ಕೊಂಡವನ ಗಾದೆ । ಪೊದ್ದಿತು ಎಂದವನೊಂದು
ಬಿದ್ದು ಪಾದಕೆ ವಿಶ್ವಕರ್ಮನು ನಮಿಸಿಯೆ । ಬುದ್ಧಿಗಲಿಸಿಸಿ ಶಾಪವನು ೫೮

ಎನಗೆಂದಿಗೆ ನಿಶ್ಶಾಪವೆಂದಡೆ ಸ್ವಾಮಿ । ಮುನಿಯು ಕಮಂಡಲೋದಕವು
ತನುವಿನ ಮೇಲೆ ಬಿದ್ದಡೆ ಕೇಳು ಮುಂದೆ ನೀ । ವನಜನಂತಾದಪೆ ಪೋಗು ೫೯

ಶಿವಭಕ್ತರು ಶಿವಭವನಗಳಿಲ್ಲಲ್ಲಿ । ಲವಣೋದಕವಲ್ಲಿ ಸ್ವಾಮಿ
ಶಿವಶಾಸ್ತ್ರವ ಕೇಳು ಶಿವಲಿಂಗವ ಭಜಿಸು । ಶಿವಯೋಗಿ ರೇವಣನಿಂದ ೬೦

ಅಗಸ್ತ್ಯಮುನಿಯು ಮಾತಿಗೆ ಮೆಚ್ಚಿ ಗಂಗೆಯು । ತೆಗೆದು ಕೊಡಲು ಶಿವನೊಲಿದು
ನಗುತ ತ್ರಿವಾಚಕದಿಂದುರೆ ಪೋದಪೆ । ಜಗದೊಳಗೆ ನಾನೆಂದ ೬೧

ಇಂದುಧರನಿಗೆ ನಮಿಸಿ ಮುನಿ ಗಂಗೆಯು । ತಂದು ಕಮಂಡಲದೊಳಗೆ
ಚಂದದಿ ತರುತಿರೆ ವಿಂಧ್ಯಾಚಲವೈರಿ । ಬಂದ ಕವೇರನಾ ಮತ್ತೆ ೬೨

ವಾತಾಪಿ ಇಲ್ವಲನೆಂದೆಂಬ ದನುಜರು । ಭೂತಳದೊಳು ಪುಟ್ಟಿಯವರು
ಪ್ರೀತಿಯಿಂದಲಿ ಮುನಿಗುಪಚರಿಸಲು ಕಂಡು । ಚಾತುರ್ಯದಿಂ ಕೊಂದನವನ ೬೩

ಮತಿಯಾಣ್ಮನ ಮರುತುಗ್ರತಪವ ಮಾಡ । ಲತಿಶಯದಿಂದ ಕವೇರ
ಪ್ರತಿಯಾಗಿ ಮೆಚ್ಚಲು ಬ್ರಹ್ಮಮುನಿಗೆ ಬಂದು । ಸುತೆಯಾಗಿ ಕೊಡು ನಿನ್ನ ಮಗಳ ೬೪

ನಳಿನಗರ್ಭನು ತನ್ನ ಮಾನಸಪುತ್ರಿಯು । ಕಳುಹೆ ಮುನಿಗೆ ಪ್ರತಿಯಾಗಿ
ಇಳೆಯೊಳುದಿಸಿ ವನದೊಳಗೆಳಲತೆಯಂತೆ । ಬೆಳೆದು ಯೌವನೆಯಾಗಲವಳು ೬೫

ವನಜಾಕ್ಷಿ ಲೋಪಾಮುದ್ರೆ ಕವೇರನ । ದನೆಯಾಗಿ ಶಶಿಕಲೆಯಂತೆ
ದಿನಕೊಂದು ಬಗೆಯಾಗಿ ಬೆಳೆದಳು ಚೆಲ್ವಿಂದ । ಮನಸಿಜನಧಿದೇವಿಯಂತೆ ೬೬

ಕುಸುಮಶರನು ತಾನು ಶಶಿವದನೆಯ ಕಂಡು । ಮುಸುಕಲಮ್ಮದೆ ಬಂದು ನಿಂದು
ಒಸೆದಂಬು ಬಿಲ್ಲ ಬತ್ತಳಿಕೆಯೊಪ್ಪಿಸಿದಂ । ತೆಸೆದವು ಕುಚ ಪುರ್ಬು ಜಾನು ೬೭

ಕಳಹಂಸೆ ಗಿಳಿಯಳಿ ಕೋಗಿಲೆಗಳು ಎಲ್ಲ । ಬಳಸಿರಲವಳಂಗವನು
ನಳಿನಾಕ್ಷಿಯು ನಡೆ ನುಡಿ ಕಂಪು ಗಾನಕೆ । ಸುಳಿದಾಡುತಿಹವಲ್ಲಿ ಬಿಡದೆ ೬೮

ನಂದಗೋಪನ ಮಗನಾ ಲಕ್ಷ್ಮಿಯನೊಲ । ವಿಂದ ಕೈವಿಡಿದ ತೆರದೊಳು
ಅಂದು ಕೈವಿಡಿದ ಕುಂಭಜನು ಕವೇರ । ನಂದನೆಯುದನೇನೆಂಬೆ ೬೯

ಅಲ್ಲಿಂದ ಕಳುಹಿಸಿ ಕೊಂಡು ಕುಂಭಜನುರೆ । ನಿಲ್ಲದೆ ಗಗನಮಾರ್ಗದೊಳು
ಮೆಲ್ಲನೆ ಬರುತ ಕಮಂಡಲುದಕವನು । ಅಲ್ಲಿಳುಹಿದನು ನಗದೊಳು ೭೦

ಜಲವಿಸರ್ಜನೆಗೆಂದು ಪೋಗಲಾ ಮುನಿ ತನ್ನ । ಲಲನೆಯುನದರೊಳಗಿರಿಸಿ
ಗಲೆಭೆಯಿಲ್ಲದೆ ಬಂದು ಖಗಕುಳಿತುದ ಕಂಡು । ಎಲೆ ಎಲೆ ಪೋಗು ಪೋಗೆಂದು ೭೧

ಆ ಮಾತನು ಕೇಳಿ ಖಗವೆದ್ದು ಪೋಗಲಾ । ಶ್ರೀಮಹಾಕಾವೇರಿಯಲ್ಲಿ
ಭೂಮಿಯೊಳಗೆ ಬಿದ್ದು ಪರಿವುತಿಪ್ಪುದ ಕಂಡು । ಆ ಮುನಿ ಕಳವಳಿಸಿದನು ೭೨

ಬಂದು ತಡೆದು ಮುನಿ ನಿಲಿಸಲಾ ಕಾವೇರಿ । ಒಂದೆರಡಾಗಿಯೆ ಪರಿದು
ಮುಂದೆ ಕಾವೇರಿ ಕಪನಿಯಂ...ಕೂಡಿ । ಬಂದು ತ್ರಿಕೂಟದಿ ಕೇಳು ೭೩

ಕಾವೇರಿ ಕಪಿನಿ ಸ್ಫಟಿಕಸರೋವರ । ತ್ರೈವೇಣಿಸಂಗಮದೊಳಗೆ
ಭೂವಳಯದೊಳಗಸ್ತ್ಯನು ತಪವಿರುತಿರ । ಲಾ[ವಾಗ ಹನು] ಮಗೆಯೆಂದ ೭೪

ಒಳ್ಳಿಹ ದಿನದಲ್ಲಿ ಕಾಶಿಗೆ ಪೋಗಿ ನೀ । ನಲ್ಲಿ ಲಿಂಗವ ತಹುದೆಂದು
ನಿಲ್ಲದವನ ಕಳುಹಿ ಸುಮುಹೂರ್ತವೆಂ । ದಲ್ಲಿ ಲಿಂಗವ ಪೂಜಿಸಿದ ೭೫

ಮುನಿ ಲಿಂಗವ ಪೂಜಿಸುತಿರಲಾಗಿ । ಬಳಲಿ ಬಂದಾ ಹನುಮಂತ
ತಳುವದೆ ತಿವಿದು ಬಾಲದಿ ಸುತ್ತಿ ತೆಗೆಯಲು । . . . . ಕೂಡವಗೆ ೭೬

ಒಡನೆ ತಿಳುಪಿ ನೀ ತಂದಲಿಂಗವ । ಪೊಡವಿಯೊಳಗೆ ಪೂಜಿಸೆಂದು
ಬಿಡದುಪಚರಿಸಲು ಹನುಮಂತನು ತಾನು । ಮೃಡನ ಪೂಜಿಸಿದನು ಕೇಳು ೭೭

ಅಸುರರ ಕೊಲೆ ವೇಧೆ ಬಂದಿತೆಂಬುದ ಕೇಳಿ । ಬಿಸಜಾಕ್ಷನು ತಾನು ಬಂದು
ಎಸೆವ ತ್ರಿಕೂಟದೊಳಗೆ ತಪವನು ಮಾಡಿ । ಹೆಸರಾಗಿ ಕೃಷ್ಣನು ನಿಂದ ೭೮

ಅದನು ಕೇಳ್ದಾ ಸೋಮ ಮಾರ್ಕಂಡೇಯ ಗಾರ್ಗ್ಯ । ಸದಮಲ ರೇವಣಸಿದ್ಧ
ಮುದದಿ ತ್ರಿಕೂಟದೊಳಗೆ ತಪವಿರೆ । ಮದನಾರಿ ಕೃಪೆಯಾದನೊಲಿದು ೭೯

ಇಂದುಧರನು ಮಾರ್ಕಂಡೇಶ ಸೋಮೇಶ । ಚಂದದ ಹನುಮಂತೇಶ
ಮುಂದೆ ಮನೋಹರ ಮಲ್ಲೇಶ್ವರನಾ । ನಂದ ಗರ್ಗೇಶ್ವರರೊಪ್ಪೆ ೮೦

ಪಿಚ್ಚನಗುಡಿಯು ಸಿದ್ಧೇಶ ಮೂಲಸ್ಥಾನ । ನಿಚ್ಚಳವಾದ ಬಳ್ಳೇಶ
ಕಿಚ್ಚುಗಣ್ಣನು ವೀರಭದ್ರ ವಿಘ್ನೇಶ್ವರ । ಮೆಚ್ಚಿನ ಚವುಡಿಯುರೆಸೆಯೆ ೮೧

ಹರನರ್ಧಾಂಗದೆ ಒಳೊಪ್ಪುವ ಗಿರಿಜೆಯು । ವರ ಮುನೀಶ್ವರರೆಲ್ಲ ಭಜಿಸಿ
ಧರೆಯೊಳು ಕಾಶಿಯು ಕ್ಷೇತ್ರಕೆ ಮಿಗಿಲೆಂದು । ನರಸಿಂಹ ಗುಡಿಯಾಂತಿಹನು ೮೨

ಭೂಸುರನೊರ್ವನು ತಂದೆ ತಾಯಸ್ಥಿಯ । ಕಾಶಿಯೊಳಗೆ ಬಿಡಲೆಂದು
ದೇಶಾಂತರವಾಗಿ ಬಂದು ತ್ರಿಕೂಟ ವಿ । ಳಾಸವಾಗಿರುತಿರಲವನು ೮೩

ಮೆಲ್ಲನಸ್ಥಿಯಬಿಟ್ಟು ನೋಡಲವನ ಕ । ಣ್ಗಲ್ಲಿ ಶೇವಂತಿಗೆಯಾಗೆ
ನಿಲ್ಲದೆ ಕಾಶಿಗೆ ಹೋಗಿ ನಿಟ್ಟಿಸೆ ಹೂ । ವೆಲ್ಲಸ್ಥಿಯಾಗಲೇನೆಂಬೆ ೮೪

ನೋಡಿ ಧ್ಯಾನಿಸುತಿರೆ ವಿಶ್ವನಾಥನು ಬಂದು । ಆಡಿದನಾ ರಾತ್ರೆಯೊಳು
ರೂಢಿಯಕ್ಷೇತ್ರಕೆ ತ್ರಿಕೂಟವೆ ಮಿಗಿಲೆಂದು । ಕೂಡೆ ನೀ ಪೋಗಲ್ಲಿಗೆಂದ ೮೫

ಬಂದು ಭೂಸುರನಲ್ಲಿಯಸ್ಥಿಯ ನೋಡಲು । ಚೆಂದದ ಪುಷ್ಪವಾಗಿರಲು
ತಂದೆ ತಾಯಿಗಳ ಹೆಸರ ಹೇಳಿ ಧರ್ಮವ । ನಂದು ಮಾಡಿದುದನು ಕೇಳಿ ೮೬

ವ್ಯಾಸಮುನಿಗಳೆಲ್ಲ ಸಹವಾಗಿ ಬಿಡದುರೆ । ದೇಶಾಂತರವಾಗಿ ಬಂದು
ಈಶ್ವರನಗಸ್ತ್ಯೇಶ್ವರಲಿಂಗಕೆ ವಿ । ಲಾಸದಿ ರಥವ ನಡೆಸಿದರು ೮೭

ರಂಗಮಂಟಪ .... ಹೊಂಗಳಸವ । ಕಂಗೊಳಿಸುವ ಕೆರೆ ಕೊಳನ
ಶೃಂಗಾರದ ತೋಪು ಮಠ ದಾಸೋಹ । ಲಿಂಗರಾಜೇಂದ್ರ ಮಾಡಿಸಿಗ ೮೮

..... ಪ್ರಭಾಳಿಯ । ಸನ್ನುತ ಛತ್ರ ಚಾಮರವ ....
ಪನ್ನಗಧರನಗಸ್ತ್ಯೇಶ್ವರಗಿತ್ತು ಸು । ಪನ್ನ ಲಿಂಗೇಂದ್ರ ಮೆರೆದನು ೮೯

ಅಂತು ಅಗಸ್ತ್ಯೇಶ್ವರ ... । ಸಂತತ ಕೇಳೆಂದು ಪೇಳಿ
ಮುಂತೆ ಪರಿವ [ಡಾ] ನದಿಯು ಸಂಭ್ರಮವನ । ದೆಂತು ಪೊಗಳುವೆ ನಾನೊಲಿದು ೯೦

ನೋಡಿ ಧ್ಯಾನಿಸು .... । ....
......................। ೯೧

. . .ಬ್ರಹ್ಮಾಂಡವೆಲ್ಲವ ತ । ನ್ನೊಳಗಿಟ್ಟು ಕೊಂಡು ಕಾವೇರಿ
ಜಲವಾಗಿ ಪರಿದಲ್ಲೀಶ್ವರಪೂಜೆಯೆಂದಂ ನಿ । ರ್ಮಲತೆಯ... ೯೨

ಸುರ ನರ ಪಶು ಮೃಗ ಪಕ್ಷಿ ಕ್ರಿಮಿ ಕೀಟ । ತರು ಗುಲ್ಮಲತೆಗೆ ಸೈಪೀಯೆ
ಪರಮ ಗಂತೀಶ್ವರಿಯಾಗಿ ಭೂಮಿಯೊಳೆ । ಚರಿಪ ಕಾವೇರಿಯನೇನೆಂಬೆ ೯೩

ಭೋರೆಂದು . . ಮೂಡಲೆಯ್ದುವ ಕಾ । ವೇರಿ ಮೂಡು ದೊರೆಗೆಯ್ದು ,......
ಚಾರು ಪ್ರಮಥಮೌಳಿಗಿರಿಜೆಯ ಮಹಿ । ಮಾರಾಮತೆಯ ಪೇಳೆನೆ ನಾ ೯೪

ತೆಂಕಣದೇಶದ ಪರುಷೆ ಶ್ರೀಗಿರಿಗೆಯ್ದ್ದುಕ । ಲಂಕವೆನಿಸಿದ ಜಾತ್ರೆಯೊಳು
ಮುಂಕೊಂಡು ಮೆರೆವ ಮಸ್ತಾದ್ರಿಮಲ್ಲೇಶನ । ಲಂಕರಿಸಿದನು ಪೂಜೆಯೊಳು ೯೫

ಪಾವನಮೌಲಿ ಗಿರಿಯ ಮಲ್ಲಿಕಾರ್ಜುನ | ದೇವಗೆ ದಕ್ಷಿಣಾಸೆಯೊಳು
ಭಾವಿಸಿದನು ಭವರೋಗ ವೈದ್ಯೇಶ್ವರ । ನೋವಿ ಗಜಾರಣ್ಯದೊಳಗೆ ೯೬

ಧರೆಯೊಳಧಿಕ ಮಸ್ತಾದ್ರಿಗೆ ದಕ್ಷಿಣ । ಕರಿವನವೆಂಬ ಕ್ಷೇತ್ರದೊಳು
ನರಮನುಜರ ಪಾಪವ್ಯಾಧಿ ಚಿಕಿತ್ಸೆಗೆ । ಹರ ವೈದ್ಯೇಶನೊಪ್ಪಿದನು ೯೭

ಭವರೋಗವೈದ್ಯನೆಂದೆಂಬ ಪೆಸರ ತಾ । ನವನಿಯೊಳಗೆ ತೋರಲೆಂದು
ಶಿವಲಿಂಗವಾಗಿ ಮೂಡಿದನು ಭೂಮಿಯೊಳಾ । ವಿವರವ ಕೇಳೆಂದನಾರ್ಯ ೯೮

ಜಮದಗ್ನಿಮುನಿಯನು ಕೊಲೆ ಕಾರ್ತವೀರ್ಯನು । ಕ್ರಮತಪ್ಪಿತೆಂದಾ ಧೇನು
ಸಮತೆಯಿಂದಲಿ ಬಂದು ಗೋವಾಗಿ ಪುಟ್ಟಿಸಂ । ಭ್ರಮದಿಂದಲಮೃತವ ಕರೆಯೆ ೯೯

ಮಳಲೇಶ್ವರ ಮಲ್ಲಿಕಾರ್ಜುನರ್ಕ್ಕೇಶ್ವರಾ । ಮುಳತರ ಪಾತಾಳೇಶ
ವಿಳಸಿತ ವೈದ್ಯೇಶ್ವರ ಪಂಚಲಿಂಗ । ಕ್ಕೆಳಸಿ ಪಾಲ್ಗರೆವುದಾ ಧೇನು ೧೦೦

ಕಾವೇರಿಯೊಳಗೆ ಉದಕವ ಕುಡಿದಾ । ಗೋವು ಗಜಾರಣ್ಯದಲ್ಲಿ
ತೀವಿ ಪುಲ್ಮೇದುರೆ ಕ್ಷೀರವ ಕರೆಯಲು । ಭೂವಳಯದಿ ಪರಿದಲ್ಲಿ ೧೦೧

ಪಶುವಿನ ಕ್ಷೀರವು ವಸುಧೆಯೊಳಗೆ ನಿಲ್ಲೆ । ಹೆಸರಾಗೆ ಗೋಕರ್ಣವೆಂದು
ಬಿಸಜಪುಟ್ಟಿತು ಬಂದಾ ಕೊಳದಲ್ಲಿಯೆ । ಶಶಿಧರನ ಪೂಜೆಗೆಂದು ೧೦೨

ತರುಣಿಯರುಗಳ ಕುಚಾಸ್ಯ ನಯನವೆಂದು । ಇರದೆ ಕವಿಗಳು ಕೊಂಡಾಡೆ
. . . . । ಹರನಿಂದ ಕಳಿವೆ ನಾನೊಲಿದು ೧೦೩

ಇಂದ್ರನ ಸಿರಿ ನೀರೊಳಗೆ ನೆರೆಯೆ ಕಂಡು । ನೊಂದ ಐರಾವತ ಬಂದು
ಇಂದುಧರನು ವೈದ್ಯೇಶಗೆ ಕಮಲವ । ತಂದು ಪೂಜಿಸೆ ಮದಗಜವು ೧೦೪

ಕಾಮಧೇನುವಿಗಾ ಮದಗಜಕೆಲ್ಲವಾ । ಸ್ವಾಮಿ ವೈದ್ಯೇಶ್ವರ ತಾನೆ
ಪ್ರೇಮದಿ ಕೃಪೆಯನ್ನಿತ್ತು ಕೇಳಿ ಮುನಿ । ಜನಸ್ತೋಮವೆಲ್ಲ ಪೂಜಿಪುದು ೧೦೫

ಇಂತು ವೈದ್ಯೇಶನ ಮಹಿಮೆಯು ಧರೆಯೊಳಗೆ । ಸಂತತ ಕೇಳೆಂದು ಪೇಳಿ
ಮುಂತೆ ದಂಡಕಮುನೀಶ್ವರ ಪೂಜಿಸಲೋ । ರಂತೊಪ್ಪುತಿಹ ವಿಶ್ವನಾಥ ೧೦೬

ಲಕ್ಕಣ್ಣನೆಂಬ ದಣಾಯಿಕ . . . । ದಕ್ಷರಿಪುಗೆ ಪೂಜಿಸಲು
ಮುಕ್ಕಣ್ಣನು ವಿಶ್ವನಾಥನು ಕೃಪೆಯಿಂದ । ಚಿಕ್ಕನೆ ಪದಪಿತ್ತನವಗೆ ೧೦೭

ದಂಡಕಾರಣ್ಯ ಪುಣ್ಯಕ್ಷೇತ್ರದೊಳು ಪ್ರ । ಚಂಡ ಕಾವೇರಿಯೊತ್ತಿನೊಳು
ಮಂಡನಿಸಿದ ವಿಶ್ವನಾಥನುತ್ತರದೊಳು । ದ್ದಂಡ ತಕುದ್ಗಿರಿ ಪೆಸರೆಸಿ ೧೦೮

ಮಿಸುನಿವೆಟ್ಟು ಬಂದು ವಸುಧೆಯೊಳಗೆ ನಿಂದು । ಹೆಸರಾಗೆ ಶಿವಗಂಗೆಯೆಂದು
ಎಸೆವ ಗಂಗೆಯು ಶೃ[ಂ]ಗ ಮುನಿಬಂದು ತಪವಿರೆ । ಶಶಿಧರ ಕೃಪೆಯಿತ್ತನೆಂದ ೧೦೯

ಏನು ಕಾರಣ ಮೇರುಗಿರಿ ಬಂದಿತು ಸ್ವಾಮಿ । ಮಾನವಲೋಕಕೆ ಎನಲು
ಧ್ಯಾನದಿಂದಲಿ ನೋಡಿ ಗುರುನಾಥ ಪೇಳ್ದನು । ಮಾನವಿಲ್ಲದೆ ತಡೆಯದನು ೧೧೦

ಅಸುರನ ಶಿಂಶುಮಾರನ ಕೊಂದು ವೃಷಭಘು । ರ್ಜಿಸುತೇಯೆಂದು ಕೆಲದೊಳು
ಮಿಸುಗುವ ಮೇರುಗಿರಿಯ ನೀಡಿರಿದು ಟಿ । ಮ್ಮಿಸುತಿಳೆಯೊಳು ಬಿದ್ದಿತೆಂದ ೧೧೧

ಮೇರುಗಿರಿಯೊಳಿರ್ದ ಸುರರೆಲ್ಲರು ಬಂದು । ಮಾರಹರಗೆ ಮೊರೆಯಿಡಲು
ಸೇರಿರ್ದ ವೃಷಭನ ಕರೆದು ಮರ್ತ್ಯದೊಳು ವಿ । ಚಾರಿಸಿ ಪುಟ್ಟು ನೀನೆಂದ ೧೧೨

ಅಲ್ಲಿ ಕಕುದ್ಗಿರಿಯೊಳು ಶೃಂಗಮುನಿಯಹಾಗಿ । ದ್ದಲ್ಲಿಗೆ ಗಂಗೆ ಬಂದಹಳು
ಅಲ್ಲಿಯವಳ ದರುಶನವ ಮಾಡಲು ಮೋಕ್ಷ । ಪಲ್ಲಿ ವೃಷಭರೂಪನಾಗಿ ೧೧೩

ಹರನೊಂದು ದಿನದೊಳು [ಗಿ]ರಿಜೆಯು ವಂಚಿಸಿ । ಕರೆದು ಗಂಗೆಯೊಳು ಮಾತಾಡಿ
ಧರೆಯೊಳು ಪೋಗಿ ಕಕುದ್ಗಿರಿಯೊಳು ನೀ । ನಿರು ನಾವು ಬಂದಪೆವೆಂದು ೧೧೪

ರನ್ನದಾಭರಣವ ತೊಡಿಸಿ ಮಹಾದೇವ । ಮನ್ನಿಸಿ ಕಳುಹೆ ಗಂಗೆಯನು
ಹೊನ್ನಮ್ಮನೆಂದು ವಸುಧೆಯೊಳು ಪೆಸರಾಗೆ । ಪನ್ನಂಗಧರ ಬಂದನಲ್ಲಿ ೧೧೫

ಇಂದುಧರನು ಅಂಜಬೇಡೆಂದು ಗಂಗೆಗೆ । ಅಭಯುವನಿತ್ತನಾಗಿ
ಬಂದು ಕೈಪಿಡಿದ ಕಕುದ್ಗಿರಿಯೊಳಗಾ । ನಂದದಿ ಹೊನ್ನಮ್ಮನೊಲಿದು ೧೧೬

ಗಂಗಾಧರ . . . . । ಯುದಿಸಿದಂದ ಕಂಡು
ಮಂಗಳ ಸುಮೂಹೂರ್ತದೊಳು ಸರರು ಎಲ್ಲ । ರಂಗಜಹರೆಗೆ ಉತ್ಸವವ ೧೧೭

ಸುರದುಂದುಭಿಗಳು ಮೊಳಗೆ ಕುಸುಮವೃಷ್ಟಿ । ಸುರಿಯೆ ನಾನಾವಾದ್ಯಗಳು
ಮೊರೆಯಲಾ ಶಿವಗಂಗೆಯೊಳಗಜಹಕಗಳು । ಹರುಷದಿಂ ಪೂಜಿಸೆ ಶಿವನು ೧೧೮

ಕಂಭದೊಳಗೆ ಜಲಬಂದ ವಾರ್ತೆಯುನದ । ಕುಂಭಿನಿಯೊಳಗೆಲ್ಲ ನುಡಿಯೆ
ಸಂಭ್ರಮದಿಂದಲಿ ಸುರರೆಲ್ಲರು ತಂದು । ಶಂಭುವಿಗಭಿಷೇಕವೆರೆಯೆ ೧೧೯

ಸಂಕ್ರಾಂತಿಯು ದಿನದೊಳು ಹೊನ್ನಮ್ಮನ ಶಂ । ಕರನಿಗೆ ಧಾರೆಯೆರೆದು
ಶಂಕೆಯಿಲ್ಲದೆ ರಥೋತ್ಸವವನೆಸಗೆ ಮೀನಾಂಕ । ಹರಗೆ ಸುರರೊಲಿದು ೧೨೦

ಗಂಗಾಧರನಿಗೆ ಮಂಟಪ ಗುಡಿಯುನು ಕಂ । ಗೊಳಿಸುವ ಗೋಪುರವ
ಮುಂಗಡೆಯೊಳು ಪುರ ಕೆರೆ ಭಾವಿ ವನಗಳ । ಸಿಂಗರಿಸಿದ ಕೆಂಚಸೋಮ ೧೨೧

ಗುರು ಹಿರಿಯರಿಗೆ ಮೃಷ್ಟಾನ್ನವ ನೀಡುತ । ಹರಗಂಗಾಧರನ ಪೂಜೆಯುನು
ವಿರಚಿಸುತಿರೆ ಕೆಂಚಸೋಮಗೆ ಗಂಗಾ । ಧರ ಕೃಪೆಯಿತ್ತ ಕರುಣದಿ ೧೨೨

ಇಂತು ಗಂಗಾಧರ ಲಿಂಗದ ವಾರ್ತೆಯು । ಸಂತತ ಕೇಳೆಂದು ಪೇಳಿ
ಕಂತುಹರನ ಪಂಪಾವಿರೂಪಾಕ್ಷನೋ । ರಂತೆ ಪೊಗಳುವೆ ನಾನು ೧೨೩

ಭೂತಳದೊಳು ಪುಣ್ಯಕ್ಷೇತ್ರವು ತಾನೆಂದು । ಮಾತಂಗಪರ್ವತದೊಳಗೆ
ಭೂತೇಶ್ವರನು ತಪವಮಾಡಿ ಗಿರಿಜೆಯು । ಪ್ರೀತಿಯು ಸಲಿಸಿದ ಶಿವನು ೧೨೪

ಗಿರಿಗಳೊಳಾ ಮಹಾರಜತಪರ್ವತ ನಿ । ರ್ಜರರೊಳು ಭುವನೋದರನು
ಶರಧಿಗಳೊಳು ಪಯೋನಿಧಿ ಮೇಲು ಪಂಪಾ । ಪುರ ಕ್ಷೇತ್ರಗಳೊಳು ಮೇಲು ೧೨೫

ನಾದದೊಳಗೆ ವೀಣಾನಾದವಾ ಮಹಾ । ವೇದದೊಳಗೆ ಋಗ್ವೇದ
ಮೇದಿನಿಯೊಳು ಹೇಮಕೂಟವೆ ಮಿಗಿಲೆಂದು । ಮಾದೇವ ತಪವಿದ್ದನಲ್ಲಿ ೧೨೬

ದಾನಗಳೊಳು ಅನ್ನದಾನವೆ ಮೇಲು । ಧೇನುಗಳೊಳಗೆ ಸುರಧೇನು
ನಾನಾ ತೀರ್ಥದೊಳ್ತುಂಗಭದ್ರೆಯೆ ಮೇಲು । ಏನೆಂಬೆ ಹೇಮಕೂಟವನು ೧೨೭

ಶಾಂಭವಲೋಕದಿಂ ರಜತಾದ್ರಿಗೆ . . .। . . . ಮೇರುವಿಳಿದು
ಕುಂಭಿನಿಗೈತಂದು ಹೇಮಕೂಟದೊಳೀಶ । ನಂಬಿಕೆಯುನು ಕೈವಿಡಿದ ೧೨೮

ಆ ಮಹಾವಿರೂಪಾಕ್ಷ . . . ಕೇಳು । ಪ್ರೇಮದಿಂ ಕಿನ್ನರೇಶ್ವರನು
ಆ ಮಹಾಜಂಬುಕೇಶ್ವರನು ಪಶ್ಚಿಮದೊಳು । ಸೋಮೇಶ್ವರ ದಕ್ಷಿಣದೊಳು ೧೨೯

ಉತ್ತರದೊಳಂ ವಾಣಿಭದ್ರೇಶ್ವರ ಕೇಳಂ । . . . ಮತ್ತೆ ಪರ್ವತದಿ
ಸುತ್ತಿ ಪರಿವ ತುಂಗಭದ್ರೆಯು ತೀರದಿ । ಸುತ್ತ ಮುನಿಗಣೊಪ್ಪಿಹುದು ೧೩೦

ಕಪಿಲಾರ್ಕ ವಾಮನ ವಾಸಿಷ್ಠ . . . । ಉಪಮನ್ಯು ಮೊದಲಾದರೆಲ್ಲ
ಜಪ ಮಂತ್ರ ನೇಮ ನಿತ್ಯಂಗಳಿಂದಲ್ಲಿ ಉಗ್ರ । ತಪದೊಳೊಪ್ಪಿದರು ಮುನಿಗಳು ೧೩೧

ವಾಲಿ ಸುಗ್ರೀವರು ಉಗ್ರತಪವನೆ ಮಾಡಿ । ಶೂಲಧರನ ಮೆಚ್ಚಿಸಿ ಪಡೆದು
ಮೂಲೋಕ ಧೀರನು ಹನುಮನ ಸಹವಾಗಿ । ಸಾಲುದಲೆಯ ಸಂಹರಿಸೆ ೧೩೨

ಮದನನ ಸುಟ್ಟು ರತಿಗೆ ಮನಸಿಜನಿತ್ತು । ಚದುರಿಂದ ಗಿರಿಜೆಗೆ ಒಲಿದು
ಮುದವಿತ್ತು ದೇವತೆಗಳ ಪಾಲಿಸಿದುರೆ । ಸದಮಲ ಹರನೊಪ್ಪಿದನು ೧೩೩

ಇಂತು ಹಂಪೆಯ ವಿರೂಪಾಕ್ಷನ ಮಹಿಮೆಯು । ಸಂತತ ಕೇಳೆಂದು ಪೇಳಿ
ಚಿಂತಿತಾರ್ಥವನೀವ ಸಂಗಮನಾಥನು ಅಂತು । ಉಳವೆಯೊಳೊಪ್ಪಿದನು ೧೩೪

ಬ್ರಂಹ್ಮಾಡವೆಲ್ಲವು ಪ್ರಳಯುವನೆಯಿದಲು । ಬ್ರಹ್ಮಬೀಜವು ತಾನುಳಿದು
ಹೊಮ್ಮಿ ಬೆಳೆದು ಪರ್ವತವಾಗಿ ತೋರಿತು । ಎಮ್ಮ ಶರಣರಿಗಂದುಳುವೆ ೧೩೫

ಅಳಿವುದೆ ಕರ್ಮವು ಉಳಿವುದೆ ಧರ್ಮವು । ಇಳೆಯೊಳು ದೃಷ್ಟವ ನೋಡಿ
ಪ್ರಳಯದೊಳಗೆ ಎಲ್ಲಾ ಲೋಕವಳಿದವು । ಉಳಿದುದೆ ಧರ್ಮವುಳುವೆಯು ೧೩೬

ಧರೆಯನೆಲ್ಲವ ಸೃಷ್ಟಿಸುವಂದು ಬ್ರಹ್ಮನು । ಹರನಶರಣರಿಗೆ . . . ಬಿಡದೆ
ಸ್ಥಿರವಾಗಿ ಉಳುವೆಯ ನಿರ್ಮಿಸಿ ಕಾವಲ । ನಿರಿಸೆಂದು ಪೇಳ್ದ ಶಂಕರನು ೧೩೭

ಸಕಲ ಕ್ಷೇತ್ರಕ್ಕೆಲ್ಲ ಸುಖಮಯ ಉಳುವೆಗೆಲ್ಲ । ಕು ಮಾಯೆ ನೀಪೋಗಿಯಲ್ಲಿ
ಭಕುತಿಯಿಂದಲಿ ಕಾವಲಾಗಿರ್ದಡೆ ಕೇಳು । ಮುಕುತಿಯುಂಟೆಂದವ ಪೇಳೆ ೧೩೮

ಹೆಳ್ಳಯ್ಯ ಮಧುವಯ್ಯಗಳ ಕತನದಿಂದ । ಕಲ್ಯಾಣವರಸು ಬಿಜ್ಜಳನ
ಮೊಲ್ಲೆಯ ಬೊಮ್ಮಣ್ಣನವದಿರ ಕೊಂದಹ । ರೆಲ್ಲ ಗಣಂಗಳು ಕೂಡಿ ೧೩೯

ಚೆನ್ನಬಸವರಾಜ ಉಳುವೆಗೆ ಬರುವಾಗ । ಮನ್ನೆಯನಳಿಯ ಬಿಜ್ಜಳನು
ತನ್ನ ಬಲವನು ಕೂಡಿ ಶರಣರ ತಾಗುವಾಗ । ಸನ್ನಹನಿಗಡ್ಡಲಾಗಿ ೧೪೦

ಆಳಿಯ ಬಿಜ್ಜಳನ ಮುರಿಯಲಿರಿದು ಶರಣರು । ಉಳುವೆಯ ಮಹಾಮನೆಯೊಳಗೆ
ಬಳಲಿ ಪರ್ವವ ಮಾಡಿ ಸಂಗಮನಾಥನ । ನಿಳಯದಿ ಕೈಲಾಸಕೆಯ್ದೆ ೧೪೧

ಉಳಿದ ಶರಣರೆಲ್ಲ ಉಳುವೆಯ ಮನೆಯೊಳು । ನೆಲಮಾಳಿಗೆಯೊಳು ಗುಹೆಯೊಳು
ತಳಿರು ತಂಪುಗಳೊಳು ನಾನಾವಿಧದಿಂ । ದಳಿಕಾಕ್ಷನ ಪೂಜಿಸುತಿಹರು ೧೪೨

ಮಾಘ ಬಹುಳ ಚತುರ್ದಶಿಯ ದಿನದೊಳನು । ರಾಗ ಶರಣರೆಲ್ಲ ನೆರೆದು
ನಾಗಭೂಷಣನ ಪೂಜಿಸುವ ಸಂಭ್ರಮದ ಸಂ । ಭೋಗವದೇನ ಬಣ್ಣಿಪೆನು ೧೪೩

ಪೃಥ್ವಿಗೆ ಕೈಲಾಸ ಉಳುವೆಯು ಕ್ಷೇತ್ರದೊ । ಳ್ಸತ್ಯ ಶರಣರಂತಿರಲು
ಅತ್ತ ಗೋಕರ್ಣದ ಮಹಿಮೆಯು ಪೇಳ್ದಡೆ । ಚಿತ್ತಜಹರ ತಾನೆ ಬಲ್ಲ ೧೪೪

ದಶಶಿರನಿಂದ ಪೂಜೆಯು ಕೈಕೊಂಡಾ । ಪಶುಪತಿ ಮಹಬಲೇಶ್ವರನು
ಎಸೆವ ಗೋಕರ್ಣದೊಳ್ನಿಂದ ವೃತ್ತಾಂತವ । ನುಸುರುವೆ ಕೇಳಿ ಸಜ್ಜನರು ೧೪೫

ಇಂದ್ರಾಗ್ನಿ ಯಮ ನೈಋತ್ಯ ವರುಣಾದಿ । ನಿಂದ್ರರುಗಳ ಕೊಂದು ಕೂಗಿ
ಅಂದಳಕಾಪುರವದನು ತೆಗೆದು ಕೊಂಡ । ಮುಂದುಗಾಣದೆ ದಶಶಿರನು ೧೪೬

ಹರಿಯಜ ಸುರರೆಲ್ಲರೋಲಗಕೆಂದು । ಹರುಷದಿಂ ಪೋಗುತಿರಲು
ದುರುಳ ದಶಗ್ರೀವ ಕರೆದು ಕೇಳಿದೊಡೀ । ಶ್ವರನೆಡೆಗೆಂದ ನಾರದನು ೧೪೭

ಆತನೆಲ್ಲಿರ್ದಪನೆಂದು ಕೇಳಿದೊಡೆ ಮುನಿ । ಮಾತಿನುದ್ರೇಕವನರಿದು
ಭೂತಳದಿಂ ಮೇಲೆ ರಜತಾದ್ರಿಯೊಳಗಗ । ಜಾತೆಯಾಣ್ಮನು ಇರುತಿಹನೆ ೧೪೮

ನಾನಾ ದೈತ್ಯರು ದೇವರ್ಕಳಿಗೆಲ್ಲ । ತಾನೆ ಒಡೆಯನೆಂದೆನುತ
ಭೂನಾಥ ರಜತಾದ್ರಿಯೊಳ್ಕಿದನೆ ಅನು । ಮಾನವಿಲ್ಲದೆ ಕೇಳೆಂದ ೧೪೯

ಅಷ್ಟದಿಕ್ಪಾಲರು ಹರಿಯಜ ಸುರರೆಲ್ಲ । ಪಟ್ಟದರಸು ಎಂದನವನ
ಮುಟ್ಟಿ ಪೂಜಿಸಿಯೋಲೈಸುವರೆಲ್ಲರು । ಸೃಷ್ಟಿಗೊಡೆಯನೆಂದವನು ೧೫೦

ಎಂದ ನಾರದನ ನುಡಿಯು ಕೇಳಿ ಕೋಪದಿ । ನಿಂದು ಘರ್ಜಿಸಿ ದಶಶಿರನು
ಅಂದು ಜನಾರ್ದನ ಗಿರಿಯು ನೆತ್ತಿದವೊಲು । ಬಂದು ಕಿಳ್ತರು ಬೆಳ್ವೆಟ್ಟ ೧೫೧

ನನ್ನ ಸಾಹಸಕಾರಿಹರೆಂದು ಭೇರಿಯು । ಸನ್ನೆಯ ಮಾಡೆಂದು ಪೇಳ್ದಾಗ
ತನ್ನ ಬಲವ ಕೂಡಿ ರಜತಾದ್ರಿಯನೆತ್ತೆ । ಪನ್ನಂಗಧರ ಮೆಟ್ಟಿ ನಿಂದ ೧೫೨

ಅಂಧಕಾಸುರನ ತುಳಿದು ನಿಂದಂದದಿ । ಇಂದುಧರನು ಮೆಟ್ಟಿ ನಿಲಲು
ನೊಂದು ಕರಗಳೆಲ್ಲ ಸಿಕ್ಕಿ ಪೊರೆಯೊ ಶಿವ । ಎಂದೆನುತಿರೆ ದಶಕಂಠ ೧೫೩

ದಶಶಿರ ಕೈಗಳು ಸಿಕ್ಕಿ ಪೊರೆಯೊ ಎನೆ । ಶಶಿಧರ ಮರೆದಿರಲವನ
. . . . । . . . . ಪುಟ್ಟಿತಲ್ಲಿ ೧೫೪

ಕಿನ್ನರಿ . . . ಸರಮಂಡಲ । ಪನ್ನಂಗಧರ ಕಚ್ಛಪವೀಣೆ
ಸನ್ನುತ ತಂಬೂರವೀಣೆಯು ಮರಸುತ । ಚೆನ್ನಾಗಿ ನಾದವೆಸೆಯಲು ೧೫೫

ವೇದಪ್ರಿಯ ಬ್ರಹ್ಮ ಯಜ್ಞಪ್ರಿಯನಿಂದ್ರ । ನಾದಿತ್ಯ ನಮಸ್ಕಾರಪ್ರಿಯ
ಮಾಧವ ರತ್ನಾಲಂಕಾರಪ್ರಿಯ । ನಾದಪ್ರಿಯನೀಶ್ವರನು ೧೫೬

ಮಧುರ ಮಂದರ ತಾರಕ ಸಪ್ತ ಸ್ವರದಿಂದ । ಹೃದಯ ತಟ್ಟಲೀಶ್ವರನು
ಮದನಹರನು ಮೈಮರೆದು ಕೇಳುತಿರ । ಲದ ಕಂಡು ದಶಕಂಧರನು ೧೫೭

ಶಿರವಕಡಿದು ಬುರುಡೆಯ ಮಾಡಿ ಹಸ್ತವ । ಸರಿ ನೋಡಿ ಹೊಳಹನೆ ಮಾಡಿ
ನರವ ತೆಗೆದು ತಂತಿಯ ಮಾಡಿ ಬೆರಳಿಂದ । ಹರುಷದಿ ನುಡಿಸೆ ರಾಗವನು ೧೫೮

ಸರ್ಪನು ನಾಗಸರದ ನಾದವ ತಾನು । ತೆಪ್ಪಗೆ ಕೇಳುವಂದದೊಳು
ಮುಪ್ಪುರಹರ ನಾದವ ಕೇಳಿ ಮುದದಿಂ । ದೊಪ್ಪಿದ ವರ ಬೇಡೆಂದ ೧೫೯

ನಿಮ್ಮಿಷ್ಟ ಲಿಂಗವ ಪಾರ್ವತಿ ಕೋಟಿಯೂಯುಷ್ಯ । ನಿಮ್ಮ ಚಂದ್ರಾಯುಧವೆನಗೆ
ಸುಮ್ಮಾನದಿಂದ ನಿಮ್ಮಯ ವಾಹನವನು । ಘಮ್ಮನೆ ಕೊಡಿಯೆಂದನವನು ೧೬೦

ಕೊಡಬಾರದು ಕೊಡದಿರಬಾರದು ಕೇಳಿ । ನುಡಿದ ಮಾತಿಗೆ ತಪ್ಪೆವೆಂದು
ಮೃಡನು ಬೇಡಿದ ವಸ್ತುವನೆಲ್ಲ ಕೊಡಲಾಗಿ । ಪಡಕೊಂಡು ಬರೆ ದಶಶಿರನು ೧೬೧

ಇತ್ತ ಕೃತಕದೊಳು ನಾರಾಯಣ ತಾನೆ । ಬಿತ್ತಿ ಬಾಳೆಯ ಕಲ್ಲರೆಯೊಳು
ಸುತ್ತ ಸಾಸಿರವೆಜ್ಜದ ಕೊಂಡದೊಳು ತಾನು । ಹೊತ್ತೆರದನು ನೀರನಲ್ಲಿ ೧೬೨

ಕಲ್ಲಹಾಸರೆಯೊಳು ಕದಳಿಯು ನೆಟ್ಟು ನೀರ್ । ನಿಲ್ಲದ ಭಾಂಡದೊಳ್ತುಂಬಿ
ಅಲ್ಲಿಗಿಲ್ಲಿಗೆ ಎಡೆಯಾಡಿ ಬಳಲ್ವುದಿ । ದೆಲ್ಲಿಯ ಮರುಳೆಂದನವನು ೧೬೩

ಎಂದ ಮಾತನು ಕೇಳ್ದು ತಪವನು ಮಾಡಿ । ಇಂದುಧರನ ಶಿವನೊಲಿಸಿ
ಹಿಂದುಗಳೆವ ವರಗಳನು ಪಡೆದುಕೊಂಡು । ಬಂದವ ನೀ ಮರುಳೆಂದ ೧೬೪

.ಹರನಿಗಿಷ್ಟಲಿಂಗ ಪಾರ್ವತಿ ಚಂದ್ರಾಯುಧ । . . . ಕೋಟಿವರುಷದಾಯುಷ್ಯ
. . ಚಿಂತಾಮಣಿ ಮೊದಲಾದವಸೆಲ್ಲಂ । ದರೆ ಹುಚ್ಚ ೧೬೫

ಶಿಲೆ ಲಿಂಗ ಮಂಡೋದರಿ ಪಟ್ಟದ ಸತಿ । ಬಲಿದಾಯುಷ್ಯದರೆ ಕೋಟಿ
ಚಂದ್ರಾಯುಧ ನಗ್ಗೆಯೆಂಬರು ಕೇಳು । ಕಳವಿಂದನೊಲಿದಿತ್ತ ಶಿವನು ೧೬೬

ಕೃತಕವೆಂದರಿಯದೆ ಅಸುರ ಕೋಪದಿ ಬಂದು । ಪ್ರತಿಯಾಗಿ ವರವ ಕೊಡೆನಲು
ಶಿತಿಕಂಠ ಮನ್ನಿಸಿ ಬೇಡಿದ ವರವಿತ್ತು । ಅತಿಶಯದಿಂದ ಕಳುಹಿದನು ೧೬೭

ಶಂಕರನಿಂ ಕಳುಹಿಸಿಕೊಂಡು ದಶಶಿರ । ಲಂಕೆಗೆ ಬರುತಿರಲಾಗ
ಶಂಕೆಯಿಲ್ಲದೆ ಗಣನಾಥಗೆ ಪೇಳ್ದನು । ಪಂಕಜಾಕ್ಷನು ಪೋಗೆಂದು ೧೬೮

ಅಲ್ಲಿ ವಿಘ್ನೇಶ್ವರ ಭೂಸುರ ರೂಪಿಂ । ದಲ್ಲಿರೆ ಗೋಕರ್ಣದೊಳಗೆ
ಅಲ್ಲಿ ಕೃಷ್ಣನು ವಾಯು ಶೂಲೆಯ ಪುಟ್ಟಿಸೆ । ಮೆಲ್ಲನೆ ದಶಶಿರ ಬಂದು ೧೬೯

ತಂದು ಬ್ರಾಹ್ಮಣನ ಕೈಯೊಳು ಲಿಂಗವನಿ । ತ್ತಿರದೆ ಶೌಚಕೆ ಪೋಗಲವನು
ಹರಿ ಪೇಳಿದಂತೆ ಕರೆದು ಮೂಸೂಳನ । ಲ್ಲಿರಿಸಿ ಲಿಂಗವ ಬಯಲಾಗೆ ೧೭೦

ಇತ್ತ ದಶಗ್ರೀವ ಬಂದಾ ಲಿಂಗವ । ನೆತ್ತಿದೊಡದು ಬಾರದಿರಲು
ಸುತ್ತಿ ನಲಿದು ಕೀಳೆ ಗೋಕರ್ಣಾಕೃತಿ । ವೆತ್ತುದಾ ಲಿಂಗವೇನೆಂಬೆ ೧೭೧

ಧರೆ ಈರೇಳನು ಪೊರೆವ ದೇವರ ದೇವ । ಹರಿಯಜರಿಗೆ ಸಿಲ್ಕದಂತೆ
ಪರಶಿವನೆನಗೆ ಕೈವಶವಾದುದಿಲ್ಲೆಂದು । ದುರುಳ ದಾನವನು ಚಿಂತಿಸಿದ ೧೭೨

ದಶಕಂಠ ಮಹಾಬಳೇಶ್ವರಲಿಂಗವಹುದೆಂದು । ಪೆಸರಿತ್ತು ಪೂಜಿಸಿ ನಮಿಸಿ
ಶಶಿಧರ ಕೈಲಾಸನಾಥನೆ ಗತಿಯೆಂ । ದೊಸೆದೆಯಿದಿದನು ನಿಜಪುರಿಗೆ ೧೭೩

ಇತ್ತಜ ಹರಿ ಸುರ ಮನು ಮುನಿ ನರರೆಲ್ಲ । ಭಕ್ತಿಯಿಂ ಗೋಕರ್ಣಕೆಯ್ದಿ
ನಿತ್ಯಮಹಾಬಳೇಶ್ವರಲಿಂಗನೊಸೆ । ದರ್ತಿಯಿಂದಲಿ ಪೂಜಿಪರು ೧೭೪

ನಿಂದಕಿಯೊರ್ವ ಗುರುದ್ರೋಹಿ ಜಾರೆ । ಯಂದಂಧಕಿಯಾಗಿ ಜಾತ್ರೆಯೊಳು
ಬಂದು ಗೋಕರ್ಣಕ್ಷೇತ್ರವ ಮೆಟ್ಟೆ ಕಣ್ಣಿತ್ತ । ನಿಂದುಧರನು ಕೃಪೆಯಿಂದ ೧೭೫

ಆವನಾದೊಡೆಯೇನು ಗೋಕರ್ಣದ ಮಹಾ । ದೇವನ ಮಹಿಮೆಯ ಕೇಳೆ
ಪಾವಕಾಕ್ಷನು ಮಾಬಳೇಶ್ವರ ಮುದದಿಂದ । ದೇವಪದವಿಯ ಕೊಡುವನು ೧೭೬

ಇಂತು ಗೋಕರ್ಣದ ಮಹಿಮೆಯ ಗುರುನಾಥ । ಸಂತಸದಿಂ ಪೇಳೆ ಕೇಳಿ
ಅಂತು ಕಾಶಿಯ ವಿಶ್ವನಾಥನ ಘನವ ನಾ। ನೆಂತುಸುರುವೆನೆಂದನವನು ೧೭೭

ದೇಶದೇಶದ ಪುಣ್ಯಕ್ಷೇತ್ರವೆಲ್ಲಕೆ ತಾನು । ಕಾಶಿಯೇ ಮಿಗಿಲೆಂದು ಕೇಳ್ದು
ಈಶನೇ ಒಡೆಯನು ವಿಶ್ವನಾಥನು ಎಂದು । ವ್ಯಾಸನು ಕರವೆತ್ತಿ ಪೊಗಳೆ ೧೭೮

ವ್ಯಾಸನ ತೋಳೇನುಕಾರಣ ಪೋದುದು । ಕಾಶಿಯೊಳಗೆ ಎಂದು ಕೇಳೆ
ಕೇಶವನೇ ದೈವವೆಂದು ಪೊಗಳೆ ನಂ । ದೀಶ ಪರಿದುಕೊಂಡು ಪೋದ ೧೭೯

ಅವನೇಕೆ ಶಿವನ ನಿಂದಿಸಿದನಾ ಕಥೆಯನು । ವಿವರವಾಗಿ ಪೇಳೆನಲು
ಭವಿ ಭಕ್ತರುಗಳು ... ಪೇಳೆಂದಾ । ಶಿವನು ಹರಿಯು ಕೇಳೆಂದ ೧೮೦

ನಿಮ್ಮನಿಂದಿಸುವನೇ ಭವಿ ಭವದೊಳು । ನಿಮ್ಮ ಪೂಜಿಸುವನೆ ಭಕ್ತ
ನಿಮ್ಮಧ್ಯಾನ ಜಪ ತಪವನುಳ್ಳವನೀಗ । ನಿಮ್ಮ ಸಮಾನವು ಸ್ವಾಮಿ ೧೮೧

ಎಂದೊಡೊಳ್ಳಿತು ಮುನಿಗಳ ಮಧ್ಯದೊಳು ನೀ । ನಿಂದ್ಯವ ನುಡಿಯೆಂದು ಶಿವನು
ಅಂದು ಕೃಷ್ಣಗೆ ಪೇಳಲು ಕೇಳಿಯುವ ನಾ । ನಿಂದ್ಯವ ನುಡಿಯಲಂಜುವೆನು ೧೮೨

ನಾವು ಬೆಸಸಲು ನಿನಗೆ ಭಯವಿಲ್ಲವು । ಗೋವಿಂದ ನೀ ಪೋಗೆನಲು
ತಾವರೆಗಣ್ಣನು ಋಷಿಗಳಾಶ್ರಮಕೆ ಪ್ರ । ಭಾವದಿಂ ಬಂದು ನೋಡಿದನು ೧೮೩

ಬಂದ ನಾರಾಯಣ ಋಷಿಗರ್ಘ್ಯವನು ಕೊ । ಟ್ಟೊಂದನೆ ಮಾಡಿ ಸತ್ಕರಿಸಿ
ತಂದು ಗದ್ದಿಗೆಯಿಕ್ಕಿ ವ್ಯಾಸಮುನಿಯು ತಾನು । ನಿಂದಿರೆ ಹರುಷದಿಂದೊಲಿದು ೧೮೪

ಭಸಿತ ರುದ್ರಾಕ್ಷೆಗಳಿಂದ ಮುನಿಗಳೆಲ್ಲ । ಶಶಿಧರನ ಧ್ಯಾನದೊಳಿರಲು
ಬಿಸಜಾಕ್ಷನು ಹರ ಲೀಲೆಗಾರನು ಎನ । ಲೊಸೆದು ವ್ಯಾಸನು ಕೇಳಿ ನುಡಿದ ೧೮೫

ಆಕಾರವೋ ನಿರಾಕಾರವೋ ಶಿವ । ನಾಕಾರವ ತಾಳಿಹನೊ
ಲೋಕರಕ್ಷೆಗೆ ಸೃಷ್ಟಿಕರ್ತರಾರೆಂದುದಾ । ಶ್ರೀಕಾಂತ ಹೇಳೆನಗೆಂದ ೧೮೬

ಧರೆ ಮೊದಲಾದ ತತ್ವಂಗಳನೆಲ್ಲವ । ಹರಹಿ ಬ್ರಹ್ಮಾಂಡವೆಂದೆನಿಸಿ
ಸುರ ನರ ಉರಗಲೋಕಂಗಳವರದೊಂದು । ಭರಭಾರಕೆ ಕರ್ತೃವಾರು ೧೮೭

ದಿನ ಮಾಸ ಸಂವತ್ಸರ ಕಾಲ ಯುಗವಂ । ದನುಗೊಳಿಸಿದರಾವನು
ಮನು ಮುನಿ ದನುಜ ದೇವರ್ಕಳೆಂಬವರಾರ । ನೆನಹಿನೊಳಗೆ ಇರುತಿಹರು ೧೮೮

ರವಿ ಶಶಿ ಮಂಗಳ ಬುಧ ಬೃಹಸ್ಪತಿ ಶುಕ್ರ । ತವೆ ಶನಿ ರಾಹು ಕೇತುಗಳ
ಧ್ರುವ ಮೊದಲಾದ ನಕ್ಷತ್ರಗಳೆಲ್ಲವ । ಜವದಿಂದ ತಿರುಗಿಪರಾರು ೧೮೯

ಈ ಪರಿಯಿಂದಲಿ ಸಕಲವ ರೂಪುಗೊಳಿಸಿ ಮೇ । ಣ್ಪಾಪ ಪುಣ್ಯಕೆ ಕರ್ತರಾರು
ಶ್ರೀಪುರುಷೋತ್ತಮ ಪೇಳೆಂದು ವ್ಯಾಸನು । ತಾಪಸೋತ್ತಮನ ಕೇಳಿದನು ೧೯೦

ಆದೊಡೆ ಕೇಳು ದೃಷ್ಟಂಗಳ ಪೇಳುವೆ । ವೇದಮುಖನು ಬ್ರಹ್ಮನಿಂದ
ಆದವು ಸೃಷ್ಟಿಯಶಾತನ ನಾಭಿಕಮಲದ್ಲಿ। ಭೇದವಿಲ್ಲದೆ ಪುಟ್ಟಿದನು ೧೯೧

ಎಂದನಾ ಮಾಯಕವೇ ಕಣ್ಣುಗೆಡಿಸಿ । ತಾನು ಹೊನ್ನು ಹೆಣ್ಣು ಮಣ್ಣಾಗಿ
ಬಂಗ ಬಡಿಸಿ ಕಾಡುವುದ ಲೋಕವನೆಲ್ಲ । ವೆನ್ನಾಜ್ಞೆಯಿಂದಲಿ ಕೇಳು (?) ೧೯೨

ರಕ್ಷಣಕೆ ನಾನೆ ಕರ್ತನು ಶಿವನು । ಭಿಕ್ಷುಕನು ಜಗದೊಳಗೆ
ಮೋಕ್ಷಸಾಧನಕೆಲ್ಲ ತಮ್ಮ ಕೃತ್ಯಗಳು । ಈ ಕ್ಷಿತಿಯೊಳು ಕೇಳೆಂದ ೧೯೩

ಗುಡುಗು ಸಿಡಿಲು ...... ತೇಜಗಳು । ದಡರಿ ತೋರುವುವು ಮೇಘಗಳು
ಷಡುರುತು ತಮ್ಮ ಕಾಲಂಗಳೊಳಗೆ ತಾವೆ । ಬಿಡದೆ ತೋರುವ ತೆರನಂತೆ ೧೯೪

ಇಂದ್ರಜಾಲಂಗಳನಾಟವನಾಡುವ ... ತಾ । ನೊಂದೊಂದು ಪರಿಯ ವೇಷವನು
ಬಂದು ತೋರುವ ತೆರದಿಂದ ಲೋಕಂಗಳು । ಒಂದೊಂದು ರೂಪಾಗಿಹವು ೧೯೫

ಆರು ಲೋಕಂಗಳಿಗೊಡೆಯನೆಂಬುದ ಪೇಳು । ವಾರಿಜೋದ್ಭವನೊ ಶಿವನೊ
ನಾರಾಯಣ ಕೇಳೆ ಒಡೆಯ ನೀನೆ ಯೆಂದು । ಧಾರುಣಿಯೊಳು ಸೈಗೆಡೆದ ೧೯೬

ಬಿಸಜಾಕ್ಷನ ನುಡಿಯನು ಕೇಳಿ ವ್ಯಾಸನು । ಪಶುವಿನಂತಾದ ಲೋಕದೊಳು
ಶಿಶುವು ಜೋಗುಳಿಯನಾಲಿಸಿ ತಾಯ ಮರೆದಂತೆ । ಪಶುಪತಿಯನು ಮರೆದಿಹನು ೧೯೭

ನಾರಾಯಣನ ಮಾತನು ಕೇಳಿ ವ್ಯಾಸಗೆ । ಕ್ಷೀರದೊಳ್ವಿಷವೆರದಂತೆ
ಮಾರಹರನ ನಿಂದಿಸುತಿರೆ ಮುನಿಗಳು । ದಾರೈದು ಮಾತನಾಡೆನಲು ೧೯೮

ವನಜಾಕ್ಷನೆ ದೇವನೆಂದ ವ್ಯಾಸನು । ಮುನಿ ಮಧ್ಯದಲ್ಲಿ ನುಡಿದನು
ಮನಸಿಜೋದ್ಭವನಲ್ಲದೆ ದೈವ ಬೇರುಂಟೆ । ದಿನಪನ ಮುಂದೆ ಮಿಣ್ಬುಳುವೆ ೧೯೯

ಹರಿ ಮತ್ಸ್ಯ ಕೂರ್ಮ ವರಹ ಮೊದಲಾಗಿಹ । ಪರಿಭವದೊಳು ಬಂದು ಕೃಷ್ಣ
ಶರಧಿ ಮಧ್ಯದೊಳು ಲಿಂಗವ ಪೂಜಿಸಿದುದ । ನರಿಯದೆ ನೀನುಸುರುವರೆ ೨೦೦

ಒಂದಲರಿಲ್ಲದಿರಲು ನಯನವ ತೆಗೆ । ದಿಂದುಧರನನರ್ಚಿಸಿದ
ನಿಂದ್ಯವ ನುಡಿವರೆ ಕಾಶಿಯೊಳಗೆ ನೀನು । ಬಂದು ನುಡಿದೊಡೆ ನಂಬುವೆವು ೨೦೧

ವ್ಯಾಸಮುನಿಗಳು ಕೂಡ ವಾದವ ಮಾಡಿಯೆ । ಕಾಶಿಗೆ ಬಂದು ಮತ್ತವನು
ಈಶನ ವಿಶ್ವನಾಥನ ಮುಂದೆ ಕರವೆತ್ತಿ । ಕೇಶವನೇ ಘನವೆನಲು ೨೦೨

ಇಂದುಧರನ ಮಹಿಮೆಯ ಸಂದೀಶನು । ನಿಂದ್ಯವ ಕೇಳಿ ಘರ್ಜಿಸುತ
ಬಂದು ವ್ಯಾಸನ ಕರವನು ಸ್ತಂಭನ ಮಾಡೆ । ನಿಂದು ವಿಷ್ಣುವ ಧ್ಯಾನಿಸಿದ ೨೦೩

ಮಮಕರ್ತ ಮಹದೇವನಲ್ಲದೆ ಭ್ರಾಂತಿಯಿಂ। ಭ್ರಮೆಯಿಂದ ಮರೆದು ನುಡಿವರೆ
ದ್ಯುಮಣಿಗೆ ತಮದೊಡ್ಡು ಸರಿಬಹುದೆ ಕೇಳು । ಕ್ರಮ ತಪ್ಪಿ ಇಂತು ನುಡಿವರೆ ೨೦೪

ಭೂತೇಶ್ವರನ ಮಹತ್ವದ ಮುಂದೆಮ್ಮ । ಮಾತೆಲ್ಲಿಯದು ಕೇಳ್ನೀನು
ಜ್ಯೋತಿಯಿದಿರೊಳು ಮಿಣ್ಬುಳುವಿರ್ಪ । ರೀತಿಯೊಳಿಹೆನು ನಾನೆಂದ ೨೦೫

ಚಿತ್ತಜಹರನ ಮಹತ್ವದ ಮುಂದೆ ತಾ । ನತ್ತಿಯಹಣ್ಣಿನ ಮೇಲೆ
ಮುತ್ತಿಕೊಂಡಿಹ ಮಶಕದ . . . . . . । . . . . ಕೊಂಡಿಹೆನು ೨೦೬

ತ್ರಿಣಯನಭವನ . . . . . . ನಾತ್ಮ . । . . . . ವು ಕೇಳೆಂದ
ಗುಣನಿಧಿ ವಿಶ್ವನಾಥನು ಕರ್ತನುಯೆಂದು । ಬಣಿಯಿಂ ಹರಿ ಪೇಳ್ದಾತನಿಗೆ ೨೦೭

ನಿನ್ನ ಮಾತನು ಕೇಳಿ ನಿಂದ್ಯವನಾಡಿದ । ನಿನ್ನೇನ . . . . ಮೆನಲು
ಪನ್ನಗಧರನ ಸ್ತೋತ್ರವ ಮಾಡೆ ಹಸ್ತವ ।ಮುನ್ನಿನಂದದೊಳೀವ ಶಿವನು ೨೦೮

ಎಂದ ಮಾತನು ಕೇಳಿ ವ್ಯಾಸನು ಮನದೊಳು । ನೊಂದು ಹರಿಯ ಧಿಕ್ಕರಿಸಿ
ಇಂದುಶೇಖರ ವಿಶ್ವನಾಥನೆ ಘನವೆಂದು । ನಿಂದು ನುತಿಸುತಿರ್ದನವನು ೨೦೯

ಪರತತ್ವ ಪರನಾದ ಬಿಂದು ಕಲೆಗಳಿಂದ । ಪರಿಣಾಮ ತಲೆದೋರಿದಂತೆ
ಹರಿಯಜಸುರರಿಂದ ಪೂಜೆಯ ಕೈಕೊಂಬ । ವರ ವಿಶ್ವನಾಥನೆ ಜಯತು ೨೧೦

ನರ ನಾಗ ಸುರಲೋಕದೊಳಗೆಲ್ಲ ನೀನೆ । ಕರ ಮನ ಭಾವದೊಳ್ನಿಲಸಿ
ಪರಿಣಾಮವಿತ್ತು ಪೂಜೆಯ ಕೈಕೊಂಬ । ವರ ವಿಶ್ವನಾಥ ಜಯತು ೨೧೧

ಪ್ರಣವಮಂತ್ರವನುಚ್ಚರಿಸಿ ಕರ್ಣದೊಳು । ಕ್ಷಣಿಕ ಜನ್ಮವನೆಲ್ಲ ಬಿಡಿಸಿ
ಅಣಿಮಾದಿಯಷ್ಟ ಸಿದ್ಧಿಯ ಭಕ್ತರಿಗೀವ । ತ್ರಿಣಯನೆ ಜಯ ವಿಶ್ವನಾಥ ೨೧೨

ಹರನು ಸ್ತೋತ್ರಕೆ ಮೆಚ್ಚಿ ಕರವ ಕೊಡಲು ವ್ಯಾಸ । ಹರಿಯುಜಸುರರ ಮುಂದೆಲ್ಲ
ಮೆರೆಯಲಿ ತೋಳೆಂದು ಮತ್ತೆ ನುತಿಸಲೀಶ । ಮುರಳಿತ್ತನೊಂದು ಹಸ್ತವನು ೨೧೩

ಧರೆಯೊಳು ಕಾಶಿಯು ಕ್ಷೇತ್ರವೆ ಕೈಲಾಸ । ದೊರೆಯೆಂದೆನಿಸಿ ಮೆರೆವುದು
ನರರು ಸತ್ತಡೆ ಲಿಂಗವಾಗಿಯೆ ಪುಟ್ಟಿ ತಾ । ವಿರದೆ ಪೂಜಿಸಿಕೊಂಬರಲ್ಲಿ ೨೧೪

ಅದಕಾವುದು ದೃಷ್ಟವೆಂದೊಡೆ ಪೇಳುವೆ । ಮಧುಭಾಂಡದೊಳು ಪಾಣ್ಬನಳಿದು
ಮುದದಿಂದ ಸುರಭಾಂಡೇಶ್ವರನಾಗಿ ತಾ । ನುದಿಸಲೇನೆಂಬೆ ಕಾಶಿಯನು ೨೧೫

ಇಂದಿರ ತಾವರೆಗೆಳೆಯರ್ಗಹಲ್ಯೆಯಿಂ । ನೊಂದು ಗೌತಮ ಶಾಪವೀಯೆ
ಬಂದು ಕಾಶಿಯೊಳು ತಪವಮಾಡಲು ಮೆಚ್ಚಿ । ಇಂದುಧರನು ಕೃಪೆಯಿತ್ತ ೨೧೬

ಅಸುರನಿಂದ ಭಂಗಪಟ್ಟೆ ನಾನೆಂದು । ವಸುಧಾಂಗನೆ ಕಾಶಿಯೊಳು
ಒಸೆದು ತಪವ ಮಾಡೆ ವಿಶ್ವನಾಥನು ಮೆಚ್ಚಿ । ಶಶಿಧರರೂಪುದೋರಿದನು ೨೧೭

ನಾದಾತ್ಮಾಕ ಪರವಿಶ್ವನಾಥನು ತಾನೆ । ಮೇದಿನಿಯೊಳು ಲಿಂಗವಾಗಿ
ಮಾಧವ ಮೊದಲಾದ ದೇವರ್ಕಳು ಬಂದು । ವೇದಾತೀತನ ಭಜಿಸೆ ೨೧೮

ಸಗರನ ಮೊಮ್ಮಗನೆನಿಪ ಭಗೀರಥ । ಮಿಗೆ ಉಗ್ರತಪವನೆ ಮಾಡಿ
ಅಘಹರನನು ಮೆಚ್ಚಿಸಿ ಗಂಗೆಯ ತಂದ । ಸೊಗಸಿಂದ ಕಾಶಿಗೆ ಕೇಳು ೨೧೯

ಭಾಗೀರಥಿಯೊಳು ಸ್ನಾನವ ಮಾಡಿ ಮ । ತ್ಯಾಗವಮಕ್ರಿಯೆಯಿಂದ ಬಿಡದೆ
ನಾಗಭೂಷಣ ವಿಶ್ವನಾಥನ ಪೂಜಿಸಿ । ಬೇಗದಿ ಮುಕ್ತಿಯನೀವ ೨೨೦

ಆವನಾದೊಡೆಯೇನು ಕಾಶಿಗೆ ಬಂದೊಮ್ಮೆ । ಶ್ರೀವಿಶ್ವನಾಥನ ಭಜಿಸಿ
ಜೀವವ ಬಿಡಲು ಮೋಕ್ಷವು ಎಂದು ವ್ಯಾಸನು । ಭೂವಳಯೊಳು ಸಾರಿದನು ೨೨೧

ಇನ್ನು ಕೇಳೈ ವಾರಾಣಸಿಗುತ್ತರದೊಳಿ । ರ್ಪುನ್ನತ ಕೇತಾರದೊಳು
ಮುನ್ನೆಯ ಪಾಂಡವನಂದನರೆಲ್ಲ ಬರಲಾಗಿ । ಪನ್ನಗಧರ ಮರೆಯಾದ ೨೨೨

ಕ್ರಮ ತಪ್ಪಿತು ಕಲಿಯುಗ ಬಂದಿತು ಎಂದು । ಯಮಸೂನು ಬರುತಿರಲಾಗಿ
ಹಿಮವನೆ ಮರೆಮಾಡಿಕೊಂಡು ತಾ ಮರೆಯಾದ । ಸುಮೆಯಾಳ್ಮನು ಪರಶಿವನು ೨೨೩

ಪೊಡವಿಯೊಳಗೆ ಬಲ್ಲಿದರನೆ ಬಿಟ್ಟಾ । ಬಡವರ ಕಾಡಿದೆನೆಂದು
ನುಡಿಯೊಳಗಾದೆ ನಾನೇದಾ ಹಿಮ ಬಂದು । ಮೃಡಗೆರಗಿದವೊಲು ಕವಿಯೆ ೨೨೪

ಖಗ ಮೃಗಗಳ ನಗದೊಳಗಿರ್ಪ ಮುನಿಗಳ । ಮಿಗೆ ಪಶು ತರು ವನಚರವ
ಜಗದೊಳೆಲ್ಲರ ಕಾಡಿದ ಹಿಮರಾಜನು । ಸೊಗಸಿಂದ ಪೂಜಿಸಿ ಶಿವನ ೨೨೫

ಬಲ್ಲಿದರುಗಳನೆ ಕುಚದುರ್ಗವೆರಸಿ । ಸಿಲ್ಲಲೀಯದೆ ಬಡವರನು
ಹಲ್ಲಹರೆಯ ಹೊಯಿಸುತ ಕೆಲಬರುಗಳ । ನುಲ್ಲಸದಿಂ ಮುದ್ದುಮಾಡೆ ೨೨೬

ಇಂತು ಹಿಮಂವನು ಕಳೆದು ಯಮನಂದನ । ರಂತು ತಮ್ಮವರೆಲ್ಲಗೂಡಿ
ಸಂತಸದಿಂ ಬರುತಿರೆ ಮರೆಯಾದ ನಿ । ಶ್ಚಿಂತ ಕೇತಾರೇಶ್ವರನು ೨೨೭

ತಂದೆ ತಾಯನುಜ ಬಾಂಧವ ಸುತರನೆ । ಕೊಂದ ಪಾಪಿಗಳೆಂದು ನೋಡಿ
ಇಂದುಧರನು ಲುಲಾಯವಾದುದ ಕಂಡು । ನಿಂದು ನೋಡಿಪ ಧರ್ಮರಾಯ ೨೨೮

ಈಶ್ವರ ಮರೆಯಾದನು ತಮ್ಮಂದಿರ ಕೇಳಿ । ದೋಷವಾಯಿತು ನಮಗೆನಲು
ಆ ಸಹೋದರ ಭೀಮನಾರ್ಜುನಾದಿಗಳು । ದೈಸರೊಳರಸಿ ನೋಡಿದರು ೨೨೯

ಕುರುರಾಯನರಸುವಂದದೊಳಾ ಶಿಷ್ಯನು ಶ್ರೀ । ಗುರುವನರಸುವಂಬದೊಳು
...... ಕುವರ ಧರ್ಮರಾಯ ಕೇತಾರೇಶ್ವರ । ನರಸಿದನೇನ ಬಣ್ಣಿಪೆನು ೨೩೦

ಗಿರಿಯೊಳು ಧರೆಯೊಳು ಗಿಡುವಿನೊಳ್ಮಡುವಿನೊ । ಳ್ಸರುವಿನೊಳ್ದರುವಿನೊಳಡಿದ
ಹುರದೊಳು ಸರದೊಳರಸಿ ಕಂಡು ಬಿಡದಾವಿ । ದಿರೊಳು ಕಾಡೆಮ್ಮೆವಿಡದನು ೨೩೧

ಬೆಟ್ಟವನೇರಿ ಭೀಮನು ಮಾರ್ಗವ ನೋಡಿ । ನೆಟ್ಟನೆ ಹೊಡೆದು ತಾರೆನಲು
ಕಟ್ಟಿ ಹೊಡೆಯೆ ಪೋಗಲೆಲ್ಲಾ ಮಹಿಪನೊಂದು । ಬಿಟ್ಟೋಡಿದುದನೇನೆಂಬೆ ೨೩೨

ಇಂದ್ರಕೀಲದೊಳರ್ಜುನನ ಕಾಡಿದ ಶಿವ । ನಿಂದು ...... ತಾನಾಗಿ
ಇಂದುಧರನು ರೂಪುದೋರದೆ ಹೋದ ಹಿಮ । ದಿಂದ ಹಿಡಿದು ಪೋಗೆನಲು ೨೩೩

ಬೆನ್ನಟ್ಟಿ ಬರೆ ಪಾಂಡವರ ಕಂಡಾ ಕೋಣ । ತನ್ನ ರೂಪನು ಬಿಟ್ಟಾಗ
ಸನ್ನುತ ಶಿವೆಯೂಕಾರವ ತಾಳ್ದಿಮ । ನನ್ನಿಯಿಂ ಭೂಮಿಯ ಪೊಗಲು ೨೩೪

ಕಂಡು ಭೀಮಾರ್ಜುನ ಧರ್ಮರಾಯಂ ಕೂಡಿ । ಯಂದವ ಬುದು ಪಿಡಿಯಲು
ಖಂಡೇಂದುಧರ ಲಿಂಗವಾಗಿ ತೋರಿಸಿದ ಭೂ । ಮಂಡಲ ಕೇತಾರೇಶ ೨೩೫

ಪಂಚತತ್ವವು ಪಂಚಕಲೆ ಪಂಚಶಕ್ತಿಯಿಂ । ಪಂಚಬ್ರಹ್ಮವೆ ತಾನಾದ
ಪಂಚಮುಖಿಗೆ ಪಂಚಮಂತ್ರದಿಂ ಧರ್ಮ । ಪಂಚಾಮೃತವ ತಂದೆರೆದ ೨೩೬

ಜಲವನರ್ಜುನ ಭೀಮ ಗಂಧಾಕ್ಷತೆ ಪುಷ್ಪ । ಫಲ ಪಂಪಲಾದಿ ವಸ್ತುಗಳ
ನಲವಿನಿಂ ನಕುಳ ಸಹದೇವರೆಯ್ದುಂದಾಗ । ಚೆಲುವೆತ್ತು ಶಿವನ ಪೂಜಿಸಲು ೨೩೭

ಈ ಪರಿಯಲ್ಲಿ ಪೂಜಿಸೆ ಪಾಂಡವರ । ಪಾಪವ ಕಳೆದು ಸರ್ವೇಶ
ರೂಪುದೋರುತ ಧರ್ಮರಾಯನಿಗೊಲಿದು ಮ । ಹಾ ಪದವನು ಕಾಣಿಸಿದನು ೨೩೮

ಕೇತಾರದೊಳು ಲಿಂಗವ ಪೂಜಿಸಿದಾತ । ಪ್ರೀತಿಯಿಂದುದಕವನೀಂಟೆ
ಭೂತೇಶ್ವರನು ಹೃದಯದೊಳು ತಾನೇ । ಜ್ಯೋತಿರ್ಮಯಲಿಂಗವಾಗಿ ೨೩೯

ಪರಿಮಳವನು ತುಂಬಿದ ಕರಡಗೆ ತಾನು । ಪರಿಮಳವಾಗುವಂದದೊಳು
ಹರನು ಸೋಂಕಿದ ದೇಹವೆಲ್ಲ ನಿರ್ಮಲವಾಗೆ । ಹರ ಶರಣರ ಪದವೀವ ೨೪೦

ಮೃಡನು ಕೇತಾರೇಶ್ವರನ ಮಹತ್ವವನೀಗ । ಬಿಡದೆ ಕೇಳೆಂದಾಚಾರ್ಯ
ಪೊಡವಿಯೊಳ್ನೀಲಕಂಠೇಶ್ವರ ತಾನೇ । ಮಡುವಿನೊಳಿರ್ದುದ ಕೇಳು ೨೪೧

ಒಂದು ದಿವಸ ದೂರ್ವಾಸಮುನಿಯು ದೇ । ವೇಂದ್ರನ ಅಮರಾವತಿಗೆ
ಬಂದು ಓಲಗದ ಸಂಭ್ರಮವನೆ ನೋಡಿ ತಾ । ನಂದು ಸಂತಸವ ಮಾಡಿದನು ೨೪೨

ಸುರಪತಿ ವೈಹಾಳಿಯು ಹೋಗಿ ಬರುತಿರೆ । ವರಮುನಿ ದೂರ್ವಾಸ ಕಂಡು
ಹರನ ಪ್ರಸಾದ ಮಂದಾರಮಾಲೆಯ ಹೂವ । ಕರೆದು ಕೊಡಲು ಕೃಪೆಯಿಂದ ೨೪೩

ಕರಿಯಮಸ್ತಕದೊಳಗಿಡೆ ಪರಿಮಳಕಾ । ರ...ದೆರೆಗಲು ಮುಂದೆ
ಇರದೆ ಸುಂಡಲದಿಂದಿಳೆಯೊಳಗಿಡೆ ಮದಗಜ । ಪರಿವಾರ ತುಳಿಯೆ ಕಂಡದನು ೨೪೪

ಹಿಡಿ ಹಿಡಿ ಶಾಪವ ನಿನ್ನೈಶ್ವರ್ಯವು । ಕಡಲನೆ ಕೂಡಲಿಯೆಂದು
[ಕಡುಗಿ] ದೂರ್ವಾಸಮುನಿಯು ಶಾಪವನಿತ್ತು । ಬಿಡದೆ ತವ್ಮಾಶ್ರಮಕೆಯ್ದೆ ೨೪೫

ಹುಲಿ .... ।.......... ದೃಷ್ಟವ ಮೃಗದಂತೆ
ಪಲಗಣ್ಣನು ಮೇರುಗಿರಿಯ ತಪ್ಪಲಿನೊಳು । ಹಲವು ಚಿಂತೆಯೊಳಿರುತಿರ್ದ ೨೪೬

ಅಂದು ದ್ವಾರವತಿಯನು ಹೊಕ್ಕ ಕೃಷ್ಣನ । ನಂದನರಿಗೆ ಶಾಪವಿತ್ತ
ಸಿಂಧುವಿನೊಳು ನೆರಹಿದ ದೂರ್ವಾಸನು । ಬಂದೆಮ್ಮ ಕೆಡಿಸಿದನೆಂದ ೨೪೭

ಧಾರಿಣಿಯೊಳು ಅಂಬರೀಷನ ಸಂತೆಯನಂ । ದಾ ರಾಮ ಗಿರಿಯೊಳು ಬಿಡಿಸಿ
ನಾರದ ಪರ್ವತರುಗಳ ಕೆಡಸಿದವ । ಮಾರಿಯಾಗಿಯೆ ಬಂದೆನಗೆ ೨೪೮

ಮನನೊಂದು ಸುರಪತಿ ಕೃಷ್ಣನೆಡೆಗೆ ಬಂದು । ವನಜಸಂಭವನೊಳು ನುಡಿಯೆ
ಮನಸಿಜಹರನಿಂದಲ್ಲದಾಗದುಯೆಂದು । ಘನರಜತಾದ್ರಿಗೆಯ್ದಿದರು ೨೪೯

ನಂದಿಕೇಶ್ವರನು ಪರಾಕು ಜಯಯೆನೆ । ಬಂದು ನಮಿಸೆ ಹರಿಯಜರು
ಮುಂದಿರ್ದ ನಾರದ ಪೇಳೆ ಮಹಾದೇವ । ನಿಂದುಧರನು ಕೇಳಿದನು ೨೫೦

ಜಯಜಯ ಜನನ ಮರಣ ವಿದೂರನೆ ನಿತ್ಯ । ಜಯಜಯ ಸರ್ವಾಂತರ್ಯಾಮಿ
ಜಯಜಯ ಜಂಭಾರಿಯ ಪ್ರತಿಪಾಲಿಸಿ । ಜಯಜಯ ಎಂದು ಪೊಗಳಲು ೨೫೧

ದೂರ್ವಾಸಮುನಿಯಿಂದ ಇಂದ್ರನ ಸಿರಿ ಸಾರಿ । ಸರ್ವವು ಶರಧಿಯೊಳ್ನೆರೆಯೆ
ಪೂರ್ವಾಧೀಶನ ನೋಡಿ ಕೃಪೆಯೊಳೀಗ । ಪಾರ್ವತೀಶ ಪಾಲಿಸುವೆನಲು ೨೫೨

ಶರಧಿಯ ಮಥನಿಸೆ ನಿಮ್ಮಯ ಸಿರಿಯೆಲ್ಲ । ದೊರೆಕೊಂಬುದು ಮುನ್ನಿನಂತೆ
ಹರಿಯಜ ಸುರರೆಲ್ಲ ಹೋಗಿಯೆಂದೆನಲಾಗಿ । ಮರಳಿ ಬಂದರು ತಮ್ಮ ಪುರಕೆ ೨೫೩

ಉರಗಾಧಿಪತಿಯ ನೇಣಮಾಡಿ ಮಹಾಮೇರು । ಗಿರಿಯ ಮಂತ ಮಾಡಿ ಬಿಡದೆ
ಶರಧಿಯ ಕಡೆಯಲು ಸುರರಸುರರುಗಳು । ಮೊರೆದುದು ಭೋರ್ಭೋರೆಂದು ೨೫೪

ದಧಿಯ ಕಡೆಯೆ ಬೆಣ್ಣೆ ಪುಟ್ಟುವಂದದಿ ಕೇಳು । ಒದವಿದ ವಸ್ತುಗಳೆಲ್ಲ
ಮುದದಿಂದ ಪುಟ್ಟಲು ಸಾಲ್ವದು ಎಂದಾಗ ।ಕದಂಬಿ ಶರಧಿಯ ಮಥನಿಸೆ ೨೫೫

ಹಿರಿದು ಆಸೆಯ ಮಾಡಿ ಕಡೆಯಲು ದ । ಳ್ಳುರಿಯನ್ನುಗುಳುತ್ತ
ಆ ಕಡಲೊಳು ಗರಲ ಉದಿಸಿ ಸುರರಸುರರೆಲ್ಲರ । ಸುಡುತಿರೆ ...ಡಲದವರು(?) ೨೫೬

ಚಿಳಿರಿ ಭುಗಿಲ್ಭುಗಿಲೆಂಬು ದಳ್ಳುರಿ ಮಸಗಲು । ಪ್ರಳಯಾನಲನೆಂದಂಜಿ
ಕಳವಳಿಸಿ ತನುಗೆಟ್ಟು ದೇವರ್ಕಳು । [ನಳಿ] ಕಾಕ್ಷನ ಬಳಿಗೆಯ್ದಿ ೨೫೭

ಉರಿಹತ್ತಿ ಬೇವನೀಯ ... ನೀರನೆ ಕೇ । ಡೆರದಂತಾಯಿತು ನಮಗೆ
ಹರ ನಿಮ್ಮ ಸ್ಮರಣೆಮಾತ್ರದಿ ಬದುಕಿದವನೆ । ಸುರರಿಗಭಯವಿತ್ತ ಶಿವನು ೨೫೮

ಸತ್ತವನೆಳೆದಹನೆಂದು ಹೋದಾತನು । ಅತ್ತಲೆ ತಾನು ಸತ್ತಂತೆ
ಚಿತ್ತಜಹರ ಸುರಪತಿಗಾಗಿ ನಾವೆಲ್ಲ । ಸತ್ತುಹೋಗುತಿರ್ದವೆನಲು ೨೫೯

ಸಿಂಧುವ ಮಥನಿಸಲುದಿಸಿದ ವಿಷದಿಂದ । ಬೆಂದುಹೋಗುತಲಿರ್ದವೆಂದು
ಬಂದು ಮುಕುಂದನು ಮೊದಲಾದ ಸುರರೆಲ್ಲ । ರಿಂದುಧರಗೆ ನಮಿಸಿದರು ೨೬೦

ಕಾಳಗದೊಳು ಮುರಿದೋಡಿ ಬಂದವರಂತೆ । ಗೋಳಿಟ್ಟು ದೇವರ್ಕಳೆಲ್ಲ
ತಾಳಲಾರೆವು ಸ್ವಾಮಿ ವಿಷದಜ್ವಾಲೆಯನೆಂದು । ಭಾಳಾಕ್ಷನಡಿಗೆರಗಿದರು ೨೬೧

ತಾರಕಾಸುರ ವೀರ ವಿದ್ಯುನ್ಮಾಲಿ ...... । ...... ವ್ಯಾಘ್ರಾಸುರನು
ಧೀರಜಲಂಧರ ಸುರರ ಸಂಹರಿಸಿದ । ಮಾರಹರನೆ ಕೃಪೆಯಾಗು ೨೬೨

ನಸುನಗೆಯಿಂದ ಸುರರ ನೋಡೆ ಪಾರ್ವತಿ । ಶಶಿಧರನಿಗೆ ಸನ್ನೆಮಾಡೆ
ಬಿಸಜಾಂಬಕಿಯ ಮುಖವನೋಡಿ ಪಶುಪತಿ । ಯೆಸುಧೆ ಈರೇಳಕೆ ನಾನೆ ೨೬೩

ಸ್ಥಿತಿಗತಿಸಂಹಾರಕೆ ಕರ್ತೃನಾನೆಂದು । ಸತಿಯೊಡನೊಲಿದು ಮಾತಾಡೆ
ಮತಿಯಾಣ್ಮ ಹರಿ ಮೊದಲಾದ ದೇವರ್ಕಳು । ಪ್ರತಿಪಾಲಿಸಿ ಎಂದು ನಮಿಸಿ ೨೬೪

ಕರಿಮುಖ ಗುಹ ಗಣ ಗಿರಿಜೆಗೆ ಹೇಳದೆ । ಶರಣರುಗಳಿಗೆ ಸತ್ಕರಿಸಿ
ಪರಪುರುಷಾರ್ಥವೆ ಪರಿಣಾಮ ನಮಗೆಂದು । ಗರಳದೆಡೆಗೆ ಬಂದು ಶಿವನು ೨೬೫

ಉರದೊಳು ಶಿರಮಾಲೆ ಕರದೊಳು ತಲೆಯೋಡು । ಮೊರೆವ ಕರ್ಣಕುಂಡಲವು
ಉರಿಗಣ್ಣು ಭಾಳದೊಳ್ಕರಿಚರ್ಮಾಂಬರ । ಸ್ಮರದಹನಾಂಗನೆಯ್ತಂದ ೨೬೬

ಮೊರೆದು ಪನ್ನಗನಾರ್ಭಟಿಸಿ ವಿಷವನುಗುಳೆ । ಶರಧಿಯು ತೆರೆಯುಂದದೊಳು
ಬರುವ ವಿಷವನು ಕರದೊಳಾಂತುದ ಕಂಡು । ಸುರರೆಲ್ಲ ಜಯ ಜಯವೆನಲು ೨೬೭

ಮಸ್ತಕದೊಳು ಗಂಗೆಯ ಧರಿಸಿದ ಶಿವ । ಹಸ್ತದಿ ವಿಷವನೆ ಹಿಡಿದು
ಕಸ್ತುರಿಯನು ತೊಡೆವಂದದಿ ಕೊರಳೊಳು । ವಸ್ತು ಮಹಾದೇವ ಧರಿಸೆ ೨೬೮

ಸುರಪತಿಗೆ ಸಿರಿಯಿತ್ತು ಹರಿಗೆ ಸಂತಸವಿತ್ತು । ಪರಮೇಷ್ಠಿ ಮೊದಲಾದರ್ಗೆ
ಹರುಷವನಿತ್ತು ದೇವತೆಗಳ ಸಲಹಿದ । ಪರಶಿವ ವಿಷವನೆ ಧರಿಸಿ ೨೬೯

ಶರಣವೆರಸಿ ಗಿರಿಜೆ ಬಂದಡಲ್ಲಿಗೆ । ...... ವಿಘ್ನೇಶ
ಹರನ ಕುಮಾರ ಷಣ್ಮುಖ ನಂದಿ ಮಹಕಾಳ । ವರ ನಾರದ ಭೃಂಗೀಶ ೨೭೦

ಸುರದುಂದುಭಿನಾದ ಮೊಳಗೆ ಹೂವಿನ ಮಳೆ । ಸುರಿಯೆ ಬಾನಿಂದ ಭೂತಳಕೆ
ಹರನ ಕೀರ್ತಿಸಿ ಮಂಗಳಾರತಿಯನು ತಮ್ಮ । ಸುರನಾರಿಯರೆಲ್ಲ ಪಿಡಿಯೆ ೨೭೧

ಪನ್ನೀರು ಕಸ್ತೂರಿ ಪುಣುಗು ಜವಾದಿ ಬಾ । ವನ್ನ ಕರ್ಪೂರಗಳ್ವೆರಸಿ
ಪನ್ನಗಧರಗಭಿಷೇಕಪೂಜೆಯ ಮಾಡೆ । ಸನ್ನುತ ಗಿರಿಜೆ ಹರಗೊಲಿದು ೨೭೨

ಪನ್ನಗನಾ ವಿಷಜ್ವಾಲೆಯಿಂದಲಿ ಶಿವ । ತನ್ನ ಸಹಸ್ರ ಕರದೊಳು
ಪನ್ನೀರ ಕೊಡದಿಂದ ಧಾರೆಯನೆರೆಕೊಂಡು । ತನ್ನ ಮಸ್ತಕದೊಳು ತಾನೆ ೨೭೩

ತಾಳಲಾರದೆ ವಿಷದ ಮಹಾಜ್ವಾಲೆಯ । ಶೂಲಧರನು ತಾನೆ ಬಂದು
ನೀಲಕಂಠೇಶ್ವರ ಕೊಳದೊಳು ಪವಡಿಸೆ । ಕೇಳಿಯುದನು ಸರ್ವರೆಲ್ಲ ೨೭೪

ಕೇಶವ ಮೊದಲಾದ ದೇವರ್ಕಳು ಎಲ್ಲ । ಕಾಸಾರದ ಮಧ್ಯದೊಳು
ಈಶನ ಕುರಿತು ತಪವ ಮಾಡಲು ಸ । ರ್ವೇಶ ರೂಪುದೋರಿದನು ೨೭೫

ಐದು ಮುಖಂ ಮೂರೈದು ನಯನ ಮೀ । ರೈದು ಭುಜಗಳಿಂದ ಶಿವನು
ನಾದಾತ್ಮಕ ರೂಪುದೋರೆ ನೀಲ್ಕಂಠೇಶ । ಮಾಧವ ಮೊದಲಾದವರ್ಗೆ ೨೭೬

ಅಲ್ಲಲ್ಲಿ ... ಉತ್ಸವವ ಮಾಡಿ । ಅಲ್ಲಲ್ಲಿ ಹರಿಯಜ ಸುರರು
ಎಲ್ಲಕ್ಷೇತ್ರಕೆ ನೀಲ್ಕಂಠವೆ ಮಿಗಿಲೆಂ । ದಲ್ಲಿ ಕಂಕಣವ ಕಟ್ಟಿದರು ೨೭೭

ಕಾಶಿ ಕೇದಾರ ಶ್ರೀಶೈಲ ರಾಮೇಶ್ವರ । ದೇಶ ದೇಶದ ಶಿವಕ್ಷೇತ್ರ
ಮೋಸವಿಲ್ಲದೆ ಬರೆ ... ರೆ ನೀಲ್ಕಂಠಸ । ರ್ವೇಶ್ವರನೊಪ್ಪವಿಕ್ಕಿದರು ೨೭೮

ಪಂಕಜನಾಭನು ಮೊದಲಾದ ಸುರರೆಲ್ಲ । ಶಂಕೆಯಿಲ್ಲದೆ ಬಂದು ನಮಿಸಿ
ಕಂಕಣವನು ಕಟ್ಟಿ ಸುಖಮಿರ್ದರು ಶಿವ । ಶಂಕರೇಶ್ವರನ ಕೃಪೆಯೊಳು ೨೭೯

ಕಾಶಿಯೊಳಗೆ ಮರಣಂ ಗಯದೊಳು ಪಿಂಡ । ಶ್ರೀಶೈಲವ ನೋಡೆ ಪಾಪ
ನಾಶ ... ಕೇದಾರದೊಳು ಮ । ಹೇಶನೊಲಿವನೆಲ್ಲರಿಗೆ ೨೮೦

ಈ ಪರಿಯೊಳು ಪುಣ್ಯಕ್ಷೇತ್ರಂಗಳನೆಲ್ಲ । ರೂಪುಗೊಳಿಸಿದೆ ಬಲ್ಲನಿತ
ತಾಪತ್ರಯವಿಲ್ಲದೆ ಕೇಳಿದವರಿಗೆ । ಶ್ರೀಪರಮೇಶ್ವರನೊಲಿವ ೨೮೧

ಗುರು ಲಿಂಗ ಜಂಗಮ ಚಾರು ಚರಿತ್ರವ । ಬರೆದೋದಿ ಕೇಳಿದವರ್ಗೆ
ವರ ಭೋಗ ಮೋಕ್ಷಾರ್ಥಂಗಳನೀವನು । ಹರುಷದಿ ನೀಲಕಂಠೇಶ ೨೮೨

ಗುರು ಚರ ಲಿಂಗದ ಮಹಿಮೆಯನೊಲಿದಾನು । ವಿರಚಿಸಿದೆನು ಬಲ್ಲಂತೆ
ಶರಣಸದ್ಭಕ್ತರೆಲ್ಲರಲು ...... । ... ವುದು ಮೂರನೆಸಂಧಿ ೨೮೩

ನಾಲ್ಕನೆಯ ಸಂಧಿ

ತಾವರೆಗೆಳೆಯು ತಾವರೆಯ ಪಗೆವರಿಂದ । ಭೂವಳಯುವನೆಲ್ಲ ನೋಡಿ
ಓವಿ ಸಲಹುತಿರ್ಪ ಗುರುಸಿದ್ಧಮಲ್ಲೇಶ । ದೇವ ಕೊಡೆನಗೆ ಸನ್ಮತಿಯ ೧

ಇಕ್ಷುಚಾಪನ ಭಸ್ಮಾಂಗಲೇಪಿತ ಕಮು । ಲಾಕ್ಷನಯುನಕ್ಷಿಪದ್ಮವಾದ
ಪಕ್ಷಿವಾಹನನ ಪಂದಲೆಯು ಕರದೊಳಗಾಂತ । ಮೋಕ್ಷದಾಯಕ ಸಲಹೆನ್ನ ೨

ಮುಂದಣ ಕಥೆಯಾವುದೆಂದೊಡೆ ಪೇಳುವೆ । ಒಂದಾಗಿ ಕೂಡಿ ಮಹತ್ತು
ಬಂದು ಸಿಂಹಾಸನ ...... ಯನು । ಪಡೆದಂದವ ನಾನು ಪೇಳುವೆನು ೩

ಚೆನ್ನಬಸವರಾಜ ಬಂದುದು ಮೊದಲಾಗಿ । ಶೂನ್ಯವಾಯಿತು ಮರ್ತ್ಯಲೋಕ
ಮುನ್ನೊರ್ವನ ಕಳುಹೆಂದು ನಾರದ ತಾನೆ । ಪನ್ನಗಧರನೊಳು ಪೇಳ್ದ ೪

ಹರನು ಓಲಗದೊಳು ಮಾಕಾಳನೆಂಬನ । ಕರೆದು ಮರ್ತ್ಯದೊಳಗೆ ಪುಟ್ಟಿ
ಇರುತ ಸೌರಾಷ್ಟ್ರಸೋಮೇಶನ ಪೂಜಿಸಿ । ವರವ ಪಡೆವುದೆಂದೆನಲು ೫

ಅರಸಾಗಿರ್ದವನಾಳಾಗುವಂದದಿ । ಹರ ನಿಮ್ಮ ಊಳಿಗದೊಳಗೆ
ಇರುತಿರ್ದ ನರಲೋಕದೊಳಗೆಂತು ಪುಟ್ಟುವೆ । ಕರುಣಾಕರನೆಂದು ನಮಿಸೆ ೬

ಗುರು ಲಿಂಗ ಜಂಗಮದುರು ಸೇವೆಯ ಮಾಡು । ನರರಿಗೆಲ್ಲರಿಗರಸಾಗಿ
ಧರೆಯೊಳು ದಕ್ಷಿಣಕೇದಾರದೊಳು ನೀ । ನಿರು ಲಿಂಗವಾಗಿ ಬಂದಪೆವು ೭

ಅಂಗದ ಮೇಲೆ ಲಿಂಗವಧರಿಸಿ ನೀನು । ಜಂಗಮಾರ್ಚನೆಯನು ಮಾಡು
ಕಂಗೊಳಿಸುವ ಭುಜಂಗಲಿಂಗವ ನೀನು । ಸಾಂಗವಾಗಿಯೆ ಪೂಜಿಸಿಯೆ ೮

ಕನ್ನಡದೇಶ ಕಾವೇರಿ ದಕ್ಷಿಣದೊಳು । ಉನ್ನತ ಕನಕಾರಣ್ಯದೊಳು
ಪನ್ನಗಧರಲಿಂಗವಾಗಿಯೆ ನಿಮಗೆ ಪ್ರ । ಸನ್ನವಾದಪೆವು ಪೋಗೆನಲು ೯

ಎಂದಡೊಳ್ಳಿತು ಎಂದು ಮಾಕಾಳನೆಂಬವ । ಬಂದು ಸೌರಾಷ್ಟ್ರಪುರದೊಳು
ಇಂದುಧರನ ಭಕ್ತ ಚಾಮರಾಜೇಂದ್ರನ । ನಂದನನಾಗಿ ಪುಟ್ಟಿದನು ೧೦

ಶರಧಿಯೊಳಗೆ ರತ್ನ ಸುರಭಿಯೊಳಗೆ । ......
ಹರಿಯೊಳು ಮಣಿ ಕರಿಯೊಳು ಮುತ್ತು ಪುಟ್ಟಿದಂ । ತರದೊಳುದಿಸಿದನವನು ೧೧

ಸುತನಾದುದ ಕಂಡು ತಂದೆ ತಾಯಿಗಳೆಲ್ಲ । … ಯದೊಸಗೆಯ ಮಾಡಿ
ಶಿತಿಕಂಠನಭಕ್ತ ನಂಜರಾಯನು ಎಂದು । ಪ್ರೀತಿಯಿಾಗಿ ಹೆಸರನಿಟ್ಟವರು ೧೨

ಕನ್ಯಾದಾನ ಗೋದಾನ ಭೂದಾನವು ಹಿ । ರಣ್ಯದಾನವು ಮೊದಲಾದ
ಸನ್ನುತ ಧರ್ಮವನೊಲಿದು ಮಾಡಿದನಾಗ । ಮನ್ನೆಯ ಸೋಮರಾಜೇಂದ್ರ ೧೩

ಕ್ಷೀರಶರಧಿಯೊಳುದಿಸಿದ ಚಂದ್ರಮನಂತು । ದಾರ ಶೀಲನು ನಂಜರಾಯ
ಧಾರಿಣಿಯೊಳು ಬೆಳೆವುತಲಿರ್ದ …… ಕು । ಮಾರನು ಹರುಷದಿಂದೊಲಿದು ೧೪

ಅರಳೆಲೆ ಮಾಗಾಯಿ ಹುಲಿಯುಗುರು ಗೆಜ್ಜೆ । ಬೆರಳ ಮುದ್ರಿಕೆಯುಡಿದಾರ
ಸರಪಣಿ ಮುಂಗಯ್ಯ ಮುರಾ … ಗಳಿಂದ । ಕರವೆಸೆದನು ಸುಕುಮಾರ ೧೫

ಶಸ್ತ್ರಸಾಧನೆ ಕರಿ ತುರಗದೇರಾಟವ । ಶಾಸ್ತ್ರಪ್ರಸಂಗವ ಕಲಿತು
ಮುಸ್ತೈದಯಿಂದ ವೈಹಾಳಿಯ ನಡೆದನಾ । ಹಸ್ತ್ಯಶ್ವರಥ ಪದಾತಿಯೊಳು ೧೬

ಸಿರಿಯೊಳು ಸುರಪತಿ ರೂಪಿಂದ ಮನಸಿಜ । ತರಣಿಸುತನ ಉದಾರತೆಯು
ಮರುತನಸುತನ ಪರಾಕ್ರಮದಿಂದಲಿ । ಕರವೆಸೆದನು ನಂಜರಾಯ ೧೭

ಮಾತಂಕಥೆಗಳೊಳು ಸುರರ ಗುರುವಿನಂತೆ । ನೀತಿಶಾಸ್ತ್ರದಿ ಬ್ರಹ್ಮನಂತೆ
ಚಾತುರ್ಯದಿಂದ ಕೃಷ್ಣನಂದದಿ ಮೆರೆದನು । ಭೂತಳದೊಳು ನಂಜರಾಯ ೧೮

ಮದುವೆ ಮಾಂಗಲ್ಯ ಉತ್ಸವ ಸಂಭ್ರಮದಿಂದ । ಸದನದೊಳಗೆ ಇರುತಿರಲು
ಮುಂದದಿ ಭುಜಂಗೇಶ್ವರ ತಾನೆಯ್ತಂದು । ಚದುರಿಂದ ನುಡಿದ ಸ್ವಪ್ನದೊಳು ೧೯

ಲೋಕದ ಕ್ಷೇತ್ರವೆಲ್ಲಕೆ ಮಾತೃವೆನಿಸುವ । ತ್ರಯಿಕೂಟಕೆ ದಕ್ಷಿಣದಿ
ಶ್ರೀಕರ ಕನಕಪುರದೊಳೊಲಿದಿರ್ಪೆವು । ಏಕಾಂತದಿ ನಾವೆಂದ ೨೦

ಅಲ್ಲಿಗೆ ಬಂದು ನೀನೆಮ್ಮ ಪೂಜಿಸಿದೊಡೆ । ಎಲ್ಲ ಭೋಗಂಗಳನೀವೆ
ನಿಲ್ಲದೆ ಬಹುದು ನೀನೆಂದು ಭುಜಂಗೇಶ । ನಲ್ಲಿ ಪೊ …… ಪೇಳಿದನು ೨೧

ತಿರುಮಂಜಕಳನಾಥ ಲಿಂಗವು ಬಂದು ತಾ । ನಿರುವ ಠಾವನು ಸ್ವಪ್ನದೊಳು
ಕರೆದು ಚೇರಮನಿಗೆ ಪೇಳಿದಂದದಿ ಕೇಳು । ವರ ಭುಜಂಗೇಶ್ವರ ಪೇಳ್ದ ೨೨

ಇಂದುಧರನು ತಾನೆ ಸೋಮರಾಜನ ಕೂಡೆ । ಬಂದು ನುಡಿದನು ಸ್ವಪ್ನದೊಳು
ಮುಂದೆ ನೀ ನಡೆಯೆಂದು ಜಂಗಮವಾಗಿಯೆ । ಅಂದು ಭುಜಂಗೇಶ್ವರನು ೨೩

……… ಕೆಂಜಡೆ ಕಂತೆ ಕಮಂ । ಡಲ …… ಭಸ್ಮ
ಥಳಥಳಿಸುವ ಕರ್ಣಕುಂಡಲ ರುದ್ರಾಕ್ಷಿ । ಗಳ …ವೆನ ರೂಪುದೋರೆ ೨೪

ಸೋಮೇಶ್ವರನಿಗೆ ಪೂಜೆ ನೈವೇದ್ಯವ । ತಾಮಸವಿಲ್ಲದೆ ಮಾಡಿ
ನೇಮದಿ ಕುರಿತು ಪುಷ್ಪವ ಕೇಳಿದೊಡಾ । ಸ್ವಾಮಿ ಪ್ರಸಾದ ಪವಿತ್ರ ೨೫

ಸುರಲೋಕವು ತಾನೆ ಧರೆಗಿಳಿವಂದದಿ । ತೆರಳಿತು ಸೌರಾಷ್ಟ್ರದಿಂದ
ಕರಿ ಘಟೆ ಕಾಲಾಳು ತುರುಗ ರಾವುತರಿಂದ । ಮೊರೆವ ನಾನಾವಾದ್ಯದಿಂದ ೨೬

ಅಂದಳ ಛತ್ರ ಚಾಮರ ಸೀಗುರಿಯಿಂದ । ಮುಂದೆ ಹೊಗಳುವ ಕಂಚುಕರ
ದಂದಳೆದಳರೆಂಬ ಭೇರಿಯ ನಾದವ । ಸಂದಣಿಯೊಳು ತೆರಳಿದರು ೨೭

ಎಸೆವ ಬಲಕೂಡಿ ರಾಮೇಶ್ವರಕಾ । ದಶರಥರಾಮ ನಡೆದಂತೆ
ಒಸೆದು ದೇಪಣ್ಣೊಡೆಯರು ನಂಜರಾಯರು । ಶಶಿವಂಶನ ಸೋಮರಾಯ ೨೮

ಮಂತ್ರಿಮನ್ನೆಯರು ಸಾಮಂತರು ದೊರೆಗಳು । ಮುಂತೆ ಕೊಟ್ಟಿಗೆ ಕೊಲ್ಲಾರ
ಅಂತಕಹರ ಸೋಮನಾಥನಾಣತಿಯಿಂದ । ಸಂತಸ ಪಯಣಗತಿಯೊಳು ೨೯

ನಿಂದುಪ್ಪಯಣವ ಮಾಡಿ ಸುತ್ತೂರೊಳು । ಮಿಂದು ಕಾವೇರಿಯೊಳೆಲ್ಲ
ಚೆಂದದಿ ಸೋಮೇಶ್ವರಗೆ ಪ್ರದಕ್ಷಿಣ । ಬಂದಕಾರಣ ಸುತ್ತೂರೆನಿಸೆ ೩೦

ಸುತ್ತ ಬಳಸಿ ಪ್ರಕಾರ ಮಂಟಪ ಗುಡಿ । ಬಿತ್ತರಿಸುವ ಗೋಪುರವು
ಎತ್ತಿ ನಂದಿಯು ಕಂಭವು ಮೆರೆವುವಲ್ಲಿ । ಸುತ್ತೂರೊಳು ಶಿವಭವನ ೩೧

ಗೋಪಾಲಕೃಷ್ಣ ವಿನಾಯಕ ಹರಿಹರ । ಶ್ರೀಪಾರ್ವತಿಯೆಡದಲ್ಲಿ
ತಾಪಸಹೃದಯ ಚಿದ್ದೀಪ ಸೋಮೇಶ್ವರ । ರೂಪುದೋರಿದ ಲಿಂಗವಾಗಿ ೩೨

ಜಲ ಗಂಧಾಕ್ಷತೆ ಧೂಪದೀಪಗಳಿಂದ । ಫಲ ಪಂಪಲಾದಿ ನೈವೇದ್ಯ
ಸಲೆ ಮಂಗಳಾರತಿ ನೃತ್ಯ ಗೀತಗಳಿಂದ । ಚೆಲುವೆತ್ತ ಶಿವನ ಪೂಜಿಸಲು ೩೩

ಈ ಪರಿಯಿಂದ ಸೋಮೇಶನ ಪೂಜಿಸೆ । ಆ ಹೊತ್ತು ಚರಮೂರ್ತಿಗಳು
ತಾಪಸರೊಲಿದು ಭಿಕ್ಷಕೆ ಬರಲಿದಿರ್ಗೊಂಡು । ಶ್ರೀಪಾದಕೆ ನಮಿಸಿದರು ೩೪

ಬಳಲಿ ಬಂದಿರಿ ಚರಮೂರ್ತಿಗಳೆಲ್ಲಿಂದ । ಇಳೆಯಾಧಿಪತಿ ಕೇಳಿದೊಡನೆ
ಬೆಳಗುಂದವೆಂಬ ಗ್ರಾಮದ ವೀರಭದ್ರ । ನಿಳಯದಿಂ ಬಂದೆವೆನಲು ೩೫

ಎಳನೀರು ಸಕ್ಕರೆ ಇನಿದುಮಾವಿನಹಣ್ಣು । ಪಲಸು ಕದಳಿಯ ಫಲಗಳ
ನಲವಿಂದ ನಂಜರಾಜನು ತಂದು ... । ... ಸತ್ಕರಿಸಿ ಕಳುಹಿದ ೩೬

ಇಂದುಧರನಾ ಸೋಮೇಶಗೆ ನಮಿಸಿಯೆ । ಮುಂದಕೆ ನಡೆದರು ನೃಪರು
ದಿಮುಂಕುದುರೆ ಸಹಿತ ಅಂದಳವನೆಯ್ದೇರಿ । ಬಂದು ಬಿಟ್ಟರು ವಿಪಿನದೊಳು ೩೭

ಬಳಸಿ ದಿಕ್ಕೆಂಟಕೆ ಬಲವೆಲ್ಲ ಹರೆಯಲು । ಮೆಳೆಯೊಳಗಿರ್ದೊಂದು ಶಶಕ
ಬಳಲೇರಿ ಶುನಕನ ಹಿಂದಟ್ಟಲು ಕಂಡು । ಇಳೆಯಾಧಿಪತಿಗೆ ಪೇಳಿದರು ೩೮

ಗೆಲವುಳ್ಳ ತಾಣವಿದೆಂದು ಮಿಕ್ಕಿ । ಮೆಳೆ ಮರ ಗಿಡುಗಳ ಕಡಿದು
ಬಳಸಿಕೊಂಡಿರಲೊಂದು ಲಿಂಗವ ಫಣಿಯುದ । ನೆಳಸಿ ಕಂಡರು ಪೇಳೆ ನೃಪಗೆ ೩೯

ಕೇಳಿ ಸೋಮೇಂದ್ರನು ನಂಜರಾಯನು ತಾನು । ಕಾಲ್ನಡೆಯೊಳೆಯ್ತಂದು
ವ್ಯಾಳನ ನೋಡಲದಾಕ್ಷಣದಲ್ಲಿಯೆ । ಹೂಳಿ ಹೊಕ್ಕುದು ಲಿಂಗದೊಳಗೆ ೪೦

ಕಾಳಹಸ್ತಿಯೊಳಗೆ ಲಿಂಗವ ಪೂಜಿಸೆ । ವ್ಯಾಳನ ಮದಗಜಸೆಲದಿ
ಕೇಳಿ ಸರ್ಪನು ಲಿಂಗದಲ್ಲಿ ಮೆರೆದುದನು । ಪೇಳುವೆನಿದು ಚೋದ್ಯವೆನಲು ೪೧

ಪಾತಾಳಲೋಕದೊಳಗೆ ಇರ್ದ ಸರ್ಪನು । ಭೂತಳಕುರೆ ತಾನೆ ಬಂದು
ಪ್ರೀತಿಯಿಂ ಲಿಂಗವ ಪೂಜಿಸುತಿರೆ ಮೆಚ್ಚಿ । ಭೂತೇಶನೊಳಗಿಟ್ಟುಕೊಂಡ ೪೨

ಅಂದು ನಮ್ಮಯ ಸ್ವಪ್ನದಿ ಬಂದ ಲಿಂಗ ತಾ । ನೆಂದು ನೃಪರು ಸಂಭ್ರಮದಿ
ಬಂದು ಪೂಜಿಸಿ ಭುಜಂಗೇಶ್ವರಲಿಂಗವೆ । ಯೆಂದು ಕಾಣಿಕೆಯನಿಕ್ಕಿದರು ೪೩

ಸೆಟ್ಟರ ಮಲ್ಲಯ್ಯನೆಂಬ ಪ್ರಧಾನಿಗೆ । ಕೊಟ್ಟರು ಬಹುದ್ರವ್ಯವವನು
ಪಟ್ಟಣವನೆ ಮಾಡಿ ಕನಕಪುರದರಸು । ...... ಸೋಮರಾಯ ೪೪

ಕೋಟೆ ಕೊತ್ತಳವಗಳಾಳುವೇರಿಯು ಚೆಲ್ವ । ವಿಶಾಟೆ ನಿಸುವ ಹುಲಿಮೊಗವು
ತೋಟ ತುಡಿಕೆ ಕೆರೆ ಕೊಳ ಶಿವಭವನವ । ಲೂಟಿಯಿಲ್ಲದೆ ಮಾಡಿಸಿದ ೪೫

ಅಂಗಡಿ ರಾಜಬೀದಿಯ ಉಪ್ಪರಿಗೆಯ । ಮಂಗಡೆಯಲಿ ಗೋಪುರವ
ಕಂಗೊಳಿಸುವ ಶುಕನಾಸಿ ಗರ್ಭಗೃಹ । ರಂಗಮಂಟಪವ ರಚಿಸಿದ ೪೬

ಇಪ್ಪತ್ತೈದು ಲೀಲಾವಿಗ್ರಹಗಳಿಂ । ದೊಪ್ಪುವ ಚಿತ್ರಶಾಲೆಗಳ
ತಪ ದೆ ಪ್ರಾಕಾರವ ನಿರ್ಮಿಸಿದನು । ಕಪ್ಪುಗೊರಲನು ಭುಜಂಗನಿಗೆ ೪೭

ಆನೆಯಶಾಲೆ ತುರಗಶಾಲೆ ಒಂಟೆಯು । ಜೇನಶಾಲೆ ಮೊದಲಾದ
ನಾನಾ ತೆರದ ಗೃಹಂಗಳನೆಲ್ಲವ । ತಾನೇ ಮಾಡಿಸಿದ ಪ್ರಧಾನ ೪೮

ಬೊಕ್ಕಸ ಕಣಜ ಉಗ್ರಾಣ ಹಜಾರವ । ಚೊಕ್ಕಭೋಜನಶಾಲೆಗಳ
ಮಿಕ್ಕ ಚಾವಡಿ ನಾಟಕ ಸೆಜ್ಜೆವನೆಗಳ । ಲೆಕ್ಕವಿಲ್ಲದೆ ಕಟ್ಟಿಸಿದ ೪೯

...... ಗ್ರಾಮ ಖರ್ವಡ ದ್ರೋಣ । ಮಿಗೆ ಮಡಂಬವು ಗ್ರಾಮಭೇದ
ಒಗಮಿಗೆ ಸ್ವಾಮಿಯವಶಾತ್ಯ ...... । ... ರಾಷ್ಟ್ರದುರ್ಗಗಳ ೫೦

ಜಲದುರ್ಗ ಗಿರಿದುರ್ಗ ಕೃತಕ ... ದುರ್ಗ । ವನದುರ್ಗಗಳನು ನಿರ್ಮಿಸಿಯೆ
ಕಳವು ಅನ್ಯಾಯ ಕೊಂಡೆಯವಿಲ್ಲದೆ ತಾನು । ಬಲದೊಡನಿಳೆಯೊಳಿರುತಿಹನು ೫೧

ದೇಶ ಕೋಶ ದುರ್ಗಂಗಳ ಬಲಿದಾ । ಮೋಸವಿಲ್ಲದೆ ಮಂತ್ರಿ ಬಂದು
ದಾಸಭಾವದೊಳು ನೃಪಗೆ ಪೇಳಲವನ ವಿ । ಶ್ವಾಸವ ನೋಡಿ ಮನ್ನಿಸಿದ ೫೨

ಉಡುಗೊರೆಗಳನಿತ್ತು ಮಡದಿ ಮಕ್ಕಳಿಗೆಲ್ಲ । ಬಿಡದಂದಳವನೆಯಿಕ್ಕಿ
ಒಡವೆ ವಸ್ತುಗಳಿಗೆ ರಾಜ್ಯಭಂಡಾರಕೆ । ಒಡೆಯ ನೀನೆಂದು ಮನ್ನಿಸಿದ ೫೩

ಮಂತ್ರಿ ಮನ್ನೆಯರು ಸಾಮಂತರು ದೊರೆಗಳು । ಮುಂತಾದರೆಲ್ಲರುಗೂಡಿ
ಸಂತಸದಿಂ ಸೋಮರಾಜ ಪಟ್ಟವ ಕಟ್ಟಿ । ಲಂತು ಕುವರಗೆ ಹರುಷದಿ ೫೪

ತಂದು ದೊರೆಗಳೆಲ್ಲ ಕಾಣಿಕೆಯಿಕ್ಕಲು । ಅಂದು ನಂಜೇಂದ್ರನಿಗೊಲಿದು
ಬಂದುದು ಹಸ್ತ್ಯಶ್ವ ರಥ ಪದಾತಿಯು । ಸಂದಣಿಯದನೇನೆಂಬೆ ೫೫

ವಿದ್ವಾಂಸರು ಕವಿ ಗಮಕಿ ವಾಗ್ಮಿಗಳೆಲ್ಲ । ಬುದ್ಧಿವಂತರು ಪ್ರಧಾನಿಗಳು
ಹೊದ್ದಿ ... ಮನ್ನೆಯರೆಲ್ಲರು ಬಳ । ಸಿದ್ದರು ಓಲಗದೊಳಗೆ ೫೬

ಪರಿಹಾಸಕರು ಭಟ್ಟ ನಟ್ಟುವರೆಲ್ಲರು । ಚರಣಾಯುಧದ ಕಾಳಗವು
ಕರಿ ಟಗರ್ಕೋಣ ಮಲ್ಲರ ಯುದ್ಧಗಳಿಂದ । ಕರಮೆಸೆದುದು ಓಲಗವು ೫೭

ಕುಂಚ ಕಾಳಂಜ ಹಡಪ ಬಿಜ್ಜಣಿಗೆಯು । ಸಂಚಿ ಚಾಮರ ಸೀಗುರಿಯು
ಪಂಚಶರನ ಪೋಲ್ವೆ ಮಾಡಿ ರಾಜೇಂದ್ರಗೆ । ಅಂಚೆಯಿಂದಾಂತಿಹರವರು ೫೮

ಕಡುಕು ಉಂಗುರ ಕಂಠಮಾಲೆ ಪದಕ ಲುಳಿ । ತೊಡಿಗೆಯನೆ ತೊಟ್ಟುಕೊಂಡು
ಬಿಡದಿಕ್ಕಿ ಪೈಠಣಿಯನು ದುಪ್ಪಟವ ಪೊದ । ದೆಡೆಯೊಡಲೊಳಿಗದವರು ೫೯

ಅಳಗುರುಳು ಒಳ್ಳಿ ನಾಭಿ ತೆಳುವಸುರಳಿ । ... ಗಿಳಿವಾತು ಕೋಕಿಲಾಲಾಪ
ಕಲಶಕುಚಾಂಭೋಜಮುಖದ ನೀರೆಯು । ರೆಲ್ಲ ಒಳಸಿಹರೋಲಗದಿ ೬೦

ತಳಿಶದಿ ನುಣ್ಣೊಡೆ ಪೋಗುವ ಪೊರವಾರು । ಸೆಳಿನಡು ಪೋಗೊಡವೊಲೆಯು
ಕಳಹಂಸಗಮನದ ಕುಮುದ ನೇತ್ರೆಯರೆಲ್ಲ । ಬಳಸಿ ನಿಂದಿಹರೋಲಗದಿ ೬೧

ಹಸ್ತ ಕಡಗ ಹರಳೋಲೆ ಮೂಗುತಿ ಬಂದಿ । ಪುಸ್ತಿ ಚಿಂತಾಕ ಹಾರ ಲುಳಿಯು
ಮುತ್ತಿನಸರ [ಪೇಡೆ] ಪಿಲ್ಲಿಗಳಳವಟ್ಟ । ವೃತ್ತಕುಚೆಯರಲ್ಲಿಹರು ೬೨

ನಡೆ ನುಡಿ ನೋಟ ಭಾವವೆ ಪರಿಚಾರರು । ಹಿಡಿದು ತಂದಾ ಕಾಮುಕರ
ಒಡವೆ ವಸ್ತುವನೆಲ್ಲವ ಒಪ್ಪಿಸಿಕೊಂಡು । ಕೊಡುವರು ಗೀರ್ವಾಣ ಪದವ ೬೩

ನೋಟವೆಂದೆಂಬ ಪಾಶದಿ ಸೆಳೆವರು ಕ । ಣ್ಬೇಟವೆಂಬಲಗಿನಿಂದಿರಿದು
ಕೋಟಲೆಗೊಳಿಸುತಿಹರು ವಿಟಮೃಗಗಳ । ಪಾಟಿ ಮಾಡದೆ ಸಖಿಜನರು ೬೪

ಪಾತ್ರದ ಸಖಿಯರೆಲ್ಲರು ಬಂದು ನೆರೆದರು । ಚಿತ್ರದ ಬೊಂಬೆಯಂದದೊಳು
ವೇತ್ರಧರರು ತಾಳ ಮೇಳವ ನಟಿಸಲು । ಸುತ್ರಾಮನ ಸಭೆಯಂತೆ ೬೫

ಆನೆ ಕುದುರೆ ರಥ ಕಾಲಾಳುಗಳಿಂದ । ಸೇನೆ ನಿಂದುದು ಎಡಬಲದಿ
ಖಾನರು ಕನ್ನಡಿಗರು ತೆಲುಗರು ಕಣ್ಗೆ । ನಾನಾ ತೆರದೊಳೊಪ್ಪಿದರು ೬೬

ಹರಿಗೆ ಹಲಗೆ ಕಟ್ಟಿ ಬಿಲ್ಲು ಬಾಣಗಳಿಂದ । ಸುರಗಿ ಸಿಂಗಾರಗಳಿಂದ
ನೆರೆದುದು ಪಟುಭಟರಿಂದ ಮಹಾಸಭೆ । ಶರಧಿಯಂತೆ ಮೆರೆದುದು ೬೭

ಕರವೆತ್ತಿ ಸೋಮಕುಲೋದ್ಭವನೆಂದಾ । ಇರದೆ ಕೊಂಡಾಡೆ ಪಾಠಕರು
ದೊರೆ ನಂಜರಾಯ ವಂಶಾವಳಿಯನು ಕೇಳೆ । ಹರುಷದಿ ಪೇಳ್ದನಾ ಮಂತ್ರಿ ೬೮

ಸರಸಿಜ ಭವನಿಂದ ಅತ್ರಿ ಸೋಮ ಬುಧ ವರು ಪು । ರೂರವ ನಹುಷ ಯಯಾತಿ
ಧರೆಯೊಳು ಹಸ್ತಿನಾಪುರದಿ ದುಷ್ಯಂತನು । ಭರತ ಸುಹಸ್ತಿ ನೃಪಾಲ ೬೯

ರವರಿಂದ ಕುರುವ ಪ್ರದೀಪ ಶಾಂತರಾಯ । ನವನಿಂದ ವಿಚಿತ್ರವೀರ್ಯ
ರವರಿಂದ ಧೃತರಾಷ್ಟ್ರ ಪಾಂಡುನಂದನ । ರವರು ಕೌರವ ಪಾಂಡವರು ೭೦

ದಾಯಾದ್ಯತನ ಹೆಚ್ಚಿ ಕೊಲ್ಲದ ಕೊಲೆಯು ಕೊಂದು । ಸಾಯದ ಅಪಕೀರ್ತಿ ಪಡೆದು
ಪ್ರಾಯಸಪಟ್ಟರು ಕೌರವ ಪಾಂಡವರಂದು । ರಾಯ ಕೇಳೆಂದನಾ ಮಂತ್ರಿ ೭೧

ಬಲ್ಲ ವಿದ್ವಾಂಸರುಗಳ ಕರೆಯಿಸಿ ತಾ । ನೆಲ್ಲ ಶಾಸ್ತ್ರವ ಕೇಳಲವಗೆ
ಅಲ್ಲಿ ಜ್ಞಾನೋದಯವಾಗಲಂತದ ಕಂಡು । ಮೆಲ್ಲನೆ ಪಾಪ ಸರಿದುದು ೭೨

ಭೈರವಾಂಕನಪ್ಪ ಪರಶಿವ ತಾ ಬಂದು । ಧಾರಿಣಿಯೊಳು ಭಕ್ತನಾಗಿ
ವೀರಶೈವವನುಂಟು ಮಾಡೆಂದು ಪೇಳ್ದಂತೆ । ಸೇರಿತಿವಗೆ ಸುಜ್ಞಾನ ೭೩

ಧರಣಿಪತಿಯು ನಂಜರಾಯನು ಓಲಗ । ಹರದಲ್ಲಿಯೆದ್ದು ಕೇಳ್ತನ್ನ
ಅರಮನೆಗೆಯ್ತಂದು ಹರುಷದಿಂದಿರುತಿರೆ । ಹರನಾ ರಾತ್ರಿಯೊಳ್ಬಂದು ೭೪

ಕರ ಮನ ಭಾವನೊಳಗೆ ಲಿಂಗವ ನೀನು । ಧರಿಸು ನಿನಗೆ ಮುಂದೆ ನಾವು
ಪರಿಣಾಮವನು ಕೊಡುವೆವೆಂದು ಸ್ವಪ್ನದಿ । ಹರಭುಜಂಗೇಶ್ವರ ಪೇಳೆ ೭೫

ಪಟ್ಟದರಸಂ ನಂಜರಾಯನಾಕ್ಷಣದೊಳು । ಸೆಟ್ಟರ ಮಲ್ಲನ ಕರೆದು
ತಟ್ಟು ಮಾಡೆನೆ ವೈಹಾಳಿಗೆ ಹೋಗುವೆ । ... ವನವನಿಗೆ ಪೇಳ್ದ ೭೬

ಇಂದುಧರನು ಸ್ವಪ್ನದೊಳಗೆ ಪೇಳಿದೊಂ । ದಂದವನವನೊಳಗುಸುರೆ
ಎಂದಡೊಳ್ಳಿತು ಎಂದು ಬಲವನಾ ಸಮಯಕೆ । ತಂದು ನಿಲಿಸಿ ಮಂತ್ರಿರಾಯ ೭೭

ಅರಸು ವೈಹಾಳಿಯಂದದಿ ಹೋಗಿ ... ದ್ರಿ । ಪುರದ ಸೋಮೇಶಗೆ ನಮಿಸಿ
ಹರುಷದಿ ಬೆಳಗುಂದಕೆ ಪೋಗಿಯಲ್ಲಿರ್ದ । ಚರಮೂರ್ತಿಗಳಿಗೆ ನಮಿಸಿದ ೭೮

ವೀರೇಶ್ವರನಿಗೆ ಪೂಜೆ ನೈವೇದ್ಯವ । ಧಾರಿಣಿಪತಿ ಮಾಡಿಸಲು
ಚಾರುತತ್ವಜ್ಞಾನ ಜಂಗಮ ಲಿಂಗ ಉ । ದಾರಶೀಲರುಗಳಲ್ಲಿಹರು ೭೯

ಅಷ್ಟಶಿಖಿಯ ಚೆನ್ನಬಸವೇಶ್ವರನುರೆ । ದೃಷ್ಟಮೂರುತಿ ಚೆನ್ನೇಶ
ಪಟ್ಟದ ಹಿರಿಯರು ಶಿವರಾತ್ರಿಯಾರ್ಯಗೆ । ಕೊಟ್ಟು ಕಾಣಿಕೆಯಿಕ್ಕಿ ನಮಿಸೆ ೮೦

ಅಜ್ಞಾನವೆಲ್ಲವು ಪೋಗೆ ಮಾತಮನಿಗೆ । ಸುಜ್ಞಾನೇಶ್ವರನಿಂದ
ಆಜ್ಞಾಪಿಸಿ ಎನ್ನ ಭವವ ಛೇದಿಸಿ ನೀವು । ಪ್ರಜ್ಞನಮಾಡೆಂದು ನಮಿಸೆ ೮೧

ನಿಮ್ಮ ಧ್ಯಾನಿಸಿ ನಿಮ್ಮ ಪೂಜಿಪೆ ಲಿಂಗವ । ದಮ್ಮಯ್ಯ ಲಾಲಿಸಿಯೆಂದು
ಸನ್ಮಾನದಿಂ ನಂಜರಾಯನು ನಮಿಸಲು । ತಮ್ಮ ಆಚಾರ್ಯರೆಂದುಂಟು ೮೨

ಅವರಿಂದಾಗದು ಎಂದು ಯೋಚಿಸಿ । ಅವರು ಸುತನ್ಪುರೊಳಗಹರೆ
ಅವರನಿಲ್ಲಿಗೆ ಕರೆಯಿಸಿಯೆಂದು ಪೇಳಲು । ಅವನಿಪ ಕರೆಸಿದನಾಗ ೮೩

ಪಂಡಿತಾರಾಧ್ಯರಸ್ಥಲವೆಂದು ಪೇಳಿಯೆ । ಕೊಂಡಾಡೆ ಚರವಮೂರ್ತಿಗಳು
ದಂಡಿಗೆ ಪಲ್ಲಕ್ಕಿಯ ಮೇಲವರನು । ಮಂಡಲಾಧಿಪ ಕರೆತಂದ ೮೪

ಅರಮನೆಯೊಳು ಬಿಡಾರವ ಸವನಿಸಿ ಕೊಟ್ಟು । ಹಿರಿಯರುಗಳನುಪಚರಿಸಿ
ತರಿಸಿ ನಾನಾ ವಸ್ತುವಕ್ಕಿ ಬೇಳೆಯನಲ್ಲಿರಿಸಿ । ಬಿನ್ನಹವ ಮಾಡಿದನು ೮೫

ಶರಣ[ಗು] ರ್ಜರರಾಯ ಶಿವಪೂಜೆಯ ಮಾಡಿ । ಶಿರವ ಕಡಿದು ಆರತಿಯ
ಪರಮಹರುಷದಿಂ ಬೆಳಗಿಯೂ ಶಿರವನು । ಮರಳಿ ಹತ್ತಿಸಿಕೊಳುತಿರಲು ೮೬

ಅವನ ಕವಠಾರ ಕೈವಲ್ಯನಾಥನು ಮು । ತ್ತವನ ಜರಿದು ತಾನಲ್ಲಿ
ಶಿವಲಿಂಗಪೂಜೆಯ ಮಾಡಿ ಶಿರವಕಡಿದು । ಶಿವನಿಗಾರತಿಯ ಬೆಳಗುವ ೮೭

ಹರನಿರ್ಮಾಲ್ಯವೆಂದದ ಪರಿಹರಿಸಲು । ಮರಳೊಂದು ತಲೆ ಚಿಗುರುತಿರಲು
ಶಿರವ ಕೊಯ್ದುರವತ್ತೆರಡು ಬಾರಿ ಶಿವಗೆ ಕು । ವರದಾರತಿಯನೆತ್ತಿದನು ೮೮

ಇಂದುಧರನು ಭುಜಂಗೇಶ್ವರನೊಲಿದು । ತಾನಂದು ಪ್ರಸನ್ನನಾಗಿ
ಒಂದೊಂದು ಶಿರಕೆ ಒಂದೊಂದು ದೇಹವ ಮಾಡಿ । ಚಂದದ ಗಣಪದವಿತ್ತ ೮೯

ಅರವತ್ತುಮೂವರುಯೆಂದಾಗಿ ಪೆಸರಾಗಿ । ಉರುವಿಯೊಳಗೆ ಚಲಿಸಿ ಮೆರೆದಂ
ಕರಿಗೊರಳನಭವ ಭುಜಂಗಲಿಂಗವ ತಾವು । ಮರೆಯದೆ ಪೂಜಿಪರವರು ೯೦

ಎಂದು ನೃಪನು ಭುಜಂಗೇಶ್ವರಲಿಂಗಕೆ । ವಂದನೆ ಮಾಡಿ ಹರುಷದಿ
ತಂದೆಳೆನೀರು ಸಕ್ಕರೆ ಪಂಚಾಮೃತ । ದಿಂದಭಿಷೇಕವ ಮಾಡಿಸಿದ ೯೧

ಜಲಗಂಧಾಕ್ಷತೆ ಧೂಪದೀಪಗಳಿಂದ । ಫಲಪಂಪಲಾದಿ ನೈವೇದ್ಯ
ಸಲೆ ನೃತ್ಯ ಗೀತ ವಾದ್ಯಗಳಿಂದಲಿ ಕೇಳು । ನಲವಿಂದ ಶಿವನ ಪೂಜಿಸಿದ ೯೨

ಕನಯವೆ ಕುಮುದ ನಾಸಿಕವೆ ಚಂಪಕವಾ । ನನವೇ ಕಮಲವೆಂದು ತಮ್ಮ
ಮನದೊಳು ಭಾವಿಸಿ ಮಂಗಳಾರತಿಯನು ಮಾ । ನಿನಿಯರು ಶಿವನಿಗೆತ್ತಿದರು ೯೩

ಪಂಚಶರನ ಸುಟ್ಟು ರತಿಗಭಯವನಿತ್ತು । ಪಂಚಮುಖನಿಗಾರತಿಯ
ಪಂಚೇಂದ್ರಿಯಂಗಳು ನಿನಗೆ ಅರ್ಪಿತವೆಂದು । ಅಂಚೆಗಮನೆಯರೆತ್ತುವರು ೯೪

ಹೆಣ್ಣಾಗಿ ಪುಟ್ಟಿ ಲೋಕದ ಮಾನವರುಗಳ । ಪುಣ್ಯ ಪಾಪಕೆ ನಾವೆಂದು
ಬಣ್ಣಿಸಿ ಪಾಡುತಾರತಿಯ ಬೆಳಗಿದರು । ಪಣ್ಯಾಂಗನೆಯರು ಕೇಳಿ ೯೫

ಇಂತುಪಚರಿಸಿ ಮಹಾದೇವನಿಗೊಲಿ । ದಂತು ರಥೋತ್ಸವ ಮಾಡಿ
ಸಂತತ ಪಟ್ಟದರಸು ನಂಜರಾಯ ತಾ । ನಂತಃಪುರಕೆಯ್ದಿದನು ೯೬

ಬಲ್ಲ ಜೋಯಿಸರಿಂದ ಶುಭಲಗ್ನವ ಕೇಳಿ । ಒಳ್ಳಿಹ ದಿನದೊಳು ನೋಡಿ
.... ಬಿಡ । ದಲ್ಲಿ ಸಿಂಗರವ ಮಾಡಿಸಿದ ೯೭

.... । ...... ಬರಹ ದಿಂಡುಗಳ
ಕಸ್ತೂರಿ ಸಾರಣೆಯಿಂದಲಿ ಮಂಟಪ । ವರ್ತಿಯಿಂ ಕಣ್ಗೆ ಸಂದಿಹುದು ೯೮

ಕುರುಜ ತೋರಣಗಳು ಕೇರಿ ಕೇರಿಗಳೊಳು । ದೊರೆಗಳ ಮನೆಯ ಮುಂದಿನೊಳು
ಸುರಪುರದಂತುಮ್ಮತ್ತೂರು ಕಣ್ಗೆಸೆದುದು । ಸುರನಂತಿರೆ ನಂಜರಾಯ ೯೯

ಬಕ್ಕೆವಲಸು ಇನಿಮಾವು ನೇರಿಲ ಪಣ್ಣು । ಸಕ್ಕರೆಯೆಳನೀರ ತುಂಬಿ
ಮಿಕ್ಕ ಕಂಬಿಯೊಳು ಕದಳಿಯ ಫಲ ಕಾಯಿಗಳ । ದಿಕ್ಕು ದಿಕ್ಕಲಿ ತಂದರೆಲ್ಲ ೧೦೦

ನಾನಾ ಫಲ ಪಂಪಲಾದಿ ನಾನಾ ವಸ್ತು । ನಾನಾ ಪತ್ರೆ ಪುಷ್ಪಗಳ
ನಾನಾ ದಿಕ್ಕಲಿರದೆ ಬರುತಿರಲದ । ನೇನೆಂಬೆನಾ ಸಂಭ್ರಮವ ೧೦೧

ಅಮರಾವತಿಯಿಂದಖಿಲವಸ್ತುಗಳ । ಮಮ ಪಾಂಡವನು ತರಿಸಿದ
ಕ್ರಮದಿಂದ ನಂಜರಾಯನು ತರಿಸಿದ ನಾ । ಸಮಯಕೆ ದಿವ್ಯವಸ್ತುಗಳ ೧೦೨

ಪನ್ನೀರಿಂದ ಮಜ್ಜನ ಮಾಡಿ ನೃಪ ಮತ್ತೆ । ರನ್ನದಾಭರಣವ ತೊಟ್ಟು
ತನ್ನ ಶ್ರೀಗುರುವಿನ ಪಾದದಡಿಗೆ ಬಂದು । ಬಿನ್ನಹ ಮಾಡಿ ನಮಿಸಿದ ೧೦೩

ಪಟ್ಟ ಬರಹ ಸೂಪು ಸಕಲಾತಿಗಳನೆ । ಕೊಟ್ಟು ನಮಿಸಿದ ಗುರುಚರಣಕೆ
ಪಟ್ಟದಾನೆಯ ಮೇಲಡರಿಸಿ ಭೂಪಾಲ । ಪಟ್ಟಣದೊಳು ಮೆರೆಸಿದನು ೧೦೪

ಕರೆವ ಕಹಳೆಗಳಿಂ ಮೊರೆವ ಶಂಖಗಳಿಂ । ಭರದಿನ ವಾದ್ಯ ... ಕರ
ತರತರದಿ ಚಂದ್ರಜ್ಯೋತಿ ಜಗಜ್ಯೋತಿ । ಸುರುಹುಗಳಿಂದರಮನೆಗೆ ೧೦೫

ಅಂದಿಗೆ ನಂಬಿ ಚೇರಮ ಚೋಳರಾಯರು । ಇಂದಿಗೆ ನಂಜೇಂದ್ರನೆಂದು
ಬಂದು ಕೊಂಡಾಡುವ ಯಾಚಕರುಗಳಿಗೆ । ಚಂದದಿಂದಾಡುಗೊರೆಯಿತ್ತ ೧೦೬

ಇಂತು ಮಾಂಗಲ್ಯವುತ್ಸವ ಸಂಭ್ರಮದಿಂ । ದಂತರಮನೆಗೆಯ್ದಿ ಬರಲು
ಅಂತುಪ್ಪರಿಗೆಯ ಸಿಂಹಾಸನದೊಳು । ಸಂತನ ಮೂರ್ತಿಗೊಳಿಸಿದ ೧೦೭

ಇಂದುವದನೆಯರು ಪಾದಾರ್ಚನೆಯ । ಮಾಡಿ ತಂದುಪಕರಣವೆಲ್ಲವನು
ಚಂದದಿಂದೆಡೆ ಮಾಡಿ ರಂಗವಲ್ಲಿಯ ತುಂಬಿ । ಮುಂದೆ ಕಲಶವಿಕ್ಕಿದರು ೧೦೮

ನಾಕುದಿಕ್ಕಿಲಿ ನಾಕುಕಲಶವನಿರಿಸಿಯೆ । ನಾಕಾಚಾರ್ಯರು ನೆರೆದು
ಶ್ರೀಕರ ಗುರುಕಲಶವ ಮಧ್ಯದೊಳಗಿಟ್ಟ । ನೇಕ ತೆರದಿ ಪೂಜಿಸಲು ೧೦೯

ತಳಿರು ತಾವರೆ ಪೂ ದರ್ವೆಯ ಪತ್ರೆ ... । ...... ದೀಪಗಳಿಂದ
ಕಳಶ ಕಾಣಿ ಹಣ್ಣು ಕಾಳು ಕಬ್ಬು ... । ...... ಪೂಜೆಮಾಡಿದರು ೧೧೦

ತಂದೆ ತಾಯಿ ಸತಿಸುತ ಬಾಂಧವರೆಲ್ಲ । ಒಂದಾಗಿ ತಾವೆಲ್ಲಗೂಡಿ
ಬಂದು ಶ್ರೀಗುರುವಿನ ಪಾದವ ಪಿಡಿದನು । ಚಂದದಿ ನಂಜರಾಜೇಂದ್ರ ೧೧೧

ಆಗಮ ಕ್ರಿಯೆಯಿಂದ ಭಸಿತ ರುದ್ರಾಕ್ಷಿಯ । ನಾಗಲೆ ಧರಿಸಿ ತೊಡಿಸಿ
ನಾಗಭೂಷಣಗೆ ಪಂಚಾಮೃತದಿಂದವೆ । ಶ್ರೀಗುರು ಮಜ್ಜನಕೆರೆದು ೧೧೨

ಗಂಧಾಕ್ಷತೆ ಪುಷ್ಪ ಧೂಪ ದೀಪಗಳಿಂ । ದಂದಳ ಛತ್ರಚಾಮರದ
ಚಂದದಿ ನೃತ್ಯ ಗೀತಗಳಿಂದ ಶ್ರೀಗುರು । ಇಂದುಧರನ ಪೂಜಿಸಿದ ೧೧೩

ಹಸ್ತ ಮಸ್ತಕ ಸಂಯೋಗವ ಮಾಡಿಯೆ । ವಸ್ತುವ ಧ್ಯಾನಿಸಿ ನೋಡಿ
ಸ್ವಸ್ಥನಾಗಿಯೆ ಬದುಕೆಂದು ಶಿಷ್ಯನ ಕ । ರಸ್ಥಲದೊಳು ಲಿಂಗವನಿತ್ತು ೧೧೪

ಕಲಶೋದಕವನೆ ತಳಿದು ಕಂಕಣಗಟ್ಟಿ । ಬಳಸಿ ವಾದ್ಯಗಳೆಲ್ಲ ನುಡಿಯೆ
ಕಲಶಕುಚೆಯರೆಲ್ಲ ಶೋಭನದಿಂದಲಿ । ಬೆಳಗುವರಾರತಿಗಳನು ೧೧೫

ತಿರುಜ್ಞಾನಸಂಬಂಧಿಯಿಂ ಕೂನಪಾಂಡ್ಯನು । ಶರಿರದ ರುಜೆಗಳ ಕಳೆದು
ಧರೆಯೊಳು ಸೌಂದರಪಾಂಡ್ಯ ...... । ... ಮೆಸೆದನು ನಂಜರಾಯ ೧೧೬

ರಕ್ಷಿಸು ಬಡವರನಾಥರುಗಳ ನೀನು । ಈ ಕ್ಷಿತಿಯೊಳು ಸುಖದೊಳು
ಭಿಕ್ಷವ ನೀಡೆಂದು ಹರಸಿ ಶ್ರೀಗುರು ಭೋಗ । ಮೋಕ್ಷಪದವನಿತ್ತನವಗೆ ೧೧೭

ಕಡುಬು ಕಜ್ಜಾಯ ಶಾಲ್ಯಾನ್ನ ಪದಾರ್ಥವ । ನೆಡೆಮಾಡಿಸಿ ನಂಜರಾಯ
ಒಡೆಯರು ಭಕ್ತರ್ಗೆ ಬೇಡಿದುಚಿತವಿತ್ತು । ಮೃಡನ ಪೂಜೆಯ ಮಾಡುತಿಹನು ೧೧೮

ಧನ ಕನಕ ವಸ್ತ್ರಾಭರಣಗಳೆಲ್ಲ । ವನುದಿನ ಷಡುದರುಶನಕೆ
ಮನವೊಲಿದುರೆ ನೀಡಿ ಮಾಡುತ್ತಿರಲಾಗಿ । ತನಗೆ ತಾನೇ ಹೆಸರಾಗೆ ೧೧೯

ಶರಧಿಗೆ ರಾಮನು ಸೇತುಗಟ್ಟಿಸಿದಂತೆ । ಹರಿವ ನದಿಗೆ ಪಾಲವನು
ವಿರಚಿಸಿ ಮಂತ್ರಿ ಪಟ್ಟಣವನು ಮಾಡಿಯೆ । ಹರನ ಹೆಸರನಿಟ್ಟನವನು ೧೨೦

ಶಿವನಸಮುದ್ರವೆಂದೆಂಬ ಪೆಸರನಿಟ್ಟು । ಭುವನೇಶ್ವರಿಯನೊಡರ್ಚಿ
ಅವನಿಪ ಸೋಮೇಶನ...ಮಾಡಿ... । ...ಭಕ್ತಿಯಿಂದ ಭಜಿಸೆ ೧೨೧

ವೀರೇಶ್ವರನಿಗೆ ಮಂಟಪವನೆ ಕಟ್ಟಿ । ನಾರಾಯಣನಿಗೆ ಗುಡಿಯ
ಪ್ರೀತಿಸಿದಖಿಲಭೋಗಂಗಳ ... ಗೆಯ್ದು । ...ಶಶಿವೀಧಿಗಳ ೧೨೨

ಅರಮನೆಗಟ್ಟಿಸಿ ಬಿಡದಾಗಲೆ ತರ । ತರದಿಂದಲಿ ಕೇರಿಗಳ
ದೊರೆಗಳು ಮೊದಲಾದ ನಾಲ್ಕುಜಾತಿಗಳ ತು । ದಿಸೆ ಕೊಮಟಿಗ ವೈದ್ಯರನು ೧೨೩

ಪಾಂಚಾಳರು ಮೊದಲಾದ ಜಾತಿಗೆಯೆಲ್ಲ । ಹಂಚಿ ಕೊಟ್ಟರು ಅಲ್ಲಿಗಲ್ಲಿ
ಕಾಂಚನಾದ್ರಿಗೆ ಸಮವೆನಿಸಿ ಮೆರೆದುದದು । ಪಂಚಶರನ ಪಡೆಯಿಂದ ೧೨೪

ಕೊಳನುದ್ಯಾವನ ಕೃತಕಾಚಲವನೆ । ತಳುವಿಲ್ಲದೆ ನಿರ್ಮಿಸಲು
ಅಳಿ ಗಿಳಿ ಕೋಗಿಲು ಕಳಹಂಸ ನವಿಲ್ಗಳು । ಬಳಸಿಕೆ ಇಡಿಹದಾ ವನದಿ ೧೨೫

ಮಾಗಿಪೋಯಿತು ಎಂದು ಮನವಲಿದಾ ಬಣ್ಣ । ಕೋಗಿಲು ಕೊಂಬೇರಿ ಕೂಗೆ
ಪೂಗೊಳದೊಳು ತಂಗಾಳಿ ತೀಡಲು ಆನು । ರಾಗವೇರಲು ಜನರೆಲ್ಲ ೧೨೬

ದಕ್ಷಿಣಾನಲನುರೆ ತಣ್ಣತಣ್ಣನೆ ತೀಡೆ । ವೃಕ್ಷಗಳೆಲ್ಲ ಪಲ್ಲವಿಸೆ
ಪಕ್ಷಿಗಳೆಲ್ಲ ಸಂಭ್ರಮಿಸಲಂಗಜರಾಯ । ನಿಕ್ಷುಚಾಪವ ಜೇವಡೆವ ೧೨೭

ಆಗ ಚಿಗುರ್ತಳಿರೆಲೆ ಮುಗುಳು ಪೂಕಾಯ್ಪ । ಣ್ಣುಗಳಿಂದ ದೇವ ತರುವಿನ
ಬಗೆಯಿಂದ ಖಗ ಮೃಗ ಜನರಿಗಾಸ್ಪದವಾಗಿ । ಸೊಗಸಿಂದ [ವನ]ಗಳೊಪ್ಪಿದವು ೧೨೮

ಈಳಿ ಕಿತ್ತಳಿ ಪಲಸು ಮಾವು ನೇರಿಲು । ದಾಳಿಂಬೆ ದ್ರಾಕ್ಷೆ ಜಂಬೀರ
ನಾಳಿಕೇರಂ ಪೂಗ ಖರ್ಜೂರ ಕದಳಿಫ । ಲಾಳಿಗಳಿಂದೊಪ್ಪುತಿಹವು ೧೨೯

ಸಂಪಗೆ ಜಾಜಿ ಮಲ್ಲಿಗೆ ಮೊಲ್ಲೆ ತಾವರೆ । ಗುಂಪಿಂದ ಕುಮುದಗಳೆಸೆಯೆ
ತಂಪಬೀರುವ ಸೇವಂತಿಗೆ ಸುರಗಿಯ । ಸೊಂಪವನೇನ ಬಣ್ಣಿಪೆನು ೧೩೦

ಕಾವನೋಲಗ ಶಾಲೆಯೊ ರತಿರಾಜನ । ಪೂವಿನಂಗಡಿಯೊ ಮನ್ಮಥನ
ದೇವಪುರದ ಮಂಟಪವೊ ಎಂದೆನೆ ಕ । ಣ್ಣಾಗ ವನವೊಪ್ಪುತಿಹುದು ೧೩೧

ಮನಸಿಜಸಮರೂಪ ನಂಜರಾಜೇಂದ್ರನಾ । ವನ ಖೇಡಾಕಳಿಯೊಳಗೆ
ವನಿತೆಯರೊಡಗೂಡಿಯೋಕುಳಿಯಾಡುತ । ಧನಪನಂತೆಸೆದನಂದಲ್ಲಿ ೧೩೨

ವನಭೋಜನವನು ಮಾಡಿಸಿ ಭೂಪಾಲನು । ಘನ ಗುರು ಲಿಂಗ ಜಂಗಮಕೆ
ನೆನೆವ ಪದಾರ್ಥಂಗಳೆಲ್ಲವನಿತ್ತು ತಾ । ದಿನಚರಿ ಮಾಡಿ ನೀಡುವನು ೧೩೩

ಒಂದು ಮೂರಾಗಿ ಮೂರೊಂದಾದ ದುರ್ಗ । ದೊಂದಂದವ ನೋಡಿ ಭೂಪಾಲ
ತಂದುಂಡುಗೊರೆ ವಸ್ತ್ರಾಭರಣಗ । ಳೀದ ಸುಖದೊಳೊಪ್ಪುತಿಹನು ೧೩೪

ಇಂದುಧರನು ನಂಜುಂಡೇಶ್ವರನಿಗೆ । ಚಂದದಿ ಗುಡಿ ಮಂಟಪವ
ಮುಂದೆಯುಪ್ಪರಿಗೆ ಪ್ರಾಕಾರವ ನಿರ್ಮಿಸಿ । ಯೆಂದು ಸತ್ಕೀರ್ತಿವಡೆದನು ೧೩೫

ಸಾವಿರಕಾಲಮಂಟಪವನೆ ಕಟ್ಟಿಸಿ । ಭಾವಿಸಿ ಮನದೊಳು ನೆನೆದು
ಶ್ರೀವೀರಭದ್ರೇಶನ ಪೂಜಿಸಲಾಗ । ಭೂವಳಯದಿ ಕೀರ್ತಿವೆತ್ತ ೧೩೬

ಕೆರೆ ಕೊಳನುದ್ಯಾನವನಗಳನೆಲ್ಲವ । ನುರುವಿಯೊಳಗೆ ಮಾಡಿಸಲು
ಕರಿಕಂಠಭಕ್ತ ನಂಜರಾಯನ ಕೀರ್ತಿ । ಮೆರೆದುದು ಭೂಲೋಕದೊಳಗೆ ೧೩೭

ಇತ್ತ ರಾಜ್ಯವನಾಳುತಿರೆ ನಂಜರಾಯ ಮ । ತ್ತತ್ತ ಮಹತ್ತೊಂದುಗೂಡಿ
ಚಿತ್ತಜಹರನ ಪೂಜಿಸುತಿರೆ ಕುಂಭದಿಂ । ದರ್ತಿಯಿಂ ಪಡುವೀಡಸ್ವಾಮಿ ೧೩೮

ಭಕ್ತ್ಯಂಗನೆಯುನೆ ಕೈವಿಡಿದಾ ನೃಪ । ಮುಕ್ತ್ಯಂಗನೆಯೊಡಗೂಡಿ
ಕತ್ತ ಹಿಡಿದು ನೂಕಿದನೆಂದು ಧರೆಯೊಳು । ಕೀರ್ತ್ಯಂಗನೆ ದೂರುತಿಹಳು ೧೩೯

ಹರಭಕ್ತ ನಂಜರಾಯನ ಕ್ಷಮೆ ದಮೆಯೆಂಬ । ಪರಿಚಾರಕರೆಯ್ತಂದು
ಹರುಷದಿಂದಂ ಮಹತ್ತಿಗೆ ಬಿನ್ನಹ ಮಾಡೆ । ಚರಮೂರ್ತಿಗಳೆಲ್ಲ ಕೂಡಿ ಕೇಳಿ ೧೪೦

ಆ ಮಾತ ಕೇಳಿ ಪಡುವೀಡಸ್ವಾಮಿಯು । ಶ್ರೀಮಹತ್ತಿಗೆ ಬಂದು ನಮಿಸಿ
ನೇಮಿಸಿಯುಪಕರಣಗಳ ಶಿಷ್ಯರಿಗಿತ್ತು । ಪ್ರೇಮದಿಂ ಚರಿಸೆಂದು ಕಳುಹೆ ೧೪೧

ಹರನೊರ್ವನು ಬ್ರಹ್ಮಾಂಡಗಳನಜ । ಹರಿಗಳಿಂದ ನಡೆಯಿಸುವಂತೆ
ಗುರುವೊರ್ವ ಶಿಷ್ಯರು ಪಲವೊಂದಾಗಿಯೆ । ಚರಿಸಾಡುತಿಹರು ಲೋಕದೊಳು ೧೪೨

ಬುಡವೊಂದು ವೃಕ್ಷ ಪಲವು ಶಾಖೆಯಾದಂತೆ । ಪಡುವೀಡಸ್ವಾಮಿ ಶಿಷ್ಯರನು
ಪಡಕೊಂಡು ನಾಲ್ಕುರೂಪಿಂದ ಚರಿಸುವರು । ಪೊಡವಿಯೊಳಗೆ ಮಹತ್ತಾಗಿ ೧೪೩

ಹಸುವಿನ ಹಾಲು ಮೊಸರು ತುಪ್ಪವಳಿಯೆಂದು । ಹೆಸರಿಟ್ಟು ಕರೆವಂದದೊಳು
ಜಸವೆತ್ತ ಘನಲಿಂಗ ವಿರಕ್ತ ಅತಿಥಿಯು । ಒಸೆದ ವೃದಾಸಿಗಳೆಂದು ೧೪೪

ಮಿಸುನಿ ತಾನೊಂದು ಸರ್ವಾಭರಣಂಗಳು । ಹೆಸರಾಗಿ ಮೆರೆವಂದದೊಳು
ಸುಧೆಯೊಳಗೆ ಚರಮೂರ್ತಿಗಳೆಲ್ಲರು । ಜಸವೆತ್ತು ಚರಿಪರಲ್ಲಲ್ಲಿ ೧೪೫

ಕಣಿಕವು ತಾನೊಂದು ಪಲವು ಕಜ್ಜಾಯ । ಗಳಣಿಯುರದಿಂದಾಗುವಂತೆ
ಗುಣನಿಧಿ ಪಡುವಿಡಸ್ವಾಮಿಯು ಬಗೆ ಧಾ । ರಿಣಿಯೊಳು ಚರಿಸಿ ಮೆರೆದುದು ೧೪೬

ಪರಶಿವನಿಂದ ಸದಾಶಿವಮೂರ್ತಿಯುಮ । ವರಿಂದ ಮಹೇಶ್ವರನು
ವರ ಮಹೇಶ್ವರ ರೇವಣಸಿದ್ಧೇಶ್ವರನ । ವರಿಂದ ರುದ್ರಮುನಿಯು ೧೪೭

ಅವರ ಶಿಷ್ಯರು ಶಾಂತಮಲ್ಲಿಕಾರ್ಜುನ । ದೇವರವರಿಗೆ ಪಡುವಿಡಸ್ವಾಮಿ
ಅವರ ಹಸ್ತೋದ್ಭವ ಮಹಾತ್ರೇಶ್ವರ ... । ... ಸಹೋದರವಿನ್ನು ೧೪೮

ಚೆನ್ನಬಸವರಾಜ ಬಸವಲಿಂಗೇಶ್ವರ । ಚೆನ್ನಮಲೇಶ್ವರರೆಂದು
ಅನ್ನದಾನೇಶ್ವರ ಶಂಕರದೇವ ... । ... ರೇಶ್ವರ ಕೇಳು ೧೪೯

ಶಾಂತೇಶ್ವರ ಶಾಂತಮಲ್ಲಿಕಾರ್ಜುನಸ್ವಾಮಿ । ಶಾಂತವೀರೇಶ್ವರನೆಂದು
ಶಾಂತಲಿಂಗೇಶ್ವರ ರೇವಣಸಿದ್ಧೇಶ್ವರ । ಮುಂತಾದ ಶರಣರು ಎಲ್ಲ ೧೫೦

ಸಿದ್ಧಮಲ್ಲೇಶ್ವರ ಶಿವಲಿಂಗದೇವರು । ರುದ್ರಮುನಿಯು ಪರ್ವತೇಶ
ಸಿದ್ಧರಾಮೇಶ್ವರ ಶಿಷ್ಯ [ಶಿವ] ನಂಕಾರ್ಯನು । ಸಿದ್ಧವೀರಣಗುರುದೇವ ೧೫೧

ಗುರುಮಲ್ಲೇಶ್ವರ ಪರ್ವತಮಲ್ಲೇಶ । ಗುರುಲಿಂಗೇಶ್ವರನಿಂದ
ಮರುಳುಸಿದ್ಧೇಶ್ವರ ನೀಲಕಂಠೇಶ್ವರ । ಕರಿಯುಸಿದ್ಧೇಶ್ವರ ಕೇಳು ೧೫೨

ಶಿವನ ಸಹಸ್ರನಾಮಂಗಳ ಧರಿಸಿಯೆ । ಶಿವಲಿಂಗವನು ಪೂಜಿಸುತ
ಶಿವಶಾಸ್ತ್ರಂಗಳ ಕೇಳುತ ಮಹತ್ತು । ಅವನಿಯೊಳಗೆ ಚರಿಸುತಿಹರು ೧೫೩

ಶಿವಭಕ್ತರಂಗಳ ಭವವ ಛೇದಿಸಲೆಂದು । ಶಿವನು ಜಂಗಮವಾಗಿ ಬಂದು
ಅವನಿಯೊಳ್ತಿರುನೀಲಕಂಠ ಅಮರನೀತಿ । ಶಿವಭಕ್ತ ಸಿರಿಯಾಳ ಒಲಿದು ೧೫೪

ಶಶಿಧರ ಜಂಗಮವಾಗಿಯೆ ಬಂದಾ । ಬಸವೇಶ ಮೊದಲಾದವರ
ಎಸೆವ ಶರಣರ ಭಕ್ತಿಗೆ ಮೆಚ್ಚಿ ಕೃಪೆಯಿಂದ । ತೊನೆದು ಕೈವಲ್ಯವನಿತ್ತ ೧೫೫

ಪಂಚಮುಖನ ಹೆಸರನು ಹೇಳಿ ನಾವೀಗ । ಪಂಚಮಠವ ಮಾಡಲೆಂದು
ವಂಚನೆಯಿಲ್ಲದೆ ಮಂತ್ರಿಯೊಡನೆ ಪೇಳೆ । ಸಂಚಲವೇಕಿನ್ನು ಮಾಡಿ ೧೮೦

ಇತ್ತುಮ್ಮತ್ತೂರಿಗೆ ಪೂರ್ವದೊಳೊಪ್ಪುವ । ಪತ್ತುನಾಡಿಗೆ ಮೂಡುಗಡೆಯು
ಉತ್ತಮ ಶ್ವೇತಪರ್ವತದಿ ಗಂಗಾಧರ । ನತ್ತ ದಕ್ಷಿಣದಿ ಕುಂಭೇಶ ೧೮೧

ಉತ್ತರದೆಸೆಯೊಳು ಸೋಣೆಯು ವೀರೇಶ್ವರ । ನೊತ್ತಿಲಿ ಸಿದ್ಧೇಶ್ವರನು
ಚಿತ್ತಜನಯ್ಯನು ಸತಿಸಹವಾಗಿಯೆ । ಅರ್ತಿಯಿಂ ತಪವ ಮಾಡಿದನು ೧೮೨

ವೃದ್ಧಗಿರಿಯೊಳು ಮುನೀಶ್ವರರಿಹರಿಲ್ಲಿ । ಹೆದ್ದಿನಿಯೊಳು ಕಾರೇಶ
ಶ್ರದ್ಧೆಯು ಸೋಲಿಗರೆಲ್ಲ ಬಳಸಿ ಕೊಂ । ಡಿದ್ದರಂದಾ ಪರ್ವತದಿ ೧೮೩

ಬೆತ್ತ ಬಿದಿರು ಮರ ಗಿಡು ಮೇಳಿ ಪುಲ್ಪೊದ । ಕುತ್ತುರು ಕಳ್ಳಿ ದರಪಳ್ಳ
ಕತ್ತಲೆ ... ವಿ ಕಮ್ಮರಿ ಖಗ ಮೃಗಗಳು । ಸುತ್ತ ಬಳಸಿ ಕೊಂಡಿಹವು ೧೮೪

ಇಂತಪ್ಪ ಖಗ ಮೃಗ ತರುವನಚರಕೆಲ್ಲ । ಸಂತಸವನೆ ಮಾಳ್ಪನರಿಯು
ಕಂತುಮರ್ದನ ಗಂಗಾಧರ ಕುಂಭೇಶ್ವ । ರಂತು ರಕ್ಷಿಸಿಕೊಂಡಿಹರು ೧೮೫

ಕಾಸರಗಿರಿಯೊಳು ಕುಂಭೇಶ್ವರನಿರೆ । ಕೇಶವನರ್ಧಾಂಗಿ ಬಂದು
ದೋಷವ ಕಳೆದುಕೊಂಬೆಯೆಂದು ತಪವಿರ್ದ । ಳೀಶನ ಕುರಿತವಳಲ್ಲಿ ೧೮೬

ಗುರು ಶಿಷ್ಯ ತಂದೆ ಮಗೊಡೆಯು ಬಂಟರಿಗೆ ಸಂ । ಗರವನೆಸಗಲದರಿಂದ
ದೊರೆಗೊಳ್ಳೆ ಪಾಪ ಲೋಭಿಗಳ ಕೈವಶದಲಿ । ಇರಲಾರೆನೆಂದಾ ಸಿರಿಯು ೧೮೭

ಮದನ್ನೈಯನ ...... । ಹದಿನೆಂಟು ಜಾತಿಯು ಕೈಯ
ಸದೆದು ಬಡಿದು ಎನ್ನ ಕಾಸಿ ಕರಗಿಸಲು । ತಿದರಿಂದ ೧೮೮

ಕುಂಭೇಶ್ವರಗಿರಿಯೊಳುಗ್ರತಪಮಿರೆ । ಶಂಭು ತಾನೆ ಮೆಚ್ಚಿ ಬಂದು
ಅಂಬುಜವದನೆ ವರವ ಬೇಡೆಂದೆನೆ । ಪೊಂಬೊಳೆಯಾಗಿ ಮಾಡೆನ್ನ ೧೮೯

ಕಾವೇರಿಯೊಳಗೆನ್ನನು ಕೂಡಿದೊಡೆ ಸ್ವಾಮಿ । ದೇವಪೂಜೆಗೆ ಯೋಗ್ಯಳಹೆನು
ಆ ಪೇಧೆಗಳನೆಲ್ಲ ಪರಿಹರಿಸುವೆನೆಂದು । ಭಾವಜಹರಗೆರಗಿದಳು ೧೯೦

ಭಾವಿಸಿ ಪೊಂಬೊಳೆಯಾಗಿ ಪರಿದು ನೀ । ಕಾವೇರಿಯು ಬೆರಸೆಂದು
ಗೋವಿಂದನರಸಿಗೆ ಪೇಳಲೀಶ್ವರ ಮೆಚ್ಚಿ । ಭೂವಲಯದಿ ಜಲವಾಗಿ ೧೯೧

ಹೊನ್ನುಹೊಳೆಯಹಾಗಿ ಕೆರೆ ಕಟ್ಟಿ ಕಾಲುವೆ । ಭಿನ್ನವಿಲ್ಲದೆ ಕೊಟ್ಟಳವಳಂ
ಪನ್ನಗಧರ ದಿವ್ಯಲಿಂಗವ ಪೂಜಿಸಿ । ಸನ್ನುತ ನೀಲಕಂಠೇಶ್ವರನ ೧೯೨

ಭಕ್ತಿಯಿಂದರ್ಚಿಸಿ ಪರಿವ ಕಾವೇರಿಯ । ನರ್ತಿಯಿಂದಲಿಯೊಡಗೂಡಿ
ಮತ್ತಿಗಡಹಿನ ಮಲ್ಲೇಶ್ವರಗೆರಗಲಂ । ದತ್ತ ಕೃಷ್ಣನು ಚಿಂತಿಸಿದ ೧೯೩

ಸಿರಿ ಹೋಗಲದ ಕೇಳಿ ಧರಣಿಯ ತಿರುಗಿ ಶಂ । ಕರಗಂಗಾಧರಗೆ ತಾ ನಮಿಸಿ
ಮುರಹರ ಹೊನ್ನಸಂಪಗೆಯಿಂದ ಪೂಜಿಸಿ । ವರವ ಕೊಡೆಂದು ನುತಿಸಿದ ೧೯೪

ಶ್ವೇತಾದ್ರಿಯೊಳಗೆ ನೀ ನಿಂದೊಡೆ ಕೇಳು । ಭೂತಳದಿಂದಲಿ ಜನರೆಲ್ಲ
ಪ್ರೀತಿಯಿಂದಲಿ ಬಂದು ಪೂಜಿಸುತಿರಲು ಮಹಾ । ತೀರ್ಥಜಾತ್ರೆಯಾದಪುದು ೧೯೫

ಎಂದಡೊಳ್ಳಿತು ಎಂದು ಗಂಗಾಧರನಿಗೆ । ವಂದನೆಯನು ಮಾಡಿ ಕಮಲೆ
ಅಂದೊಡಗೂಡಲವರೀರ್ವರೊಂದಾಗಿ । ನಿಂದರು ಶ್ವೇತಗಿರಿಯೊಳು ೧೯೬

ಅಂದು ರಥೋತ್ಸವವನೆ ಮಾಡಿ ಹರುಷದಿ । ಬಂದು ನೃಪರು ಸಂಭ್ರಮಿಸೆ
ಕುಂದದೆ ಮಳೆ ಬೆಳೆ ಪದಿನಾಡಿಗೆ ಸುಖ । ವೆಂದು ಕಳಿಪೆ ಕೃಷ್ಣನವರ ೧೯೭

ಅದ ಕೇಳಿ ಪದಿನಾಡು ಪುಣ್ಯದ ಬೀಡೆಂದು । ಚದುರಿಂದ ನಂಜರಾಜೇಂದ್ರ
ಮುದದಿಂದ ಸಿಂಹಾಸನಗಳ ಮಾಡಿದ । ಮದನಹರನ ಕೃಪೆಯಿಂದ ೧೯೮

ಸುತ್ತೂರ ಶಿವರಾತ್ರೆಯಾರ್ಯಗೆ ಪಟ್ಟವ । ನರ್ತಿಯಿಂದ ಕಟ್ಟಿ ನೃಪನು
ಉತ್ತಮವಾದ ನಾಣ್ಯವ ಪೊದ್ದಿಸಿ ತಾನು । ತೊತ್ತು ಬಂಟರನಿತ್ತು ಕಳುಹೆ ೧೯೯

ಪಾವನಮೂರ್ತಿಯು ಶಿವಪೂಜೆಯಾರ್ಯಗೆ । ಸಾವಿರಕಲ್ಲಮಂಟಪದಿ
ಭಾವಿಸಿ ಪಟ್ಟವ ಕಟ್ಟಿ ಪುರವಕೊಟ್ಟು । ಠೀವಿಯಿಂದ ಕಳುಹಿದನು ೨೦೦

ಚರಮೂರ್ತಿ ಶಿವಪೂಜೆಯಶಾರ್ಯಗುದಿಸಿದ । ಕರದೊಳು ಗಂಗಾಧರ
[ಗರಳ]ಪುರದಿ ನಿಂದು ಪೂಜೆಯ ಕೈಕೊಂಡು । ಹರುಷದಿ ಮಹತ್ತುಗೂಡಿ ೨೦೧

ಕಾವೇರಿಗೆ ದಕ್ಷಿಣದೊಳೊಪ್ಪುವ । ತೀವಿದ ಹೇಮಾದ್ರಿಯೊಳಗೆ
ಅಲ್ಲಿ ಕುಂತೂರ ಸಾಲೂರ ಶಾಂತೇಶ್ವರ । ಗಲ್ಲಿ ಪಟ್ಟವನು ಕಟ್ಟಿದರು ೨೦೨

ಶಿವನಸಮುದ್ರದಿ ಜಡೆಯಕೂಡುವಸ್ವಾಮಿ । ಶಿವಯೋಗಿ ಮರುಳುಸಿದ್ಧೇಶ
ಶಿವಪೂಜೆಯ ಮಾಡುತಿರಲು ಮಹತ್ತೆಲ್ಲ । ಮವನಿಪ ನಂಜರಾಜೇಂದ್ರ ೨೦೩

ಶ್ವೇತಗಿರಿಗೆ ಪಶ್ಚಿಮದೊಳೊಪ್ಪುವ । ಭೂತಳದೊಳು ಪುಣ್ಯದೀಹು
ಪ್ರೀತಿಯಿಂ ಪಡೆಯಕೊಡುವ ಮರುಳಾರ್ಯರ್ಗೆ । ಚಾತುರ್ಯದಿಂ ಗ್ರಾಮಪಿತ್ತ ೨೦೪

ಎರಗಿ ನಮಸ್ಕಾರವನು ಮಾಡಲಾಗಿಯೆ । ಎರಗಂಬಳ್ಳಿ ತಾನೆಂದು
ಉರುವಿಯೊಳಗೆ ಪೆಸರಾಗಿ ಚರಿಸಿ ತಾನು । ಮೆರೆದುದು ಸಿಂಹಾಸನವು ೨೦೫

ಆಗ ಉಮ್ಮತ್ತೂರ ಉಪ್ಪರಿಗೆಯ ಮಠಕನು । ರಾಗದಿ ಪಟ್ಟವಕಟ್ಟಿ
ತೂಗಾದಿಯ ಸಿದ್ಧಬಸವೇಶ್ವರನೆಂಬ । ಶ್ರೀಗುರುವಿಗೆ ಸಮಿಸಿದನು ೨೦೬

ಸೆಟ್ಟರಮಲ್ಲಯ್ಯನು ಪೊಂಡರಬಾಳ । ಕಟ್ಟಿಗೆಗೆಂದು ನೇಮಿಸಿಯೆ
ಪಟ್ಟದರಸು ನಂಜರಾಜಯ್ಯ ಪರ್ವವ ಮಾಡಿ । ಪಟ್ಟೆಯ ಹಚ್ಚಡವಿತ್ತು ೨೦೭

ಅಲ್ಲಲ್ಲಿ ಮಠಗಳ ಕಟ್ಟಿಸಿ ನಂಜೇಂದ್ರ । ನೆಲ್ಲ ವಸ್ತುಗಳನೊಲಿದಿತ್ತು
ಪಲ್ಲಕ್ಕಿಯಂಬಳದಿಂದಲೆ ಮೆರೆಯಿಸಿ । ನಿಲ್ಲದವರ ಕಳುಹಿದನು ೨೦೮

ಸುತ್ತೂರು ನಂಜನಗೂಡು ಪೊಂಡರ ಬಾ । ಉತ್ತಮ ನಮಸ್ಕಾರಪುರವ
ಇತ್ತ ಕುಂತೂರ ಸಿಂಹಾಸನಗಳನೆಲ್ಲ । ವರ್ತಿಯಿಂದಲಿ ಮಾಡಿಸಿದ ೨೦೯

ಪುರವಗ್ರಹಾರ ಮಹಾಶಿವಭವನವ । ಕೆರೆ ಕೊಳನುದ್ಯಾನಗಳ
ವಿರಚಿಸಿದಾ ಪದಿನಾಡೊಳು ನಂಜೇಂದ್ರ । ಸುರಪುರದಂತೊಪ್ಪುತಿಹುದು ೨೧೦

ಪರಮೇಶ್ವರಮುಖಗಳೊ ಎಂಬಂದದಿ ವರ । ಪಂಚಮಠಗಳೊಪ್ಪಿದವು
ಸರಸಿಜಭವನ ವದನವೊ ಎಂಬಂದದಿ । ಕರಮೆಸೆದವು ಅಗ್ರಹಾರ ೨೧೧

ಅಲ್ಲಲ್ಲಿ ಗುರು ಹಿರಿಯರುಗಳು ಮಠಮನೆ । ಯಲ್ಲಲ್ಲಿ ಶರಣಪ್ರತಿಗಳು
ಅಲ್ಲಲ್ಲಿ ಭಕ್ತಮಹೇಶ ಪ್ರಸಾದಿಗ । ಳೆಲ್ಲರು ಪದಿನಾಡೊಳಿಹರು ೨೧೨

ನವಚೋಳರು ಎಲ್ಲ ಲಿಂಗಪ್ರತಿಷ್ಠೆಯ । ನವನಿಯೊಳಗೆ ಮಾಡಿದಂತೆ
ಶಿವಭಕ್ತ ನಂಜರಾಯನು ಮಠಮನೆಯನು । ಭುವನದೊಳಗೆ ಮಾಡಿ ಮೆರೆದ ೨೧೩

ಗುರುಭಕ್ತ ...ನ ಶಿವಲಿಂಗಪೂಜಕರ । ಶರಣ ಪ್ರೇಮಿ ಸುಪ್ರೌಢ
ಧರೆಯೊಳು ನಂಜರಾಯನು ಸುಖವಿರ್ದನ್ ತಾ । ಹರನೊಳಗೆ ಸಂದನವನು ೨೧೪

ಭಸಿತವ ಕೆಂಚಸೋಮನ ಕೈಯಲಿ ಕೊಟ್ಟು । ಪೆಸರ ಪೇಳಿಯೆ ಧರ್ಮಗಳ
ಒಸೆದು ಸಿದ್ದೆಯರಾವುತಗೆ ಪೇಳೆಂದ । ಶಶಿದಲೆಯನ ಭಕ್ತನವನು ೨೧೫

ನಾಗಭೂಷಣನ ಓಲಗದೊಳು ನಂಜೇಂದ್ರ । ಬಾಗಿಲ ಕಾಯ್ದುಕೊಂಡಿರಲು
ಬೇಗದಿ ಕೆಂಚಸೋಮೇಂದ್ರಗೆ ಪೇಳೆಂದು । ಈಗ ಕಳುಹೆ ನಾನುಬಂದೆ ೨೧೬

ಮೃಡಶರಣರಿಗೆಲ್ಲ ಮೃಷ್ಟಾನ್ನವ ನೀಡಿ । ಕೊಡನೇಕೆ ವೀಳ್ಯವನೆಂದು
ಹಿಡಿ ತಡೆ ಬಂದಾವು ಕೈಲಾಸದೊಳಗೆಲ್ಲ । ಬಿಡದೆ ಪೇಳೆಂದರವರು ೨೧೭

ನಾಳೆಯಂ ಸೋಮವಾರಕೆ ಪಯಣ ತಮಗೆ । ಪೇಳೆಂದು ನಂಜರಾಜೇಂದ್ರ
ಫಾಳಲೋಚನನ ಸಮ್ಮುಖದಿ ಪೇಳಿದರೀಗ । ಕೇಳಿ ನೀವೆಲ್ಲ ಶರಣರಂ ೨೧೮

ಹೂಳಿರ್ದ ಹಣವ ಸ್ವಪ್ನದಿ ಕೆಂಚಸೋಮಗೆ । ಹೇಳಿ ತೆಗೆಸಿ ನಂಜರಾಯ
ಫಾಳಲೋಚನನ ಭಕ್ತನು ಎಂದು ಕೊಂಡಾಡೆ । ಕೇಳಿ ಮಹತ್ತು ಹರುಷದಿ ೨೧೯

ಬಸವಪುರಾಣಕೆಯರ್ಥವ ಹೇಳುವನ । ಹೆಸರ ಹೇಳಿಯೆ ಸ್ವಪ್ನದೊಳು
ಹುಸಿಯಿಂದ ಶರಣರ ನಿಂದ್ಯವ ನುಡಿಯಲು । ವಸುಧೆಯೊಳಗೆ ಎಳೆಸಿದನು ೨೨೦

ಗಾಣಿಗ ಕೆಂಚಸೋಮಗೆ ಪ್ರಾಣವು ಬಂದು । ಹೇಳಿದನೆಲ್ಲ ವಿವರವ
ಕ್ಷೋಣಿಪ ಗಂಗರಾಜನು ಕೇಳಿಯೂ । ಕ್ಷಣದೆ ಸರ್ವವನವ ಮಾಡೆ ೨೨೧

ಉಮ್ಮತ್ತೂರೊಳು ನಂಜರಾಯ ಮಾಡಿದ ಭಕ್ತಿ । ತಮ್ಮದೆಂದೇ ನೃಪರೆಲ್ಲ
ಸುಮ್ಮಾನದಿಂದಲ್ಲಿ ಪುರವಗ್ರಹಾರವ । ಧರ್ಮದಿಂದಲಿ ನಡೆಸುವರು ೨೨೨

ಹಂದಾಲದ ತಿಮ್ಮರಾಜ ಪುರವ ಕೊಟ್ಟ । ನಂದು ಸಿಂಹಾಸನಗಳಿಗೆ
ಹಿಂದೆ ಚಾಮರಸಗೌಡನು ದೇಪಿಯರಾಮ । ರೊಂದಾಗಿ ಚೆನ್ನೇಂದ್ರಭೂಪ ೨೨೩

ಆವರನುಜನು ಇಮ್ಮಡಿ ರಾಮ ತೇ ... ಂದ್ರ । ರವರ ತನುಜ ನುಜರಾಜ
ವಿವರವಾಗಿಯೆ ಕೆಂಪೇಂದ್ರ ಧರ್ಮವ ಮಾಡಿ । ಅವರಾ ಪತ್ತುನಾಡೊಳಗೆ ೨೨೪

ಗುಣನಿಧಿ ನೀಲಕಂಠಗೆ ಹೊಂಡರಬಾಳ । ಕುಣಿಗಿಲ ಬಸವಲಿಂಗೇಶ
ಗುಣಿಗನೂರ ಶಿವನಂಕಾರ ದೇವಗೆ । ಆಣೆಯರದಿಂ ಜ್ಯೋತಿಪುರವ ೨೨೫

ಕಾಮಗೆರೆಯ ಗುರುಲಿಂಗೇಶ್ವರನಿಗೆ । ಪ್ರೇಮದಿ ಸರಗೂರವಮಠವ
ನೇಮಿಸಿ ಇಮ್ಮಡಿರಾಮಯಿತ್ತನು । ಕಾಮಹರನ ಭಕ್ತನವನು ೨೨೬

ಶಿಲೆಯ ಸಿಂಹಾಸನವನೆ ಮಾಡಿ ಕಾಷ್ಠದ । ನಿಳೆಯುಗಳನೆಲ್ಲ ಬಿಡಿಸಿ
ಸಲೆ ಚಂದ್ರಶೇಖರ ಭೂಪಾಲ ಮೆರೆದನು । ನಲವಿಂದ ಶಿವಭಕ್ತಿಯೊಳು ೨೨೭

ವ್ಯವಹಾರ ಮುಖದಿಂದ ಬಂದ ಪದಾರ್ಥವ । ಸವೆದಾ ಗುರು ಲಿಂಗ ಚರಕೆ
ಶಿವನೊಳಗೆ ಸಂದ ಲಿಂಗಗೋಷ್ಠಿಯು ಕೇಳು । ಸುವಿವೇಕಿ ಸಿದ್ದೆಯದೇವ ೨೨೮

ಗ್ರಾಮಗ್ರಾಮಂಗಳೊಳಗೆ ಮಠಗಳನೆಲ್ಲ । ಸ್ವಾಮಿ ಮಹತ್ತಿಗೆ ನಮಿಸಿ
ತಾಮಸವಿಲ್ಲದೆ ಪಟ್ಟವ ಕಟ್ಟಲು । ನೇಮಿಸಿ ಹಿರಿಯರುಗಳಿಗೆ ೨೨೯

ಪೂವಿಂದ ನಾರು ಸ್ವರ್ಗವ ಪಡೆಯಿತೆಂದು । ಭೂವಳಯದಿ ನುಡಿವಂತೆ
ಭಾವಜಹರನನರ್ಚಿಸು ಬಿಡದೆ ಶಿವ । ಸೇವೆಯ ಮಾಡೆ ಮೋಕ್ಷವುಂಟು ೨೩೦

ಒಂದು ಹೂವಿನ ಫಲದಿಂದಲಿ ಶ್ವೇತಗೆ । ಬಂದುದು ಕೈವಲ್ಯ ಕೇಳಿ
ಇಂದುಧರನ ಪೂಜೆ ಮಾಡಿ . . . । ಕುಂದದೆ ಪದವೀವ ಶಿವನು ೨೩೧

ಹಿಂದೆ ಹೋದವರ ಸುದ್ದಿಯನು ನುಡಿದರೆಂದು । ಕುಂದಮಾಡದೆ ಬಲ್ಲವರು
ಚಂದದಿ ಮಹತ್ತಿನ ಕಾವ್ಯವ ಕೇಳಿ । ಮುಂದೆ ಮುಕ್ತಿಯು ನಿಮಗುಂಟು ೨೩೨

ಗುರು ಲಿಂಗ ಜಂಗಮದುರು ಚಾರಿತ್ರವ । ಬರೆದೋದಿ ಕೇಳಿದವರ್ಗೆ
ಹರ ಸಿದ್ಧಮಲ್ಲಿಕಾರ್ಜುನ ಭೋಗಮೋಕ್ಷವ । ಕರೆದೀವ ನಾಲ್ಕನೆ ಸಂಧಿ ೨೩೩

ಐದನೆಯ ಸಂಧಿ

ಗೋಕರ್ಣಶಯನ ನಯನ ಪಾದ ಪೂಜ್ಯನೆ । ಗೋಕರ್ಣನಾ ಕರ್ಣಯುಗಳ
ಗೋಕರ್ಣವೈರಿಯ ವಾಹನ ಜನಕನೆ । ಗೋಕರ್ಣನಾಹಾರ ಶರಣು ೧

ಪಗಲಿರುಳಾಣ್ಮರೇಡುಗರವಾ ... ದಿಂದ । ಮಿಗೆ ನೋಡಿ ಲೋಕವನೆಲ್ಲ
ಸೊಗಸಿಂದ ಸಲಹುವ ಗುರುಸಿದ್ಧಮಲ್ಲೇಶ । ಅಘಹರ ಕೊಡು ಸನ್ಮತಿಯ ೨

ಮುಂದಣ ಕಥೆಯಾವುದೆಂದೊಡೆ ಪೇಳುವೆ । ನೊಂದಾಗಿ ಕೂಡಿ ಮಹತ್ತು
ಬಂದು ದೇಶಾಂತರಗೆಯ್ದು ಪರ್ವತದೊಳು । ನಿಂದುದ ನಾನು ಪೇಳುವೆನು ೩

ಅಲ್ಲಲ್ಲಿ ಮಠಮನೆ ಸಿಂಹಾಸನಗಳ । ನಲ್ಲಲ್ಲಿ ಪಡೆದು ಮಹತ್ತು
ಅಲ್ಲಲ್ಲಿ ಹಿರಿಯರುಗಳಿಗೆ ಪಟ್ಟವಕಟ್ಟಿ । ನಿಲ್ಲದೆ ದೇಶಾಂತರಗೆಯ್ಯೆ ೪

ಕೈಲಾಸದಿಂದ ಶರಣರೆಲ್ಲ ಸಹವಾಗಿ । ಶೂಲಧರನು ತಾನೆ ಬಾದು
ಮಿಗೆಯಿಂ ಚರಮೂರ್ತಿಯಾಗಿ ಶಿವತಾನೆ । ಲೋಕದೊಳು ಚರಿಸುವನು ೫

ಜಂಗಮವೇ ಲಿಂಗವಾಗಿ ಮೆರೆದನು । ತುಂಗಗಿರಿಯೊಳು ಹರುಷದಿ
ಕಂಗೊಳಿಸುವ ಅನ್ನದಾನಿಮಲ್ಲೇಶನ । ಹಿಂಗದೆ ನೋಡಿ ಮಹತ್ತು ೬

ಶರಣರು ವ್ರತಿಗಳು ದಾನ ಧರ್ಮವ ಮಾಳ್ಪ । ಪರಮ ಪುರುಷಾರ್ಥಗಳ್ಮನೆಯಂ
ಹರಭವನವ ಪುಣ್ಯಕ್ಷೇತ್ರ ತೀರ್ಥಗಳಲ್ಲಿ । ಚರಿಸಾಡುತಿಹರು ಮಹತ್ತು ೭

ವೀರಶೈವವನುಂಟುಮಾಡುವೆ ನಾನೆಂದು । ಮಾರಹರನು ತಾನೆ ಬಾದು
ಕಾರುಣ್ಯನಿಧಿ ಅನ್ನದಾನಿಮಲ್ಲೇಶ್ವರ । ಧಾರಿಣಿಯೊಳು ಪೂಜೆಗೊಂಡ ೮

ಚರಪದಾಂಬುವೆ ಮಜ್ಜನಲಿಂಗಕೆ ಕೇಳಿ । ವರಪ್ರಸಾದವೆ ನೈವೇದ್ಯ
ಗುರುಪಾದವಿಡಿದ ಮಾನವರೆ ಪೂಜಿಪರಲ್ಲಿ । ಹರಮಂತ್ರದಿಂದ ಲಿಂಗವನು ೯

ಬೇಡಿದವರಿಗೆ ಇಚ್ಛಾಪದಾರ್ಥವ ತಂದು । ನೀಡೆ ಮಲ್ಲೇಶ್ವರನಾಗ
ನೋಡನ್ನದಾನಿಮಲ್ಲೇಶ್ವರ ತಾನೆಂದು । ಈಡಿಯೊಳಗೆ ಪೆಸರಾಗೆ ೧೦

ಪಂಚಾಮೃತದಿಂದಭಿಷೇಕವ ಮಾಡಿ । ಪಂಚಮಂತ್ರಗಳಿಂದ ಬಿಡದೆ
ಪಂಚಕಜ್ಜಾಯಂವ ನೈವೇದ್ಯವ ಮಾಡಿ । ಪಂಚಮಹಾವಾದ್ಯದಿಂದ ೧೧

ಬಂದ ಮಹತ್ತೆಲ್ಲ ಸಲಿಸಿಯಾನಂದದಿ । ತಂದು ಪ್ರಸಾದವ ಕೊಡಲು
ಇಂದುಧರನು ಮಲ್ಲೇಶ್ವರ ತಾ ಸವಿ । ದೊಂದು ಮಠವನಿತ್ತನಾಗ ೧೨

ಅಲ್ಲಿಂದ ಮುಂದಕೆ ನಡೆದು ಮಹತ್ತು ಸ । ಲ್ಲೀಲೆಯಿಂ ಮಹತ್ತು ಸಂಭ್ರಮದಿ
ಮೆಲ್ಲಮೆಲ್ಲನೆ ದೇಶಾಂತರ ಮಾಡುತ । ನಿಲ್ಲದೆ ಕದಳಿಯಪುರಕೆ ೧೩

ಬಂದುದು ಮಹತ್ತೆಲ್ಲ ವೀರೇಶ್ವರನ । ಸಂದರುಶನವನೆ ಮಾಡಿ
ತಂದು ವಿಭೂತಿಯ ಧರಿಸಿ ಸಂತೋಷದಿ । ನಿಂದು ಸ್ತೋತ್ರವ ಮಾಡಿದರು ೧೪

ವೀರಾಯು ವೀರಭದ್ರಾಯ ಮಹಾರುದ್ರಾಯ । ನಾರಾಯಣ ಸೋತ್ರಪಾತ್ರ
ವಾರಿಜೋದ್ಭವನಸುತನ ಶಿರಚ್ಛೇದನನೆ । ಮಾರಹರನ ಸುಕುಮಾರ ೧೫

ಹರಿ ಮತ್ಸ್ಯ ಕೂರ್ಮಸಂಹರಂಬಕ ರುದ್ರನೆ । ಹರಿ ಕಂಕಾಳಧರರುದ್ರ
ಹರಿ ನೃಪ ಸಿಂಹನಶಿರಚ್ಛೇದ ಶರಭ ರುದ್ರ । ವರವ ಪಾಲಿಸು ವೀರಭದ್ರ ೧೬

ಪರಸಮಯತಿಮಿರ ಮಾರ್ತಾಂಡನೆ । ಪರಸಮಯವನಚೈತ್ರ
ದುರುಳದಾನವ ವಿಪಿನದಾವಾನಲ । ಸುರಲೋಕವೀರಸಂಹಾರ ೧೭

ಎತ್ತಿದ ಹಲಗೆ ಖಂಡೆಯ ಬಿಲ್ಲು ಬಾಣವು । ನೆತ್ತಿಯ ಮೇಲಣ ಲಿಂಗ
ಸುತ್ತಬಿಗಿದ ಚಿಮ್ಮುರಿ ಜುಂಜುಗಾಸೆಯ । ಮೃತ್ಯುಂಜಯ ವೀರಭದ್ರ ೧೮

ಭದ್ರಕಾಳಿಯ ರಮಣನೆ ವೀರಭದ್ರನೆ । ಕ್ಷುದ್ರದೈವದಗಂಡಯೆಂದು
ಚಿದ್ರೂಪ ವೀರೇಶ . . . . . . । . . . ಮಹತ್ತು ವಿಭೂತಿಯ ಧರಿಸಿ ೧೯

ಚಂದದಿಂ ಸ್ತೋತ್ರವ ಮಾಡೆ ವೀರೇಶ್ವರ । ಬಂದು ಪೂಜಾರಿಯ ಕೂಡೆ
. . . . । ೨೦

ಅಲ್ಲಿರ್ದ ನೃಪನಿಗೆ ಪೇಳಲಾ ಪೂಜಾರಿ । ಒಳ್ಳಿತು ಎಂದು ಮಠವನು
ಅಲ್ಲಿ . . . . ದೊಳ । ಗಲ್ಲಿ ಮಠವ ಕಟ್ಟಿದರು ೨೧

ಹಿರಿಯ ಕುಮಾರಸ್ವಾಮಿಯು ಚೆನ್ನಬಸವೇಶ । ಹರುಷದಿ ಚರಿಸಾಡುತಿಹರೆಲ್ಲ
ಅರಿದು ಮಹತ್ತು ಸಂಭ್ರಮದಿ ಪಟ್ಟವ ಕಟ್ಟಿ । ದೊರೆಗಳ ಸಮ್ಮತದಿಂದ ೨೨

ಗುರು ಲಿಂಗ ಜಂಗಮವನೆ ನಿಂದಿಸುವ । ಪರವಾದಿಗಳ ಸಂಹರಿಸಿ
ಧರೆಯೊಳು ಮೆರೆಯೆಂದು ವೀರೇಶ್ವರ ತಾನೆ । ಹರುಷದಿ ವರವಿತ್ತನವರ್ಗೆ ೨೩

ಬಸವಿ ಬಸವನಿಂದಲಿಂಗ ದ್ರೋಹಿಯು । ಹೆಸರ ತೊಡೆದು ಸಂಹರಿಸಿ
ವಸುಧೆಯೊಳಗೆ ವೀರಜಂಗಮರುಗಳಿಂದ । ಜಸವಿತ್ತ ಕುಮಾರಸ್ವಾಮಿ ೨೪

ವೀರಸಿಂಹಾಸನ ಬಾಳೆಯ ಹಳ್ಳಿಯು । ಧಾರಿಣಿಯೊಳುಕ್ಕಿಪೆಸರಾಗೆ
ಮಾರಹರನ ನಿಂದಿಸುವರ ಪಲ್ಗಳ । ಬೇರನೆ ಕಿತ್ತು ಹಾಕುವರು ೨೫

ಅಲ್ಲಿಂದ ಮುಂದಕೆ ನಡೆದರು ಮಹತ್ತು । ಕಲ್ಯಾಣಪಟ್ಟಣಕಾಗಿ
ಅಲ್ಲಮ ಪ್ರಭು ಬಸವೇಶನ ಪಾದವ । ಸಲ್ಲೀಲೆಯಿಂದ ಸ್ಮರಿಸುತ ೨೬

ಹನ್ನೆರಡು ಸಾವಿರ ಷಡುಸ್ಥಲ ಸಂ . . . । . . ಜಂಗಮರನೆ ಪೂಜಿಸಿಯೆ
ಪನ್ನಗಧರನೊಡಗೂಡಿಯೆ . . . ಶರಣ । ಚೆನ್ನಬಸವನ ನೆನೆವುತ ೨೭

ಮಡಿವಾಳಮಾಚಯ್ಯ ಜಂಗಮಪೂಜಕ । ಕೆಡಹಿ ಶಿವದ್ರೋಹಿಗಳ
ಬಡಿದು ನೃಪನು ಮದಗಜಕೆ ಪ್ರಾಣವನಿತ್ತ । ಮೃಡನೊಳೊಂದಿದರ ನೆನೆವುತ ೨೮

ಕಟ್ಟಿಗೆಯನೆ ಮಾರುವ ಮೋಳಿಗೆಮಾರಯ್ಯ । ಮೃಷ್ಟಾನ್ನವ ನೀಡಿ ಬಿಡದೆ
ಕೊಟ್ಟು ಜಂಗಮಕೆ ಸುವರ್ಣದ ಕೋಲಿತ್ತ । ನಿಷ್ಠೆವಂತನ ನೆನೆವುತ ೨೯

ಕಿನ್ನರಬ್ರಹ್ಮಯ್ಯ ವೀಣೆಯ ನುಡಿಸಲು । ಪನ್ನಗಧರ ತಾನೆ ಮೆಚ್ಚಿ
ಹೊನ್ನುಹಣವನೀಯೆ ಜಂಗಮಾರ್ಚನೆ ಮಾಡೆ । ಉನ್ನತ ಶರಣನು ಕೇಳು ೩೦

ಹಾದರದ ಬ್ರಹ್ಮಯ್ಯ ಮೋದರಕೇತಯ್ಯ । ನಾದಕ್ಕಿಯಮಾರಯ್ಯ
ಮಾದರಚೆನ್ನಯ್ಯ ಮೊದಲಾದ ಶರಣರ । ಹೋದಮಾರ್ಗವ ನೋಡಿ ಬಿಡದೆ ೩೧

ಏಳುನೂರು [ಎಪ್ಪತ್ತ] ಮರಗಣಂಗಳು । ಮೇಲಾದ ಶರಣರು ಎಲ್ಲ
ಕೈಲಾಸಕೆ ಕಲ್ಯಾಣದಿಂ ಪೋದುದ । ಕೇಳಿ ಮಹತ್ತೆಯಿದಿದರು ೩೨

ದಾನಿಗಳ ಕರ್ಮಿಗಳ ವ್ರತಿಗಳು ಶಿವನ । ದಾನಿಗಳ್ ಮಾನಿಗಳಲ್ಲಿ
ಜ್ಞಾನಿಗಳ್ ವರ ಪುರುಷಾರ್ಥಿಗಳ್ ಘನಲಿಂಗ । ಧ್ಯಾನಿಗಳಲ್ಲಿರುತಿಹರು ೩೩

. . . . । ಭಾಷೆತಪ್ಪದೆ ನಡೆವರು
. . . . , . ಜಂಗಮಾರ್ಚರ ವಿ । ಲಾಸದಿ ಇರುತಿಹರಲ್ಲಿ ೩೪

ಲೆಕ್ಕದಮೇಲೆ ತೊಂಬತ್ತಾರು ಶಿವಾಲಯ । ಮುಖ್ಯವು ತ್ರಿಪುರಾಂತಕೇಶ
ಹೊಕ್ಕು ವಿಭೂತಿಯು ಧರಿಸಿ ಮಹತ್ತಲ್ಲಿ । ಮುಕ್ಕಣ್ಣ ತ್ರಿಪುರಾಂತಕಗೆ ೩೫

ಹರನು ತ್ರಿಪುರವ ನೋಡಿ ಎಸೆಯಲಾಗಿ । ಧರೆಯೊಳು ಬಿದ್ದುದ ಕಂಡು
ಶರಣರು ಸಹ ತ್ರಿಪುರಾಂತಕೇಶ್ವರನಲ್ಲಿ । ಕರೆದರು ಕಲ್ಯಾಣವೆಂದು ೩೬

ಧರೆವೆಣ್ಣಿನ ಮುಖಕಮಲವೊ ಎಂಬಂತೆ । ಕರಮೆಸೆದುದು ಕಲ್ಯಾಣ
ವರಲಕ್ಷ್ಮಿಯ ಸೌಭಾಗ್ಯವೊ ಎಂಬಂತೆ । ಹರುಷದಿ ಬಿಜ್ಜಳನೆಸೆದ ೩೭

ಅಲ್ಲಮಪ್ರಭುವಿನ ಕೃಪೆಯಿಂದ ಬಸವೇಶ । ನೆಲ್ಲ ಪವಾಡವ ಮೆರೆದು
ಅಲ್ಲಿ ಜಂಗಮಕೆ ಇಚ್ಛಾಪದಾರ್ಥವ । ನಿಲ್ಲದೆ ಮಾಡಿ ನೀಡುತ ೩೮

ಕಲಿ ಹೆಚ್ಚಿತು ಎಂದು ಶಿಲೆಯಾಕಾರವ । ತಳೆದಾ ಬಸವೇಶ್ವರನು
ಸಲೆ ತ್ರಿಪುರಾಂತಕೇಶ್ವರನ ನಿಲಯದೊಳು । ನೆಲಸಿರೆ ತುರುಕರು ಬಾದು ೩೯

ಸುರೆಗುಡಿಗಳು ಖಾನರು ಬಂದು ಬಸವನ । ಕರವೆತ್ತಿ ಪೊಯ್ಯಲಾಕ್ಷಣದಿ
ಭರದಿ ಸ್ತಂಭನಮಾಡೆ ಕೈಗಳೆರಡನಲ್ಲಿ । ಕರಿ ತುರುಗವ ಕೊಲುತಿರಲು ೪೦

ನಿರ್ವಯಲಾಗೆದ್ದು . . . . ಯಿ ತಾನೆಂದು । ಉರ್ವಿಯೊಳಗೆಯಡ್ಡಬಿದ್ದು
ಪರ್ವವ ಮಾಡಿಯೆ ಜಾತ್ರೆಯು ನೆರೆಯಿಸೆ । ಸರ್ವರು ಸಂಭ್ರಮದಿಂದ ೪೧

ವಸುಧೆ ಈರೇಳು ಲೋಕವನೆಲ್ಲವ ನೋಡಿ । ಶಿಶುಬಾಲವೃದ್ಧರಿಗೆಲ್ಲ
ಅಶನಾರ್ಥವನೀವ ಬಸವೇಶ್ವರನೆಂದು । ಭಸಿತವ ಧರಿಸಿ ಮಹತ್ತು ೪೨

ಅಲ್ಲಿಲ್ಲಿ ಒಸಗೆ ಉತ್ಸವ ಸಂಭ್ರಮವನು । ನಿಲ್ಲದೆ ಮಾಡಿ ಬಲ್ಲವರು
ಅಲ್ಲಲ್ಲಿ ಮಹತ್ತುಪೂಜೆಯು ಕೈಕೊಂಡ । ರಲ್ಲಲ್ಲಿ ಮಠಮನೆಗಳೊಳು ೪೩

ಅಲ್ಲಿ ಹಿರಿಯರುಗಳಿಗೆ ಪಟ್ಟವ ಕಟ್ಟಿ । ನಿಲ್ಲದೆ ದೇಶಾಂತರವ
ಕೊಲ್ಲಿಪಾಕಿಗೆ ಬಂದು ಸೋಮೇಶ್ವರನಂ । ದಲ್ಲಿ ಸ್ತೋತ್ರವ ಮಾಡಿದರು ೪೪

ಪ್ರಥಮಲೀಲೆಯೊಳಗೆ ಚಂದ್ರ ಶಕ್ತಿಗಳನು । ಅತಿಶಯದಿಂದ ಮಸ್ತಕದಿ
ಪ್ರತಿಪಾಲಿಸಿದ ಸೋಮೇಶ್ವರ ತಾ ಬಂದು । ಕ್ಷಿತಿಯೊಳು ಗುರುಲಿಂಗನಾದ ೪೫

ಗುರುವಿನ ಗುರು ಪರಮಾರಾಧ್ಯರು ತಾನೆಂದು । ಹರುಷದಿಂದಲಿ ಮಹತ್ತು
ಗುರುಪರ್ವವ ಮಾಡಿ ನೈವೇದ್ಯವ । ವಿರಚಿಸಿದರು ಸಂಭ್ರಮದಿ ೪೬

ಮಂಗಳಾರತಿಯ ತಂದೆತ್ತಿದರಾ ಶಿವ । ಲಿಂಗ ...... ಪೂಜೆಗಳಿಂ
ಕಂಗಳಿಂದಲಿ ನೋಡಿ ಕರುಣರಸವ ಬೀರಿ । ......ನೆನೆದರು ೪೭

.... । ....
..............ಹಳೆಗಳಿಂದ । ನಡೆದು ಬಂದರು ಶ್ರೀಗಿರಿಗೆ ೪೮

...........ಶ್ರೀಗಿರಿಕೈಲಾಸ ತಾನೆಂದು । ಭಕ್ತಮಾಹೇಶ್ವರರೆಲ್ಲ
ಎತ್ತಿ ನಂದಿಯ ಕೋಲ್ವ್ಯಾಸನ ತೋಳನು । ಅತಿಶಯದಿಂದ ಪರುಷೆ ನಡೆದುದು ೪೯

ಚಂದ ಚಂದದ ದೇಶ ದೇಶದ ಪರುಷೆಯು । ಬಂದೊಡಗೂಡಿ ಸಂಭ್ರಮದಿ
ಅಂದಳ ಛತ್ರ ಚಾಮರ ನೃತ್ಯಗೀತದೊ । ಳ್ನಿಂದಡ್ಡ ಬೀಳ್ವವರಿಂದ ೫೦

ಕಂಬಿ ಸಮೇಳ ತುಡುಮು ದಮಾಮಿಯು । ಕೊಂಬು ಕಹಳೆ ಶಂಖ ಧ್ವನಿಯಿಂ
ಕುಂಭಿನಿ ಧಿಮ್ಮಿಡೆ ವಾದ್ಯದ ರಭಸದಿಂ । ಸಂಭ್ರಮದಿಂ ಪರುಷೆ ನಡೆಯೆ ೫೧

ಅಲ್ಲಲ್ಲಿಯುರವಟ್ಟಿಗೆಯುನ್ನಛತ್ರವು । ಅಲ್ಲಲ್ಲಿ ಕುರುಜು ತೋರಣವು
ಅಲ್ಲಲ್ಲಿ ನಡೆಮಡಿ ಕಳಶಕನ್ನಡಿಯಿಂ । ನಿಲ್ಲದೆಯುಪಚರಿಸುವರು ೫೨

ಇಂತು ಮಹಾ ಪರುಷೆಯು ಠೀವಿಯು ... । ... ಅಂತು ಮಹತ್ತೊಂದು ಗೂಡಿ
ಚಿಂತಿತಾರ್ಥವನೀವ ಮಲ್ಲಿಕಾರ್ಜುನನ । ಓರಂತೆ ದರುಶನ ಮಾಡೆ ೫೩

ಶ್ರೀ ಶೈಲವ ಕಂಡಾಕ್ಷಣದಲ್ಲಿಯೆ । ನಾಶವಹುದು ಪಾಪವೆಂದು
ಕೇಶವ ಮೊದಲಾದ ದೇವತೆಗಳು ಮ । ಲ್ಲೇಶನ ಬಲಗೊಂಡರೆಲ್ಲ ೫೪

ಷಡುದರುಶನವೆಲ್ಲ ಮಲ್ಲಿಕಾರ್ಜುನ ತಾನೆ । ಒಡೆಯನೆಂದೇ ಭಾವಿಪರು
ಬಿಡದೆ ಎಲ್ಲರು ಒಂದಾಗಿಯೆ ಪೂಜಿಸಿ । ಪಡೆದರು ಮೋಕ್ಷಾರ್ಥಗಳ ೫೫

ಅಂದು ಶಿಲಾದಮುನಿಯು ತಪವನು ಮಾಡೆ । ಇಂದುಧರನು ಮೆಚ್ಚಲಾಗಿ
ಕಂದ [ನ ಕೊಡು] ಭಕ್ತಿ ಜ್ಞಾನ ವೈರಾಗ್ಯವೆಂ । ದೆಂಬ ಮಕ್ಕಳ ಬೇಗ ನನಗೆ ೫೬

ನಂದೀಶ ಭೃಂಗೀಶ ಪರ್ವತರಾಜರು । ಅಂದು ಮುನಿಗೆ ಸುತರಾಗಿ
ಬಂದು ಶ್ರೀಗಿರಿಯೊಳು ತಪವ ಮಾಡಲು ಬೇಗ । ಕಂದರ್ಪಹರ ಕೃಪೆಯಾದ ೫೭

ರವಿ ಶಶಿ ಶಿಖಿನೇತ್ರ ಪಂಚಮುಖವ ತಾಳಿ । ಧವಲಾಂಗ ದಶಭುಜದಿಂದ
ಭ್ರಮರಾಂಬಿಕೆ ಪ್ರಮಥರು ಎಲ್ಲ ಸಹವಾಗಿ । ಶಿವನು ಪ್ರಸನ್ನನಾದನಲ್ಲಿ ೫೮

ಮಲ್ಲಿಗೆ ಮೊಲ್ಲೆ ಜಾಜಿಯು ಮಂದಾರ ... । ... ಕಮಲಗಳ
ನೆಲ್ಲವ ಕೀಳ್ಪಡಿಸುವ ಮೂರ್ತಿಯ ಕಂಡು । ಮಲ್ಲಿಕಾರ್ಜುನನೆಂದರವರು ೫೯

ಬಂದು ಸಾಷ್ಟಾಂಗವೆರಗಿ ಮುನಿ ನಮಿಸಲು । ದುಂದುಭಿನಾದ ಮೊಳಗಲು
ನಿಂದು ಸುರರು ಹೂಮಳೆಗರೆಯಲು ನೋಡಿ । ಚಂದ್ರಧರನು ಪರವಿತ್ತ ೬೦

.... ಮಧ್ಯದೊಳಗೆ । ಚೆನ್ನಮಲ್ಲೇಶ್ವರ ನೀನು
.... ಸಂದ ಮುನಿತಾನು । ಉನ್ನತ ... ನಾದ ೬೧

ಉತ್ತರ ದಕ್ಷಿಣವಾದ ಮಸ್ತಕ ತಾನು । ಹಸ್ತವೆಪ ......
... ತ್ತ ಹೃದಯದೊಳು ಮಲ್ಲಿಕಾರ್ಜುನ ತಾನೆ । ಅರ್ತಿಯಿಂ ನೆಲಸಿಕೊಂಡಿಹನು ೬೨

ಕರಗಳೆ ಬಾಲಬ್ರಹ್ಮವು ತ್ರಿಪುರಾಂತಕ । ಶಿರವೆ ಮಹೇಶ್ವರ ಕೇಳು
ವರಜ್ಯೋತಿಸಿದ್ಧವಟವೆ ಚರಣಂಗಳು । ಶರಣ ಪರ್ವತಮುಸಿಯೆಸೆದ ೬೩

ಹರಿಯಜ ಸುರ ಮನು ಮುನಿ ದಿಕ್ಪಾ । ಲರು ಗರುಡ ಗಂಧರ್ವರಿಗೆಲ್ಲ
ನರರಾ ...... ವಿವರ ಭೋಗಮೋಕ್ಷವ । ಕರುಣದಿ ಪಾಲಿಪುದೆಂದ ೬೪

ಕರಿ ಸಿಂಹ ಶಾರ್ದೂಲ ಮೃಗ ಪಕ್ಷಿ ಕೆಲಗುಲ್ಮ । ತರು ತೃಣ ವನಚರಕೆಲ್ಲ
ಚರಿಸಾಡುವ ಕ್ರಿಮಿಕೀಟಂಗಳಿಗೆಲ್ಲ । ವರವನೆ ಪಾಲಿಪುದೆಂದ ೬೫

ಭೂತಳದೊಳಗೆ ಪಾಪವಮಾಡಿದರೆಲ್ಲ । ಪಾತಾಳಗಂಗೆಲಿ ಮಿಂದು
ಜ್ಯೋತಿಲಿಂಗವ ಕಂಡು ನಮಿಸಿದವರುಗಳ । ಪಾತಕ ಪರಿಹರವೆಂದ ೬೬

[ಎಲ್ಲ] ಗಣಂಗಳು ಸಹವಾಗಿಯೆ ಬಂದು । ನಿಲ್ಲದೆ ಲಿಂಗವಾನೆಂದು
ಅಲ್ಲಿ ಮುನಿಯು ಶ್ರೀಗಿರಿಯಶಾಗಲು ಕಂಡು । ಮಲ್ಲಿಕಾರ್ಜುನ ಲಿಂಗವಾದ ೬೭

ಬಳಸಿ ನಾಲ್ವತ್ತೆಂಟುಗಾವುದ ದಾರಿಯ । ಅಳತೆಯೊಳಲ್ಲಲ್ಲಿ ನೋಡೆ
ತಳುವದೆ ಮಲ್ಲಿಕಾರ್ಜುನಲಿಂಗವಾಗಿಯೆ । ಪಲವು ನಾಮುವ ಧರಿಸಿದನು ೬೮

ನಂದಿಯುಗಿರಿಯು ಬ್ರಹ್ಮಗಿರಿ ವಿಷ್ಣುಗಿರಿ ಕೇಳು । ಸ್ಕಂದಗಿರಿಯು ಭೃಂಗಿಗಿರಿಯು
ಎಂದು ನಾಮವ ತಾಳಿಯುವರವಕೆಲ್ಲರು । ಬಂದು ತಪವ ಮಾಡಿದರು ೬೯

ನಂದೀಶ ಭೃಂಗೀಶ ಹರಿ ಬ್ರಹ್ಮೇಂದ್ರ ಸುರರೆಲ್ಲ । ಸ್ಕಂದ ಗಣೇಶ ವಿಘ್ನೇಶ
ಬಂದು ಶ್ರೀಗಿರಿಯ ಪ್ರದಕ್ಷಿಣಮಾಡಲು । ತಂದೆ ಬಳಸುವಂದದೊಳು ೭೦

ಉಡುತಡಿಯು ಮಹದೇವಿ ಸಿದ್ಧರಾಮೇಶ್ವರ । ಪೊಸವಿಪಾಲನು ಸಕಲೇಶ
......ಮೂರುತಿ.........ಸಿದ್ಧೇಶ್ವರ । ಬಿಡದೆ ಪ್ರದಕ್ಷಿಣ ಮಾಡೆ ೭೧

ಶಿಲೆಯೆ ಲಿಂಗವು ಜಲವೆ ಮಜ್ಜನ ಕೇಳು । ಎಳೆಯು . . .
. . . ಫಲಾದಿಗಳೆಲ್ಲ ನೈವೇದ್ಯವು । ಸುಳಿವ ನೂರುತ ಮಾರ್ಜನನು ೭೨

ಪಾಡುವ ತುಂಬಿ ಕೊಂಡಾಡು [ವ ಕೋಗಿಲೆ] । . . . . ನವಿಲು
ಬೇಡಿತ್ತನೀವ ತರುಗಳಾ ಗಿರಿಯೊಳು । ಓಡುವ ಮೃಗಸಂಕುಳವು ೭೩

ಮುಚ್ಚಿದ ಕಣ್ಣು . . . . ಹೃದಯದಿ । . . . ಕಡುಬಲಿದು ಶಿವಧ್ಯಾನ
ಇಚ್ಛೈಸದೆ ಭೋಗ ಕರ್ಮ ಕೃತ್ಯಂಗಳ । ಅಚ್ಚರಿ ಮುನಿಗಳೊಪ್ಪಿದರು ೭೪

ಭಸಿತ ರುದ್ರಾಕ್ಷಿ ಪಂಚಾಕ್ಷರಿ ಮಂತ್ರದಿ । ದೆಸೆವ ಶಿವಧ್ಯಾನದಿಂದ
ಮುಸುಕಿದ ಕಾಲ ಕಾಮರ ಕೆಡೆಮೆಟ್ಟಿಯೆ । ಪಶುಪತಿ ಶಿವನ ಪೂಜಿಪರು ೭೫

ಹಸಿವು ತೃಷೆಯು ನಿದ್ರೆ ನೀರಡಕಿಲ್ಲದೆ । ಶಶಿಧರ ಧ್ಯಾನಮಾತ್ರದೊಳು
ವಶವಾಗಿ ಮನವ ನಿಲ್ಲಿಸಿಕೊಂಡ ಮುನಿಗಳು । ಒಸೆದಾ ಗಿರಿಯೊಳಗಿಹರು ೭೬

ಅಷ್ಟಮದಂಗಳು ಅರಿಷಡುವರ್ಗದ । ಗುಟ್ಟ ಮುರಿದು ದಶವಾಯು
ಮೆಟ್ಟಿ ಪಂಚೇಂದ್ರಿಯಂಗಳ ನಷ್ಟವ ಮಾಡಿ । ನಿಷ್ಠೆ ನಿಬ್ಬೆರಗಿಂದಿಹರು ೭೭

ಆರುಚಕ್ರಂಗಳನರಿದಾ ಲಿಂಗವ । ಆರಕ್ಷರದಿಂದ ತಿಳಿದು
ಮೂರುಲಿಂಗ . . . ಒಂದಾಗಿಯೆ ನೋಡಲು । ಆರುಸ್ಥಲವ ಕಂಡರವರು ೭೮

ರವಿ ಶಶಿಗಳ ಮಾರ್ಗಂಗಳ ತಡೆದರು । ಪವನಾಗಾರವ ಬಲಿದು
ಶಿವನ ಪದವನೆ ಕಂಡು ನಡೆದರು ಮುನಿಗಳು । ಶಿವಪನಸ್ಮರಣೆ ಮಾತ್ರದೊಳು ೭೯

ಕುಂಡಲಿಯೊಳಗಿರ್ದು ಪ್ರಣಮ ಸರ್ಪನು ನೋಡಿ । ಮಂಡೆಯು ಮೇಲಣ ರತ್ನ
ಕೆಂಡದಂದದಿ ಪ್ರಭೆಮುಸುಕಲು ಮುನಿಗಳು । ಕಂಡರು ಶಿವನ ಪಾದವನು ೮೦

ಅಲ್ಲಲ್ಲಿ ಮುನಿಗಳು ಲಿಂಗವ ನೋಡುತ್ತ । ನಿಲ್ಲದೆ ಮಹತ್ತು ಬಿಡದೆ
ಮಲ್ಲಿಕಾರ್ಜುನನ ದರುಶನವ ಮಾಡಿನ । ರಲ್ಲಿ ಸಾರಂಗಮಂಟಪನೊಳು ೮೧

ಬಂದು ಸಾರಂಗಸಿದ್ಧೇಶ್ವರಲಿಂಗವ । ಕಂಡು ದರುಶನವನೆ ಮಾಡಿ
ಅಂದು ಮಹತ್ತು ಬಿಡಾರವ ಮಾಡಿರೆ । ಬಂದರು ಜೋಗಿಗಳೆಲ್ಲ ೮೨

ಇತ್ತ ಶ್ರೀಗಿರಿ ತಮ್ಮದೆಂದು ಜೋಗಿಗಳೆಲ್ಲ । ಸುತ್ತ ಬಳಸಿ ಸಂಭ್ರಮದಿ
ಮುತ್ತಿಗೆಗಿಳಿವಂತೆ ಸಾರಂಗಮಂಟಪ । ಒತ್ತಿಲಿ ಪಾಳೆಯವಿಳಿಯೆ ೮೩

ಹನ್ನೆರಡುಸಾವಿರ ಜೋಗಿಗಳೆಲ್ಲರು । ಮನ್ನೆಯ ವಳಿತದಿ ಬಂದು
ಇಂತೆಂದು ಸಾರಂಗಮಠ ತಮ್ಮದೆಂದುರೆ । ಸನ್ನದ್ಧರಾಗಿ ನುಡಿದರು ೮೪

ಎರಳೆಯಕೋಡನೂದುತ ಚಕ್ರಂ......... । .... ಶೂಲವ ಪಿಡಿದು
ಕರದೊಳು ಸೋರೆಯೊ...ತಳೆದು ಜೋಗಿಗಳೆಲ್ಲ । ನೆರೆದರು ಪೈಶಾಚರಂತೆ ೮೫

.... । ಸಾರಂಗಮಠ ತಮ್ಮದೆನೆಲು
ವೀರಕುಮಾರ ಜಂಗಮರೆಲ್ಲರು ಕೂಡಿ । ಸೇರಿ ವಿಚಾರಿಸಿ ಕೇಳೆ ೮೬

ಎಂದರೊಳ್ಳಿತು ನಿಮಗಾವ ಪ್ರಕಾರದಿ । ಬಂದಿತು ಎಂದು ಕೇಳಿದೊಡೆ
ತಂದೆ ಗಳಿಸಿದೊಡವೆ ಮಕ್ಕಳುಗಳಿ । ಗೆಂದು ನಾಣ್ನುಡಿವಂದದೊಳು ೮೭

ಸಾರಂಗಸಿದ್ಧ ಶ್ರೀಗಿರಿಯೊಳು ತಾನಲ್ಲಿ । ಓರಂತೆ ತಪವಿರೆ ಮೆಚ್ಚಿ
ಮಾರಹರನು ಮಲ್ಲಿಕಾರ್ಜುನ ಕೊಡಲಾಗಿ । ಸೇರಿತು ಎಮಗೆಂದರವರು ೮೮

ಮತ್ಸ್ಯೇಂದ್ರನು ಗೋರಕ್ಷನು ತಾವಿಲ್ಲಿ । ಯಚ್ಚರಿ ಮಿಗೆ ತಪವಿರಲು
ನಿಚ್ಚಯದಿಂದಲೆ ಮಲ್ಲಿಕಾರ್ಜುನ ತಾನೆ । ಮೆಚ್ಚಿಯವರಿಗಿತ್ತು ಮಠವ ೮೯

ಅಂದು ನಾಗಾರ್ಜುನ ತಪವ ಮಾಡಲು ಮೆಚ್ಚಿ । ಇಂದುಧರನು ಅವರ್ಗಿತ್ತ
ಸಂದೇಹವೇಕಿನ್ನು ಸಾರಂಗಮಠ ತಮ್ಮ । ದೆಂದು ನುಡಿಯೆ ಜೋಗಿಗಳು ೯೦

ಹಿರಿದು ಆಸೆಯ ಮಾಡಿ ನಾಗಾರ್ಜುನ ತಾನೆ । ಗಿರಿಯ ಚಿನ್ನವ ಮಾಡಲೆಂದು
ಭರದಿ ಮಾಡುತಿರಲಾಕ್ಷಣದಲ್ಲಿಯೆ । ಹರಿಯುನವನು ಕೊಂದ ಕೇಳಿ ೯೧

ದನವ ಕಾವ ಒಕ್ಕಲಿಗೊಡೆಯುನಲ್ಲದೆ ಕೇಳಿ । ದನಕಾವನೊಡೆಯುನಾಗುವನೆ
ನೆನೆವಂತೆ ಶಿವನು ವರವ ಕೊಟ್ಟನಲ್ಲದೆ । ನಿಮಗೇನು ಸಂಬಂಧ ಕೇಳಿ ೯೨

ಊಳಿಗದೆವನರಸಾದೊಡೆ ಮತ್ತಾ । ಊಳಿಗಕಿನ್ನಾರೆಲವೊ
ಕಾಳೋರಗನಾದೆಹೆನೆಂದು ಭೂನಾ । ಗಾಲೋಚಿಸುವಂತೆ ಕೇಳಿ ೯೩

ಆದಿಭೈರವನನಾದಿಸಿದ್ಧನು ಎಂದು । ಓದುತಿಹರು ಶಾಸ್ತ್ರಗಳ
ಮಾಧವ ಹರನಿಗೆ ಹುಟ್ಟಿದ ಭೈರವ । ನಾದಿ ಭೈರವ ಹೇಗಾದ ೯೪

ಹರಿ ಹೆಣ್ಣುರೂಪಾಗಿ ಭಸ್ಮಾಸುರನ ಕೊಂದು । ಹರನ ಸಮೀಪಕೆ ಬರಲು
ಪರಿಗ್ರಹಿಸಲು ಪುಟ್ಟಿದ ಭೈರವನೆನೆ । ನೆರೆದರು ಚರಮೂರ್ತಿಗಳು ೯೫

ಹರಿ ಮತ್ಸ್ಯ ಕೂರ್ಮಾವತಾರವಾದಲ್ಲಿಯೆ । ಇರಿದು ಕೊಂದವನಾರು ಕೇಳಿ
ಹರನು ಮಹಾ ಭೈರವ ರೂಪು ತಾಳಿಯೆ । ಪರಿಹರಿಸಿದ ಭವಗಳನು ೯೬

ಮೇದಿನಿ ಸ್ವರ್ಗ ಪಾತಾಳಂಗಳಿ । ಗಾಧಾರ ನಮ್ಮ ಭೈರವನು
ಮೊದೇವರಿಂದ ಕಾದ ಬ್ರಹ್ಮಾಂಡವ । ಕಾದುರುಹುವ ಸಿದ್ಧಪತಿಯು ೯೭

ರಾಜಮಂದಿರದೊಳಗೆ ನೃಪನಿದ್ದಾ । ದೋಜೆಯಿಂದಲಿ ತಳವಾರ
ತೇಜದಿಂದ ತಿರುಗಿದೊಡೆಯುವನು ಮತ್ತೆ । ರಾಜನಾಗುವನೆ ಕೇಳೆನಲು ೯೮

ಹರಿ ಹರ ಬ್ರಹ್ಮಾಸುರರು ಸಂಹಾರ ದೊ । ಳಿರುವರು . . . .
. . , ... ಬತ್ತಲೆ । ಇರುತಿರೆಯುಪರ್ಮೊತ್ತದೊಳು ೯೯

. . . . . ಬಾಯಿ ಬಡುಕತನದಿ । . . ಕಾಯಜಹರ
. . . . ನೆಂದಡೆ ನಿಮ್ಮ . . । . . ಬಾಯುಲಿ ಹುಳುಸುರಿವ ೧೦೦

ಪನ್ನಗಧರ ತನ್ನ ಹಾವುಗೆಯನೆ ಕೊಡೆ । ಭಿನ್ನವಿಲ್ಲದೆ ಬಾಗಿಲೊಳು
ಚೆನ್ನಾಗಿ ಕಾಯ್ದುಕೊಂಡಿರುವನು ಭೈರವ । ನಿನ್ನಹಗೆ ದೇವರೆಂದಂಜಿ ೧೦೧

ಪಂಚಮುದ್ರೆಯು ಪರಿಪೂರ್ಣನಾಗಿಯೆ ತಾನು । ಹಂಚುಕಂತೆಯ ಧರಿಸಿಹನು
ಪಂಚಮುಖನ ಪರ್ವತದೊಳಗಿರಿಸಿಯೆ । ಕಾಂಚನಾದ್ರಿಗೆ ಬಳಸಿರುವ ೧೦೨

ಕರದೊಳು ಸೋರೆಯೋಡೆರಳೆಯ ಕೊಂಬು । ಕೊರಳೊಳು ಹಳೆಯರುವೆಗಳ
ಧರಿಸಿಕೊಂಡಿರುವಿರಿ ಕರ್ಣದಿ ಗುಳ್ಳೆಯ । ಹರನವೇಶವು ಹೇಗೆ ಕೇಳಿ ೧೦೩

ಕಾಗೆ ತಮ್ಮಯ ಬಳಗವನೆಲ್ಲ ಕೂಡಿ । ಕೂಗಿಯೆ ಕರೆವಂದದೊಳು
ಜೋಗಿಗಳೆಲ್ಲರು ಕೂಡಿ ಒಂದಾಗಿಯೆ । ಆಗ ಜಗಳವ ತೆಗೆದರು ೧೦೪

ಊರಸೂರಿಗಳೆಲ್ಲ ಸಿಂಹನಿದ್ದೆಡೆಗೆಯಿದಿ । ದಾರಿಯ ಕೇಳುವಂದದೊಳು
ಧೀರ ರೇವಣಸಿದ್ಧೇಶನ ಪಡೆಯಿರೆ । ಭೈರವಸೇನೆ ನೆರೆದುದು ೧೦೫

ತರಗೆಲೆ ಹಾರಿ ಕಿಚ್ಚನೆ ಕೆಡಿಸಿಹೆನೆಂದು । ತರುವ ಕೆ [ಳಗೆ] ಬಿದ್ದಂತೆ
ಕುರಿಯು ಮರಿಯು ಸೊಕ್ಕಿ ಹುಲಿಯಿದ್ದೆಡೆಯೊಳು । ಅರಚಿ ಸಾವಂದದಿ ಕೇಳು ೧೦೬

ದೀಪವ ಕೆಡಿಸಿಹೆನೆಂದು ಪತಂಗನು । ಕೋಪದಿ ಬಿದ್ದು ಸಾವಂತೆ
ಪಾಪಾತ್ಮರು ಜೋಗಿಗಳು ಕೆಣಕಿದರೆಲ್ಲ । . . . ಹತ್ತು ಚರಮೂರ್ತಿಗಳ ೧೦೭

ಪಗಲೊಡೆಯನ ಮೇಲೆ ಕೂಡಿ ಗೂಗೆಗಳೆಲ್ಲ । ಜಗಳವ ತೆಗೆವಂದದೊಳು
ಖಗರಾಜನ ಸರ್ಪ ತುಡುಕುವಂದದಿ ಕೇಳು । ಮಿಗೆ ಮುನಿದರು ಜೋಗಿಗಳು ೧೦೮

ಕೂಗಿ ಬೊಬ್ಬಿಟ್ಟು ಜೋಗಿಗಳೆಲ್ಲ ನೆರೆದಾ । ರೋಗಿಗಳಂತರಚುತಿರಲು
ಆಗ ಮಹತ್ತೆಲ್ಲ ಒಂದುಗೂಡಿಯೆ । ಇದಿರಾಗಲು ಸನ್ನದ್ಧರಾಗಿ ೧೦೯

ಮನದೊಳಗೆ ನೆನೆದ ಮಾತ್ರದೊಳೊದಗಿತು ಕೇಳು । ಘನಲಿಂಗವೆಲ್ಲ ಒಂದಾಗಿ
ಎನಗೆ ತನಗೆ ಎಂದು ವೀರಜಂಗಮರೆಲ್ಲ । ಕನಲಿ ಖೋ ಎಂದುವಾಲುತಿರಲು ೧೧೦

ಲಿಂಗವೆ ಗಂಡ ಜಂಗಮವೆ ಪ್ರಾಣವು ಮಿಗೆ । ಕಂಗೊಳಿಸುವ ಪಾದತೀರ್ಥ
ಅಂಗಕೆ ವಜ್ರಾಂಗಿಯು ಜೋಡು ತಾನೆಂದು । ಲಿಂಗದವೀರರು ನೆರೆದು ೧೧೧

ಹಲಗೆ ಖಂಡೆಯ ಬಿಲ್ಲು ಬಾಣ ಸಬಳವೀಟಿ । ತಲೆಯ ಟವುಳಿಗಳ ತೊಟ್ಟು
. . . . । ಹೊಳೆವರು ಮಿಂಚಿನಂದದೊಳು ೧೧೨

ಆಲಿಯಬ್ಬರಿಸಿ ಖೋ ಎಂದು ಬೊಬ್ಬಿಡುತಲಿ । . . . .
ತಿಳಬಿಸಕವರು ಮೂರುತನಂತೆ ಸುಳಿದರು । ಕಾಳಗಕನುವಾಗಿ ಬಿಡದೆ ೧೧೩

ಇತ್ತ ಜೋಗಿಗಳೆಲ್ಲ ಪಿಡಿದು ಸಿಂಗಾಣಿಯ । ಕತ್ತಿ ತ್ರಿಶೂಲ ಚಕ್ರಗಳ
ಎತ್ತಿ ತಿರುಹುತ ಖೋ ಎಂದು ಅಬ್ಬರಿಸುತ । ಲುತ್ತ ನಡೆದರು ಜಗಳಕೆ ೧೧೪

ಕರೆವ ಕಹಳೆಯಿಂದ ಮೊರೆವ ವಾದ್ಯಗಳಿಂದ । ಬಿರಿದೆತ್ತಿ ನುಡಿವ ಪಾಠಕರ
ತರತರದಿಂದ ಕುಮಾರಜಂಗಮರೆಲ್ಲ । ಶರಧಿಯ ತೆರೆಯಂತೆ ನೂಕಿ ೧೧೫

ಟಗರು ಟಗರು ತಾಕಿದಂದದಿ ಹೊಯಿದಾಡಿ । ಜಗಳವ ಮಾಡಲು ಕೂಡಿ
ದುಂಗಬಿದ್ದ ಪಗಡೆಯಂದದಿ ತೆಗೆದು ಕ । ಡೆಗೆ ತಳ್ಗಲೆಗಳನು ೧೧೬

ಮದಕರಿ ಕದಳಿಯ ವನವ ಹೊಕ್ಕಂದದಿ । ಸದೆ ಬಡಿದರು ಜೋಗಿಗಳ
ಮಿದುಳು ಸುರಿಯೆ ರಕ್ತದಮಳೆ ಕರೆದಂತೆ । ಕದನವನೇನ ಹೇಳುವೆನು ೧೧೭

ಹರಿಗೆಯೆಮೆ... ಕತ್ತಿಯು ತಳಪಿ ಮಿಂಚು । ಮೊರೆವ ವಾದ್ಯವೆ ಗುಡುಗಲ್ಲಿ
ಸುರಿವ ಮಳೆಯೆ ಅಂಬು ಕಾರ್ಗಾಲದಂದದಿ । ಕರಮೆಸೆದುದು ರಣರಂಗ ೧೧೮

ಸುರಿವ ರಕುತ ಜಲ ಶಿರವೆ ಕಮಲಗಳು । ಸುರಗಿಯು ತಳುಪೆಯಾರತಿಯು
ಕರುಳಹಾಸಿಯು ತಮ್ಮ ದೈವದ ಮುಂದಿಟ್ಟು । ಮರುಳಪಡೆಗಳಲ್ಲಿ ಕುಣಿಯೆ ೧೧೯

ಹುಲ್ಲೆಯ ಹಿಂಡಿನೊಳಗೆ ಹುಲಿ ಹೊಕ್ಕು ತಾ । ನೆಲ್ಲವ ಕೊಲುವಂದದೊಳು
ನಿಲ್ಲದೆ ವೀರಕುಮಾರ ಜಂಗಮರಾಗು । ರಲ್ಲಿ ಹೊಯಿದರು ಜೋಗಿಗಳ ೧೨೦

ಸುರೆಯನೆ ಕುಡಿದು ಮಾಂಸವ ತಿಂದು ಸೊಕ್ಕಿ ತಾ । ಸೊರೆಯೋಡ ಮೇಲೊರಗಿರಲು
ತರಹರವಿಲ್ಲದೆ ವೀರಜಂಗಮರಲ್ಲಿ । ತರಿ ... ನರಿಗೆ ಹಬ್ಬವಾಗೆ ೧೨೧

ಅವರಿವರುಗಳ ಜಗಳವ ನೋಡುವೆನೆಂದು । ಶಿವಮಲ್ಲಿಕಾರ್ಜುನ ತಾನೆ
ಭವವ ಮಾಡಿದನಲ್ಲದೆ ಜಗಳಕೆ । ಇವರಿಗೆ ಏನು ಸಂಬಂಧ ೧೨೨

ಕರ್ಮಕೃತ್ಯಂಗಳು ಬೇಡೆಂದು ಮಲ್ಲೇಶ । ಧರ್ಮಗಾಳಿಯನೆ ಪಿಡಿಸಲು
.........ಜೋಗಿಗಳೆಲ್ಲರು । ವರ್ಮವಿಲ್ಲದೆ ಶಾಂತವಾಗೆ ೧೨೩

ಅಲ್ಲಮಪ್ರಭು ಗೋರಕ್ಷಗೆ ಕಥೆವೇಳ್ದು । ಅಲ್ಲಿ ಸಿದ್ಧ......
ಎಲ್ಲ ತತ್ತ್ವಂಗಳ ಪೇಳಿ ಶಿಷ್ಯನ ಮಾಡಿ ಅಲ್ಲಿ । ಶ್ರೀಗಿರಿಯೊಳೊಪ್ಪಿದರು ೧೨೪

ಕಲ್ಯಾಣಪಟ್ಟಣದೊಳಗೆ ರೇವಣಸಿದ್ಧ । ಅಲ್ಲಿ ಕರ್ಪರ ... ದಾ
ಎಲ್ಲ ಕನ್ನಿಕೆಯರ ಬಿಡಿಸಿ ಪವಾಡವ । ಅಲ್ಲಿ ಬಿಜ್ಜಳನೊಳು ಮೆರೆಯೆ ೧೨೫

ಮಲ್ಲಿಕಾರ್ಜುನಗಿರಿಯೊಳಗೆ ಮಹತ್ತು । ಅಲ್ಲಿ ಜೋಗಿಗಳನೆ ಬಡಿದು
ಸಲ್ಲೀಲೆಯಿಂದ ಸಾರಂಗಮಠದೊಳ । ಗಲ್ಲಿ ಮಹತ್ತು ಒಪ್ಪಿದರು ೧೨೬

ತಮ್ಮೊಳಗೊರ್ವರ ನೋಡಿ ಮಹತ್ತೆಲ್ಲ । ಸಮ್ಮತವೆಂದು ಪಟ್ಟವನು
ಗಮ್ಮನೆ ಕಟ್ಟಿ ಸಾರಂಗಮಠದೊಳಲ್ಲಿ । ಸುಮ್ಮಾನದಿಂ ಪರ್ವಮಾಡಿ ೧೨೭

ಅಲ್ಲಲ್ಲಿ ದೊರೆಗಳೆಲ್ಲರು ಕಾಣಿಕೆಯಿಕ್ಕಿ । ಮಲ್ಲಿಕಾರ್ಜುನನ ಪೂಜಿಸಿಯೆ
ಅಲ್ಲಿ ಸಂಭ್ರಮದಿ ಭಿಕ್ಷವತಿಪಟ್ಟವ । ನಲ್ಲಿ ನೇಮಿಸಿ ಶ್ರೀಗಿರಿಗೆ ೧೨೮

ನೆರೆದ ಪರುಷೆಯೆಲ್ಲ ಕಾಣಿಕೆಯಿಕ್ಕಲು । ಅರಸುಗಳೆಲ್ಲ ಒಂದಾಗಿ
ಸ್ಮರಹರ ಮಲ್ಲಿಕಾರ್ಜುನನಿಗೆ ರಥವನೆ । ಹರುಷದಿ ನಡೆಸಿದರೆಲ್ಲ ೧೨೯

ಮಿಸುನಿಯ ತಗಡ ಬೊಂಬೆಗಳಿಂದ ಕುಶಲದ । ಹಸಗೆಲಸದ ಲೋವೆಯಿಂದ
ವಸಂತವಾಸದ ತಳಿರು ಎಂಬಂದದಿ । ಎಸೆದವು ಜಲಧಿಗಳಲ್ಲಿ ೧೩೦

ಝಲ್ಲಿ ಪಟ್ಟೆಗಳು ಪತಾಕೆಗಳಿಂದೊಲಿ । ದಲ್ಲಿ ರಥವ ಸಿಂಗರಿಸಿ
ನಿಲ್ಲದೆ ಕರೆವ ಕಹಳೆ . . . .ದಿಂ । ದೆಲ್ಲ ವಾದ್ಯಗಳು ನುಡಿಸಲು ೧೩೧

ಕನ್ನಡಿ ಕಲಶಗಳನು ಸಿಂಗರಿಸಿಯೆ । ರನ್ನದ ಸಿಂಹಾಸನದಿಂ
ಚೆನ್ನಮಲ್ಲೇಶ್ವರನಂ ಮೂರ್ತಿಗೊಳಿಸಲು । ಮನ್ನೆಯರೆಲ್ಲ ರಥದೊಳು ೧೩೨

ಧಾರಿಣಿಯೊಳಗಿರ್ದ ಮಲ್ಲಿಕಾರ್ಜುನ ತಾನೆ । ಮೇರುಗಿರಿಯನೇರಿದಂತೆ
ಧಾರೆಯನೆರೆಯಲು ಗಿರಿರಾಜ ನಗಕು । ಮಾರಿಯ ತೋರುವಂತೆಸೆವ ೧೩೩

ಶರಧಿಯನು ಮಥನಿಸುವಂದಾ ಉರಗನ । ಸುರ ದನುಜರು ಪಿಡಿದಂತೆ
ನೆರೆದ ಪರುಷೆಯೆಲ್ಲ ಹೊರಜೆಯ ಪಿಡಿದಾಗ । ಹರನ ರಥವ ನಡೆಸಿದರು ೧೩೪

ತುರಗಂಗಳ ಕುಣಿಸುತ ರಥವೇರಿಯೆ । ಕರಿಗಳನಲ್ಲಿ ನಡೆಸುತ
ದೊರೆಗಳು ಸಂಭ್ರಮದಿಂದ ಮಲ್ಲೇಶನ । ಹರುಷದಿ ತೇರ ನಡೆಸಲು ೧೩೫

ಗುರುಕುಚೆಯರು ಕನ್ನಡಿ ಕಲಶವಿಡಿಯೆ । ಹರಿಣಾಕ್ಷಿಯರು ನೃತ್ಯವನು
ಉರಗವೇಣಿಯರು ಪಾಡಲು ಆರತಿಯನು । ಸರಸಿಜಮುಖಿಯರು ಬೆಳಗೆ ೧೩೬

ಕಮಲಗಂಧಿನಿಯರು ಢಾಳಿಸೆ ಚವರವ । ಕುಮುದನೇತ್ರೆಯರು ಸೀಗುರಿಯ
ಭ್ರಮರಕುಂತಳೆಯರು ಮೆರೆವಾಲವಟ್ಟವ । ಕ್ರಮದಿಂದ ಪಿಡಿದು ನಡೆದರು ೧೩೭

ಕಸ್ತೂರಿ ಪುಣುಗು ಜವಾದಿ ಬಾವನ್ನವ । . . . .
. . . . ಚಿತ್ರಿಣಿ ಹಸ್ತಿನಿ ಪದ್ಮಿನಿಯರು । ಅರ್ತಿಯಿಂದಲಿ ನ . . . ರೆಲ್ಲ ೧೩೮

ಮೇಳ ಕೌಸಾಳೆ ಕಂಬ . . . . । . . . .
ತಾಳದಂಡಿಗೆ ಮದ್ದಳೆ ಕೇಳ್ಗವೆಗಳ । ಭಾಳಲೋಚನ ೧೩೯

ಪಾನಕ ಪನ್ನೀರು ತಳಿರು ತಂಪುಗಳಿಂದ । ನಾನಾ ತೆರದ ಧರ್ಮಗಳ
ಮಾನವರೆಲ್ಲರು ಒಲಿದು ಉಪಚರಿಸಿ ಸ । ನ್ಮಾನದಿ ಬಿಡದೆ ಮಹತ್ತ ೧೪೦

ಭೂತಳದಿಂದ ಮರ್ತ್ಯರು ಎಲ್ಲರು ಬಂದು । ಧಾತನರಿದು ಧರ್ಮಗಳ
ಪ್ರೀತಿಯಿಂದಲಿ ನೋಡಿ ಮಲ್ಲಿಕಾರ್ಜುನ ತಾನೆ । ಪಾತಕವನು ಪರಿಹರಿಪ ೧೪೧

ಅಲ್ಲಲ್ಲಿ ಜಪ ತಪ ನೇಮ ನಿತ್ಯಂಗಳ । ನಲ್ಲಲ್ಲಿ ಶಿವಪೂಜೆಗಳ
ಅಲ್ಲಲ್ಲಿ ಜಂಗಮದೇವರುಗಳೊಂದಾಗಿ । ಶ್ರೀಗಿರಿಯೊಳೊಪ್ಪಿದರು ೧೪೨

ಬಸವನಗೃಹ ಸಾರಂಗ ಸಿಂಹಾಸನ । ಒಸೆದಾ ಮನೆಮಠಗಳೊಳು
ಎಸೆದ ರೇವಣ್ಣನಗೃಹ ಮೊದಲಾಗೆಲ್ಲ । ಶಶಿಧರ ಶಿವನ ಪೂಜಿಪರು ೧೪೩

ಚಂದ್ರಗೊಂಡದ ಸ್ವಾಮಿ ಕೈಲಾಸಕೆಡೆಯಾಡಿ । ಬಂದು ಪ್ರಾಕಾರವ ಮಾಡಿ
ಚಂದವನೋಡಿಯೆ ಮಲ್ಲಿಕಾರ್ಜುನ ತಾನೆ । ಯೆಂದವರೊಳಗಿಟ್ಟುಕೊಂಡ ೧೪೪

ನಿಚ್ಚಫಲಾಹಾರ ಭಿಕ್ಷಾನ್ನವನುಂಡು । ಹೆಚ್ಚ ನಂಜೇಶ್ವರನಿರಲು
ಮೆಚ್ಚಿ ಮಲ್ಲೇಶ್ವರ ಗಂಗೆಯ ಪಥದೋರಿ । ಯುಚ್ಚರಿ ಕೈಲಾಸಕೊಯಿದ ೧೪೫

ಬಂದ ಭಕ್ತರಿಗೆಲ್ಲ ಬೇಡಿದಿಷ್ಟವನಿತ್ತು । ಚಂದದಿ ಪೂಜಿಸಿಕೊಂಡ
ಚಂದ್ರಶೇಖರಮೂರ್ತಿ ಸಾಲಂಕಿಯೊಳಗಿರ । ಲಂದು ಮಲ್ಲೇಶ್ವರನೊಲಿದ ೧೪೬

ಮಕ್ಕೆಯಂ ಮೊದಲಾದ ದೇಶಂಗಳನೆಲ್ಲ । ಹೊಕ್ಕು ನೋಡಿಯೆ ಕೃಪೆಯಿಂದ
ಮುಖ್ಯ ತಾನಾಗಿಯೆ ಮಳೆಯಮಲ್ಲೇಶ್ವರ । ನಕ್ಕರು ಮಿಗೆ ಚರಿಸಿದನು ೧೪೭

ಕಾಶಾಂಬರ ಕಂತೆ ಕರ್ಣಕುಂಡಲವಿಟ್ಟು । ಈಶ್ವರಮೂರ್ತಿ ಚಂದದೊಳು
ದೇಶಾಂತರವಾಗಿ ಡಿಳ್ಳಿಗೆ ಬರೆ . . . । ಆ ಸಮಯದಿ ೧೪೮

ದರುಶನವಾವುದು ಎಂದು ಪಾಚ್ಛವನು । ಹರುಷದಿಂದಲಿ ಕೇಳಲವನು
ಹರದರುಶನವೆಂದು ಪೇಳಲಾಕ್ಷಣದೊಳು । ತರಿಸು ಮಳೆಯನೆಂದನವನು ೧೪೯

ಬೆಳೆಯೆಲ್ಲ ಒಣಗಲು ಆ ರಾಜ್ಯದೊಳಗಲ್ಲಿ । ಮಳೆಯನು ತರಿಸೆಂದು ಬಿಡದೆ
ಇಳೆಯಧಿಪತಿ ಪಾಚ್ಛವನು ಕೇಳಲು । ಮಳೆಯಂ ತರಿಸಿದ ಮಲ್ಲೇಶ ೧೫೦

ಕಾಸಿದಲೋಹದ ಕಂತೆಯ ಧರಿಸಿಯೆ । ಈಶನ ಧ್ಯಾನಿಸುತಿರಲು
ಆ ಸಮಯದೊಳಗಲ್ಲಿ ಗುಡುಗು ಮಿಂಚುಗಳಿಂದ । ಸುರಿಸೆ ಮೇಘಗಳು ಮಳೆಯನು ೧೫೧

. . . . ಕಾಲುವೆ ತೊರೆಗಳೆಲ್ಲೊಂದಾಗಿ । ಕರಿಕಂಠ ಕೊಡಾಯಿಯೆಂದು
ಎರಗಿ ಪಾದಕ್ಕೆ ನಮಿಸಿ ಪಾಚ್ಛವನು । ಮೆರೆಸಿದ ಪಟ್ಟಣದೊಳಗೆ ೧೫೨

ಮಿಸುನಿಯ ಕಂತೆ ರನ್ನದ ಹಾವುಗೆಯಿಟ್ಟು । ಎಸೆವ ಕುಂಡಲಗಳ ಕೊಟ್ಟು
ಒಸೆದಂ ಬೆಳ್ಳಿಯಂ ಚಿನ್ನದ . . . ನಿತ್ತು । ವಸುಧೆಯೊಳಗೆ ಚರಿಸೆಂದ ೧೫೩

ನಿಡುಮಾಮಿಡಿಯ ಕರಿಯಸಿದ್ಧೇಶ್ವರ । ಮೃಡಮೂರ್ತಿ ಭಿಕ್ಷವೆಂದೆನಲು
ಪೊಡವಿಗೆರಗಿ ನಾರಿಕೇಳ ವೃಕ್ಷವು ತಾನೆ । ಬಿಡದೆ ಭಿಕ್ಷವ ನೀಡಿ ಪೋಗೆ ೧೫೪

ಚರಮೂರ್ತಿ ಕಂಬಾಳ ಮರುಳಸಿದ್ಧೇಶ್ವರ । ಹರುಷದಿ ಮಹತ್ತುಗೂಡಿ
ಚರಿಸುತಿರಲು ದಂಡಿಗೆಯು ಧರೆಯೊಳು । ಮರಳಿ ಹೊರಿಸಿಕೊಂಡವರು ೧೫೪

ಇಳೆಯು ಕ್ಷೇತ್ರದೊಳೆಲ್ಲ ತೋಟದಸಿದ್ಧೇಶ । ಸುಳಿದಾಡುತ ಬರಲಾಗಿ
ಮಳೆಬರೆ ಕದವನು ತೆರೆದಳಾಕ್ಷಣದೊಳು । ಹೊಳಲುಗುಂಡದ ಮಹಾದೇವಿ ೧೫೫

ಸಿದ್ಧೇಶ್ವರ ಬಳಲಿದಿರೆಂದು ಮಹಾದೇವಿ । ಸುದ್ದಿಯು ಪೇಳಲಾ ರಾತ್ರೆ
ಎದ್ದು ಪೂಜಾರಿ ಗೌಡನೊಳಗೆ ಪೇಳಲು । ಬಿದ್ದು ಕೆಡದು ಬಂದರವರು ೧೫೬

ಸರ್ವಾಪರಾಧಿಗಳೆಂದು ಪಾದಕೆ ಬಿದ್ದು । ಪರ್ವವ ಮಾಡೆ ಸಂಭ್ರಮದಿ
ಉರ್ವಿಯೊಳಗೆ ಪೆಸರಾಂತಕಗೇರಿಗಾಗಿ । ನಿರ್ವಾಣಸಿದ್ಧೇಶ ಬಂದು ೧೫೭

ಅಲ್ಲಿಯು ಭಕ್ತರು ಬಂದು ಬಿನ್ನಹ ಮಾಡ । ಲಲ್ಲಲ್ಲಿ ತೋಂಟದಸಿದ್ಧೇಶ
ಸಲ್ಲೀಲೆಯಿಂದಿರೆ ರಾಜಕಾರ್ಯವು ಬರೆ । ಯಲ್ಲಿ ಭಕ್ತರು ಎಲ್ಲ ಪೋಗೆ ೧೫೮

ಇತ್ತ ಸಿದ್ಧೇಶ ಸುಖಸಮಾಧಿಯೊಳಿರೆ । ಚಿತ್ತಜಹರನ ಧ್ಯಾನಿಸುತ
ಪುತ್ತು ಬೆಳೆದು ಮರಲೆಯು ಗೂಡಿಕ್ಕಲು । ಮೃತ್ಯುಂಜಯನಿರುತಿರ್ದ ೧೫೯

ಸುತ್ತಬಳಸಿ ಖಗಮೃಗ ವನಚರವೆಲ್ಲ । ಆರ್ತಿಯಿಂ ಬಳಸಿಕೊಂಡಿರಲು
ಅತ್ತ ಮೂರಾರು ವರ್ಷದ ಮೇಲೆ ಸಂತತಮದಾಗೆ । ಮತ್ತೆ ಪುರಕೆ ಬಂದರೆಲ್ಲ ೧೬೦

ಭಸಿತವನಿತ್ತ ಭಕ್ತನು ಬಂದು ತೋಟವ । ವಸೆದು ನಾಲ್ದೆಸೆಯನು ನೋಡೆ
ಮುಸುಕಿಕೊಂಡಿರೆ ವಲ್ಮೀಕವ ಕಂಡವ । ಹೊಸತಿದೆಂದವ ನೋಡುತಿರಲು ೧೬೧

ಉನ್ಮನಿಧ್ಯಾನದಿಂ ಸಿದ್ಧೇಶ್ವರನಿರೆ । ಪನ್ನಗ ಪೊರಮಡಲಲ್ಲಿ
ಭಿನ್ನವಿಲ್ಲದೆ ನೋಡುತಿರಲು ಪುತ್ತವ । ತನ್ನ ಹಸ್ತದಿಂದಲಿ ನೂಕಿದನು ೧೬೨

ಕಂಡು ಭಕ್ತನು ವಿಶ್ವಬ್ರಹ್ಮಾಂಡವನೊಳ । ಗೊಂಡ ಮೂರ್ತಿಯು ತಾನೆಂದು
ದಿಂಡುಗೆಡೆದು ಬಿಡದೆ ಸ್ತೋತ್ರವ ಮಾಡಿ । ಕೊಂಡಾಡಿ ಸಿದ್ಧೇಶ್ವರನ ೧೬೩

. . . . ಅಮೃತ ಎಳನೀರಿಂದಲೆ । ಸಲೆ ಮಜ್ಜನ ಮಾಡಿಯೆಲ್ಲ
ಒಲಿದು ಪರ್ವವ ಮಾಡಿ ಭಕ್ತರುಗಳು ಎಲ್ಲ । ನಲವಿಂದ ಉತ್ಸವಮಾಡಿ ೧೬೪

ಅಲ್ಲಲ್ಲಿ ಒಡೆಯರು ಭಕ್ತರುಗಳು ಎಲ್ಲ । ಅಲ್ಲಲ್ಲಿ ಪರ್ವ ಪಾದ್ಯಗಳ
ವಲ್ಲಲ್ಲಿ ಕೈಕೊಂಡು ಸಿದ್ಧೇಶ್ವರ ತಾ । ನಲ್ಲಲ್ಲಿ ಚರಿಸಾಡುತಿಹನು ೧೬೫

ಪುತ್ರದಿಂ ಸಿದ್ಧೇಶ್ವರ ಪೊರವಮಟ್ಟು ತಾ । ಭಕ್ತರುಗಳ ಭಕ್ತಿಯನು
ಅರ್ತಿಯಿಂ ಕೈಕೊಂಡು ಮೆರೆವುತ್ತಿರಲಾಗಿ । ಅತ್ತಲಾ ವಾರ್ತೆ ಪಸರಿಸೆ ೧೬೭

ಬಂದು ಭಕ್ತರುಗಳು ಸಿದ್ಧೇಶ್ವರನಿಗೆ । ತಂದು ಕಾಣಿಕೆಯ ಮಾಡಿದರು
ಇಂದುವದನೆಯೊರ್ವಳುಟ್ಟ ಸೀರೆಯ ಸೀಳಿ । ತಂದು ಕೊಡಲಾಕೆಯ ಪುರುಷ ೧೬೮

ಉಟ್ಟಸೀರೆಯ ಸೀಳಿಕೊಡಬಹುದೇಯೆಂದು । ಕಟ್ಟು ಮಾಡಲದನರಿದು
ಕೊಟ್ಟರು ಮುನ್ನಿನಂದದಿ ಸಿದ್ಧೇಶ್ವರ । ಸೃಷ್ಟಿಯೆಲ್ಲವು ಜಯಯೆನಲು ೧೬೯

ಎಳನೀರ ಕಂಬಿಯ ತರುವ ಮಾನವ ತಾನು । ಬಳಲ್ದೊಂದು ಕುಡಿಯಲಾಕ್ಷಣದಿ
ಇಳುಹಿ ನೋಡಲು ಬಯಲಾಗಿರ್ದುದ ಕಂಡು । ತಿಳಿದು ಸಿದ್ಧೇಶಗೆ ನಮಿಸಿ ೧೭೦

ಕೆರೆಯೊಳು ಹರವಿಯು ಬಿಡಲದು ಪೋಗಲು । ಕರೆಕಂಠಸಿದ್ಧೇಶನು
ತಿರುಗು ಎಂದೆನಲಾಗಿ ಹರವಿ ಬಂದುದ ಕಂಡು । ನೆರೆದಜನರೆಲ್ಲ ಜಯಜಯವೆನಲು ೧೭೧

ಇಂತು ಸಿದ್ಧೇಶ್ವರನೊಲಿದು ಪವಾಡಗ । ಳಂತು ಧರೆಯೊಳೆಲ್ಲ ಮೆರೆದುದು
ಸಂತತ ಶರಣನು ಭಾವದೊಳಿರುತಿರ್ದ । ನಂತಕಹರನ ಧ್ಯಾನಿಸುತ ೧೭೨

ಸಿದ್ಧೇಶ್ವರನ ... ವೆನೆಂದು ಶರಣರು । ಇದ್ದ ಒಳಿಗೆ ಬಂದರೆಲ್ಲ
ಚಿದ್ರೂಪ ನಿತ್ಯನಿರಂಜನ ಶಿವನೆಂದು । ಬಿದ್ದು ಪಾದಕೆ ನಮಿಸಿದರು ೧೭೩

ಸಪ್ಪೆಯಸ್ವಾಮಿ ಉಪ್ಪಿನಹಳ್ಳಿಯದೇವ । ಕಪ್ಪುಗೊರಲ ಬೋಳಬಸವ
ಅಪ್ರತಿಮನು ಪಟ್ಟಣದಸ್ವಾಮಿಯು ತಾನು । ಒಪ್ಪೊತ್ತಿನ ಚೆನ್ನಬಸವ ೧೭೪

ಚೆನ್ನದ ಕಂತೆಯಸ್ವಾಮಿ ವೋಟಾಳಿನ । ಚೆನ್ನವೀರೇಶ ಕಳಲೆಯ
ಸನ್ನುತ ಶಿವನಂಕಾರ್ಯರ್ ಗಂಗಾಧರ । ಎನ್ನಯ್ಯ ಪಶುಪತಿಸ್ವಾಮಿ ೧೭೫

ಮೊಗೆಯ ಪ್ರಭುಸ್ವಾಮಿ ಮೌನದಶಾಂತೇಶ । ಜಗುನಿಯ ಮರುಳುಸಿದ್ಧೇಶ
ಅಘಹರ ಲಂಬಕರ್ಣದ ಚೆನ್ನಬಸವೇಶ । ಸೊಗಸಿದ ನಿಜಗುಣಸ್ವಾಮಿ ೧೭೬

ಕೊಟ್ಟೂರ ಬಸವೇಶ ಕೋರಾನ್ಯದಸ್ವಾಮಿ । ದೃಷ್ಟಮೂರಂತಿ ...
........................ಗೆಲ್ಲ । ಇಷ್ಟಲಿಂಗವು ಸಿದ್ಧೇಶ ೧೭೭

..............................। .....
ಶರಣಸ್ಥಲದೊಳೊಡವೆರದ ಮಹಾಮಹಿಮ । ... ನೊಪ್ಪಿದನು ೧೭೮

ಕೈರಲಗಿನ ಮೊನೆಯೊಳು ಲಿಂಗವ ತಾನು । ಭೈರವಾಂಕಗೆ ತೋರಿದಂತೆ
ಸೇರಿತು ಚಿಕ್ಕಯ್ಯಗೆ ಲಿಂಗವೆರಳೆಯಿಂ । ಧಾರಿಣಿಯೊಳು ಭಕ್ತನಾಗೆ ೧೭೯

ಕಟ್ಟಿಗೆಯ ಕಾಯಕವನೆ ಮಾಡಿಯೆ ತಾನು । ನಿಷ್ಠೆಯಿಂದಲಿ ಮಾಡಿ ಚರಕೆ
ಕೊಟ್ಟೂರೊಳು ಕೈಲಾಸಕೆ ಪೋದನು । ದೃಷ್ಟಮೂರುತಿ ಶಿವಕಾಳಿಗಯ್ಯ ೧೮೦

ಜಡೆಯಕಾಡುವ ಸಿದ್ಧಮಲ್ಲಿಕಾರ್ಜುನಸ್ವಾಮಿ । ಮೃಡಮೂರ್ತಿ ಶಿವನಂಕಾರ್ಯ
ಪಡೆದಶಿಷ್ಯರು ಪರ್ವತೇಶ್ವರರು ಸ್ವಾಮಿ । ಯೊಡನಿಹ ಮಲ್ಲಿಕಾರ್ಜುನನು ೧೮೧

ಶೂನ್ಯತತ್ವವು ಶಾಂಭವಲೋಕ ರಜತಾದ್ರಿ । ಸನ್ನುತ ಮೇರುವಿಂದಿಳಿದು
ಚೆನ್ನಮಲ್ಲೇಶ್ವರ ಶ್ರೀಗಿರಿಯೊಳಗೆ ಪ್ರ । ಸನ್ನನಾದನು ಭಕ್ತರ್ಗೊಲಿದು ೧೮೨

ಶರಣಸತ್ಪುರುಷರು ಮಾನ್ಯರು ಕೈಲಾಸ । ದೊರೆಯೆನಿಸುವ ಶ್ರೀಗಿರಿಗೆ
ಹರುಷದಿಂದ ಬಂದು ಮಲ್ಲಿಕಾರ್ಜುನನಿಗೆ । ... ಪೂಜೆಗಳ ೧೮೩

ನೂಲಪೂಜೆಯು ವಿಭೂತಿಯು ಸಂಕ್ರಾತಿಯೊ । ಳ್ಮೇಲಾದ ಶಿವರಾತ್ರಿಯೊಳು
ಮೂಲೋಕದೊಡೆಯನು ಮಲ್ಲಿಕಾರ್ಜುನನ ಸ । ಲೀಲೆಯಿಂದಲಿ ಪೂಜಿಪರು ೧೮೪

ನರ ಸುರ ಮನು ಮುನಿ ದಿಕ್ಪಾಲರುಗಳ । ಕರೆದನು ಭಾವದೊಳ್ನಿಲಸಿ
ಧರೆ ನಭ ಪಾತಾಳ ಮೂರುಲೋಕವನೆಲ್ಲ । ಪೊರೆವನು ಮಲ್ಲಿಕಾರ್ಜುನನು ೧೮೫

ದೂಷಕ ದುರ್ಜನ ದುರ್ಮಾರ್ಗಿಗಳೆಲ್ಲ । . . . . ಕಥೆಯ ಕೇಳಿದೊಡೆ
ನಾಶವಹುದು ಪಾಪ ಮಲ್ಲಿಕಾರ್ಜುನನು ವಿ । ಲಾಸದಿ ನಿಮ್ಮ ರಕ್ಷಿಸುವ ೧೮೬

ಆಲಸ್ಯ ಬಳಲಿಕೆಯಿಲ್ಲದೆ ಕೇಳ್ವುದು । ಭೂಲೋಕದೊಡೆಯನ ಕಥೆಯ
ಶೂಲಧರನು ಮಲ್ಲಿಕಾರ್ಜುನನು ಕೃಪೆಯಿತ್ತು । ಕೈಲಾಸ ಪದವಿಯ ಕೊಡುವ ೧೮೭

ಹರ ಶರಣರ ಚಾರಿತ್ರವ ಕೇಳ್ದೊಡೆ . . . । . . . . ಬಾಧೆಯಿಲ್ಲ
ಹರ . . . . ನೆಂಬ ಶೂದ್ರನಿಗೊಲಿದು । ಹರ ಪಲಪದವಿಯನಿತ್ತ ೧೮೮

ಮರಣ ಕಾಲದೊಳೊರ್ವ . . . . । ಕರೆವುತ್ತಿರಲು . , .
ಹರನಾಮ ಸಂಭವಿಸಿತುಯೆಂದು ದೂತರು । ಕರೆಯಲಂಜಿಯೆ ಪೋದಿರವರು ೧೮೯


ಅದು ಕಾರಣ ಶರಣರ ಚಾರಿತ್ರ . . . । . . . . ಬರೆದೋದಿದೊಡೆ
ಮುದದಿಂದ ಮಲ್ಲಿಕಾರ್ಜುನ ಕೃಪೆಯಿತ್ತು । ಚದುರಿನಿಂದ ರಕ್ಷಿಸುತಿಹನು ೧೯೦

. . . . ‌। . . . . ಮಾಡಿ ಇಷ್ಟಸಿದ್ಧಿಗಳ
. . ಯಿಂ ಭಕ್ತರಿಗಿತ್ತು ಮೆರೆದನು . . । . . . . ಮಲ್ಲಿಕಾರ್ಜುನ ೧೯೧

[ಶರಣುಪುರಾಧೀಶ್ವರ] ಗುರುಮೂರ್ತಿಯ । ಕರಜಾತ ಮರುಳುಸಿದ್ಧೇಶ
ವಿರಚಿಸಿದನು . . . . । ೧೯೨

. . . . . . ಲೋಕದ ಶರಣರ ಚಾರಿತ್ರವನು । ವಿಸ್ತರಿಸಿದೆನು ಬಲ್ಲಂತೆ
ಸತ್ಯಶರಣರೆಲ್ಲರು ಕೇಳಿ ನಿಮ್ಮಯ . . . . । . . . ನುಡಿಯ ಲಾಲಿಪುದು ೧೯೩

ಗುರು ಲಿಂಗ ಜಂಗಮದುರು ಚಾರಿತ್ರವ । ಬರೆದೋದಿ ಕೇಳಿದವರ್ಗೆ
ವರ ಭೋಗ ಮೋಕ್ಷವ ಗುರುಸಿದ್ಧಮಲ್ಲೇಶ । ಕರೆದೀವನೈದನೆ ಸಂಧಿ ೧೯೪





ಕನ್ನಡ ಅಧ್ಯಯನ ಸಂಸ್ಥೆ

ಪ್ರಾಚ್ಯಕಾವ್ಯಮಾಲೆಯ ಕೆಲವು ಪ್ರಕಟಣೆಗಳು

೧. ಪದಾರ್ಥಸಾರ (೧–೨)
೨. ಸೂಪಶಾಸ್ತ್ರ
೩. ಸೊಬಗಿನ ಸೋನೆ
೪. ಬಸವರಾಜ ಚಾರಿತ್ರ (ಸಿಂಗಿರಾಜ ಪುರಾಣ)
೫. ಸನತ್ಕುಮಾರ ಚರಿತೆ
೬. ಅರಿವಿನ ಮಾರಿತಂದೆಗಳ ವಚನಗಳು
೭. ನಳಚಂಪು
೮. ವಿಷ್ಣುಪುರಾಣಂ
೯. ಕಂಠೀರವ ನರಸರಾಜವಿಜಯ
೧೦. ಸೌಂದರ್ಯಲಹರೀ
೧೧. ಆದಿಪರ್ವ
೧೨. ರಸರತ್ನಾಕರಂ
೧೩. ಕರಸ್ಥಲ ನಾಗಲಿಂಗನ ಚರಿತ್ರೆ
೧೪. ಅನಂತನಾಥ ಪುರಾಣಂ
೧೫. ಮದನಮೋಹಿನಿಯ ಕಥೆ
೧೬. ಸೂಕ್ತಿಸುಧಾರ್ಣವಂ
೧೭. ದೀಕ್ಷಾಬೋಧೆ
೧೮. ಗುರುಭಕ್ತಚಾರಿತ್ರ
೧೯. ಹರಿಹರನ ಐದು ರಗಳೆಗಳು
೨೦. ಅಬ್ಬಲೂರು ಚರಿತೆ
೨೧. ಕುಮಾರಕಾಳಗ
೨೨. ಕೆಳದಿನೃಪ ವಿಜಯಂ
೨೩. ಉದ್ಯೋಗಸಾರ
೨೪. ಗುರುಬೋಧಾಮೃತಂ
೨೫. ವರ್ಧಮಾನ ಪುರಾಣಂ
೨೬. ಹರಿವಂಶಾಭ್ಯುದಯಂ
೨೭. ವಿರಾಟಪರ್ವ
೨೮. ಜನವಶ್ಯ
೨೯. ದ್ವಾದಶಾನುಪ್ರೇಕ್ಷೆ
೩೦. ಹಾಲಾಸ್ಯ ಪುರಾಣಂ
೩೧. ಧರ್ಮನಾಥ ಪುರಾಣಂ
೩೨. ಸಾನಂದ ಚರಿತೆ
೩೩. ಜೀವಂಧರ ಚರಿತ್ರೆ
೩೪. ಯೋಗರತ್ನಾಕರ
೩೫. ಸಾನಂದ ಗಣೇಶ ಸಾಂಗತ್ಯ
೩೬. ಕಲ್ಯಾಣಕೀರ್ತಿಯ ಕೃತಿಗಳು
೩೭. ಪುರಾತನರ ಚರಿತೆ
೩೮. ಅರಣ್ಯಪರ್ವ
೩೯. ಬಸವೇಶ್ವರ ಪುರಾಣದ ಕಥಾಸಾಗರ
೪೦. ಜಗನ್ನಾಥ ವಿಜಯಂ
೪೧. ರುಕ್ಮಾಂಗದ ಚರಿತ್ರೆ
೪೨. ಜಾತಕ ತಿಲಕಂ
೪೩. ಶಬ್ದಮಣಿದರ್ಪಣಂ
೪೪. ಪುಣ್ಯಾಸ್ರವ
೪೫. ನೇಮಿನಾಥ ಪುರಾಣಂ
೪೬. ಶ್ರೀಪಾಲ ಚರಿತೆ
೪೭. ಸುಜ್ಞಾನ ಚಿಂತಾಮಣಿ
೪೮. ನಿಜಲಿಂಗ ಚಿಕ್ಕಯ್ಯನ ಸಾಂಗತ್ಯ
೪೯. ದಶಾವತಾರ ಚರಿತೆ
೫೦. ಯಾದವಗಿರಿ ಮಾಹಾತ್ಮ್ಯಂ
೫೧. ನನ್ನಯ್ಯಗಳ ಚಾರಿತ್ರ
೫೨. ಸಂವಿಚಾರ ಚರಿತೆ ಮತ್ತು ಜ್ಞಾನಭಾಸ್ಕರ ಚರಿತೆ
೫೩. ನನ್ನಯ್ಯ ಚಾರಿತ್ರ
೫೪. ಅನುಭವ ಮುಕುರ
೫೫. ರುಕ್ಮಾಂಗದ ಚರಿತೆ
೫೬. ಷಟ್ಸ್ಥಲ ತಿಲಕ
೫೭. ಕೋಡಗದ ಮಾರಯ್ಯನ ಚರಿತ್ರೆ
೫೮. ಚಂದ್ರಪ್ರಭ ಚರಿತೆ
೫೯. ಪಶ್ಚಿಮರಂಗಕ್ಷೇತ್ರಮಾಹಾತ್ಮ್ಯಂ ಮತ್ತು ಚಿಕ್ಕದೇವರಾಜ ವಂಶಾವಳಿ
೬೦. ವೆಂಕಟಗಿರಿಮಾಹಾತ್ಮ್ಯಂ
೬೧. ಆರಾಧ್ಯ ಚಾರಿತ್ರ

ರಕ್ಷಾಪುಟ ಮುದ್ರಣ : ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ, ಮೈಸೂರು